prajavani.net prajavani ● www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಫಾಸ್ಟ್‌ಟ್ಯಾಗ್ ಪಾಸ್

ಹೊಸದಾಗಿ ಆರಂಭಿಸಲಾಗಿರುವ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ಸೌಲಭ್ಯವನ್ನು ನಾಲ್ಕು ದಿನಗಳಲ್ಲಿ ಐದು ಲಕ್ಷ ಮಂದಿ ಪಡೆದು ಕೊಂಡಿದ್ದಾರೆ. ಪಾಸ್ ಖರೀದಿಯು ತಮಿಳುನಾಡು ಮತ್ತು ಕರ್ನಾಟಕದಲ್ಲಿ ಹೆಚ್ಚಿದೆ

ಚಿನ್ನಕ್ಕೆ ಗುರಿಯಿಟ್ಟ ಕಪಿಲ್

ಭಾರತದ ಶೂಟರ್ ಕಪಿಲ್ ಬೈಂಸಲಾ ಅವರು ಕಜಕಿಸ್ತಾನದಲ್ಲಿ ನಡೆದ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಜೂನಿಯರ್ ಪುರುಷರ 10 ಮೀಟರ್ ಏರ್ ಪಿಸ್ತೂಲ್‌ನಲ್ಲಿ ಚಿನ್ನದ ಪದಕ ಗೆದ್ದರು

ಸೆನ್ಸೆಕ್ಸ್ 81,273 | ನಿಫ್ಟಿ 24,876 | $/₹ 87.39 | ಚಿನ್ನ (Std. 10g) ₹1,05,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,21,600 (ಬೆಂಗಳೂರು)

ಧರ್ಮಸ್ಥಳ: ಶವ ಶೋಧಕ್ಕೆ ವಿರಾಮ

ಎಫ್‌ಎಸ್‌ಎಲ್ ವರದಿ ಬಳಿಕ ನೈಜ ತನಿಖೆ ಶುರು: ಗೃಹ ಸಚಿವ ಪರಮೇಶ್ವರ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದ ಆಸುಪಾಸು ನೂರಾರು ಶವಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದಲ್ಲಿ, ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬರುವವರೆಗೆ ಗುಂಡಿ ತೆಗೆದು ಶವ ಶೋಧ ಕೆಲಸವನ್ನು ನಿಲ್ಲಿಸಲಾಗುವುದು. ವರದಿ ಬಂದ ಬಳಿಕ ಮುಂದಿನ ತನಿಖೆ ಆರಂಭವಾಗಲಿದೆ ಎಂದು ಸರ್ಕಾರ ಹೇಳಿದೆ.

ವಿಧಾನಸಭೆಯಲ್ಲಿ ನಿಯಮ 69ರಡಿ ಬಿಜೆಪಿಯ ವಿ.ಸುನಿಲ್‌ಕುಮಾರ್ ಅವರು ಪ್ರಸ್ತಾಪಿಸಿದ ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿ ನಡೆದ ಚರ್ಚೆಗೆ ಗೃಹ ಸಚಿವ ಜಿ. ಪರಮೇಶ್ವರ ಅವರು ಸೋಮವಾರ ಸುದೀರ್ಘ ಉತ್ತರ ನೀಡಿದರು.

‘ಗುಂಡಿ ಅಗೆಯುವ ಕೆಲಸ ನಿಲ್ಲಿಸ-ಲಾಗುವುದು. ಈವರೆಗೆ ಸಂಗ್ರಹಿಸಿರುವ ಅಸ್ಥಿ ಪಂಜರ, ಮೂಳೆಗಳ ಚೂರುಗಳು, ಗುಂಡಿಗಳಿಂದ ತೆಗೆದ ಲ್ಯಾಟರೈಟ್ ಮಣ್ಣಿನ ಮಾದರಿಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವಿಶ್ಲೇಷಣೆಗೆ ಕಳುಹಿಸಲಾಗಿದೆ. ವಿಶ್ಲೇಷಣಾ ವರದಿ ಬಂದ ನಂತರವೇ ನಿಜವಾದ ತನಿಖೆ ಆರಂಭವಾಗುತ್ತದೆ’ ಎಂದರು.

‘ತನಿಖೆ ಗಂಭೀರವಾಗಿ ನಡೆಯುತ್ತಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಏನೆಲ್ಲ ತನಿಖೆ ನಡೆಸಬಹುದೋ ಅಷ್ಟನ್ನೂ ಯಾವುದೇ ಒತ್ತಡಕ್ಕೆ ಮಣಿಯದೇ, ಪಾರದರ್ಶಕವಾಗಿ ನಡೆಸಲಾಗುತ್ತಿದೆ. ತನಿಖೆಯ ದಾರಿ ತಪ್ಪಲು ಅವಕಾಶ ನೀಡದೇ, ನ್ಯಾಯೋಚಿತವಾಗಿ ನಡೆಸಲಾಗುತ್ತಿದೆ’ ಎಂದು ಹೇಳಿದರು.

‘ಎಸ್‌ಐಟಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಹಲವು ಕಡೆಗಳಲ್ಲಿ ಗುಂಡಿ ತೆಗೆದು ಪರೀಕ್ಷಿಸಲಾಗಿದೆ. ಹಾಗೆಂದ ಮಾತ್ರಕ್ಕೆ ಇಡೀ ಧರ್ಮಸ್ಥಳದಲ್ಲಿ ಅಗೆಯಬೇಕು ಎಂದರೆ ಅದಕ್ಕೆ ಒಪ್ಪಲು ಸಾಧ್ಯವಿಲ್ಲ. ಎಲ್ಲಿ ಏನು ಮಾಡಬೇಕು ಎಂಬುದನ್ನು ಎಸ್‌ಐಟಿಯೇ ತೀರ್ಮಾನ ಮಾಡುತ್ತದೆ. ಯಾವುದೇ ಬಾಹ್ಯ ಶಕ್ತಿಗಳ ಮಧ್ಯ ಪ್ರವೇಶಕ್ಕೆ ಅವಕಾಶವಿಲ್ಲ’ ಎಂದು ಪರಮೇಶ್ವರ ಅವರು ಸ್ಪಷ್ಟಪಡಿಸಿದರು.

‘ಹಲವು ಕಡೆ ಮಣ್ಣು ಅಗೆಯಲಾಗಿದೆ. ಎರಡು ಜಾಗಗಳಲ್ಲಿ ಅಸ್ಥಿಪಂಜರ ಸಿಕ್ಕಿದೆ. ಅದನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದೆ. ಅಗೆದ ಜಾಗಗಳಲ್ಲಿ ಲ್ಯಾಟರೈಟ್ ಮಣ್ಣು ಇದ್ದು, ಮೂಳೆಗಳು ಕರಗಿ ಹೋಗಿರುವ ಸಾಧ್ಯತೆಯೂ ಇದೆ. ಹೀಗಾಗಿ ಮಣ್ಣಿನ ಮಾದರಿಯನ್ನು ಪಡೆದು ವಿಶ್ಲೇಷಣೆಗೆ ಕಳಿಸಲಾಗಿದೆ’ ಎಂದರು.

‘ಅಲ್ಲಿ ಘಟನೆ ಆಗಿದೆ ಎಂದು ಯಾರೂ ಹೇಳಲು ಆಗುವುದಿಲ್ಲ. ಆಗಿಲ್ಲ ಅಂತ ಯಾರಿಗೂ ಹೇಳಲು ಆಗಲ್ಲ. ಏನೂ ನಡೆದೇ ಇಲ್ಲ ಎಂದು ತನಿಖೆಯಲ್ಲಿ ಬಂದರೆ ಧರ್ಮಸ್ಥಳದ ಗೌರವ ಇನ್ನಷ್ಟು ಹೆಚ್ಚಾಗುವುದಿಲ್ಲವೇ? ಒಂದು ವೇಳೆ ಆಗಿದೆ ಅಂತ ವರದಿ ಬಂದರೆ ಅನ್ಯಾಯ-ವಾದವರಿಗೆ ನ್ಯಾಯ ಸಿಕ್ಕಿದಂತೆ ಆಗುತ್ತದೆ. ಇದಕ್ಕೆ ರಾಜಕೀಯ ಬೆರೆಸುವುದು ಬೇಡ. ನ್ಯಾಯಕ್ಕೆ ಬಿಡೋಣ. ಸತ್ಯ ಹೊರಬರಲಿ. ಅದನ್ನು ಧರ್ಮಸ್ಥಳದವರೂ ಒಪ್ಪಬೇಕಾಗುತ್ತದೆ. ಜನರೂ ಒಪ್ಪಬೇಕಾಗುತ್ತ-ದೆ’ ಎಂದು ಪರಮೇಶ್ವರ ಹೇಳಿದರು.

‘ಎಸ್‌ಐಟಿ ಮಧ್ಯಂತರ ವರದಿ ನೀಡಿಲ್ಲ. ಶೀಘ್ರವಾಗಿ ತನಿಖೆ ಮಾಡಿ ಎಂದು ಹೇಳಬಹುದೇ ಹೊರತು, ಇಷ್ಟೇ ದಿನಗಳಲ್ಲಿ ವರದಿ ಕೊಡಿ ಎಂದು ಹೇಳಲು ಆಗುವುದಿಲ್ಲ. ಇದೊಂದು ಅತ್ಯಂತ ಸೂಕ್ಷ್ಮ ವಿಷಯ ಆಗಿರುವುದರಿಂದ ವಿರೋಧ-ಪಕ್ಷಗಳೂ ಸಹಕರಿಸಬೇಕು. ವೀರೇಂದ್ರ ಹೆಗ್ಗಡೆ ಅವರ ಮೇಲೆ ಬಂದಿರುವ ಆರೋಪ ಸಂಬಂಧ ಸತ್ಯ ಹೊರ ಬರಬೇಕಲ್ಲ. ನಾವು ಏನನ್ನೂ ಮುಚ್ಚಿ-ಡುವುದಿಲ್ಲ. ಯಾರ ಒತ್ತಡಕ್ಕೂ ಮಣಿದು ಎಸ್‌ಐಟಿ ರಚನೆ ಮಾಡಿಲ್ಲ. ಧರ್ಮಸ್ಥಳ ಠಾಣೆಯಲ್ಲಿ ಈ ಪ್ರಕರಣದ ಬಗ್ಗೆ ದೂರೊಂದು ದಾಖಲಾಯಿತು. ಅದನ್ನು ಆಧರಿಸಿ, ಆರಂಭದಲ್ಲಿ ಮಾಧ್ಯಮಗಳಲ್ಲಿ ಬಂದ ವರದಿಯನ್ನು ಆಧರಿಸಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ಎಸ್‌ಐಟಿ ರಚಿಸುವಂತೆ ಮುಖ್ಯಮಂತ್ರಿ-ಯವರಲ್ಲಿ ಮನವಿ ಮಾಡಿದ್ದರು. ಈ ಬಗ್ಗೆ ನಾನು ಮತ್ತು ಮುಖ್ಯಮಂತ್ರಿ ಚರ್ಚಿಸಿ ತೀರ್ಮಾನ ತೆಗೆದುಕೊಂಡೆವು’ ಎಂದರು.

‘ಸಾಕ್ಷಿ ರಕ್ಷಣೆ ಕಾಯ್ದೆ ಅನ್ವಯ ದೂರುದಾರ ಮ್ಯಾಜಿಸ್ಟ್ರೇಟ್ ಅವರನ್ನು ಸಂಪರ್ಕಿಸಿ, ರಕ್ಷಣೆಗೆ ಅರ್ಜಿ ಸಲ್ಲಿಸಿದ್ದ. ಮ್ಯಾಜಿಸ್ಟ್ರೇಟ್ ಅವರು ದೂರುದಾರನಿಗೆ ಯಾವ ರೀತಿ ರಕ್ಷಣೆ ಕೊಡಬೇಕು ಎಂಬುದನ್ನು ಸೂಚಿಸಿ ಆದೇಶ ನೀಡಿದ್ದಾರೆ. ಆ ಪ್ರಕಾರವೇ ಸಾಕ್ಷಿಗೆ ರಕ್ಷಣೆ ನೀಡಲಾಗಿದೆ’ ಎಂದೂ ಪರಮೇಶ್ವರ ಹೇಳಿದರು.

ಇನ್ನಷ್ಟು ಸುದ್ದಿಗಳು ▶ 9

> **ಸತ್ಯ ಹೊರಗೆ ಬರಲಿ ಎಂಬ ಕಾರಣಕ್ಕೆ ಎಸ್‌ಐಟಿ ರಚನೆ ಮಾಡಲಾಗಿದೆ. ಆಂತರಿಕ ವಿಚಾರ ಹೇಳುವಂತಿಲ್ಲ. ತಾಳ್ಮೆಯಿಂದ ಕೆಲವು ದಿನ ಕಾಯಿರಿ**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

> **ಸಚಿವ ಪರಮೇಶ್ವರ ಅವರು ಬೆಟ್ಟ ಅಗೆದರೂ ಕಡೆಗೆ ಸೊಳ್ಳೆಯೂ ಸಿಕ್ಕಿಲ್ಲ. ಧರ್ಮಸ್ಥಳದ ವಿಚಾರದಲ್ಲಿ ಸಂಪುಟದಲ್ಲೂ ಒಗ್ಗಟ್ಟು ಕಾಣುತ್ತಿಲ್ಲ, ಭಿನ್ನ ಹೇಳಿಕೆಗಳು ಬರುತ್ತಿವೆ**
> **ಆರ್.ಅಶೋಕ,** ವಿರೋಧ ಪಕ್ಷದ ನಾಯಕ

ವಿಪಕ್ಷಗಳ ಸಭಾತ್ಯಾಗ

‘ಈ ಪ್ರಕರಣದ ಷಡ್ಯಂತ್ರ ಮಾಡಿದವರು ಯಾರು ಎಂಬ ಮಾಹಿತಿಯನ್ನು ಸದನಕ್ಕೆ ನೀಡಿಲ್ಲ. ಧರ್ಮಸ್ಥಳ, ಮಂಜುನಾಥಸ್ವಾಮಿ ಮತ್ತು ಹಿಂದೂ ಧರ್ಮದ ವಿರುದ್ಧ ಅಪಪ್ರಚಾರ ನಡೆಸುತ್ತಿರುವವರಿಗೆ ಕಡಿವಾಣ ಹಾಕಿಲ್ಲ. ಸಚಿವರ ಉತ್ತರ ಸಂಪೂರ್ಣ ನಿರಾಸೆ ಉಂಟು ಮಾಡಿದೆ’ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು. ‘ಧರ್ಮಸ್ಥಳದ ವಿರುದ್ಧ ಷಡ್ಯಂತ್ರದಲ್ಲಿ ಸರ್ಕಾರವು ಭಾಗಿಯಾಗಿದೆ’ ಎಂದು ಹೇಳಿದ ಬಿಜೆಪಿ ಸದಸ್ಯರು ಸಭಾತ್ಯಾಗ ನಡೆಸಿದರು. ಜೆಡಿಎಸ್ ಸದಸ್ಯರೂ ಹೊರ ನಡೆದರು.

ಅಶೋಕ ಪ್ರಶ್ನೆಗಳು

- ಅನಾಮಿಕನ ದೂರಿನ ಆಧಾರದ ಮೇಲೆ ಎಸ್‌ಐಟಿ ರಚನೆ ಮಾಡಲು ಸರ್ಕಾರಕ್ಕೆ ಹೇಳಿದ್ದು ಯಾರು?
- ಕಾಡಿನಲ್ಲಿ ಅಗೆಯುವುದಕ್ಕೆ ಅರಣ್ಯ ಇಲಾಖೆ ಅನುಮತಿ ಪಡೆದಿದ್ದೀರಾ?
- ಈ ಪ್ರಕರಣದಲ್ಲಿ ಷಡ್ಯಂತ್ರ ನಡೆದಿದೆ ಎಂದು ಡಿ.ಕೆ.ಶಿವಕುಮಾರ್ ಈ ಹಿಂದೆ ಹೇಳಿದ್ದರು. ಆ ಷಡ್ಯಂತ್ರದ ಹಿಂದೆ ಯಾರಿದ್ದಾರೆ?

ಅಪಪ್ರಚಾರ ನಿಲ್ಲಿಸದಿದ್ದರೆ, ಕಾನೂನು ಕ್ರಮ: ಪರಮೇಶ್ವರ

‘ಯೂಟ್ಯೂಬರ್‌ಗಳು ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುವುದನ್ನು ತಕ್ಷಣವೇ ನಿಲ್ಲಿಸಬೇಕು. ಒಂದು ವೇಳೆ ಮುಂದುವರಿಸಿದರೆ, ಕ್ರಮ ತೆಗೆದು-ಕೊಳ್ಳಬೇಕಾಗುತ್ತದೆ’ ಎಂದು ಸಚಿವ ಜಿ.ಪರಮೇಶ್ವರ ಅವರು ಎಚ್ಚರಿಕೆ ನೀಡಿದರು.

ಧರ್ಮಸ್ಥಳದಲ್ಲಿ ಎರಡು ಯೂಟ್ಯೂಬರ್ ಗುಂಪುಗಳು ಜಗಳ ಆಡಿ ಹೊಡೆದಾಡಿದ ಕಾರಣ ಅವರ ವಿರುದ್ಧ ಪ್ರಕರಣ ದಾಖಲಿಸಿ, ಕೆಲವರನ್ನು ಬಂಧಿಸಲಾಗಿದೆ ಎಂದರು.

‘ನೀವು (ಸಾಮಾಜಿಕ ಜಾಲತಾಣ) ಜನರ ಭಾವನೆಗಳಿಗೆ ಕನಿಷ್ಠ ಬೆಲೆ ನೀಡದೇ ಎಂಥಾ ಕೆಲಸ ಮಾಡುತ್ತಿದ್ದೀರಿ? ಜನರ ಭಾವನೆ ಕೆರಳಿಸುವ ಪೋಸ್ಟ್‌ಗಳನ್ನು ಮಾಡಿದರೆ ಲಕ್ಷಾಂತರ ಜನರ ಭಾವನೆಗೆ ಧಕ್ಕೆ ಆಗುವುದಿಲ್ಲವೇ? ಕೆಲವರು ಭಾವನೆಗಳನ್ನು ಕೆರಳಿಸುವ ಪೋಸ್ಟ್‌ಗಳನ್ನು ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ನೀವು ಮಾಡುವ ಪೋಸ್ಟಿಂಗ್‌ಗಳನ್ನು ನೀವೇ ನಿಯಂತ್ರಿಸಿಕೊಳ್ಳಬೇಕು. ಇಲ್ಲವಾದರೆ ಸರ್ಕಾರವೇ ನಿಯಂತ್ರಣ ಮಾಡುತ್ತದೆ. ಸುಳ್ಳು ಸುದ್ದಿ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸುತ್ತೇವೆ’ ಎಂದು ಪರಮೇಶ್ವರ ಹೇಳಿದರು.

ಗದಾ ‘ಯುದ್ಧ’

ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್

ಬೆಂಗಳೂರಿನ ಹೆಬ್ಬಾಳ ಜಂಕ್ಷನ್ ಬಳಿ ನಿರ್ಮಿಸಿರುವ ಲೂಪ್ (ಪಥ) ಉದ್ಘಾಟನೆ ಸೋಮವಾರ ನಡೆಯಿತು. ಈ ವೇಳೆ ನೀಡಿದ ಬೆಳ್ಳಿ ಗದೆಗಳನ್ನು ಸಿ.ಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರದರ್ಶಿಸಿದರು

ಸಿಇಸಿ ವಿರುದ್ಧ ವಾಗ್ದಂಡನೆಗೆ ‘ಇಂಡಿಯಾ’ ಚಿಂತನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿರೋಧ ಪಕ್ಷಗಳ ‘ಇಂಡಿಯಾ’ ಕೂಟವು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರ ವಿರುದ್ಧ ವಾಗ್ದಂಡನೆ ಗೊತ್ತುವಳಿ ಮಂಡಿಸಲು ಚಿಂತನೆ ನಡೆಸಿದೆ. ಈ ಮೂಲಕ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ‘ಮತ ಕಳವು’ ವಿರುದ್ಧದ ಪ್ರತಿಭಟನೆಯನ್ನು ತೀವ್ರಗೊಳಿಸಲು ಸಜ್ಜಾಗಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಸೋಮವಾರ ನಡೆದ ‘ಇಂಡಿಯಾ’ ಕೂಟದ ಸಂಸದೀಯ ನಾಯಕರ ಸಭೆಯಲ್ಲಿ ಈ ಪ್ರಸ್ತಾವವನ್ನು ಇಡಲಾಗಿತ್ತು. ಸಭೆಯಲ್ಲಿ ಪಾಲ್ಗೊಂಡ ಎಲ್ಲರೂ ಇದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಂಗಾರು ಅಧಿವೇಶನದಲ್ಲಿ ಎಸ್‌ಐಆರ್ ವಿರುದ್ಧದ ಪ್ರತಿಭಟನೆ ಮುಂದುವರಿಸಬೇಕೆ ಅಥವಾ ಬೇಡವೆ ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸಿದರು. ಈ ಸಂದರ್ಭದಲ್ಲಿ, ಜ್ಞಾನೇಶ್ ಅವರು ಭಾನುವಾರ ನಡೆಸಿದ್ದ ಮಾಧ್ಯಮ ಗೋಷ್ಠಿಯು ‘ವಿಪಕ್ಷಗಳ ವಿರುದ್ಧ ಯುದ್ಧ ಸಾರಿದಂತಿತ್ತು’ ಎಂಬ ಅಭಿಪ್ರಾಯ ವ್ಯಕ್ತವಾಯಿತು. ▶ 12

ತ್ರಿಪಕ್ಷೀಯ ಮಾತುಕತೆಗೆ ಒಲವು

ರಷ್ಯಾ– ಉಕ್ರೇನ್ ಯುದ್ಧ ಕೊನೆಗಾಣಿಸಲು ಟ್ರಂಪ್ ಯತ್ನ

ವಾಷಿಂಗ್ಟನ್ (ಎಪಿ/ ಎಎಫ್‌ಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹಾಗೂ ಐರೋಪ್ಯ ಒಕ್ಕೂಟದ ನಾಯಕರ ಜತೆ ಶ್ವೇತಭವನದಲ್ಲಿ ಸೋಮವಾರ ಮಹತ್ವದ ಸಭೆ ನಡೆಸಿದರು.

ಉಕ್ರೇನ್- ರಷ್ಯಾ ಯುದ್ಧವನ್ನು ಕೊನೆಗೊಳಿಸಲು ಟ್ರಂಪ್ ಅವರು ನಡೆಸುತ್ತಿರುವ ಪ್ರಯತ್ನದ ಭಾಗವಾಗಿ ನಡೆದ ಸಭೆ ‘ರಚನಾತ್ಮಕ’ವಾಗಿತ್ತು ಎಂದು ಮೂಲಗಳು ತಿಳಿಸಿವೆ.

ಸೋಮವಾರದ ಮಾತುಕತೆಯು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನೂ ಒಳಗೊಂಡಂತೆ ತ್ರಿಪಕ್ಷೀಯ (ಟ್ರಂಪ್- ಪುಟಿನ್- ಝೆಲೆನ್‌ಸ್ಕಿ) ಮಾತುಕತೆಗೆ ಹಾದಿಯೊದಗಿಸಬಹುದು ಎಂಬ ಒಲವನ್ನು ಟ್ರಂಪ್ ಹಾಗೂ ಝೆಲೆನ್‌ಸ್ಕಿ ಸಭೆಯ ಆರಂಭದಲ್ಲಿ ವ್ಯಕ್ತಪಡಿಸಿದರು.

‘ಈ ಮಾತುಕತೆಯಲ್ಲಿ ಎಲ್ಲವೂ ಲೆಕ್ಕಾಚಾರದಂತೆ ನಡೆದರೆ, ತ್ರಿಪಕ್ಷೀಯ ಸಭೆ ನಡೆಯಲಿದೆ’ ಎಂದು ಟ್ರಂಪ್ ಹೇಳಿದರು. ‘ಯುದ್ಧವನ್ನು ನಿಲ್ಲಿಸಲು ನಾವು ರಷ್ಯಾ ಮತ್ತು ಉಕ್ರೇನ್ ಜತೆ ಸೇರಿ ಕೆಲಸ ಮಾಡಲಿದ್ದೇವೆ. ಮೂವರೂ ಜತೆಯಾಗಿ ಮಾತುಕತೆ ನಡೆಸಿದರೆ ಯುದ್ಧ ಕೊನೆಗೊಳಿಸುವ ಅವಕಾಶವಿರುತ್ತದೆ ಎಂದು ಭಾವಿಸಿದ್ದೇನೆ’ ಎಂದು ತಿಳಿಸಿದರು.

ಝೆಲೆನ್‌ಸ್ಕಿ ಕೂಡಾ ತ್ರಿಪಕ್ಷೀಯ ಮಾತುಕತೆ ಬಗ್ಗೆ ತಮ್ಮ ಒಲವು ವ್ಯಕ್ತ-ಪಡಿಸಿದರು. ‘ಅಮೆರಿಕದ ಅಧ್ಯಕ್ಷರು ಹೇಳಿದಂತೆ ನಾವು ತ್ರಿಪಕ್ಷೀಯ ಮಾತುಕತೆಗೆ ಸಿದ್ಧರಿದ್ದೇವೆ. ಅಂತಹ ಮಾತುಕತೆ ನಡೆದರೆ ಒಳ್ಳೆಯದು’ ಎಂದರು. ▶ 12

ಝೆಲೆನ್‌ಸ್ಕಿ ಹಾಗೂ ಟ್ರಂಪ್ ಮಾತುಕತೆ ನಡೆಸಿದರು — ಎಎಫ್‌ಪಿ ಚಿತ್ರ

‘ಪುಟಿನ್ ಜತೆ ಮಾತನಾಡುವೆ’

ಝೆಲೆನ್‌ಸ್ಕಿ ಜತೆಗಿನ ಸಭೆ ಬಳಿಕ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಕರೆ ಮಾಡಿ ಮಾತನಾಡುವುದಾಗಿ ಟ್ರಂಪ್ ಹೇಳಿದ್ದಾರೆ. ಈ ವೇಳೆ ಮೂವರೂ ನಾಯಕರ ಮಧ್ಯೆ ಮಾತುಕತೆ ನಡೆಯಲಿದೆಯೇ ಎಂಬುದು ಖಚಿತವಾಗಿಲ್ಲ.

ಕಲ್ಲೆ ಶಿವೋತ್ತಮರಾವ್‌ಗೆ ಅರಸು ಪ್ರಶಸ್ತಿ

ಬೆಂಗಳೂರು: 2025–26ನೇ ಸಾಲಿನ ‘ಡಿ.ದೇವರಾಜು ಅರಸು ಪ್ರಶಸ್ತಿ’ಗೆ ಪತ್ರಕರ್ತ ಕಲ್ಲೆ ಶಿವೋತ್ತಮರಾವ್ ಅವರನ್ನು ರಾಜ್ಯ ಸರ್ಕಾರ ಆಯ್ಕೆ ಮಾಡಿದೆ. ‘ಸಾಮಾಜಿಕ ನ್ಯಾಯದ ಪರ ಅವರು ನಡೆಸಿದ ಹೋರಾಟಕ್ಕಾಗಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ’ ಎಂದು ಸರ್ಕಾರ ತಿಳಿಸಿದೆ. ▶ 8

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಒಳ ಮೀಸಲು’: ಸಂಪುಟ ಸಭೆಗೆ ಸಮಾಜ ಕಲ್ಯಾಣ ಇಲಾಖೆಯಿಂದ ಟಿಪ್ಪಣಿ

ಜಾತಿವಾರು ವರ್ಗೀಕರಣ ಪರಿಷ್ಕರಣೆ?

● ರಾಜೇಶ್ ರೈ ಚಟ್ಲ

ಬೆಂಗಳೂರು: ‘ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ಆಯೋಗ ಸಲ್ಲಿಸಿರುವ ವರದಿಯಲ್ಲಿ-ರುವ ಜಾತಿವಾರು ವರ್ಗೀಕರಣವನ್ನು ಪರಿಷ್ಕರಿಸಿ, ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವುದು ಸೂಕ್ತ’ ಎಂದು ಸಮಾಜ ಕಲ್ಯಾಣ ಇಲಾಖೆಯು ಸಚಿವ ಸಂಪುಟಕ್ಕೆ ಪ್ರಸ್ತಾವ ಸಲ್ಲಿಸಿದೆ.

ಆಯೋಗ ಸಲ್ಲಿಸಿರುವ ವರದಿಯ ಕುರಿತು ಚರ್ಚಿಸಲು ಮಂಗಳವಾರ (ಆಗಸ್ಟ್ 19) ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಗೆ ಇಲಾಖೆ ಸಲ್ಲಿಸಿರುವ ‘ರಹಸ್ಯ ಟಿಪ್ಪಣಿ’ಯಲ್ಲಿ ಈ ಬಗ್ಗೆ ಉಲ್ಲೇಖವಿದೆ. ಟಿಪ್ಪಣಿಯ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

‘ವರ್ಗೀಕರಣದ ಬಗ್ಗೆ ವಿಸ್ತಾರವಾಗಿ ಚರ್ಚಿಸುವ ಅಗತ್ಯವಿದೆ’ ಎಂದು ಇಲಾಖೆ ತನ್ನ ಟಿಪ್ಪಣಿಯಲ್ಲಿ ಪ್ರತಿಪಾದಿಸಿರುವುದ-ರಿಂದಾಗಿ, ಸಚಿವ ಸಂಪುಟದ ಸಭೆಯಲ್ಲಿ ತೆಗೆದುಕೊಳ್ಳಬಹುದಾದ ನಿರ್ಣಯದ ಬಗ್ಗೆ ಎಲ್ಲರ ಚಿತ್ತ ನೆಟ್ಟಿದೆ. ಆಯೋಗ ಈಗಾಗಲೇ ಹಂಚಿಕೆ ಮಾಡಿರುವ ‘ಮೀಸಲು’ ಪ್ರಮಾಣ ಬದಲಾಗುವ ಸಾಧ್ಯತೆಯಿದೆ ಎಂದೂ ಮೂಲಗಳು ಹೇಳಿವೆ.

ಟಿಪ್ಪಣಿಯಲ್ಲಿ ಏನಿದೆ?: 2011ರ ಜನಗಣತಿಯಂತೆ ಆದಿ ಆಂಧ್ರ, ಆದಿ ದ್ರಾವಿಡ, ಆದಿ ಕರ್ನಾಟಕ ಮತ್ತು ಪರಿಶಿಷ್ಟ ಜಾತಿ ಎಂದು ನಮೂದಿಸಿರುವವರ ಒಟ್ಟು ಜನಸಂಖ್ಯೆ 44.67 ಲಕ್ಷ (ಶೇ 43.63). ಪ್ರಸ್ತುತ ಸಮೀಕ್ಷೆಯಲ್ಲಿ 4,75,954ರಷ್ಟು ಜನರು ಅವರ ಮೂಲ ಜಾತಿಯನ್ನು ತಿಳಿಸಿಲ್ಲ. ಈ ಜನಸಂಖ್ಯೆಯನ್ನು ಪ್ರವರ್ಗ ‘ಇ’ ಎಂದು ವಿಂಗಡಿಸಿ ಶೇಕಡಾ 1 ಮೀಸಲಾತಿಯನ್ನು ಆಯೋಗದ ವರದಿಯಲ್ಲಿ ಹಂಚಿಕೆ ಮಾಡಲು ಶಿಫಾರಸು ಮಾಡಲಾಗಿದೆ. ಮೂಲ ಜಾತಿಯನ್ನು ತಿಳಿಸದೇ ಇರುವ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಜಾತಿಗಳನ್ನು ಒಂದು ಗುಂಪಾಗಿ ವಿಂಗಡಿಸಿ ಶೇ 1ರಷ್ಟು ಮೀಸಲಾತಿ ನೀಡಿದರೆ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಪ್ರವೇಶ ಪಡೆಯುವಾಗ ‘ಡುಪ್ಲಿಕೇಟ್’ ಆಗಬಹುದು. ಈ ಜನರು ಇತರ ನಾಲ್ಕು ಗುಂಪುಗಳಲ್ಲಿಯೂ (ಪ್ರವರ್ಗ ಎ, ಬಿ, ಸಿ ಮತ್ತು ಡಿ ಮೀಸಲಾತಿ ಪಡೆಯುವ ಸಂಭವ ಇರುತ್ತದೆ.

ಆಯೋಗದ ವರದಿಯ ಅನ್ವಯ ಪ್ರವರ್ಗ ‘ಎ’ ಗುಂಪುಗಳಿಗೆ ಶೇ 1ರಷ್ಟು ಮೀಸಲಾತಿ ಹಂಚಿಕೆಯಾಗಿದೆ. ಈ ಶೇ 1ರಷ್ಟು ಮೀಸಲಾತಿಯನ್ನು 100 ರೋಸ್ಟರ್ ಬಿಂದುಗಳಲ್ಲಿ (ನೇಮಕಾತಿ ಮತ್ತು ಬಡ್ತಿ ನೀಡುವ ವೇಳೆ ಮೀಸಲಾತಿ ಬಿಂದುಗಳನ್ನು ಗುರುತಿಸುವ ಪಟ್ಟಿ) ಗುರುತಿಸಿ ಅನುಷ್ಠಾನ ಮಾಡಿದರೂ ಈ ಸಮುದಾಯಗಳಿಗೆ ಹೆಚ್ಚಿನ ಪ್ರಯೋಜನ ಆಗುವುದಿಲ್ಲ. ಅಲ್ಲದೆ, 59 ಜಾತಿಗಳು ಪ್ರವರ್ಗ ‘ಎ’ಗೆ ನಿಗದಿಪಡಿಸಿದ ಶೇ 1ರಲ್ಲಿಯೇ ಮೀಸಲಾತಿ ಪಡೆಯಬೇಕಾಗಿದೆ.

ಪ್ರವರ್ಗ ‘ಎ’ಯಲ್ಲಿ ಸೇರಿಸಿರುವ ಜಾತಿಗಳಾದ ಅರುಂತಾತಿಯಾರ್ (ಜನಸಂಖ್ಯೆ 9,058) ಮತ್ತು ಚಕ್ಕಿಲಿಯನ್ (ಜನಸಂಖ್ಯೆ 909), ದಕ್ಕಲ, ದೊಕ್ಕಲ್ವರ್ (ಜನಸಂಖ್ಯೆ 124), ದಕ್ಕಲಿಗ (ಜನಸಂಖ್ಯೆ 1364), ಜಾಂಬುವುಲ್ (ಜನಸಂಖ್ಯೆ 556), ಸಿಂಧೊಳ್ಳು, ಚಿಂದೊಳ್ಳು (ಜನಸಂಖ್ಯೆ 5,337) ಈ ಸಮುದಾಯಗಳನ್ನು ಪ್ರವರ್ಗ ‘ಬಿ’ಯಲ್ಲಿ ಸೇರಿಸಬೇಕಾಗಿದೆ. ಪ್ರವರ್ಗ ‘ಎ’ಯಲ್ಲಿರುವ ಚೆನ್ನದಾಸರ, ಹೊಲೆಯ ದಾಸರ (ಜನಸಂಖ್ಯೆ, 79,625), ಹೊಲರ್, ವಲ್ಹರ್ (ಜನಸಂಖ್ಯೆ 11,248) ಈ ಸಮುದಾಯಗಳನ್ನು ಪ್ರವರ್ಗ ‘ಸಿ’ಗೆ ಸೇರಿಸಬೇಕಾಗಿದೆ. ಪ್ರವರ್ಗ ‘ಸಿ’ಗೆ ಸೇರಬೇಕಾಗಿರುವ ಮೊಗೇರ್ (ಜನಸಂಖ್ಯೆ 87,117), ಪರೈಯನ್, ಪರಾಯ (ಜನಸಂಖ್ಯೆ 1,61,164) ಈ ಎರಡೂ ಸಮುದಾಯಗಳನ್ನು ಪ್ರವರ್ಗ ‘ಬಿ’ಯಲ್ಲಿ ಸೇರಿಸಲಾಗಿದೆ. ▶ 9

> ಪರಿಶಿಷ್ಟ ಜಾತಿಯಲ್ಲಿ 101 ಮೂಲ ಜಾತಿಗಳನ್ನು ಆಯೋಗವು ಐದು ಗುಂಪುಗಳಾಗಿ ವರ್ಗೀಕರಿಸಿದೆ. ಲಭ್ಯವಿರುವ ಶೇ 17 ಮೀಸಲಾತಿಯನ್ನು ಪ್ರವರ್ಗ ‘ಎ’ಗೆ ಶೇ 1 (ಒಟ್ಟು ಜಾತಿಗಳು 59 ಜಾತಿಗಳು), ಪ್ರವರ್ಗ ‘ಬಿ’ಗೆ ಶೇ 6 (18 ಜಾತಿಗಳು), ಪ್ರವರ್ಗ ‘ಸಿ’ಗೆ ಶೇ 5 (17 ಜಾತಿಗಳು), ಪ್ರವರ್ಗ ‘ಡಿ’ಗೆ ಶೇ 4 (4 ಜಾತಿಗಳು), ಪ್ರವರ್ಗ ‘ಇ’ಗೆ ಶೇ 1ರಂತೆ (3 ಜಾತಿಗಳು) ಹಂಚಿಕೆ ಮಾಡಿದೆ.

ಪರಿಷ್ಕರಣೆಗೆ ಡಿಎಸ್‌ಎಸ್ ಆಗ್ರಹ

- ವರದಿಯ ಪರಿಷ್ಕರಣೆಗೆ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ಆಗ್ರಹ
- ಜಾತಿ ಸಮುದಾಯಗಳ ಹಿಂದುಳಿದಿರುವಿಕೆಯ ದತ್ತಾಂಶಗಳಲ್ಲಿ ನ್ಯೂನತೆ ಇದೆ ಎಂದು ಆಕ್ಷೇಪ

ಬಲಗೈ ಜಾತಿಗಳ ವಿರೋಧ, ಆಕ್ಷೇಪ

- ಬಲಗೈ ಜಾತಿಗಳ ಒಕ್ಕೂಟದಿಂದ ವರದಿಗೆ ವಿರೋಧ ಮತ್ತು ಪರಿಷ್ಕರಣೆಗೆ ಆಗ್ರಹ
- ಸರ್ಕಾರದ ಆಶಯ ಮತ್ತು ಆಯೋಗದ ವರದಿಯ ಶಿಫಾರಸು ತಾಳೆಯಾಗುತ್ತಿಲ್ಲ. ತನ್ನ ಅಧಿಕಾರದ ವ್ಯಾಪ್ತಿಯಲ್ಲಿ ಇಲ್ಲದ ಶಿಫಾರಸು-ಗಳನ್ನು ಆಯೋಗ ಮಾಡಿದೆ
- ಬುಡ್ಗ ಜಂಗಮ ಮತ್ತು ಬೇಡ ಜಂಗಮರನ್ನು ಒಂದೇ ಎಂದು ಪರಿಗಣಿಸಿ, ಗೊಂದಲ ಮೂಡಿಸಲಾಗಿದೆ

ಜಾರಿಗೆ ಮಾದಿಗ ಸಮುದಾಯ ಒತ್ತಾಯ

- ಮಾದಿಗ ಮತ್ತು ಮಾದಿಗ ಸಂಬಂಧಿ ಜಾತಿ ಸಮುದಾಯಗಳು ವರದಿಯ ಶೀಘ್ರ ಜಾರಿಗೆ ಒತ್ತಾಯಿಸಿವೆ
- ಈ ಸಮುದಾಯಗಳಿಗೆ ಶೇ 7ರಷ್ಟು ಒಳಮೀಸಲಾತಿ ಒದಗಿಸಬೇಕು ಎಂಬ ಶಿಫಾರಸಿನಲ್ಲಿ ಯಾವುದೇ ಬದಲಾವಣೆ ಮಾಡಬಾರದು

ಕೇಂದ್ರ ಸರ್ಕಾರದ ಸಾಲ ಗಣನೀಯ ಏರಿಕೆ: ಲೋಕಸಭೆಯಲ್ಲಿ ನಿರ್ಮಲಾ ಸೀತಾರಾಮನ್ ಪ್ರತಿಕ್ರಿಯೆ

10 ವರ್ಷಗಳಲ್ಲಿ ಸಾಲ ₹130 ಲಕ್ಷ ಕೋಟಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಸಾಲ ಕಳೆದ 10 ವರ್ಷಗಳಲ್ಲಿ ₹130 ಲಕ್ಷ ಕೋಟಿ ಹೆಚ್ಚಳ ಆಗಿದೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಸಂಸದ ಡಾ.ಎಂ.ಕೆ. ವಿಷ್ಣು ಪ್ರಸಾದ್ ಸೋಮವಾರ ಕೇಳಿದ ಪ್ರಶ್ನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೀಡಿರುವ ಉತ್ತರದಲ್ಲಿ ಈ ಮಾಹಿತಿ ಇದೆ. 2015-16ರಲ್ಲಿ ಕೇಂದ್ರದ ಸಾಲವು ₹70.98 ಲಕ್ಷ ಕೋಟಿ ಆಗಿತ್ತು. 2025-26ರಲ್ಲಿ ₹200.16 ಲಕ್ಷ ಕೋಟಿಗೆ ಜಿಗಿದಿದೆ.

ಕೇಂದ್ರವು ಈ ವರ್ಷ ₹4.61 ಲಕ್ಷ ಕೋಟಿ ಸಾಲ ಮರುಪಾವತಿ ಮಾಡಿದೆ. ಒಟ್ಟು ಸಾಲಕ್ಕೆ ಈ ವರ್ಷ ಪಾವತಿಸುತ್ತಿರುವ ಬಡ್ಡಿ ₹12.76 ಲಕ್ಷ ಕೋಟಿ.

ಎಲ್ಲಿಂದ ಎಷ್ಟು ಸಾಲ (ಲಕ್ಷ ಕೋಟಿಗಳಲ್ಲಿ)

ಆಂತರಿಕ ಸಾಲ	ಬಾಹ್ಯ ಸಾಲ	ಇತರ ಹೊಣೆಗಾರಿಕೆಗಳು	ಒಟ್ಟು
₹157.11	₹8.74	₹20.09	₹185.94

ಕೇಂದ್ರ ಸರ್ಕಾರದ ಸಾಲ (₹ಲಕ್ಷ ಕೋಟಿಗಳಲ್ಲಿ)

ವರ್ಷ	ವಿತ್ತ ಕೊರತೆ (ಶೇ)	ಹಣಕಾಸು ವರ್ಷದ ಅಂತ್ಯಕ್ಕೆ ಬಾಕಿ ಸಾಲ
2015-16	5.33	70.98
2016-17	5.36	74.94
2017-18	5.91	82.87
2018-19	6.49	93.26
2019-20	9.34	105.07
2020-21	18.18	121.86
2021-22	15.85	138.66
2022-23	17.38	156.13
2023-24	16.55	171.70
2024-25	15.77	185.94
2025-26	15.69	200.16

ಸಾಲ ಮರು ಪಾವತಿ (₹ಲಕ್ಷ ಕೋಟಿಗಳಲ್ಲಿ)

ಆರ್ಥಿಕ ವರ್ಷ	ಸಾಲ ಮರುಪಾವತಿ	ಸಾಲದ ಮೇಲಿನ ಬಡ್ಡಿ ಮರುಪಾವತಿ
2015-16	1.67	4.42
2016-17	2.01	4.81
2017-18	1.64	5.29
2018-19	1.79	5.83
2019-20	2.70	6.12
2020-21	2.62	6.80
2021-22	3.00	8.05
2022-23	3.53	9.29
2023-24	4.88	10.64
2024-25	4.16	11.16
2025-26	4.61	12.76

ಅತಿ ಹೆಚ್ಚು ಸಾಲ: ಅಗ್ರ ನಾಲ್ಕರಲ್ಲಿ ಕರ್ನಾಟಕ

ತಮಿಳುನಾಡು (₹9,55,691 ಲಕ್ಷ ಕೋಟಿ), ಉತ್ತರ ಪ್ರದೇಶ (8,57,844 ಲಕ್ಷ ಕೋಟಿ) ಹಾಗೂ ಮಹಾರಾಷ್ಟ್ರ (₹8,12,068 ಲಕ್ಷ ಕೋಟಿ) ಮೊದಲ ಮೂರು ಸ್ಥಾನಗಳಲ್ಲಿದ್ದರೆ, ₹7,25,456 ಲಕ್ಷ ಕೋಟಿ ಸಾಲ ಮಾಡಿರುವ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ.

ಚಾಮರಾಜನಗರ ಸಂಸದ ಸುನೀಲ್ ಬೋಸ್ ಕೇಳಿದ ಪ್ರಶ್ನೆಗೆ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಈ ಉತ್ತರ ನೀಡಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ

ಹೊಸ ಪಥ ಸಂಚಾರಕ್ಕೆ ಮುಕ್ತ

ಕೆ.ಆರ್.ಪುರ ಕಡೆಯಿಂದ ಮೇಖ್ರಿ ವೃತ್ತದ ಕಡೆಗೆ ಸಂಚಾರ ಸುಗಮ; ಸಂಚಾರ ದಟ್ಟಣೆ ಶೇ 30 ಕಡಿಮೆ

ನಗರದ ಹೆಬ್ಬಾಳ ಜಂಕ್ಷನ್ ಬಳಿ ನಿರ್ಮಿಸಿರುವ ನೂತನ ಲೂಪ್‌ನಲ್ಲಿ (ಪಥ) ಸೋಮವಾರ ವಾಹನಗಳು ಸಂಚರಿಸಿದವು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹೆಬ್ಬಾಳ ಜಂಕ್ಷನ್ ಬಳಿ ನಿರ್ಮಿಸಿರುವ 700 ಮೀಟರ್ ಉದ್ದದ ಲೂಪ್ (ಪಥ) ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ಉದ್ಘಾಟಿಸಿ, ಸಂಚಾರಕ್ಕೆ ಮುಕ್ತಗೊಳಿಸಿದರು.

ಕೆ.ಆರ್. ಪುರ ಕಡೆಯಿಂದ ಮೇಖ್ರಿ ವೃತ್ತಕ್ಕೆ ಸಂಚಾರ ಸುಗಮಗೊಳಿಸಲಿದ್ದು, ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಬೆಂಗಳೂರು ಸೆಂಟ್ರಲ್ ಕಡೆಗಿನ ಪ್ರಯಾಣಕ್ಕೆ ಅನುಕೂಲ ಮಾಡಿಕೊಡಲಿದೆ.

₹80 ಕೋಟಿ ವೆಚ್ಚದ ಈ ಕಾಮಗಾರಿಯನ್ನು 31 ತಿಂಗಳಲ್ಲಿ ಪೂರ್ಣಗೊಳಿಸಲಾಗಿದೆ. ಇದರಿಂದ ಹೆಬ್ಬಾಳ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಶೇಕಡ 30ರಷ್ಟು ಕಡಿಮೆಯಾಗಲಿದೆ. ಪ್ರಾಯೋಗಿಕ ಸಂಚಾರದ ಅವಧಿಯಲ್ಲಿ ಹೆಬ್ಬಾಳದಲ್ಲಿ ಸುಗಮ ಸಂಚಾರ ಕಂಡುಬಂದಿದ್ದು, ಮೇಖ್ರಿ ವೃತ್ತದ ಕಡೆಗೆ ಕಾಯುವಿಕೆ ಅವಧಿ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಭಿವೃದ್ಧಿ ಯೋಜನೆಗಳು: ಕೊಡಿಗೇಹಳ್ಳಿ, ಸಹಕಾರ ನಗರ ಒಳಗೊಂಡಂತೆ ವಿಮಾನ ನಿಲ್ದಾಣ ಕಡೆಯಿಂದ ನಗರದ ಕಡೆಗೆ ಸಂಚಾರಕ್ಕೆ ಅನುಕೂಲವಾಗುಂತೆ ಮೇಲ್ಸೇತುವೆಯಲ್ಲಿ ಎರಡು ಪಥಗಳನ್ನು ನಿರ್ಮಿಸಲಾಗುತ್ತಿದೆ. ಅಲ್ಲದೇ ತುಮಕೂರು ಕಡೆಯಿಂದ ಕೆ.ಆರ್.ಪುರ ಕಡೆಗೆ ಸಂಚರಿಸಲು ಕೆಳಸೇತುವೆ ಮತ್ತು ಕೆ.ಆರ್.ಪುರ ಕಡೆಯಿಂದ ವಿಮಾನ ನಿಲ್ದಾಣ ಕಡೆಗೆ ಮೇಲ್ಸೇತುವೆ ಕಾಮಗಾರಿಯನ್ನು ಶೀಘ್ರದಲ್ಲಿಯೇ ಕೈಗೆತ್ತಿಕೊಳ್ಳಲಾಗುವುದು ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಈ ಕಾಮಗಾರಿಗಳು ಪೂರ್ಣಗೊಂಡರೆ ವಿಮಾನ ನಿಲ್ದಾಣದಿಂದ ತುಮಕೂರು ಕಡೆಗಿನ ಸಂಚಾರ ಬಹುತೇಕ ಸಿಗ್ನಲ್ ಮುಕ್ತವಾಗಲಿದೆ. ಪ್ರಸ್ತುತ ಮೇಖ್ರಿ ವೃತ್ತದಿಂದ ವಿಮಾನ ನಿಲ್ದಾಣ, ತುಮಕೂರು–ಕೆ.ಆರ್. ಪುರ ಮಾರ್ಗವು ಏಕಪಥವಾಗಿದ್ದು, ಇದನ್ನು ಎರಡು ಅಥವಾ ಮೂರು ಪಥವಾಗಿ ವಿಸ್ತರಿಸುವ ಅಗತ್ಯವಿದೆ. ಇದಕ್ಕಾಗಿ ತುಮಕೂರು ಕಡೆಯ ಲೂಪ್ ಅನ್ನು ಭಾಗಶಃ ಕೆಡವಿ ಮರುನಿರ್ಮಾಣ ಮಾಡಬೇಕಾಗಿದೆ ಎಂದು ಹೇಳಿದ್ದಾರೆ.

ಉದ್ಘಾಟನಾ ಸಮಾರಂಭದ ವೇಳೆ ಶಿವಕುಮಾರ್ ಅವರು ತಮ್ಮ ಕಾಲೇಜು ದಿನಗಳಲ್ಲಿ ಬಳಸುತ್ತಿದ್ದ ಯಜ್ಡಿ ಬೈಕ್‌ನಲ್ಲಿ ಒಂದು ಸುತ್ತು ಹಾಕಿದರು. ಇದಕ್ಕೆ ಮುಖ್ಯಮಂತ್ರಿ ಹಸಿರು ನಿಶಾನೆ ತೋರಿದ್ದು, ವಿಶೇಷವಾಗಿತ್ತು. ಶಿವಕುಮಾರ್ ಅವರು ಪದವಿ ಓದುವಾಗ ₹10,400ಕ್ಕೆ ಸಿಎಇ 7684 ಸಂಖ್ಯೆಯ ಯಜ್ಡಿ ಬೈಕ್ ಖರೀದಿಸಿದ್ದರು. ಕಾಲೇಜು ದಿನಗಳಲ್ಲಿ ಬಳಸಿದ್ದ ಈ ಬೈಕ್ ಅನ್ನು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನವೀಕರಣ ಮಾಡಿಸಿದ್ದರು.

ಸಚಿವರಾದ ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ಬಿ.ಡಿ.ಎ ಅಧ್ಯಕ್ಷ ಎನ್. ಎ. ಹ್ಯಾರಿಸ್, ನಟಿ ರಮ್ಯಾ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಬಿಡಿಎ ಆಯುಕ್ತ ಮಣಿವಣ್ಣನ್, ಬಿಬಿಎಂಪಿ ಮುಖ್ಯ ಆಯುಕ್ತ ಎಂ. ಮಹೇಶ್ವರರಾವ್, ಉಪ ಮುಖ್ಯಮಂತ್ರಿಯವರ ಕಾರ್ಯದರ್ಶಿ ರಾಜೇಂದ್ರ ಚೋಳನ್ ಮತ್ತಿತರರು ಉಪಸ್ಥಿತರಿದ್ದರು.

‘1.5 ಕಿ.ಮೀ. ಸುರಂಗ ರಸ್ತೆ’

ಡಿ.ಕೆ. ಶಿವಕುಮಾರ್, ಸಚಿವ ಬೈರತಿ ಸುರೇಶ್ ಬೈಕ್‌ನಲ್ಲಿ ಸಂಚರಿಸಿದರು

‘ನಗರದ ಸಂಚಾರ ದಟ್ಟಣೆ ತಪ್ಪಿಸಲು ಎಸ್ಟೀಮ್ ಮಾಲ್‌ನಿಂದ ಬ್ಯಾಪ್ಟಿಸ್ಟ್ ಆಸ್ಪತ್ರೆವರೆಗೆ 1.5 ಕಿಲೋ ಮೀಟರ್ ಉದ್ದದ ನೂತನ ಸುರಂಗ ರಸ್ತೆ ನಿರ್ಮಿಸಲಾಗುವುದು. ಇದರ ಸಾಧಕ- ಬಾಧಕ ಹಾಗೂ ಹಣಕಾಸಿನ ನೆರವು ಕುರಿತು ಮುಖ್ಯಮಂತ್ರಿ ಅವರ ಜತೆ ಚರ್ಚಿಸಲಾಗಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೆ.ಆರ್.ಪುರ ಕಡೆಯಿಂದ ಮೇಖ್ರಿ ಸರ್ಕಲ್ ಭಾಗದ ಲೂಪ್ ಅನ್ನು ₹80 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಇನ್ನೊಂದು ಭಾಗದ ಲೂಪ್ ಅನ್ನು ನವೆಂಬರ್ ವೇಳೆಗೆ ಪೂರ್ಣಗೊಳಿಸಲಾಗುವುದು. ಒಟ್ಟು ₹300 ಕೋಟಿ ವೆಚ್ಚದಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಎರಡು ಪಥಗಳು ಇರುವ ಕಡೆ ಆರು ಪಥಗಳು ಬರುವಂತೆ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

‘ಈ ಲೂಪ್ ಕಾಮಗಾರಿಯನ್ನು ಮುತುವರ್ಜಿವಹಿಸಿ ಮಾಡಲಾಗಿದೆ. ಏಕೆಂದರೆ ಒಂದು ಕಡೆ ಮೆಟ್ರೊ ಮಾರ್ಗ, ಇನ್ನೊಂದು ಕಡೆ ರೈಲ್ವೆ ಮಾರ್ಗವಿದ್ದು, ಅತ್ಯಂತ ತಾಂತ್ರಿಕವಾಗಿ ಕಾಮಗಾರಿ ಪೂರ್ಣಗೊಳಿಸಲಾಗಿದೆ’ ಎಂದು ಎಂದರು.

‘₹17 ಸಾವಿರ ಕೋಟಿ ವೆಚ್ಚದಲ್ಲಿ 16.5 ಕಿಲೋ ಮೀಟರ್ ಉದ್ದದ ಸುರಂಗ ರಸ್ತೆಗೆ ಟೆಂಡರ್ ಕರೆಯಲಾಗಿದೆ. ಹೆಬ್ಬಾಳ ಜಂಕ್ಷನ್‌ನ ಮತ್ತೊಂದು ಲೂಪ್ ನಿರ್ಮಾಣವನ್ನು ತ್ವರಿತಗೊಳಿಸಲು ಬಿಡಿಎ ಅಧ್ಯಕ್ಷ ಹ್ಯಾರಿಸ್ ಅವರು ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ವಿಮಾನ ನಿಲ್ದಾಣ ಕಡೆಯಿಂದ ಬರುವವರು ಸೇರಿದಂತೆ ಎಲ್ಲರೂ ಸಂಚಾರ ದಟ್ಟಣೆ ಅನುಭವಿಸುತ್ತಾ ಇದ್ದರು. ಇದನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಕುರಿತು ಮುಖ್ಯಮಂತ್ರಿಯವರಿಗೆ ವಿವರಣೆ ನೀಡಿದ್ದೇನೆ’ ಎಂದರು.

ಸುದ್ದಿ 2 ನಿಮಿಷ

‘ಬಿಜೆಪಿಯಲ್ಲಿ ಹುದ್ದೆ ಪಡೆಯಲು ಪುಡಿ ರೌಡಿ ಆಗಿರಬೇಕು’

ನವದೆಹಲಿ: ಬಿಜೆಪಿಯಲ್ಲಿ ಅಧಿಕಾರ, ಹುದ್ದೆ ಪಡೆಯಬೇಕು ಅಂದರೆ ಒಂದೋ ಪುಡಿ ರೌಡಿಗಳಾಗಿರಬೇಕು ಅಥವಾ ರೇಪಿಸ್ಟ್ ಆಗಿರಬೇಕು ಅಥವಾ ಕನಿಷ್ಠ ಪಕ್ಷ ಎರಡ್ಮೂರು ಬಾರಿ ಜೈಲಿಗಾದರೂ ಹೋಗಿ ಬಂದಿರಬೇಕು ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ವ್ಯಂಗ್ಯವಾಡಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಅಂತಹವರಿಗಾಗಿಯೇ ಪ್ರತ್ಯೇಕ ಸೆಲ್ ಮಾಡಿಕೊಂಡಿರುವ ಬಿಜೆಪಿ ಕರ್ನಾಟಕ ಘಟಕವು ಪವಿತ್ರ ಖಾದಿ ಬಟ್ಟೆ ಬಗ್ಗೆ ಮಾತಾಡುವುದು ಹಾಸ್ಯಾಸ್ಪದವಲ್ಲ. ಅವರಿಗೆ ಯಾವ ನೈತಿಕತೆಯೂ ಇಲ್ಲ’ ಎಂದರು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷನೇ ಚೆಕ್ ಮೂಲಕ ಲಂಚ ಪಡೆದು ಹುದ್ದೆ ಗಿಟ್ಟಿಸಿಕೊಂಡಿರುವಾಗ, ಕೇಂದ್ರದ ಗೃಹ ಸಚಿವರನ್ನೇ ಕೋರ್ಟ್ ಗಡಿಪಾರು ಮಾಡಿರುವಾಗ, ರಾಜಧರ್ಮ ಪಾಲಿಸದ ಪ್ರಧಾನ ಮಂತ್ರಿಯೇ ಇರುವಾಗ ಉಳಿದವರದ್ದು ಯಥಾ ರಾಜಾ, ತಥಾ ಪಟಾಲಂ ಅಲ್ವೇ’ ಎಂದು ಅವರು ಪ್ರಶ್ನಿಸಿದರು.

‘ಆರ್‌ಎಸ್‌ಎಸ್ ಬೆಳಕಿನ ಸಾಮ್ರಾಜ್ಯವೋ, ದೇಶಕ್ಕೆ ಅಂಟಿದ ಕಗ್ಗತ್ತಲೆಯ ಕಾರ್ಮೋಡವೋ ಎಂಬುದು ದೇಶದ ಜನರಿಗೆ ಗೊತ್ತಿದೆ. ಸಂಘ ಪರಿವಾರದ ಅಂತರಂಗಗಳು ನರಕದ ಗರ್ಭಗುಡಿಯೊಳಗೆ ಬಚ್ಚಿಟ್ಟಿದ್ದಕ್ಕಿಂತ, ಹೂತಿಟ್ಟದ್ದೇ ಹೆಚ್ಚು. ಇಂತಹ ಪಾತಕಿತನಗಳನ್ನು ಬಯಲು ಮಾಡುತ್ತಲೇ ಇರುತ್ತೇನೆ. ಎರಡು ರೂಪಾಯಿಯ ಗತಿಗೇಡಿ ಭಕ್ತರ ಅಪಪ್ರಚಾರಕ್ಕೆ ಕಿವಿಗೊಡುವ ಪ್ರಶ್ನೆಯೇ ಇಲ್ಲ’ ಎಂದು ಅವರು ಹೇಳಿದರು.

ಫಲಪುಷ್ಪ ಪ್ರದರ್ಶನಕ್ಕೆ ತೆರೆ 6.24 ಲಕ್ಷ ಜನ ಭೇಟಿ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿದ್ದ ‘ವೀರರಾಣಿ ಕಿತ್ತೂರು ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ’ ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನಕ್ಕೆ ಸೋಮವಾರ ತೆರೆಬಿತ್ತು. 12 ದಿನ ನಡೆದ ಈ ಫಲಪುಷ್ಪ ಪ್ರದರ್ಶನಕ್ಕೆ ಒಟ್ಟು 6.24 ಲಕ್ಷ ಜನ ಭೇಟಿ ನೀಡಿದ್ದು, ಒಟ್ಟು ₹2.78 ಕೋಟಿ ವರಮಾನ ಸಂಗ್ರಹವಾಗಿದೆ.

ಗಾಜಿನ ಮನೆಯ ಆವರಣದಲ್ಲಿ ಕಿತ್ತೂರು ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಜೀವನ ಗಾಥೆಯನ್ನು ಬಣ್ಣ–ಬಣ್ಣದ ಹೂವುಗಳಲ್ಲಿ ಅನಾವರಣಗೊಳಿಸಲಾಗಿತ್ತು. ಆಗಸ್ಟ್ 07ರಿಂದ 18ರವರೆಗೆ ನಡೆದ ಫಲಪುಷ್ಪ ಪ್ರದರ್ಶನವನ್ನು ಕಣ್ತುಂಬಿಕೊಳ್ಳಲು ನಿತ್ಯವೂ ಲಕ್ಷಾಂತರ ಜನ ಭಾಗವಹಿಸಿದ್ದರು.

ಪುಷ್ಪಗಳಲ್ಲಿ ಅರಳಿದ ಕಿತ್ತೂರು ಕೋಟೆ, ಚನ್ನಮ್ಮನ ಐಕ್ಯ ಸ್ಮಾರಕ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹುತಾತ್ಮರಾದ ಸನ್ನಿವೇಶವನ್ನು ಮರುಸೃಷ್ಟಿಸಲಾಗಿತ್ತು. ಇದನ್ನು ವೀಕ್ಷಿಸಲು ಲಕ್ಷಾಂತರ ಮಂದಿ ಬಂದಿದ್ದರು.

‘ಅಂತಿಮ ದಿನವಾದ ಸೋಮವಾರ 27,310 ಜನ ಫಲಪುಷ್ಪ ಪ್ರದರ್ಶನ ವೀಕ್ಷಿಸಿದರು. ₹3.45 ಲಕ್ಷ ಪ್ರವೇಶ ಶುಲ್ಕ ಸಂಗ್ರಹವಾಗಿದೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business Offers

Finance

MSME LOANS
Available for Any Startup Companies,Any Existing Companies
NOTE:Also One Approved Loan Available
Contact-7204995189

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, Ravindranath Aladakatti, residing at # EV-104, Vijnanapura IISc Quarters, RMV, 2nd stage, New BEL Road, Bengaluru-560094, have changed my name to RAVINDRANATH HANUMANTHAPPA ALADAKATTI vide affidavit dated 15.08.2025 before notary Meera H, Bengaluru.

CHANGE OF NAME
I, Ashutosh C Sirdeshpande S/o Chidambar R Sirdeshpande and Mother Gayatri C Sirdeshpande residing at A1001, 10th Floor, Hoysala Samruddhi Apt, Talakaveri Layout, Amruthahalli, Bangalore-560092, have changed my name from Ashutosh Sirdeshpande to Ashutosh C Sirdeshpande vide affidavit dated 14.08.2025 before notary A Manjula, Bengaluru

Lost

DOCUMENT LOST
I, R. Vasudev Rao, R/at #9/7, 3rd Cross, 9th Main Road, Jayanagara 2nd Block, Bangalore-560011, have lost Original Property Document, Document / Identification: BNG(UR) JNR 2609 2006-2007, Pg-8 & 9, while in shifting the house. Finders please Contact No: 9611918239.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕಾಮಗಾರಿ: 24ರಂದು ರೈಲು ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಸೀಕೆರೆ-ಬಾಣಾವರ ಹಾಗೂ ಅರಸೀಕೆರೆ-ಹಬ್ಬನಘಟ್ಟ ನಿಲ್ದಾಣಗಳ ನಡುವೆ ಪ್ರಮುಖ ಸಿಗ್ನಲಿಂಗ್ ಮತ್ತು ಬ್ಲಾಕ್ ಬದಲಾವಣೆ ಕಾಮಗಾರಿಗಳನ್ನು ಆ.24ರಂದು ಹಮ್ಮಿಕೊಳ್ಳಲಾಗಿದೆ. ಹಾಗಾಗಿ ಅಂದು ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದೆ.

ಎಸ್‌ಎಂವಿಟಿ ಬೆಂಗಳೂರು–ಮೈಸೂರು ಡೈಲಿ ಪ್ಯಾಸೆಂಜರ್ ರೈಲು ಸಂಚಾರ ಆ.23ರಂದು ರದ್ದುಗೊಳ್ಳಲಿದೆ. ಮೈಸೂರು–ಎಸ್‌ಎಂವಿಟಿ ಬೆಂಗಳೂರು ಡೈಲಿ ಪ್ಯಾಸೆಂಜರ್, ಶಿವಮೊಗ್ಗ ಟೌನ್–ಮೈಸೂರು– ಶಿವಮೊಗ್ಗ ಟೌನ್ ಡೈಲಿ ಎಕ್ಸ್‌ಪ್ರೆಸ್, ಅರಸೀಕೆರೆ–ಮೈಸೂರು–ಅರಸೀಕೆರೆ ಡೈಲಿ ಪ್ಯಾಸೆಂಜರ್ ರೈಲುಗಳ ಸಂಚಾರ ಆ.24ರಂದು ಒಂದು ದಿನ ರದ್ದುಗೊಳ್ಳಲಿವೆ.

ಶಿವಮೊಗ್ಗ ಟೌನ್–ಚಿಕ್ಕಮಗಳೂರು ಡೈಲಿ ಪ್ಯಾಸೆಂಜರ್ ರೈಲು ಶಿವಮೊಗ್ಗ ಟೌನ್ ಮತ್ತು ಬೀರೂರು ನಡುವೆ ಭಾಗಶಃ ರದ್ದುಗೊಳ್ಳಲಿದೆ. ಬೀರೂರಿನಿಂದ ನಿಗದಿತ ಸಮಯದಲ್ಲಿ ಪ್ರಯಾಣ ಆರಂಭಿಸಲಿದೆ.

ಯಶವಂತಪುರ–ಬಿಕಾನೇರ್ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು 60 ನಿಮಿಷ ತಡವಾಗಿ ಹೊರಡಲಿದೆ. ಮಾರ್ಗ ಮಧ್ಯೆ 90 ನಿಮಿಷ ನಿಯಂತ್ರಿಸಲಾಗುತ್ತದೆ. ಯಶವಂತಪುರ–ಟಾಟಾನಗರ ಸಾಪ್ತಾಹಿಕ ಎಕ್ಸ್‌ಪ್ರೆಸ್, ಯಶವಂತಪುರ–ಹಜರತ್ ನಿಜಾಮುದ್ದೀನ್ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್, ಕೆಎಸ್‌ಆರ್ ಬೆಂಗಳೂರು–ಧಾರವಾಡ ಸಿದ್ಧಗಂಗಾ ದೈನಿಕ ಎಕ್ಸ್‌ಪ್ರೆಸ್ ರೈಲುಗಳನ್ನು ಮಾರ್ಗ ಮಧ್ಯೆ 60–75 ನಿಮಿಷ ನಿಯಂತ್ರಿಸಲಾಗುತ್ತದೆ. ಬೆಳಗಾವಿ–ಮೈಸೂರು ವಿಶ್ವಮಾನವ ದೈನಿಕ ಎಕ್ಸ್‌ಪ್ರೆಸ್ ರೈಲು 90 ನಿಮಿಷ ನಿಯಂತ್ರಣವಾಗಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಲಿಂಗಾಯತ ಸಚಿವರು, ಶಾಸಕರ ಸಭೆ

ಜಾತಿವಾರು ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಹೊಸದಾಗಿ ನಡೆಸಲಿರುವ ಜಾತಿವಾರು ಸಮೀಕ್ಷೆ ವೇಳೆ ವೀರಶೈವ -ಲಿಂಗಾಯತ ಸಮುದಾಯದ ನೈಜ ಸಂಖ್ಯೆಯನ್ನು ಖಚಿತಪಡಿಸುವ ಕುರಿತು ವೀರಶೈವ ಲಿಂಗಾಯತ ಸಮುದಾಯದ ಕಾಂಗ್ರೆಸ್ ಸಚಿವರು, ಶಾಸಕರು ಚರ್ಚೆ ನಡೆಸಿದ್ದಾರೆ.

ಇದೇ 22ರಂದು ಪಕ್ಷಾತೀತವಾಗಿ ಸಮುದಾಯದ ನಾಯಕರ ಸಭೆ ಕರೆದು ಮುಂದಿನ ಕಾರ್ಯತಂತ್ರದ ಬಗ್ಗೆ ಚರ್ಚಿಸಲು ಈ ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಗೊತ್ತಾಗಿದೆ

ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಸಚಿವರಾದ ಎಂ.ಬಿ. ಪಾಟೀಲ, ಲಕ್ಷ್ಮೀ ಹೆಬ್ಬಾಳಕರ, ಶಿವಾನಂದ ಪಾಟೀಲ, ಶರಣಬಸಪ್ಪ ದರ್ಶನಾಪೂರ, ಶರಣ ಪ್ರಕಾಶ್ ಪಾಟೀಲ, ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಮುಖ್ಯ ಸಚೇತಕ ಅಶೋಕ ಪಟ್ಟಣ, ಶಾಸಕರಾದ ಬಿ.ಆರ್. ಪಾಟೀಲ, ಲಕ್ಷ್ಮಣ ಸವದಿ ಸೇರಿದಂತೆ 34ಕ್ಕೂ ಹೆಚ್ಚು ಜನಪ್ರತಿನಿಧಿಗಳು, ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಮತ್ತಿತರರು ಇದ್ದರು.

ಸಮುದಾಯದ ಎಲ್ಲರನ್ನೂ ಒಗ್ಗೂಡಿಸುವ ಮತ್ತು ಮುಂಬರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವೇಳೆ ವೀರಶೈವ ಮತ್ತು ಲಿಂಗಾಯತ ಸಮುದಾಯದ ಹೆಸರನ್ನು ನಮೂದಿಸುವ ಬಗ್ಗೆ ಉಂಟಾಗಿರುವ ಗೊಂದಲ ನಿವಾರಿಸುವ ಬಗ್ಗೆಯೂ ಚರ್ಚೆ ನಡೆಯಿತು ಎನ್ನಲಾಗಿದೆ.

ಕೆಲವರು ಲಿಂಗಾಯತ ಎಂದೂ, ಮತ್ತೆ ಕೆಲವರು ವೀರಶೈವ ಎಂದು ಬರೆಸುತ್ತಾರೆ. ಮತ್ತೆ ಕೆಲವರು ತಮ್ಮ ಉಪ ಜಾತಿಯನ್ನಷ್ಟೇ ಬರೆಸುತ್ತಾರೆ. ಸಮುದಾಯದ ಒಟ್ಟಾರೆ ಸಂಖ್ಯೆ ಕುಸಿಯದಂತೆ ಮತ್ತು ಮೀಸಲಾತಿಗೆ ಧಕ್ಕೆ ಬಾರದ ರೀತಿಯಲ್ಲಿ ಮತ್ತು ಸಮಾಜದ ಏಕತೆಗೂ ಚ್ಯುತಿ ಆಗದಂತೆ ಎಲ್ಲ ಉಪ ಪಂಗಡಗಳನ್ನೂ ಸೇರಿಸಿಕೊಂಡು ಸಾಮುದಾಯಿಕ ಪ್ರಯತ್ನ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

‘ಜಾನಪದಕ್ಕೆ ಉ.ಕ ಸಮೃದ್ಧ ನೆಲೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾನಪದಕ್ಕೆ ಉತ್ತರ ಕರ್ನಾಟಕವು ಸಮೃದ್ಧ ನೆಲೆಯಾಗಿದೆ’ ಎಂದು ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಅವರು ಅಭಿಪ್ರಾಯಪಟ್ಟರು.

ಕಮತಗಿಯ ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘ ಮತ್ತು ಕನ್ನಡ ಜಾನಪದ ಪರಿಷತ್ತಿನ ಶಾಂತಿನಗರ ವಿಧಾನಸಭಾ ಕ್ಷೇತ್ರ ಘಟಕ ಜಂಟಿಯಾಗಿ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಪ್ರಕಾಶ ಗ. ಖಾಡೆ ಅವರ ಜನಪದ ಲೇಖನಗಳನ್ನೊಳಗೊಂಡ ‘ಗ್ರಾಮ್ಯ’ ಗ್ರಂಥವನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

‘ಉತ್ತರ ಕರ್ನಾಟಕ ಭಾಗದ ಖಾಡೆ ಮನೆತನದ ಜಿ.ಬಿ.ಖಾಡೆ ಮತ್ತು ಅವರ ಪುತ್ರ ಪ್ರಕಾಶ ಖಾಡೆ ಅವರು ಕಳೆದ ಐದು ದಶಕಗಳಿಂದ ಜಾನಪದ ಸಾಹಿತ್ಯ ಸಂಗ್ರಹ, ಸಂಪಾದನೆ ಮತ್ತು ಸಂಶೋಧನೆಯಲ್ಲಿ ಮಾಡಿದ ಕೆಲಸ ದಾಖಲಾರ್ಹವಾಗಿದೆ. ಬಿಡುಗಡೆಯಾಗಿರುವ ಈ ಕೃತಿಯು ಹೊಸ ತಲೆಮಾರಿನ ಓದುಗರಲ್ಲಿ ಜಾನಪದದ ಅರ್ಥ ತಿಳಿವಳಿಕೆಯನ್ನು ಹೆಚ್ಚಿಸುತ್ತದೆ’ ಎಂದರು.

ಲೇಖಕಿ ಶಾಂತಿ ವಾಸು ‘ಜಾನಪದ ಸಂಸ್ಕೃತಿಯ ತಾಯಿ ಬೇರುಗಳು ನಮ್ಮ ಪರಂಪರೆಯ ದೊಡ್ಡ ಆಸ್ತಿಯಾಗಿವೆ. ಅವುಗಳನ್ನು ಹೊಸ ದೃಷ್ಟಿಕೋನದಿಂದ ನೋಡುವ ಲೇಖನಗಳು ಖಾಡೆ ಅವರ ಕ್ಷೇತ್ರ ಕಾರ್ಯ ಮತ್ತು ಆಳವಾದ ಅಧ್ಯಯನದ ಪ್ರತೀಕ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಹಿಂದೂ ಧರ್ಮದ ಬಗ್ಗೆ ತಪ್ಪು ಭಾವನೆ ಮೂಡಿಸುವ ಪ್ರಯತ್ನ’

ಧರ್ಮಸ್ಥಳ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂ ಧರ್ಮ ಹಾಗೂ ದೇಗುಲಗಳನ್ನು ಗುರಿಯಾಗಿಸಿ ಕರ್ನಾಟಕ ಮಾತ್ರವಲ್ಲದೇ ಭಾರತದ ಹಲವು ಕಡೆಗಳಲ್ಲಿ ತಪ್ಪು ಭಾವನೆ ಮೂಡಿಸುವ ಪ್ರಯತ್ನಗಳು ಪ್ರಬಲಗೊಂಡಿವೆ ಎಂದು ವಕೀಲ ಗಿರೀಶ್ ಭಾರದ್ವಾಜ್ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಪುರಭವನದಲ್ಲಿ ಸೋಮವಾರ ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ ಆಯೋಜಿಸಿದ್ದ ‘ಧರ್ಮಸ್ಥಳ ಮೇಲಿನ ಷಡ್ಯಂತ್ರ: ಸತ್ಯ ಮಿಥ್ಯಗಳ ಅನಾವರಣ’ ಎನ್ನುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ದಶಕಗಳಿಂದಲೂ ಧರ್ಮದ ಹೆಸರಿನಲ್ಲಿ ಷಡ್ಯಂತ್ರಗಳು ನಡೆದುಕೊಂಡೇ ಬಂದಿವೆ. ಆದರೆ, ಒಂದು ದಶಕದ ಅವಧಿಯಲ್ಲಿ ಇದರ ಪ್ರಮಾಣ, ರೂಪು ರೇಷೆ ಬದಲಾಗಿದೆ. ಧರ್ಮಗಳ ನಡುವೆ ಕಂದಕ ಸೃಷ್ಟಿ ಮಾಡುವ ಪ್ರಯತ್ನಗಳು ಪ್ರಬಲಗೊಂಡಿವೆ ಎಂದು ಆರೋಪಿಸಿದರು.

ಧರ್ಮಸ್ಥಳ ವಿಚಾರದಲ್ಲಿ ಸಂಯೋಜಿತ ಷಡ್ಯಂತ್ರಗಳು ನಡೆದಿವೆ. ಇದೆಲ್ಲವೂ ಬುರುಡೆ ಎನ್ನುವುದು ಬಯಲಾಗುತ್ತಿದೆ. ಸಂಘಟಿತರಾಗಿ ಇದಕ್ಕೆ ಉತ್ತರ ನೀಡಬೇಕಿದೆ ಎಂದು ಅವರು ಹೇಳಿದರು.

ಟಿಟಿಡಿ ಸದಸ್ಯರಾದ ಎಸ್.ನರೇಶ್ ಕುಮಾರ್ ಮಾತನಾಡಿ, ‘ತಿರುಪತಿ ತಿರುಮಲದಲ್ಲಿ ಧರ್ಮದ ಗೊಂದಲವನ್ನು ಹುಟ್ಟು ಹಾಕಿ ಹಣ ಮಾಡುವ ಪ್ರಯತ್ನವನ್ನು ಹಿಂದಿನ ಸರ್ಕಾರ ನಡೆಸಿತು. ಹಿಂದೆಲ್ಲಾ ಧರ್ಮದ ಹೆಸರಿನಲ್ಲಿ ಆಸ್ತಿಪಾಸ್ತಿ ನಾಶ ಮಾಡುವುದು ನಡೆದಿತ್ತು. ಈಗ ಭಾವನೆಗಳ ಮೇಲೆ ದಾಳಿ ಮಾಡುವುದು ಹೆಚ್ಚಿದ್ದು, ಇದನ್ನು ಸಹಿಸಲಾಗದು’ ಎಂದು ಹೇಳಿದರು.

‘ಧರ್ಮವನ್ನು ದುರ್ಬಳಕೆ ಮಾಡಿಕೊಂಡು ರಿಯಲ್ ಎಸ್ಟೇಟ್ ನಡೆಸುವ ಹುನ್ನಾರಗಳು ನಡೆದಿವೆ. ಇದೇ ಕಾರಣದಿಂದಲೇ ಆಂಧ್ರಪ್ರದೇಶದಲ್ಲಿ ಚಂದ್ರಬಾಬು ನಾಯ್ಡು ಅವರು ವಕ್ಫ್ ಮಂಡಳಿಯನ್ನೇ ರದ್ದುಪಡಿಸಿದ್ದಾರೆ. ಧರ್ಮಸ್ಥಳದ ವಿಚಾರದಲ್ಲೂ ಕೆಲ ಸಂಘಟನೆಗಳ ಪ್ರಮುಖರಿಂದ ಇದೇ ರೀತಿ ಆಗಿದೆ. ಇದಕ್ಕೆ ಎಂದಿಗೂ ಜಯ ಸಿಗುವುದಿಲ್ಲ’ ಎಂದು ತಿಳಿಸಿದರು.

ಸಮಿತಿ ಸಂಚಾಲಕ ವಿಕಾಸ್ ಪುತ್ತೂರು, ಪತ್ರಕರ್ತರಾದ ಜಿತೇಂದ್ರ ಕುಂದೇಶ್ವರ, ಕೀರ್ತಿ ಶಂಕರಘಟ್ಟ ಮಾತನಾಡಿದರು.

ಕೆಡಿಪಿ ಸದಸ್ಯರಾಗಿ ಲಕ್ಷ್ಮಣಮೂರ್ತಿ ನೇಮಕ

ಲಕ್ಷ್ಮಣಮೂರ್ತಿ

ನೆಲಮಂಗಲ: ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಸಮಿತಿಗೆ ದಾಸನಪುರ ನಿವಾಸಿ ಆರ್.ಲಕ್ಷ್ಮಣ ಮೂರ್ತಿ ಅವರನ್ನು ಸದಸ್ಯರನ್ನಾಗಿ ನಾಮನಿರ್ದೇಶನಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಧರ್ಮ ಸಂರಕ್ಷಣಾ ಸಮಾವೇಶ 24ಕ್ಕೆ

ಬೆಂಗಳೂರು: ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿಯಿಂದ ಇದೇ 24ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಧರ್ಮ ಸಂರಕ್ಷಣಾ ಸಮಾವೇಶ ಆಯೋಜಿಸಲಾಗಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಸಂಚಾಲಕ ವಸಂತ ಗಿಳಿಯಾರ್, ‘ಧರ್ಮಸ್ಥಳ ಹಿಂದೂಗಳ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿದೆ. ಇದರ ವಿರುದ್ಧ ಕೆಲವರು ನಿರಾಧಾರ ಆರೋಪ ಮಾಡುತ್ತಿದ್ದಾರೆ. ಇದರಿಂದ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆಯಾಗುತ್ತಿದೆ’ ಎಂದು ಹೇಳಿದರು.

‘ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಹಿಂದೂ ಜಾಗರಣ ವೇದಿಕೆಯ ಪ್ರಮುಖರಾದ ಜಗದೀಶ್ ಕಾರಂತ, ಯುವ ಬ್ರಿಗೇಡ್‌ನ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ, ದೋ ಕೇಶವಮೂರ್ತಿ, ರಾಜಣ್ಣ ಹೊನ್ನೇನಹಳ್ಳಿ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದರು.

ನಿಧನ ವಾರ್ತೆ

ಆರ್.ನರಸಾಂಜಿನಪ್ಪ

ನೆಲಮಂಗಲ: ನಗರಸಭೆ ವ್ಯಾಪ್ತಿಯ ಬಸವನಹಳ್ಳಿ ನಿವಾಸಿ ಆರ್.ನರಸಾಂಜಿನಪ್ಪ (85) ಅವರು ವಯೋಸಹಜ ಅನಾರೋಗ್ಯದಿಂದ ಭಾನುವಾರ ಮೃತಪಟ್ಟರು. ಪತ್ನಿ, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎನ್.ನರಸಿಂಹಮೂರ್ತಿ ಸೇರಿ ಮೂವರು ಪುತ್ರರು, ನಾಲ್ವರು ಹೆಣ್ಣುಮಕ್ಕಳು ಇದ್ದಾರೆ. ಸೋಮವಾರ ಮಧ್ಯಾಹ್ನ ಬಸವನಹಳ್ಳಿಯ ಜಮೀನಿನಲ್ಲಿ ಅಂತ್ಯಸಂಸ್ಕಾರ ನಡೆಯಿತು.

ನೈರುತ್ಯ ರೈಲ್ವೆ

ಎಸ್‌ಜಿಡಬ್ಲ್ಯೂ ಎಫ್‌ನಲ್ಲಿ ಹಾರು ಬೂದಿ ಮಾರಾಟದ ಸಾರ್ವಜನಿಕ ಹರಾಜಿನ ಪ್ರಕಟಣೆ

ಕೆಲಸದ ವಿವರ	ಹರಾಜು
ಹರಾಜು ದಿನಾಂಕದ ವಿವರಣೆ	ಸ್ಯಾಟಲೈಟ್ ಗೂಡ್ಸ್ ಟರ್ಮಿನಲ್ ವೈಟ್‌ಫೀಲ್ಡ್ ಗೂಡ್ಸ್ ಶೆಡ್‌ನಲ್ಲಿ ಸುಮಾರು 64 ಟನ್ ಹಾರು ಬೂದಿ ಮಾರಾಟ

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05.09.2025 ರಂದು 12.30 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಲಾಗಿನ್ ಮಾಡಿ

South Western Railway - SWR | SWRRLY | @SWRAILWAYHQ | @sw_railways

ಕನಕ ಭವನ ಅಂಗವಿಕಲರ ಶಾಲೆಗೆ ಜಮೀನು

ಪ್ರಜಾವಾಣಿ ವಾರ್ತೆ

ನೆಲಮಂಗಲ: ಕುರುಬ ಸಮುದಾಯದ ವಿದ್ಯಾರ್ಥಿ ನಿಲಯ ಕಟ್ಟಡ ₹ 1 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿದೆ. ತಾಲ್ಲೂಕಿನ ಬ್ಯಾಡರಹಳ್ಳಿಯಲ್ಲಿ ಕನಕ ಭವನ ಹಾಗೂ ಅಂಗವಿಕಲರ ಶಾಲೆ ನಿರ್ಮಾಣಕ್ಕೆ ಒಂದು ಎಕರೆ ಐದು ಗುಂಟೆ ಜಮೀನು ಮಂಜೂರಾಗಿದೆ ಎಂದು ಶಾಸಕ ಎನ್. ಶ್ರೀನಿವಾಸ್ ತಿಳಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಟ್ರಸ್ಟ್ ಹಮ್ಮಿಕೊಂಡಿದ್ದ ಸಂಗೊಳ್ಳಿ ರಾಯಣ್ಣ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಬಿ.ಡಿ. ಗಂಗರಾಜು, ಪದವಿಪೂರ್ವ ಶಿಕ್ಷಣ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಸಿ. ಅಶ್ವ-ತ್ಥನಾರಾಯಣ, ನಗರಸಭೆ ಅಧ್ಯಕ್ಷ ಎನ್. ಗಣೇಶ್, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ. ನಾರಾಯಣ ಗೌಡ, ಟ್ರಸ್ಟ್ ಅಧ್ಯಕ್ಷ ವಿ.ಪಿ.ಉಜ್ಜಿನಪ್ಪ, ಶೆಫರ್ಡ್ ಇಂಡಿಯಾ ಇಂಟರ್ ನ್ಯಾಷನಲ್ ರಾಜ್ಯ ಯುವ ಘಟಕ ಅಧ್ಯಕ್ಷ ಚೇತನ್, ಮುಖಂಡರಾದ ಕೆ.ನಾಗರಾಜು, ಡಿ. ಸಿದ್ದರಾಜು, ಲೋಕೇಶ್, ಮುನಿರಾಜು ಇದ್ದರು.

ಮನೆಗಳಿಗೆ ನುಗ್ಗಿದ ಮಳೆ ನೀರು

ಸತತ ಮಳೆಯಿಂದ ತುಂಬಿದ ರಾಜಕಾಲುವೆ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಸ್ಥಿತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಾಯಿ ಲೇಔಟ್ ಹಾಗೂ ವಡ್ಡರಪಾಳ್ಯದ ಮನೆಗಳಿಗೆ ನುಗ್ಗಿದ ನೀರು
- ಎರಡು ದಿನಗಳ ಸತತ ಮಳೆಯಿಂದ ತುಂಬಿದ ರಾಜಕಾಲುವೆಗಳು

ಬೆಂಗಳೂರು: ಸಾಯಿ ಲೇಔಟ್ ಹಾಗೂ ವಡ್ಡರಪಾಳ್ಯದ ಮನೆಗಳಿಗೆ ಮಳೆ ನೀರು ನುಗ್ಗಿದ್ದು, ನೀರನ್ನು ಹೊರ ಹಾಕಲು ಬಿಬಿಎಂಪಿ ಸಿಬ್ಬಂದಿ ಪಂಪ್‌ಸೆಟ್‌ಗಳನ್ನು ಅಳವಡಿಸಿದ್ದಾರೆ.

ನಗರದಲ್ಲಿ ಎರಡು ದಿನದಿಂದ ಸತತವಾಗಿ ಮಳೆ ಸುರಿಯುತ್ತಿದ್ದು ರಾಜಕಾಲುವೆಗಳು ತುಂಬಿ ಹರಿಯುತ್ತಿವೆ. ಮಹದೇವಪುರ ವಲಯದ ಸಾಯಿ ಲೇಔಟ್‌ಗೆ ರಾಜಕಾಲುವೆಗಳಿಂದ ನೀರು ಹರಿದಿದೆ.

ರಸ್ತೆ ಹಾಗೂ ಮನೆಗಳಿಗೆ ಹರಿದಿರುವ ರಾಜಕಾಲುವೆ ನೀರನ್ನು ಹೊರ ಹಾಕಲು ಬಿಬಿಎಂಪಿ ಸಿಬ್ಬಂದಿ ಪಂಪ್ ಸೆಟ್‌ಗಳನ್ನು ಅಳವಡಿಸಿದ್ದು, ಹಗಲು- ರಾತ್ರಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಳೆ ಹೆಚ್ಚಾದ ಸಂದರ್ಭದಲ್ಲಿ ನೀರು ಬಡಾವಣೆಗಳಿಗೆ ಹರಿಯುತ್ತಿದೆ.

'ಮಳೆ ನೀರು ಬಡಾವಣೆಗೆ ನುಗ್ಗದಂತೆ ಶಾಶ್ವತ ಪರಿಹಾರ ಕಲ್ಪಿಸಲಾ-ಗುತ್ತದೆ ಎಂದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಅಧಿಕಾರಿಗಳು ನಾಲ್ಕೈದು ವರ್ಷಗಳಿಂದ ಭರವಸೆ ನೀಡುತ್ತಲೇ ಇದ್ದಾರೆ. ಆದರೆ, ಮಳೆ ಹೆಚ್ಚಾದಾಗ ನಮ್ಮ ಮನೆಗಳಿಗೆ ಮಳೆ ನೀರು ನುಗ್ಗುವುದು ಕಡಿಮೆಯಾಗಿಲ್ಲ' ಎಂದು ಸ್ಥಳೀಯ ನಿವಾಸಿಗಳಾದ ರಮೇಶ್, ಚಿನ್ಮಯಿ, ವಿಮಲಾ ದೂರಿದರು.

ಮಹದೇವಪುರದ ಕಸವನಹಳ್ಳಿ ಪ್ರದೇಶದಲ್ಲಿ ಮಳೆ ನೀರು ಹರಿಯದೆ ನಿಂತಿರುವ ಪ್ರದೇಶಗಳಿಗೆ ಭೇಟಿ ನೀಡಿದ ವಲಯ ಆಯುಕ್ತ ರಮೇಶ್ ಅವರು, ನೀರು ಸರಾಗವಾಗಿ ಹರಿಯಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿ ಸಿಬ್ಬಂದಿ ಸಾಯಿ ಲೇಔಟ್‌ನಲ್ಲಿ ಮಳೆ ನೀರನ್ನು ಪಂಪ್ ಮೂಲಕ ಸೋಮವಾರ ಬೆಳಿಗ್ಗೆ ಹೊರ ಹಾಕಿದರು

ಹಲವು ಪ್ರದೇಶಗಳಲ್ಲಿ ಹೆಚ್ಚು ಮಳೆ

ನಗರದಲ್ಲಿ ಭಾನುವಾರ ಬೆಳಿಗ್ಗೆ 8.30ರಿಂದ ಸೋಮವಾರ ಬೆಳಿಗ್ಗೆ 8.30ರವರೆಗೆ ಹಲವು ಪ್ರದೇಶಗಳಲ್ಲಿ ಹೆಚ್ಚು ಮಳೆಯಾಗಿದೆ.

ಹೊರಮಾವು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ 2 ಸೆಂ.ಮೀ ಮಳೆಯಾಗಿದೆ. ಬೆಳ್ಳಂದೂರು, ಅಟ್ಟೂರು, ಬಸವನಗುಡಿ, ಕುಮಾರಸ್ವಾಮಿ ಲೇಔಟ್, ಎಚ್‌ಎಸ್‌ಆರ್ ಲೇಔಟ್, ಯಲಹಂಕ, ವಿದ್ಯಾಪೀಠ, ಕೋರಮಂಗಲ, ಜಕ್ಕೂರು, ಚೌಡೇಶ್ವರಿನಗರ, ಬ್ಯಾಟರಾಯನಪುರದಲ್ಲಿ 1.2 ಸೆಂ.ಮೀ ಮಳೆಯಾಗಿದೆ.

ಸೋಮವಾರ ಬೆಳಿಗ್ಗೆಯಿಂದ ರಾತ್ರಿವರೆಗೂ ನಗರದ ಹಲವು ಪ್ರದೇಶಗ-ಳಲ್ಲಿ ಆಗಾಗ್ಗೆ ಮಳೆ ಸುರಿಯಿತು. ರಸ್ತೆಯಲ್ಲಿ ಮಳೆ ನೀರು ನಿಂತಿದ್ದರಿಂದ ವಾಹನ ಸಂಚಾರ ನಿಧಾನಗತಿಯಲ್ಲಿದ್ದು, ದಟ್ಟಣೆ ಉಂಟಾಗಿತ್ತು.

'ಅಪರಾಧ ಮುಕ್ತ ಕೆ.ಆರ್‌.ಪುರ'

ಕೇಂಬ್ರಿಜ್ ಸಮೂಹ ಸಂಸ್ಥೆಗಳ ವತಿಯಿಂದ ಮ್ಯಾರಥಾನ್

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕ್ಷೇತ್ರದ ಜನರು ಶಾಂತಿ ಸೌಹಾರ್ದತೆಯಿಂದ ಬಾಳಲು, ನೆಮ್ಮದಿಯ ನಾಳೆಗಾಗಿ ಅಪರಾಧ ಮುಕ್ತ ಕೆ.ಆರ್.ಪುರವನ್ನು ಮಾಡಲು ಪ್ರತಿಯೊಬ್ಬರೂ ಪಣತೊಡಬೇಕು ಎಂದು ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ ಹೇಳಿದರು.

ಕೇಂಬ್ರಿಜ್ ಸಮೂಹ ಸಂಸ್ಥೆಗಳ ವತಿಯಿಂದ ಹಮ್ಮಿಕೊಂಡಿದ್ದ 'ಅಪರಾಧ ಮುಕ್ತ ಕೆ.ಆರ್.ಪುರ' ಮ್ಯಾರಥಾನ್ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಕೆ.ಆರ್.ಪುರ ಅಪರಾಧ ಚಟುವಟಿಕೆಗಳ ತಾಣವಾಗಿದೆ. ಅವುಗಳನ್ನು ಮಟ್ಟ ಹಾಕಲು ಯುವಕರು ಮುಂದಾಗಬೇಕು ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ. ಮೋಹನ್ ಮಾತನಾಡಿ, 'ಸಮಾಜದಲ್ಲಿ ಮುಂಚೂಣಿ ಸ್ಥಾನದಲ್ಲಿ ಇರುವವರೇ ಅಪರಾಧ ಮಾಡುತ್ತಿದ್ದಾರೆ' ಎಂದರು.

ಕೆ.ಆರ್. ಪುರದ ಐಟಿಐ ಮೈದಾನದಿಂದ ಐದು ಕಿ.ಮೀ. ಮತ್ತು ಎಂಟು ಕಿ.ಮೀ. ಮ್ಯಾರಥಾನ್ ನಡೆಯಿತು. ಓಟದಲ್ಲಿ ಪಾಲ್ಗೊಂಡವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ರಾಜ್ಯಸಭೆಯ ಮಾಜಿ ಸದಸ್ಯ ಎಂ.ವಿ. ರಾಜೀವ್ ಗೌಡ, ಬೆಂಗಳೂರು ನಗರ ಕಾಂಗ್ರೆಸ್ ಅಧ್ಯಕ್ಷ ನಂದಕುಮಾರ್, ಮುಖಂಡರಾದ ಅಗರ ಪ್ರಕಾಶ್, ಚನ್ನಕೇಶವ, ವೀರಣ್ಣ ಭಾಗವಹಿಸಿದ್ದರು.

'ಅಪರಾಧ ಮುಕ್ತ ಕೆ.ಆರ್‌.ಪುರ'ಕ್ಕಾಗಿ ಮ್ಯಾರಥಾನ್ ನಡೆಯಿತು

ಗುಂಡಿಗಳೊಳಗೆ ರಸ್ತೆ...

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ನಗರದ ಕಲಾಸಿಪಾಳ್ಯದ ಬಸ್ ನಿಲ್ದಾಣದ ಬಳಿಯ ರಸ್ತೆಯಲ್ಲಿನ ಗುಂಡಿಗಳು ಮಳೆ ನೀರಿನಿಂದ ತುಂಬಿದ್ದು, ಸರಿಯಾದ ದಾರಿ ಕಾಣದಿದ್ದರಿಂದ ವಾಹನ ಸವಾರರು ಸಂಚರಿಸಲು ಪರದಾಡಿದರು

ಅಗೆದ ರಸ್ತೆ: ದುರಸ್ತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಸ್ತೆ ಅಗೆದಿರುವ, ಕತ್ತರಿಸಿರುವ ಭಾಗವನ್ನು ತ್ವರಿತವಾಗಿ ದುರಸ್ತಿ ಮಾಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

'ಜಲಮಂಡಳಿ ವತಿಯಿಂದ ಕಾವೇರಿ ನೀರಿನ ಸಂಪರ್ಕ ಹಾಗೂ ಒಳಚರಂಡಿ ಕಾಮಗಾರಿ ನಡೆಸಿರುವ ಕಡೆ, ರಸ್ತೆ ಅಗೆ-ದಿರುವುದನ್ನು ದುರಸ್ತಿ ಮಾಡಬೇಕು. ರಸ್ತೆಗಳಲ್ಲಿ ಜಲಮಂಡಳಿ ವತಿಯಿಂದ ಕುಡಿಯುವ ನೀರಿನ ಕೊಳವೆಗಳಲ್ಲಿ ಸೋರಿಕೆ, ಒಳಚರಂಡಿ ಪೈಪ್‌ಲೈನ್ ಮೇಲ್ಭಾಗ ಕುಸಿದು ವಾಹನಗಳ ಸಂಚಾರಕ್ಕೆ ಸಮಸ್ಯೆ ಆಗುತ್ತಿರುವ ಕಡೆ, ದುರಸ್ತಿ ಕಾರ್ಯವನ್ನು ಶೀಘ್ರ ನಡೆಸಬೇಕು ಎಂದು ಹೇಳಿದರು.

ನಗರದಲ್ಲಿ 1,344 ಕಿ.ಮೀ ಉದ್ದದ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳಲ್ಲಿ ಆದ್ಯತೆ ಮೇರೆಗೆ, ಹಾಟ್ ಮಿಕ್ಸ್, ಕೋಲ್ಡ್ ಮಿಕ್ಸ್ ಹಾಗೂ ಇಕೋಫಿಕ್ಸ್ ಬಳಸಿಕೊಂಡು ಗುಂಡಿಗಳನ್ನು ಮುಚ್ಚಬೇಕು. ನಮ್ಮ ಮೆಟ್ರೊ ಕಾಮಗಾರಿ ನಡೆಯುತ್ತಿರುವ ಕಡೆ ರಸ್ತೆ ಗುಂಡಿಗಳು ಇದ್ದಲ್ಲಿ ಅದನ್ನು ಪರಿಶೀಲಿಸಿ ಕೂಡಲೇ ಮುಚ್ಚಬೇಕು. ಬೊಮ್ಮಸಂದ್ರ-ಸಿಲ್ಕ್ ಬೋರ್ಡ್ ರಸ್ತೆಯಲ್ಲಿ ಮೆಟ್ರೊ ಹಾಗೂ ಜಲಮಂಡಳಿ ಅಧಿಕಾರಿಗಳು ಜಂಟಿ ಪರಿಶೀಲನೆ ನಡೆಸಿ ರಸ್ತೆ ದುರಸ್ತಿ ಕಾರ್ಯ ನಡೆಸಬೇಕು ಎಂದು ಆದೇಶಿಸಿದರು.

ಸಂಚಾರ ಪೊಲೀಸರು ಹೊಸದಾಗಿ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸುತ್ತಿ-ದ್ದು, ಕೇಬಲ್ ಅಳವಡಿಸಲು ರಸ್ತೆಯನ್ನು ಕತ್ತರಿಸಿದ್ದಾರೆ. ಇಂತಹ ರಸ್ತೆಗಳನ್ನು ದುರಸ್ತಿ ಮಾಡಬೇಕು ಎಂದರು.

ಗುತ್ತಿಗೆದಾರರೊಂದಿಗೆ ಸಭೆ: ರಸ್ತೆ ಗುಂಡಿಗಳನ್ನು ಮುಚ್ಚುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಭೆ ನಡೆಸಿದ ಅವರು, ತ್ವರಿತವಾಗಿ ರಸ್ತೆಗುಂಡಿಗಳನ್ನು ಮುಚ್ಚಬೇಕು. ದುರಸ್ತಿ ಕಾಮಗಾರಿಯಲ್ಲಿ ಗುಣಮಟ್ಟ ಕಾಪಾಡಿಕೊಳ್ಳಬೇಕು ಎಂದು ಸೂಚಿಸಿದರು.

ಮಹದೇವಪುರ ವಲಯದ ಹೂಡಿ ಕೆರೆಯ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ಸೋಮವಾರ ತೆರವುಗೊಳಿಸಿದರು

ಎಬಿಎಚ್‌ಪಿ–ಅಲಯನ್ಸ್ ವಿ.ವಿ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಥ್ಲೀಟ್ ಅಂಜು ಬಾಬಿ ಜಾರ್ಜ್ ಸಹಭಾಗಿತ್ವದ ಸಂಸ್ಥೆ
- ಯುವಜನರಿಗೆ ಕ್ರೀಡಾ ನಿರ್ವಹಣೆ, ಫಿಟ್‌ನೆಸ್ ಕ್ಷೇತ್ರದಲ್ಲಿ ಅವಕಾಶ

ಬೆಂಗಳೂರು: ಅಥ್ಲೀಟ್ ಅಂಜು ಬಾಬಿ ಜಾರ್ಜ್ ಮತ್ತು ತರಬೇತುದಾರ ರಾಬರ್ಟ್ ಬಾಬಿ ಜಾರ್ಜ್ ಸ್ಥಾಪಿಸಿರುವ ಕ್ರೀಡಾ ತರಬೇತಿ ಸಂಸ್ಥೆ ಅಂಜು ಬಾಬಿ ಹೈ ಪರ್ಫಾರ್ಮೆನ್ಸ್ (ಎಬಿಎಚ್‌ಪಿ) ಜೊತೆ ಬೆಂಗಳೂರಿನ ಅಲಯನ್ಸ್ ವಿಶ್ವವಿದ್ಯಾಲಯವು ಒಡಂಬಡಿಕೆಗೆ ಸಹಿ ಹಾಕಿದೆ.

ದೇಶದ ಯುವಜನರಿಗೆ ಕ್ರೀಡಾ ನಿರ್ವಹಣೆ ಮತ್ತು ಫಿಟ್‌ನೆಸ್ ಕ್ಷೇತ್ರದಲ್ಲಿ ಹೊಸ ಅವಕಾಶ ಒದಗಿಸುವುದು ಪ್ರಮುಖ ಉದ್ದೇಶವಾಗಿದೆ. ನಾಲ್ಕು ವರ್ಷದ ಬ್ಯಾಚುಲರ್ ಆಫ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಶನ್ (ಬಿಬಿಎ)- ಕ್ರೀಡಾ ನಿರ್ವಹಣೆ ಕೋರ್ಸ್ ಪ್ರಾರಂಭಿಸಲಾ-ಗುತ್ತದೆ. 2026ರೊಳಗೆ 60 ವಿದ್ಯಾರ್ಥಿ-ಗಳೊಂದಿಗೆ ಪ್ರವೇಶ ಆರಂಭವಾಗಲಿದೆ ಎಂದು ವಿಶ್ವವಿದ್ಯಾಲಯ ಕುಲಪತಿ ಪ್ರಿಸ್ಸಿಲ್ಲಾ ಶಾನ್ ತಿಳಿಸಿದರು.

ಕ್ರೀಡಾ ನಾಯಕತ್ವ, ಆಟಗಾರರ ಮಾರ್ಗದರ್ಶನ ಮತ್ತು ಫಿಟ್‌ನೆಸ್ ನಿರ್ವಹಣೆ ಸೇರಿ ತರಗತಿ ಬೋಧನಾ ಕಾರ್ಯಕ್ರಮವನ್ನು ಎಬಿಎಚ್‌ಪಿ ಮತ್ತು ಅಲಯನ್ಸ್ ವಿಶ್ವವಿದ್ಯಾಲಯ ಜಂಟಿಯಾಗಿ ನೀಡಲಿವೆ. ಪಠ್ಯಕ್ರಮ, ಅತಿಥಿ ಉಪನ್ಯಾಸಕರು, ಕ್ರೀಡಾ ಕ್ಷೇತ್ರದ ಗಣ್ಯರು ಮತ್ತು ವೃತ್ತಿಪರರಿಂದ ಮಾರ್ಗದರ್ಶನ ನೀಡಲಾಗುತ್ತದೆ ಎಂದು ಹೇಳಿದ್ದಾರೆ.

ಒಡಂಬಡಿಕೆ ಭಾಗವಾಗಿ ವಿಶ್ವವಿ-ದ್ಯಾಲಯವು ಅಂಜು ಬಾಬಿ ಜಾರ್ಜ್ ವುಮೆನ್ ಅಥ್ಲೀಟ್ ವಿದ್ಯಾರ್ಥಿ ವೇತನ ಆರಂಭಿಸುತ್ತಿದ್ದು, ರಾಜ್ಯ, ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವ ಇಬ್ಬರು ಮಹಿಳಾ ಕ್ರೀಡಾಪಟುಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ.

ಅಂಜು ಬಾಬಿ ಜಾರ್ಜ್ ಮಾತನಾಡಿ, 'ಭವಿಷ್ಯದ ಚಾಂಪಿಯನ್‌ಗಳು ಮತ್ತು ಕ್ರೀಡಾ ನಾಯಕರನ್ನು ಬೆಳೆಸುವ ಗುರಿ ಹೊಂದಲಾಗಿದೆ' ಎಂದರು.

'ಸಜ್ಜೆಪಾಳ್ಯದ ಜಮೀನು ರಂಗಮ್ಮನ ಹೆಸರಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಗಳ್ಳರ ಪಾಲಾಗಿದ್ದ ಯಶವಂತಪುರ ಹೋಬಳಿ ಸಜ್ಜೆಪಾಳ್ಯದ 44 ಎಕರೆ 33 ಗುಂಟೆ ಜಮೀನು ರಂಗಮ್ಮ ಅವರ ಹೆಸರಿಗೆ ಬಂದಿದೆ ಎಂದು ಕೃಷ್ಣಪ್ಪ ರಂಗಮ್ಮ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಎಚ್.ಎನ್. ಅಶೋಕ (ತಮ್ಮಾಜಿ) ತಿಳಿಸಿದರು.

ಕೃಷ್ಣಪ್ಪ–ರಂಗಮ್ಮ ದಂಪತಿಗೆ ಮಕ್ಕ-ಳಿರಲಿಲ್ಲ. ಕೃಷ್ಣಪ್ಪ ಅವರು ನಿಧನರಾದ ಬಳಿಕ ರಂಗಮ್ಮ ಅವರು ಸಮಾಜಕ್ಕಾಗಿ ಜಮೀನು ನೀಡಿದ್ದರು. ಅವರು ಐದು ದಶಕಗಳ ಹಿಂದೆ ನಿಧನರಾಗಿದ್ದು, ಆ ನಂತರ ಆ ಜಮೀನಿಗೆ ಸಂಬಂಧ-ಪಡದವರು ದಾಖಲೆಗಳಲ್ಲಿ ಅವರ ಹೆಸರನ್ನು ಸೇರಿಸಿದ್ದರು. ಅದಕ್ಕೆ ಆಗಿನ ಅಧಿಕಾರಿಗಳು ಸಹಕಾರ ನೀಡಿದ್ದರು. ಒಕ್ಕಲಿಗರ ಸಂಘದ ಬೆಂಬಲದೊಂದಿಗೆ ಕೃಷ್ಣಪ್ಪ ರಂಗಮ್ಮ ಎಜುಕೇಶನ್ ಟ್ರಸ್ಟ್ ಇದರ ವಿರುದ್ಧ ಹೋರಾಟ ಮಾಡುತ್ತಾ ಬಂದಿತ್ತು ಎಂದು ಅವರು ಸುದ್ದಿಗೋಷ್ಠಿ-ಯಲ್ಲಿ ಮಾಹಿತಿ ನೀಡಿದರು.

ಪಹಣಿಯಲ್ಲಿರುವ ಎಲ್ಲರ ಹೆಸರು ತೆಗೆದು ರಂಗಮ್ಮನ ಹೆಸರು ಮಾತ್ರ ದಾಖಲು ಮಾಡಿ. ಆ ನಂತರ ಯಾರಿಗೆ ಸೇರಿದ್ದು ಎಂಬುದನ್ನು ಇತ್ಯರ್ಥ ಮಾಡಿಕೊಳ್ಳಿ ಎಂದು ನ್ಯಾಯಾಲಯ ಆದೇಶಿಸಿತ್ತು. ಈಗ ರಂಗಮ್ಮ ಅವರ ಹೆಸರಿಗೆ ಪಹಣಿ ಬಂದಿದೆ. ಇದು ಹೋರಾಟಕ್ಕೆ ಸಂದ ಆರಂಭಿಕ ಜಯ ಎಂದರು.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಕೆ.ಕೆಂಚಪ್ಪ ಗೌಡ, ಪ್ರಧಾನ ಕಾರ್ಯದರ್ಶಿ ಟಿ. ಕೋನಪ್ಪ ರೆಡ್ಡಿ, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ
ಕರ್ನಾಟಕ ಮೇದಾರ ಪರಿಶಿಷ್ಟ ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಪರಿಶಿಷ್ಟ ಪಂಗಡಗಳ ಆರ್ಥಿಕ ಅಭಿವೃದ್ಧಿಗಾಗಿ
ಕಲ್ಯಾಣ ಯೋಜನೆಗಳು
2025-2026ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಿಗೆ ಅರ್ಜಿ ಆಹ್ವಾನ

ಭೂ ಒಡೆತನ ಯೋಜನೆ
ಭೂರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಈ ಕೆಳಕಂಡ ಘಟಕ ವೆಚ್ಚದಲ್ಲಿ ಕೃಷಿ ಜಮೀನು ಖರೀದಿಸಿ ನೀಡಲಾಗುವುದು.
ಘಟಕ ವೆಚ್ಚ: ರೂ. 25.00 ಲಕ್ಷ /ರೂ. 20.00 ಲಕ್ಷ
ಸಹಾಯಧನ: ಶೇ. 50%
ಸಾಲ: ಶೇ. 50%
(ಶೇಕಡ 4ರಷ್ಟು ಬಡ್ಡಿದರ)

ಮೈಕ್ರೋ ಕ್ರೆಡಿಟ್ (ಪ್ರೇರಣಾ) ಯೋಜನೆ:
ಮಹಿಳಾ ಸ್ವಸಹಾಯ ಸಂಘಗಳಿಗೆ (ಕನಿಷ್ಟ 10 ಸದಸ್ಯರು) ಕಿರು ಆರ್ಥಿಕ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನ ಸೌಲಭ್ಯ ನೀಡಲಾಗುವುದು.
ಘಟಕ ವೆಚ್ಚ: ರೂ. 5.00 ಲಕ್ಷ
ಸಹಾಯಧನ: ರೂ. 2.50 ಲಕ್ಷ
ಸಾಲ: ರೂ. 2.50 ಲಕ್ಷ
(ಶೇ. 4 ರಷ್ಟು ಬಡ್ಡಿದರ)

ಗಂಗಾ ಕಲ್ಯಾಣ ಯೋಜನೆ
1.20 ಎಕರೆ ಯಿಂದ 5.00 ಎಕರೆ ಜಮೀನು ಹೊಂದಿರುವ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಕೊಳವೆಬಾವಿ ಕೊರೆದು ಪಂಪ್‌ಸೆಟ್ ಅಳವಡಿಸಿ, ವಿದ್ಯುದ್ದೀಕರಣಗೊಳಿಸಿ ನೀರಾವರಿ ಸೌಲಭ್ಯ ಒದಗಿಸಿಕೊಡಲಾಗುವುದು.
ಘಟಕ ವೆಚ್ಚ: ರೂ. 4.75 ಲಕ್ಷ / ರೂ. 3.75 ಲಕ್ಷ – ಇದರಲ್ಲಿ ರೂ. 50,000/– ಸಾಲವೂ ಸೇರಿರುತ್ತದೆ.

ಸ್ವಯಂ ಉದ್ಯೋಗ ಕಾರ್ಯಕ್ರಮಗಳು
1. ನೇರಸಾಲ ಯೋಜನೆ:
ಕಿರು ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ನಿಗಮದಿಂದ ಸಹಾಯಧನ ಮತ್ತು ನೇರಸಾಲ ಮಂಜೂರು ಮಾಡಲಾಗುತ್ತದೆ.
2. ಹೈನುಗಾರಿಕೆ:
(ಬ್ಯಾಂಕ್‌ಗಳ ಸಹಯೋಗದೊಂದಿಗೆ)
ಹೈನುಗಾರಿಕೆ ಕೈಗೊಳ್ಳಲು ಎರಡು ಎಮ್ಮೆ/ಹಸುಗಳಿಗೆ ಘಟಕ ವೆಚ್ಚದ ಶೇ.50ರಷ್ಟು ಅಥವಾ ಗರಿಷ್ಟ 1.25 ಲಕ್ಷಗಳ ಸಹಾಯಧನ.
3. ಸ್ವಾವಲಂಬಿ ಸಾರಥಿ:
(ಬ್ಯಾಂಕ್‌ಗಳ ಸಹಯೋಗದೊಂದಿಗೆ)
ಸರಕು ವಾಹನ/ಟ್ಯಾಕ್ಸಿ (ಹಳದಿ ಬೋರ್ಡ್) ಉದ್ದೇಶದಡಿ ಘಟಕ ವೆಚ್ಚದ ಶೇ.75 ರಷ್ಟು ಅಥವಾ ಗರಿಷ್ಟ ರೂ. 4.00 ಲಕ್ಷಗಳ ಸಹಾಯಧನ.

ಉದ್ಯಮಶೀಲತಾ ಅಭಿವೃದ್ಧಿ ಯೋಜನೆ
(ಬ್ಯಾಂಕ್‌ಗಳ ಸಹಯೋಗದೊಂದಿಗೆ)
4. ಇತರೆ ಉದ್ದೇಶ:
ವ್ಯಾಪಾರ ಮತ್ತು ಇತರೆ ಉದ್ದೇಶಗಳಿಗೆ ಘಟಕ ವೆಚ್ಚದ ಶೇ. 70 ರಷ್ಟು ಅಥವಾ ಗರಿಷ್ಟ ರೂ. 2.00 ಲಕ್ಷ ಸಹಾಯಧನ.

2023-24 ಮತ್ತು 2024-25ನೇ ಸಾಲಿನಲ್ಲಿ ಆನ್ ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ದಿನಾಂಕ: 18.08.2025 ರಿಂದ ದಿನಾಂಕ: 17.09.2025 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

https://sevasindhu.karnataka.gov.in ನಲ್ಲಿ ನೇರವಾಗಿ ಅಥವಾ ಕೆಳಕಂಡ ಸಂಸ್ಥೆಗಳ ಸಹಯೋಗದೊಂದಿಗೆ ಸಹಾ ಅರ್ಜಿ ಸಲ್ಲಿಸಬಹುದು.
KARNATAKA One | ಗ್ರಾಮ ಒನ್ | BANGALORE One

ವಿಶೇಷ ಸೂಚನೆ:
ನಿಗಮದ ನಿರ್ದೇಶಕ ಮಂಡಳಿ ವಿವೇಚನಾ ಕೋಟ ಮತ್ತು ಸರ್ಕಾರದ ಸಾಂಸ್ಥಿಕ ಕೋಟಾದಡಿ ಸಲ್ಲಿಸುವ ಅರ್ಜಿಗಳನ್ನು ಸಹ ಸೇವಾ ಸಿಂಧು ಪೋರ್ಟಲ್ ಮೂಲಕವೇ ಸಲ್ಲಿಸುವುದು .

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳ ಕಚೇರಿಯನ್ನು ಸಂಪರ್ಕಿಸಬಹುದು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ಮಾನ್ಯ ಅಧ್ಯಕ್ಷರಾದ ಶ್ರೀ ಬಸನಗೌಡ ದದ್ದಲ ಅವರು ಯೋಜನೆಗಳ ಕುರಿತು ಚರ್ಚಿಸುತ್ತಿರುವುದು

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಮೇದಾರ ಪರಿಶಿಷ್ಟ ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮ

ಸರ್ಕಾರದ ಕಾರ್ಯದರ್ಶಿಗಳು
ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ

ಮಾನ್ಯ ಅಧ್ಯಕ್ಷರು
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

1.80 ಲಕ್ಷ ಮನೆ ನಿರ್ಮಾಣ ಪೂರ್ಣ

ಪ್ರಶ್ನೋತ್ತರ

ಮುಂದಿನ ವರ್ಷದ ಒಳಗಾಗಿ ವಸತಿ ಯೋಜನೆಯಡಿ 1.80 ಲಕ್ಷ ಮನೆಗಳ ನಿರ್ಮಾಣ ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಲಾಗುವುದು. ರದ್ದುಗೊಂಡಿರುವ ಮನೆಗಳ ಮರು ಮಂಜೂರಾತಿಗೆ ಸಚಿವ ಸಂಪುಟ ಸಭೆಯ ಅನುಮೋದನೆ ಪಡೆಯಲಾಗಿದೆ

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ (ಪ್ರಶ್ನೆ: ಬಿಜೆಪಿಯ ಸಿದ್ದು ಪಾಟೀಲ)

ರಾಜ್ಯದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚಿನ ಕೊಳಚೆಪ್ರದೇಶಗಳಿವೆ. ಅವುಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಸುಮಾರು ₹ 500 ಕೋಟಿ ಅಗತ್ಯವಿದ್ದು, ಮುಖ್ಯಮಂತ್ರಿ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ (ಪ್ರಶ್ನೆ: ಜೆಡಿಎಸ್‌ನ ಜಿ.ಟಿ. ದೇವೇಗೌಡ)

ಅಧಿಕಾರಿಗಳ ತಪ್ಪಿನಿಂದ ಬಗರ್‌ಹುಕುಂ ಸಾಗುವಳಿ ಅರ್ಜಿಗಳು ತಿರಸ್ಕೃತವಾಗಿದ್ದರೆ ಸರಿಪಡಿಸಲಾಗುವುದು. ಪಡಾ ಅಥವಾ ಬೀಳು ಜಮೀನಿಗೆ ಸಂಬಂಧಿಸಿದಂತೆ ಬಗರ್‌ಹುಕುಂ ಅರ್ಜಿಗಳು ಇತ್ಯರ್ಥವಾದ ನಂತರ ಬೇಸಾಯ ಮಾಡುತ್ತಿರುವವರಿಗೆ ಅರ್ಜಿ ಸಲ್ಲಿಸಲು ಮತ್ತೊಮ್ಮೆ ಅವಕಾಶ ನೀಡುವ ಬಗ್ಗೆ ಪರಿಶೀಲಿಸಲಾಗುವುದು

ಕಂದಾಯ ಸಚಿವ ಕೃಷ್ಣ ಬೈರೇಗೌಡ (ಪ್ರಶ್ನೆ: ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪ)

ಗ್ರಾಮದ 2 ಕಿ.ಮೀ. ವ್ಯಾಪ್ತಿಯಲ್ಲಿ ಅದೇ ಗ್ರಾಮ ಅಥವಾ ಪಕ್ಕದ ಗ್ರಾಮದ ಗೋಮಾಳ ಹಾಗೂ ಅರಣ್ಯದಲ್ಲಿ ಜಾನುವಾರು ಮೇಯಿಸಲು ಅವಕಾಶ ಇದ್ದರೆ, ಹೆಚ್ಚುವರಿ ಗೋಮಾಳವನ್ನು ಮಂಜೂರು ಮಾಡಲು 10 ದಿನದಲ್ಲಿ ಆದೇಶ ಹೊರಡಿಸಲಾಗುವುದು

ಕಂದಾಯ ಸಚಿವ ಕೃಷ್ಣ ಬೈರೇಗೌಡ (ಪ್ರಶ್ನೆ: ಕಾಂಗ್ರೆಸ್‌ನ ಕೆ.ವೈ. ನಂಜೇಗೌಡ)

ಹಾಲು ಒಕ್ಕೂಟಗಳು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ರೈತರಿಗೆ ಪಾವತಿಸುವ ಹಾಲು ಖರೀದಿ ದರ ನಿಗದಿ ಮಾಡುತ್ತಿವೆ. ಈ ವಿಚಾರವಾಗಿ ಸರ್ಕಾರ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಹಾಲಿನ ದರಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಗಮನಕ್ಕೆ ತರದೆ ಏಕಾಏಕಿ ಕ್ರಮ ಕೈಗೊಳ್ಳಬಾರದೆಂದು ಸೂಚಿಸಲಾಗಿದೆ

ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ (ಪ್ರಶ್ನೆ: ಬಿಜೆಪಿಯ ಅರವಿಂದ ಬೆಲ್ಲದ್)

ಮಲೆನಾಡು ಹಾಗೂ ಕರಾವಳಿಯ ಏಳು ಜಿಲ್ಲೆಗಳಲ್ಲಿ ಭೂ ಕುಸಿತ ತಡೆಗಟ್ಟಲು ₹ 500 ಕೋಟಿ ವೆಚ್ಚದಲ್ಲಿ ವಿವಿಧ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಈ ಮೊತ್ತದಲ್ಲಿ ಕೊಡಗು ಜಿಲ್ಲೆಗೆ ₹ 50 ಕೋಟಿ ಬಿಡುಗಡೆ ಮಾಡಲಾಗಿದ್ದು, ಅಗತ್ಯಬಿದ್ದರೆ ಮತ್ತಷ್ಟು ಹಣ ಬಿಡುಗಡೆ ಮಾಡಲು ಸರ್ಕಾರ ಸಿದ್ಧವಿದೆ
ಕಂದಾಯ ಸಚಿವ ಕೃಷ್ಣ ಬೈರೇಗೌಡ (ಪ್ರಶ್ನೆ: ಕಾಂಗ್ರೆಸ್‌ನ ಡಾ. ಮಂಥರ್ ಗೌಡ)
ರಾಜ್ಯದಲ್ಲಿ ಸದ್ಯಕ್ಕೆ ಹೊಸ ತಾಲ್ಲೂಕುಗಳ ರಚನೆಯ ಪ್ರಸ್ತಾವ ಇಲ್ಲ. ಈಗಾಗಲೇ ರಚನೆಯಾಗಿರುವ ತಾಲ್ಲೂಕುಗಳಿಗೆ ಮೂಲಸೌಲಭ್ಯ ಕಲ್ಪಿಸುವುದು ನಮ್ಮ ಆದ್ಯತೆ.

ಕಂದಾಯ ಸಚಿವ ಕೃಷ್ಣ ಬೈರೇಗೌಡ (ಪ್ರಶ್ನೆ: ಕಾಂಗ್ರೆಸ್‌ನ ಟಿ. ರಘುಮೂರ್ತಿ)

ಮೂರು ವರ್ಷಗಳಲ್ಲಿ 45 ವರ್ಷದ ಒಳಗಿನ 472 ಮಂದಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಹೃದಯಾಘಾತ ಪ್ರಕರಣಗಳು ಅಧಿಸೂಚಿತ ರೋಗ ಎಂದು ಘೋಷಣೆಯಾಗಿಲ್ಲ. ಹಾಗಾಗಿ, ಪ್ರಕರಣಗಳ ನಿಖರ ಮಾಹಿತಿ ಸಿಗುವುದಿಲ್ಲ. ಲಭ್ಯವಿರುವ ಮಾಹಿತಿ ಪ್ರಕಾರ 2023–24ರಲ್ಲಿ 229, 2024–25ರಲ್ಲಿ 608, 2025–26ನೇ ಸಾಲಿನಲ್ಲಿ ಇದುವರೆಗೆ 167 ಮಂದಿ ಮೃತಪಟ್ಟಿದ್ದಾರೆ. ಹೃದಯಕ್ಕೆ ಸಂಬಂಧಿಸಿದಂತೆ ಜಯದೇವ ಆಸ್ಪತ್ರೆಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ 61,299 ಇದೆ. ಜಯದೇವದಲ್ಲಿ ವಿಶಿಷ್ಟವಾದ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ. 270 ವೈದ್ಯರು ರೋಗಿಗಳ ಆರೈಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್
(ಪ್ರಶ್ನೆ: ಕಾಂಗ್ರೆಸ್‌ನ ದಿನೇಶ್ ಗೂಳಿಗೌಡ, ಬಿಜೆಪಿಯ ಧನಂಜಯ ಸರ್ಜಿ)

ಅರ್ಹ ಕುಟುಂಬಗಳಿಗೆ ಬಿಪಿಎಲ್ ಪಡಿತರ ಚೀಟಿ ವಿತರಿಸುವ, ಅನರ್ಹರ ಪಡಿತರ ಚೀಟಿ ರದ್ದು ಮಾಡಲಾಗುವುದು. ಹಿಂದಿನ ಸರ್ಕಾರದ ಅವಧಿಯಿಂದಲೂ ಪಡಿತರ ಚೀಟಿಗಾಗಿ ಸಲ್ಲಿಕೆಯಾಗಿದ್ದ ಅರ್ಜಿಗಳು ಪರಿಷ್ಕರಣೆಯಾಗದೆ ಉಳಿದಿದ್ದವು. ಪರಿಷ್ಕರಣೆ ಕೆಲಸ ನಡೆಯುತ್ತಿದ್ದು, ಶೀಘ್ರ ಹೊಸ ಬಿಪಿಎಲ್ ಪಡಿತರ ಚೀಟಿ ವಿತರಿಸಲಾಗುವುದು. 3.27 ಲಕ್ಷ ಮಂದಿ ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಅತಿ ಹೆಚ್ಚು ತೆರಿಗೆ ಕಟ್ಟುವ ಕರ್ನಾಟಕದಲ್ಲಿ 80ರಷ್ಟು ಕುಟುಂಬಗಳು ಬಿಪಿಎಲ್ ಪಡಿತರ ಚೀಟಿ ಪಡೆದಿವೆ. ಅನರ್ಹರ ವಿರುದ್ಧ ಕ್ರಮಕೈಗೊಳ್ಳುವಾಗ ರಾಜಕೀಯ ಮಾಡದೆ, ಪಕ್ಷಭೇದ ಮರೆತು ಸಹಕಾರ ನೀಡಬೇಕು

ಆಹಾರ ಸಚಿವ ಕೆ.ಎಚ್. ಮುನಿಯಪ್ಪ,(ಬಿಜೆಪಿಯ ಪ್ರತಾಪಸಿಂಹ ನಾಯಕ್, ಕಾಂಗ್ರೆಸ್‌ನ ಡಾ.ಯತೀಂದ್ರ ಸಿದ್ದರಾಮಯ್ಯ)

ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸದ ಕಾರಣ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ನೇಮಕಕ್ಕೆ ಅಡ್ಡಿಯಾಗಿದೆ. ಹಾಗಾಗಿ, ನೇಮಕಾತಿ ತಡೆಹಿಡಿಯಲಾಗಿದೆ. ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದ ನಾಗೇಶ್ ಬೆಟ್ಟಕೋಟೆ ಅವರ ಅಧಿಕಾರಾವಧಿ ಜನವರಿ 2025 ರಲ್ಲಿ ಕೊನೆಗೊಂಡಿದೆ. ನೇಮಕ ವಿಳಂಬವಾಗಿದೆ ಎಂದು ಅವರನ್ನೇ ಮುಂದುವರಿಸಲು ಕಾಯ್ದೆಯಲ್ಲಿ ಅವಕಾಶವಿಲ್ಲ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಮಾತ್ರ ಅಂತಹ ಅವಕಾಶವಿದೆ. ಈ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ (ಪ್ರಶ್ನೆ: ಬಿಜೆಪಿಯ ಎಚ್.ಎಸ್.ಗೋಪಿನಾಥ್)

ಸದನದ ಮಾತು– ಗಮ್ಮತ್ತು

‘ಪಾಕಿಸ್ತಾನ ಅಂದ್ರೆ ನನಗೆ ಆಗಕ್ಕಿಲ್ಲ’

‘ಧರ್ಮಸ್ಥಳದ ವಿಚಾರ ಪಾಕಿಸ್ತಾನದ ಟಿವಿಗಳಲ್ಲೂ ಪ್ರಸಾರ ಆಗಿದೆ’ ಎಂದು ಬಿಜೆಪಿಯ ಭರತ್ ಶೆಟ್ಟಿ ಹೇಳಿದಾಗ ವಸತಿ ಸಚಿವ ಜಮೀರ್ ಅಹಮದ್ ಖಾನ್ ರೋಷಾವೇಶದಿಂದ ಎದ್ದು ನಿಂತು ‘ಪಾಕಿಸ್ತಾನ ಹೆಸರು ಹೇಳಬೇಡಿ, ಪಾಕಿಸ್ತಾನ ಅಂದ್ರೆ ನನಗೆ ಆಗಕ್ಕಿಲ್ಲ’ ಎಂದು ಕಿಡಿಕಾರಿದರು.

‘ನನಗೆ ಪಾಕಿಸ್ತಾನದ ಹೆಸರು ಕೇಳಿದ್ರೆ ಆಗಲ್ಲ. ಅದು ನಮ್ಮ ಶತ್ರುದೇಶ. ಪಾಕಿಗಳಿಗೆ ಗುಂಡು ಹೊಡೀತಿನಿ. ಶತ್ರು ದೇಶದ ಹೆಸರು ಏಕೆ ಎತ್ತುತ್ತೀರಿ’ ಎಂದು ಜಮೀರ್ ಮತ್ತೆ ಆವೇಶ ಭರಿತರಾದರು.

‘ಪಾಕಿಸ್ತಾನ ಎಂದರೆ ಏಕೆ ಪದೇ ಪದೇ ಎದ್ದು ನಿಲ್ಲುತ್ತೀರಿ. ನಿಮ್ಮವರೇ ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಹಾಕಿದ್ದರಲ್ಲ’ ಎಂದು ಬಿಜೆಪಿ ಸದಸ್ಯರು ಕಾಲೆಳೆದರು.

ಆಗ ಮಧ್ಯ ಪ್ರವೇಶ ಮಾಡಿದ ಸಭಾಧ್ಯಕ್ಷ ಯು.ಟಿ.ಖಾದರ್ ಅವರು, ‘ಇಲ್ಲಿ ಎಲ್ಲರ ಸಮಸ್ಯೆ ಎಂದರೆ, ಕಿವಿಗೆ ಹೆಡ್ ಫೋನ್ ಸರಿಯಾಗಿ ಹಾಕಿಕೊಂಡು ಕೇಳಿಸಿಕೊಳ್ಳುವುದಿಲ್ಲ. ಭರತ್ ಶೆಟ್ಟಿ ಏನೋ ಹೇಳಿದರೆ, ಜಮೀರ್‌ಗೆ ಇನ್ನೇನೋ ಕೇಳಿಸಿದೆ. ಜಮೀರ್ ಅವರಿಗೆ ಪಾಕಿಸ್ತಾನದ ಹೆಸರು ಕೇಳಿದರೆ ಕೋಪ ಬರುತ್ತದೆಯಂತೆ. ಪಾಕಿಸ್ತಾನದ ಮೇಲೆ ಯುದ್ಧ ನಡೆದರೆ ತಮ್ಮ ದೇಹಕ್ಕೆ ಬಾಂಬ್ ಕಟ್ಟಿಕೊಂಡು ಹೋಗುತ್ತೇನೆ ಎಂದು ಈ ಹಿಂದೆಯೇ ಹೇಳಿದ್ದರು’ ಎಂದು ಕಾಲೆಳೆದರು.

‘ಛೇ ಅವರು ಬಾಂಬ್‌ಕಟ್ಟಿಕೊಂಡು ಹೋಗೋದು ಬೇಡ, ಅವರು ನಮ್ಮವರೇ ಇಲ್ಲೇ ಇರಲಿ’ ಎಂದು ಬಿಜೆಪಿಯ ಸತೀಶ್‌ರೆಡ್ಡಿ ಹೇಳಿದರು.

‘ಅಸಹಾಯಕ ಸರ್ಕಾರ ಅಂದ್ಕೊಂಡಿದ್ದೀರಾ?’

‘ಸರ್ಕಾರ ಅಷ್ಟೊಂದು ಅಸಹಾಯಕ ಆಗಿದೆ ಅಂದ್ಕೊಂಡಿದ್ದೀರಾ? ಸರ್ಕಾರ ಸುಮ್ಮನೆ ಕುಳಿತಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಎದೆ ಸೆಟೆಸಿ ನಿಂತರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ 24 ಕೊಲೆ ಆರೋಪ ಮಾಡಿರುವ ವ್ಯಕ್ತಿಯ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ’ ಎಂದು ಟೀಕಿಸಿದ ವಿರೋಧ ಪಕ್ಷದ ಸದಸ್ಯರಿಗೆ ಪರಮೇಶ್ವರ ನೀಡಿದ ತಿರುಗೇಟಿದು.

ಆಗ ಬಿಜೆಪಿಯ ಸುನಿಲ್ ಕುಮಾರ್, ‘ದೇಶದ ನಂ.1 ಗೃಹ ಸಚಿವರು ಕ್ರಮ ತೆಗೆದುಕೊಳ್ಳಬೇಕು’ ಎಂದು ಕಾಲೆಳೆದರು.

ಮಾತು ಮುಂದುವರಿಸಿದ ಪರಮೇಶ್ವರ, ‘ನೀವು ಏನೇ ಅಂದರೂ ನಾನು ಉದ್ವೇಗಕ್ಕೆ ಒಳಗಾಗಲ್ಲ. ಆ ವ್ಯಕ್ತಿ ವಿರುದ್ಧ ಹಲವು ಕೇಸ್‌ಗಳಿವೆ. ಆ ವ್ಯಕ್ತಿ ಹೆಸರು ಹೇಳಲ್ಲ. ಇಂಥ ವ್ಯಕ್ತಿಯನ್ನು ಸಮಾಜದಲ್ಲಿ ಹೀಗೇ ಸುಮ್ಮನೆ ಬಿಡಲ್ಲ. ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇವೆ. ಏನು ಕ್ರಮ ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳುತ್ತೇವೆ’ ಎಂದರು.

ಮಧ್ಯಪ್ರವೇಶಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಮುಖ್ಯಮಂತ್ರಿ ವಿರುದ್ಧ ಆರೋಪ ಮಾಡಿರುವ ವಿಡಿಯೊ ನಾನು ನೋಡಿದ್ದೇನೆ, ಕೇಳಿದ್ದೇನೆ. ಮುಖ್ಯಮಂತ್ರಿ ಮೇಲೆ ಕೊಲೆ ಆರೋಪ ಮಾಡಿದ್ದಾರೆ ಎನ್ನುವ ನಂಬರಿನ ವಿವರ ನನ್ನ ಮೊಬೈಲ್‌ನಲ್ಲಿದೆ. ಆ ವ್ಯಕ್ತಿ ಕೇವಲ ಮುಖ್ಯಮಂತ್ರಿ ಬಗ್ಗೆ ಹೇಳಿಲ್ಲ. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಗ್ಗೆಯೂ ಆರೋಪ ಮಾಡಿದ್ದಾನೆ. ಆದರೆ, ಸದನದಲ್ಲಿ ಅಂಥವರ ಹೆಸರು ಪ್ರಸ್ತಾಪಿಸಿ ನಾಯಕನಂತೆ ವಿಜೃಂಭಿಸಬೇಡಿ’ ಎಂದರು.

ಹಾಗಾದ್ರೆ ನಮ್ಮ ಸರ್ಕಾರ ಖಚಿತ

ರಾಜ್ಯದಲ್ಲಿ ವನ್ಯಜೀವಿಗಳ ಸಂತತಿ ಹೆಚ್ಚಳ, ವನ್ಯಜೀವಿ–ಮಾನವ ಸಂಘರ್ಷಕ್ಕೆ ಸರ್ಕಾರ ಕೈಗೊಂಡ ಕ್ರಮಗಳು, ಮೃತಪಟ್ಟವರಿಗೆ ನೀಡಿದ ಪರಿಹಾರ ಕುರಿತು ವಿಧಾನಪರಿಷತ್‌ನಲ್ಲಿ ಬಿಜೆಪಿಯ ಕೇಶವ ಪ್ರಸಾದ್ ಕೇಳಿದ ಪ್ರಶ್ನೆಗೆ ಉತ್ತರಿಸಲು ಮುಂದಾದ ಅರಣ್ಯ ಸಚಿವ ಈಶ್ವರ ಖಂಡ್ರೆ, ಕೇಶವ ಪ್ರಸಾದ್ ಅವರನ್ನು ‘ಮಾನ್ಯ ಸಚಿವರೇ’ ಎಂದು ಸಂಬೋಧಿಸಿದರು.

ಆಗ ಮಧ್ಯ ಪ್ರವೇಶಿಸಿದ ವಿರೋಧ ಪಕ್ಷದ ಮುಖ್ಯಸಚೇತಕ ಎನ್.ರವಿಕುಮಾರ್, ‘ಸಚಿವ ಮಾತಿನಿಂದ ಬಿಜೆಪಿಗೆ ಶುಭ ಸೂಚನೆ ಸಿಕ್ಕಿದೆ. ನಮ್ಮ ಸರ್ಕಾರ ಬರುತ್ತದೆ ಎನ್ನುವುದು ಖಚಿತವಾಯಿತು’ ಎಂದು ಕಾಲೆಳೆದರು.

ಅವರ ಮಾತಿಗೆ ಪ್ರತಿಕ್ರಿಯಿಸಿದ ಈಶ್ವರ ಖಂಡ್ರೆ, ‘ನೀವು ಕನಸು ಕಾಣುತ್ತಲೇ ಇರಿ. 2028ರಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ’ ಎಂದರು.

‘ಮನೆಯವರು ಊಟ ಹಾಕುವುದಿಲ್ಲ’

ಬೆಳಗಾವಿ ಜಿಲ್ಲಾಸ್ಪತ್ರೆ, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಅಗತ್ಯ ಸೌಲಭ್ಯಗಳಿಲ್ಲ ಮತ್ತು ಕಟ್ಟಡ ಶಿಥಿಲವಾಗಿದೆ ಎಂದು ಕಾಂಗ್ರೆಸ್‌ನ ಎಂ. ನಾಗರಾಜು ಅವರು ಹತ್ತಾರು ಸಮಸ್ಯೆಗಳನ್ನು ಪಟ್ಟಿ ಮಾಡಿದರು.

ಆಗ ಸಭಾಪತಿ ಬಸವರಾಜ ಹೊರಟ್ಟಿ ಅವರು, ‘ವೈದ್ಯಕೀಯ ಶಿಕ್ಷಣ ಸಚಿವರೇ ಈ ಬಗ್ಗೆ ವಿವರವಾದ ಉತ್ತರ ನೀಡಿ. ಇದು ನಾಗರಾಜು ಅವರ ಪತ್ನಿಯವರ ಊರಿನ ವಿಚಾರ. ಹೀಗಾಗಿ ಅವರು ಬಹಳ ಕಳಕಳಿಯಿಂದ ಈ ವಿಚಾರವನ್ನು ಪ್ರಸ್ತಾಪಿಸಿದ್ದಾರೆ’ ಎಂದು ಸಚಿವ ಶರಣ ಪ್ರಕಾಶ ಪಾಟೀಲ ಅವರಿಗೆ ಸೂಚಿಸಿದರು.

ಸಚಿವ ಪಾಟೀಲರು, ‘ಹೌದು ನಾನೂ ಇದನ್ನು ಗಮನಿಸಿದೆ. ಅದು ಅವರ ಮನೆಯವರ ಊರು ಆಗಿರುವ ಕಾರಣಕ್ಕೇ ನಾಗರಾಜು ಅವರು ಬಹಳ ಆಕ್ರೋಶದಿಂದ ಈ ಸಮಸ್ಯೆಗಳನ್ನು ಪಟ್ಟಿ ಮಾಡಿದ್ದಾರೆ. ಅವರು ಆ ಊರಿನ ಬಗ್ಗೆ ಅಷ್ಟು ಕಾಳಜಿ ತೋರದೇ ಇದ್ದರೆ, ಮನೆಯವರು ಮನೆಯಲ್ಲಿ ಊಟ ಹಾಕದೇ ಇರಬಹುದು’ ಎಂದರು ಕಾಲೆಳೆದರು.

ಶಾಲೆಗಳ ದುಸ್ಥಿತಿಗೆ ಹೊಣೆ ಯಾರು?...

ಶಿಥಿಲ ಕಟ್ಟಡಗಳ ಬಗ್ಗೆ ವಿರೋಧ ಪಕ್ಷಗಳ ಸದಸ್ಯರ ಧ್ವನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ 36,000 ಕೊಠಡಿಗಳಷ್ಟು ಕೊರತೆ ಇದ್ದು, ಇದರ ಹೊಣೆ ಯಾರು ಹೊರಬೇಕು?... ವಿಧಾನ ಪರಿಷತ್ತಿನಲ್ಲಿ ಬಿಜೆಪಿಯ ಸಿ.ಟಿ. ರವಿ ಅವರು ನಿಯಮ 72ರ ಅಡಿಯಲ್ಲಿ ಪ್ರಸ್ತಾಪಿಸಿದ ವಿಷಯ ಇಂಥದ್ದೊಂದು ಚರ್ಚೆಯನ್ನು ಹುಟ್ಟುಹಾಕಿತು.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಮಾತ್ರವಲ್ಲದೆ, ಕಟ್ಟಡಗಳು ಶಿಥಿಲವಾಗಿ ವಿದ್ಯಾರ್ಥಿಗಳು ಜೀವಭಯದಲ್ಲಿ ಅಧ್ಯಯನ ಮಾಡಬೇಕಾದ ಸ್ಥಿತಿ ಇದೆ ಎಂಬುದರತ್ತ ವಿರೋಧ ಪಕ್ಷಗಳ ಸದಸ್ಯರು ಗಮನ ಸೆಳೆದರು. ಆಡಳಿತ ಪಕ್ಷದ ಕೆಲ ಸದಸ್ಯರೂ ಈ ಬಗ್ಗೆ ದನಿಗೂಡಿಸಿದರು.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಿಲ್ಲ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕನ್ನಡದ ಪದಗಳ ಓದು–ಬರಹ ಬರುವುದಿಲ್ಲ, ಶಿಕ್ಷಕರಿಗಾಗಿ ಶಾಲೆ ನಡೆಸಲಾಗುತ್ತಿದೆ, ಕಲ್ಯಾಣ ಕರ್ನಾಟಕದ ಶಾಲೆಗಳಿಗೆ ಅನುದಾನವನ್ನೇ ನೀಡುತ್ತಿಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಮೇಲೆ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಮುಗಿಬಿದ್ದರು.

ಬಿಜೆಪಿಯ ಎಚ್.ವಿಶ್ವನಾಥ್, ‘ಖಾಸಗಿ ಶಾಲೆ ಮತ್ತು ಸರ್ಕಾರಿ ಶಾಲೆಗಳ ಮಧ್ಯೆ ಒಪ್ಪಂದ ಮಾಡಿಕೊಂಡು, ಸರ್ಕಾರಿ ಶಾಲೆಗಳನ್ನು ಮುಚ್ಚುವ ಸಂಚು ಜಾರಿಯಲ್ಲಿದೆ’ ಎಂದು ಆರೋಪಿಸಿದರು.

ಮಧು ಬಂಗಾರಪ್ಪ ಅವರು, ‘ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇರುವುದು ನಿಜ. ಆದರೆ, ಎರಡೇ ವರ್ಷದಲ್ಲಿ ಹತ್ತಾರು ಸಾವಿರ ಕೊಠಡಿಗಳು ಕೊರತೆಯಾದವೇ? ಖಾಸಗಿ ಶಾಲೆಗಳು ಎರಡು ವರ್ಷದಲ್ಲಿ ಹಿಡಿತ ಸಾಧಿಸಿದವೇ? ಈ ಹಿಂದಿನ ಎಲ್ಲ ಸರ್ಕಾರಗಳು ಮತ್ತು ಶಿಕ್ಷಣ ಸಚಿವರ ಹೊಣೆ ಇರಲಿಲ್ಲವೇ’ ಎಂದು ಹಿಂದಿನ ಸರ್ಕಾರದ ಮೇಲೆ ಹೊಣೆ ಹೊರಿಸಿದರು.

‘ಯಾರನ್ನೂ ದೂಷಿಸುವುದು ನನ್ನ ಉದ್ದೇಶವಲ್ಲ. ಹಿಂದಿನಿಂದ ಉಳಿಸಿಕೊಂಡು ಬಂದ ಕಾರಣಕ್ಕೇ, ಈ ಸಮಸ್ಯೆಗಳು ದೊಡ್ಡದಾಗಿವೆ. ನಾನು ಇಲಾಖೆಯ ಹೊಣೆಗಾರಿಕೆ ಹೊತ್ತಾಗ ಸರ್ಕಾರಿ ಶಾಲೆಗಳು ಐಸಿಯುನಲ್ಲಿ ಇದ್ದವು. ಈಗ ಅವುಗಳ ಸ್ಥಿತಿಯನ್ನು ಸುಧಾರಿಸಿ, ಜನರಲ್ ವಾರ್ಡ್‌ಗೆ ತರುವ ಕೆಲಸ ಮಾಡುತ್ತಿದ್ದೇವೆ’ ಎಂದರು.

ಮುಖ್ಯಾಂಶಗಳು

- ಶಾಲೆಗಳ ಕೊಠಡಿ ಕೊರತೆ ಇರುವುದು ನಿಜ
- ಎರಡೇ ವರ್ಷದಲ್ಲಿ ಕೊರತೆಯಾಗಿಲ್ಲ
- ಸಮಸ್ಯೆ ಬಗೆಹರಿಸಲು ಆದ್ಯತೆ: ಸಚಿವ

ಅಂಕಿ ಅಂಶಗಳು

61,690
ಶಿಕ್ಷಕರ ಹುದ್ದೆ ಖಾಲಿ

16,577
ಕಲ್ಯಾಣ ಕರ್ನಾಟಕದ ವ್ಯಾಪ್ತಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆ

33,527
ರಾಜ್ಯದ ಇತರೆಡೆಯ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆ

50,104
ಒಟ್ಟು ಖಾಲಿ ಇರುವ ಶಿಕ್ಷಕರ ಹುದ್ದೆಗಳು

ವಿಧಾನ ಪರಿಷತ್ ಕಲಾಪ ವೀಕ್ಷಿಸಿದ ವಿದ್ಯಾರ್ಥಿಗಳು —ಪ್ರಜಾವಾಣಿ ಚಿತ್ರ

ವಿಲೀನ ಮಾಡಿಬಿಡಿ: ಸಿ.ಟಿ ರವಿ

‘10–12 ಮಕ್ಕಳಿಗೆ ಒಂದೊಂದು ಶಾಲೆ ನಡೆಸಲಾಗುತ್ತಿದೆ. ಅಂತಹ ಹಲವು ಶಾಲೆಗಳನ್ನು ವಿಲೀನ ಮಾಡಿ, ಒಂದೇ ಶಾಲೆ ನಡೆಸುವ ಕ್ರಮ ತೆಗೆದುಕೊಳ್ಳಿ’ ಎಂದು ಸಿ.ಟಿ.ರವಿ ಅವರು ಸಲಹೆ ನೀಡಿದರು.
ಅದನ್ನು ಸ್ವಾಗತಿಸಿದ ಮಧು ಬಂಗಾರಪ್ಪ, ‘ವಿಧಾನಸಭೆಯಲ್ಲಿಯೂ ಬಿಜೆಪಿಯ ಸದಸ್ಯರು ಇಂತಹ ಸಲಹೆ ನೀಡಿದ್ದಾರೆ. ನೀವೂ ನೀಡುತ್ತಿದ್ದೀರಿ. ಇದನ್ನು ಪರಿಶೀಲಿಸಿ, ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

ಅಂಕಿ ಅಂಶಗಳು

4,005
ಕಲ್ಯಾಣ ಕರ್ನಾಟಕದ ವ್ಯಾಪ್ತಿಯ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆ

7,581
ರಾಜ್ಯದ ಇತರೆಡೆಯ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆ

11,586
ಒಟ್ಟು ಖಾಲಿ ಇರುವ ಶಿಕ್ಷಕರ ಹುದ್ದೆಗಳು

ಸರ್ಕಾರಿ ಶಾಲೆ: ಮಕ್ಕಳ ದಾಖಲಾತಿ 4.76 ಲಕ್ಷ ಕುಸಿತ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿನ ಮಕ್ಕಳ ದಾಖಲಾತಿ ಪ್ರಮಾಣ ಮೂರು ವರ್ಷಗಳಲ್ಲಿ 4.76 ಲಕ್ಷ ಕುಸಿತ ಕಂಡಿದೆ. ಮತ್ತೊಂದು ಕಡೆ ಖಾಸಗಿ ಶಾಲೆಗಳ ದಾಖಲಾತಿ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದೆ.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ಎಂ.ಎಲ್. ಅನಿಲ್‌ಕುಮಾರ್ ಅವರ ಪ್ರಶ್ನೆಗೆ ಉತ್ತರ ನೀಡಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಖಾಸಗಿ ಶಾಲೆಗಳಿಗೆ ಹೋಲಿಸಿದರೆ 2024–25ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳ ದಾಖಲಾತಿ 7.62 ಲಕ್ಷ ಕಡಿಮೆ ಇದೆ. ಕರ್ನಾಟಕ ಪಬ್ಲಿಕ್ ಶಾಲೆ, ಆದರ್ಶ ಶಾಲೆಗಳ ಸ್ಥಾಪನೆ, ಮೂಲಸೌಕರ್ಯಗಳ ಅಭಿವೃದ್ಧಿ, ನಿರಂತರ ಶೈಕ್ಷಣಿಕ ಸುಧಾರಣೆ ಮೂಲಕ ಸರ್ಕಾರಿ ಶಾಲೆಗಳ ಬಲವರ್ಧನೆ ಮಾಡಲಾಗುತ್ತಿದೆ. 8,538 ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ತರಗತಿ ಆರಂಭಿಸಲು ಅನುಮತಿ ನೀಡಲಾಗಿದೆ. ಹಲವು ಶಾಲೆಗಳನ್ನು ಉನ್ನತೀಕರಿಸಲಾಗಿದೆ. ದಾಖಲಾತಿ ಆಂದೋಲನ ಸೇರಿ ಹತ್ತು ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ ಎಂದರು.

21,841 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ದತ್ತು ನೀಡಲಾಗಿದೆ. ಮಕ್ಕಳ ಸಂಖ್ಯೆ ಕಡಿಮೆಯಾದ, ಶೂನ್ಯಕ್ಕೆ ತಲುಪಿದ ಯಾವುದೇ ಶಾಲೆಯನ್ನು ಮುಚ್ಚಿಲ್ಲ. ಮಕ್ಕಳ ಸಂಖ್ಯೆ ಹೆಚ್ಚಳವಾದ ಶಾಲೆಗಳನ್ನು ಪುನರಾರಂಭಿಸಲಾಗುತ್ತಿದೆ. 1ರಿಂದ 8ನೇ ತರಗತಿಯವರೆಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಶುಲ್ಕ ಸೇರಿ ₹220 ಪಡೆಯಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ವರ್ಷ	ಸರ್ಕಾರಿ	ಖಾಸಗಿ	ಅನುದಾನಿತ*
2022-23	45.46	45.26	12.49
2023-24	42.94	46.97	12.31
2024-25	40.74	48.36	11.86

*(ಶಾಲಾ ದಾಖಲಾತಿ ಲಕ್ಷಗಳಲ್ಲಿ)

ಧರ್ಮಸ್ಥಳ ಪ್ರಕರಣ: ಜಟಾಪಟಿ

ಹೈಕಮಾಂಡ್ ಷಡ್ಯಂತ್ರ ಎಂದ ಬಿಜೆಪಿ ಶಾಸಕ ಸುನಿಲ್ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದ ಪ್ರಕರಣದಲ್ಲಿ ನಡೆಯುತ್ತಿರುವ ಎಸ್‌ಐಟಿ ತನಿಖೆ ಕುರಿತು ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ಮಾತಿನ ಚಕಮಕಿ ನಡೆಯಿತು.

ಬಿಜೆಪಿಯ ವಿ.ಸುನಿಲ್‌ಕುಮಾರ್ ಅವರು ಆಡಿದ ಮಾತಿನಿಂದ ಕೆರಳಿದ ಕಾಂಗ್ರೆಸ್ ಸದಸ್ಯರು ಧರಣಿಗೆಂದು ಸಭಾಧ್ಯಕ್ಷರ ಪೀಠದತ್ತ ಧಾವಿಸಿದಾಗ, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಕಲಾಪವನ್ನು ಕೆಲಕಾಲ ಮುಂದೂಡಿದರು. ಸಭಾಧ್ಯಕ್ಷರ ಕೊಠಡಿಯಲ್ಲಿ ಮುಖ್ಯಮಂತ್ರಿಯವರ ಮಧ್ಯಸ್ಥಿಕೆಯಲ್ಲಿ ಬಿಜೆಪಿ ನಾಯಕರ ಜತೆ ಸಂಧಾನ ಸಭೆ ನಡೆಸಿದ ಬಳಿಕ ಪುನಃ ಕಲಾಪ ಆರಂಭವಾಯಿತು.

‘ಧರ್ಮಸ್ಥಳದ ವಿರುದ್ಧ ಕಾಂಗ್ರೆಸ್ ಸರ್ಕಾರ ಮತ್ತು ಹೈಕಮಾಂಡ್ ಷಡ್ಯಂತ್ರ ಮಾಡಿದೆ’ ಎಂದು ಸುನಿಲ್‌ಕುಮಾರ್ ಹೇಳಿದ್ದು, ಕಾಂಗ್ರೆಸ್ ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು.

‘ಆ ಸಾಲನ್ನು ಕಡತದಿಂದ ತೆಗೆಯಬೇಕು’ ಎಂದು ಕಾಂಗ್ರೆಸ್ ಸದಸ್ಯರು ಆಗ್ರಹಿಸಿದರು.

‘ಅವುಗಳನ್ನು ತೆಗೆದುಹಾಕಿ’ ಎಂದು ಸಭಾಧ್ಯಕ್ಷ ಖಾದರ್ ಸೂಚಿಸಿದರು. ಅದಕ್ಕೆ ಸುನಿಲ್ ಮತ್ತು ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ, ‘ಅದರಲ್ಲಿ ಅಸಂಸದೀಯ ಪದ ಏನಿದೆ’ ಎಂದು ಪ್ರಶ್ನಿಸಿದರು. ಇದನ್ನು ವಿರೋಧಿಸಿ ಕಾಂಗ್ರೆಸ್ ಸದಸ್ಯರು ಸಭಾಧ್ಯಕ್ಷರ ಪೀಠದತ್ತ ಧಾವಿಸಿದರು.

‘ನಾವು ಎಸ್‌ಐಟಿಯನ್ನು ವಿರೋಧಿಸಿಲ್ಲ. ಯೂಟ್ಯೂಬ್ ಮೂಲಕ ಅಪಪ್ರಚಾರ ನಡೆದಿದೆ. ಇದಕ್ಕೆ ಏಕೆ ಕಡಿವಾಣ ಹಾಕಿಲ್ಲ. ಇದರ ಹಿಂದೆ ಒಬ್ಬ ಮುಸುಕುಧಾರಿ ಇಲ್ಲ. ಹಲವಾರು ಜನ ಮುಸುಕು ಹಾಕಿ ಕೆಲಸ ಮಾಡುತ್ತಿದ್ದಾರೆ. ತನಿಖೆಗೆ ಒತ್ತಾಯಿಸಿದವರು ಅವರ ಹಿಂದಿರುವವರು, ಅವರಿಗೆ ಹಣಕಾಸು ನೆರವು ಎಲ್ಲಿಂದ ಬರುತ್ತಿದೆ ಎಂಬ ಬಗ್ಗೆ ನೀವು ಏನೂ ಹೇಳಿಲ್ಲ. ಧರ್ಮಸ್ಥಳಕ್ಕೆ ಕೆಸರು ಎರಚೋದು ಅವರ ಉದ್ದೇಶ, ನಿಮ್ಮ ಸರ್ಕಾರದ ಉದ್ದೇಶವೂ ಅದೇ ಆಗಿದೆ. ನಿಮ್ಮ ಹೈಕಮಾಂಡ್ ನಿರ್ದೇಶನದ ಮೇರೆಗೆ ಎಸ್‌ಐಟಿ ಮಾಡಲಾಗಿದೆ’ ಸುನಿಲ್ ಕುಮಾರ್ ಎಂದರು. ಇದಕ್ಕೆ ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಬಿಜೆಪಿಯ ಎಸ್.ಸುರೇಶ್‌ಕುಮಾರ್ ಮಾತನಾಡಿ, ಸರ್ಕಾರ ಊಹಾಪೋಹಗಳಿಗೆ ಇತಿಶ್ರೀ ಹಾಕಬೇಕು. ತನಿಖಾ ವರದಿ ಬರುವುದಕ್ಕೂ ಮೊದಲೇ ‘ಸೋಷಿಯಲ್ ಮೀಡಿಯಾ ಟ್ರಯಲ್’ ನಡೆದಿದೆ. ಅವಾಚ್ಯ, ಅವಹೇಳನಕಾರಿ ಪದಗಳನ್ನು ಬಳಸುತ್ತಿದ್ದಾರೆ. ತಮಿಳುನಾಡು ಮತ್ತು ಕೇರಳದ ರಾಜಕಾರಣಿಗಳ ಅಪವಿತ್ರ ಕಾರ್ಯಸೂಚಿ ಇದರಲ್ಲಿ ಅಡಗಿದೆ ಎಂದರು.

ಕಾಂಗ್ರೆಸ್‌ನ ಕೆ.ಎಂ.ಶಿವಲಿಂಗೇಗೌಡ, ‘ಧರ್ಮಸ್ಥಳ ಪವಿತ್ರ ಕ್ಷೇತ್ರ. ನಾವು ಅಲ್ಲಿನ ಭಕ್ತರು. ಆ ಕ್ಷೇತ್ರಕ್ಕೆ ಕಳಂಕ ತರುವ ಕೆಲಸ ನಡೆದಿದೆ. ಆ ಕಳಂಕದಿಂದ ಮುಕ್ತರಾಗಲು ಎಸ್‌ಐಟಿ ತನಿಖೆ ನಡೆದಿದೆ. ಧರ್ಮಸ್ಥಳದ ಹೆಸರನ್ನು ಅಪವಿತ್ರಗೊಳಿಸುವ ಕೆಲಸ ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದರ ಹಿಂದಿರುವ ಪಟ್ಟಭದ್ರರಿಗೆ ಶಿಕ್ಷೆ ಆಗಬೇಕು’ ಎಂದು ಒತ್ತಾಯಿಸಿದರು.

ಜೆಡಿಎಸ್‌ನ ಸುರೇಶ್‌ಬಾಬು , ‘ಧರ್ಮಸ್ಥಳದ ಬಗ್ಗೆ ಅಪಪ್ರಚಾರ ನಡೆಸುತ್ತಿರುವವರು ಮತ್ತು ಅದಕ್ಕೆ ಕುಮ್ಮಕ್ಕು ನೀಡುತ್ತಿರುವವರನ್ನು ತನಿಖೆಗೆ ಒಳಪಡಿಸಬೇಕು. ಇವರ ಬಾಯಿ ಬಿಡಿಸಿದರೆ ಪಿತೂರಿಕೋರರು ಯಾರು ಎಂಬುದು ಗೊತ್ತಾಗುತ್ತದೆ’ ಎಂದು ಹೇಳಿದರು.

ಕಾನೂನು ಕ್ರಮಕ್ಕೆ ಗೃಹ ಸಚಿವರು ಬದ್ಧ:ಡಿಕೆಶಿ

‘ಧರ್ಮಸ್ಥಳ ವಿಚಾರದಲ್ಲಿ ಯಾರಿಗೆ ಯಾವ ರೀತಿ ಬಲಿ ತೆಗೆದುಕೊಳ್ಳಬೇಕೋ, ಯಾವ ಕಾನೂನು ಬಳಸಬೇಕೋ ಅದನ್ನು ಮಾಡಲಾಗುತ್ತದೆ. ಗೃಹ ಸಚಿವರು ಇದಕ್ಕೆ ಬದ್ಧರಾಗಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, ಧರ್ಮದಲ್ಲಿ ರಾಜಕಾರಣ ಬೆರೆಸುವ ವಿಷಯವನ್ನು ಯಾರೂ ಮಾಡಬಾರದು. ಧರ್ಮಸ್ಥಳದ ಪ್ರಕರಣದಲ್ಲಿ ಜವಾಬ್ದಾರಿಯುತ ದಕ್ಷ ಹಿರಿಯ ಅಧಿಕಾರಿಗಳಿಗೆ ತನಿಖೆಯ ಜವಾಬ್ದಾರಿ ನೀಡಲಾಗಿದೆ. ಅಧಿಕಾರಿಗಳ ಮೇಲೆ ನಂಬಿಕೆ ಇದೆ. ಮುಖ್ಯಮಂತ್ರಿಯವರು ಧರ್ಮಸ್ಥಳದ ಪ್ರಕೃತಿ ಚಿಕಿತ್ಸಾಲಯಕ್ಕೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದಿದ್ದಾರೆ. ಅವರಿಗೂ ಕ್ಷೇತ್ರದ ಮೇಲೆ ನಂಬಿಕೆ ಇದೆ’ ಎಂದರು.

‘ದಲಿತರನ್ನು ನೇಮಕ ಮಾಡಿದರೆ ಸಹಕಾರ ಸಂಘ ಹಾಳಾಗುವುದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹಕಾರ ಸಂಘಗಳ ನಿರ್ದೇಶಕರ ಹುದ್ದೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ನಾಮನಿರ್ದೇಶನ ಮಾಡುವುದರಿಂದ ಸಂಘಗಳು ಹಾಳಾಗುವುದಿಲ್ಲ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್.ತಂಗಡಗಿ ಅವರು ಹೇಳಿದರು.

ವಿಧಾನ ಸಭೆಯಲ್ಲಿ ಸೋಮವಾರ ಮಂಡಿಸಲಾದ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ–2025ರ ಮೇಲಿನ ಚರ್ಚೆಯ ವೇಳೆ ಜೆಡಿಎಸ್‌ನ ಜಿ.ಟಿ.ದೇವೇಗೌಡ ಅವರು, ‘ಸಹಕಾರ ಸಂಘಗಳ ನಿರ್ದೇಶಕರ ಹುದ್ದೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳಾ ಮೀಸಲಾತಿ ಅಡಿ ನಾಮನಿರ್ದೇಶನ ಮಾಡುವ ಕ್ರಮ ಸರಿಯಲ್ಲ. ಇದರಿಂದ ಸಹಕಾರ ಸಂಘಗಳನ್ನು ಮುಚ್ಚುವ ಸ್ಥಿತಿ ಬರುತ್ತದೆ’ ಎಂದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಶಿವರಾಜ ತಂಗಡಗಿ ಅವರು, ‘ಜಿ.ಟಿ.ದೇವೇಗೌಡ ಅವರ ಮಾತುಗಳು ಸಹ್ಯವಲ್ಲ. ಈ ಮಾತು ಸ್ವಲ್ಪವೂ ಸರಿಯಿಲ್ಲ. ದಲಿತರಿಗೆ ಅವಕಾಶ ಸಿಗುವುದು ಬೇಡವೇ? ಈ ಮಸೂದೆಯಲ್ಲಿ ಸಮಸ್ಯೆಗಳು ಇದ್ದರೆ ಅದನ್ನು ತಿಳಿಸಿ. ಬದಲಿಗೆ ದಲಿತರನ್ನು ಸಹಕಾರ ಸಂಘಗಳಿಗೆ ನೇಮಕ ಮಾಡುವುದರಿಂದ, ಅವುಗಳನ್ನು ಮುಚ್ಚುವ ಸ್ಥಿತಿ ಬರುತ್ತದೆ ಎಂಬಂತಹ ಮಾತುಗಳನ್ನು ಆಡಬೇಡಿ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಪ್ರಜಾವಾಣಿ’ಯ ಎರಡು ವರದಿ ಸದನದಲ್ಲಿ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ ಕಲಾಪದ ಶೂನ್ಯವೇಳೆಯಲ್ಲಿ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ಎರಡು ವಿಶೇಷ ವರದಿಗಳು ಪ್ರಸ್ತಾಪವಾದವು.

ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರ ಕಚೇರಿಯಿಂದ ಸರ್ಕಾರಿ ಶಾಲೆಗಳ ವಾರ್ಷಿಕ ನಿರ್ವಹಣೆಗೆ ಬಿಡುಗಡೆಯಾಗುವ ಶಾಲಾನುದಾನ ಹಾಗೂ ಕ್ರೀಡಾ ಅನುದಾನವು ಶಿಕ್ಷಕರ ನಡುವೆ ವೈಮನಸ್ಸಿಗೆ ಕಾರಣವಾಗುತ್ತಿರುವ ಕುರಿತು ಆ.17ರಂದು ಪ್ರಕಟವಾದ ‘ಅಸಮಾಧಾನಕ್ಕೆ ಕಾರಣವಾಗುವ ಅನುದಾನ’ ವರದಿಯನ್ನು ಬಿಜೆಪಿಯ ಭಾರತಿ ಶೆಟ್ಟಿ ಪ್ರಸ್ತಾಪಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಾಗ ಭಿನ್ನ ಕೆನೆಪದರ ನೀತಿ ಅನ್ವಯಿಸುತ್ತಿರುವುದರಿಂದಾಗಿ, ವೇತನದಾರರ ಮಕ್ಕಳು ಅಖಿಲ ಭಾರತ ಹಾಗೂ ರಾಜ್ಯ ಕೋಟಾದಡಿ ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವಾಗ ತಾರತಮ್ಯ ಅನುಭವಿಸುತ್ತಿದ್ದಾರೆ ಎಂಬ ಕುರಿತು ಜುಲೈ 31ರಂದು ಪ್ರಕಟವಾದ ‘ಭಿನ್ನ ಕೆನೆಪದರ ನೀತಿ;ವಿದ್ಯಾರ್ಥಿಗಳಿಗೆ ಫಜೀತಿ‘ ವರದಿಯನ್ನು ಬಿಜೆಪಿಯ ಶಶೀಲ್ ನಮೋಶಿ ಪ್ರಸ್ತಾಪಿಸಿದರು.

ಕ್ರಸ್ಟ್‌ಗೇಟ್ ಅಳವಡಿಕೆಗೆ ಮಳೆ ಅಡ್ಡಿ: ಬೋಸರಾಜು

ಪ್ರಜಾವಾಣಿ ವಾರ್ತೆ

ಬೋಸರಾಜು

ಬೆಂಗಳೂರು: ತುಂಗಾಭದ್ರಾ ಜಲಾಶಯದ ಕ್ರಸ್ಟ್‌ಗೇಟ್‌ಗಳ ದುರಸ್ತಿಗೆ ₹48 ಕೋಟಿ ವೆಚ್ಚದಲ್ಲಿ ಟೆಂಡರ್ ಕರೆಯಲಾಗಿದೆ. 50 ಟನ್ ತೂಕದ ಒಂದು ಗೇಟ್ ಸಿದ್ಧವಾಗಿದೆ. ನಿರಂತರ ಮಳೆಯಿಂದಾಗಿ ಅಳವಡಿಕೆ ಸಾಧ್ಯವಾಗಿಲ್ಲ ಎಂದು ವಿಧಾನಪರಿಷತ್ ಸಭಾನಾಯಕ ಎನ್.ಎಸ್. ಬೋಸರಾಜು ಹೇಳಿದರು.

ಕ್ರಸ್ಟ್‌ಗೇಟ್‌ಗಳು ಬಾಗಿರುವ ಬಗ್ಗೆ ವಿಧಾನಪರಿಷತ್‌ನ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಬಿಜೆಪಿಯ ಹೇಮಲತಾ ನಾಯಕ್ ಪ್ರಶ್ನೆಗೆ ಉತ್ತರಿಸಿದ ಅವರು, ‘ತುಂಗಭದ್ರಾ ಜಲಾಶಯ ಯೋಜನೆಯ ಲಾಭ ಪಡೆಯುವ ರಾಜ್ಯಗಳನ್ನು ಬಿಟ್ಟು ಬೇರೆಯವರು ಮಂಡಳಿಯ ಅಧಿಕಾರಿಗಳಾಗಿರಬೇಕು ಎನ್ನುವ ನಿಯಮವಿದೆ. ಆದರೆ, ತುಂಗಭದ್ರಾ ಮಂಡಳಿಯಲ್ಲಿ ಆಂಧ್ರದವರೇ ಅಧ್ಯಕ್ಷರಾಗಿದ್ದಾರೆ. ಮೂರು ರಾಜ್ಯಗಳು ಹಾಗೂ ಮಂಡಳಿ ಅನುಮತಿ ಪಡೆದು ಕೆಲಸ ಮಾಡಬೇಕು. ಈ ವಿಚಾರದಲ್ಲಿ ಕರ್ನಾಟಕವೊಂದೇ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ’ ಎಂದರು.

ವರ್ಷದ ಹಿಂದೆಯೇ ಉಳಿದ ಗೇಟುಗಳನ್ನು ಬದಲಾಯಿಸುವಂತೆ ತಜ್ಞರ ಸಮಿತಿ ಸಲಹೆ ನೀಡಿದ್ದರೂ, ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ರೈತ ವಿರೋಧಿ ನಡೆ ಅನುಸರಿಸುತ್ತಿದೆ. 105 ಟಿಎಂಸಿ ಅಡಿ ಸಾಮರ್ಥ್ಯದ ಜಲಾಶಯದಲ್ಲಿ ಕೇವಲ 80 ಟಿಎಂಸಿ ಅಡಿ ನೀರನ್ನು ಸಂಗ್ರಹಿಸಲಾಗಿದೆ. ಗೇಟು ದುರಸ್ತಿಯಾಗಿ ನೀರು ಬಿಡದಿದ್ದರೆ ಜಲಾಶಯವನ್ನೇ ನಂಬಿ ಬದುಕುವ ರೈತರು ಏನು ಮಾಡಬೇ. ಕೂಡಲೇ ಸರ್ಕಾರ ಕ್ರಮವಹಿಸಬೇಕು ಎಂದರು. ಅದಕ್ಕೆ ಛಲವಾದಿ ನಾರಾಯಣಸ್ವಾಮಿ, ಎನ್.ರವಿಕುಮಾರ್, ಪಿ.ಎಚ್.ಪೂಜಾರ್ ಧ್ವನಿಗೂಡಿಸಿ, ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದರು.

ಸಚಿವ ಸಂಪುಟ ಉಪ ಸಮಿತಿಯಿಂದ ರಾಜ್ಯ ಸರ್ಕಾರಕ್ಕೆ 12 ಶಿಫಾರಸು

ಗಣಿ ನಷ್ಟ: ವಸೂಲಾತಿಗೆ ಪ್ರಾಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಗಣಿಗಾರಿಕೆಯಿಂದ ಬೊಕ್ಕಸಕ್ಕೆ ಉಂಟಾಗಿರುವ ಕೋಟ್ಯಂತರ ರೂಪಾಯಿ ಆರ್ಥಿಕ ನಷ್ಟವನ್ನು ವಸೂಲಿ ಮಾಡಲು ರಾಜ್ಯವ್ಯಾಪಿ ಒಂದೇ ವಸೂಲಾತಿ ಪ್ರಾಧಿಕಾರ ರಚಿಸಬೇಕು, ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ತ್ವರಿತ ನ್ಯಾಯಾಲಯ ಸ್ಥಾಪಿಸಬೇಕು ಸೇರಿದಂತೆ ಒಟ್ಟು 12 ಶಿಫಾರಸುಗಳ ವರದಿಯನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ನೇತೃತ್ವದ ಸಚಿವ ಸಂಪುಟ ಉಪ ಸಮಿತಿಯು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ.

ಗಣಿಗಾರಿಕೆಯಲ್ಲಿ ನಡೆದ ಅಕ್ರಮಗಳ ಕುರಿತು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸು ಮಾಡಲು ಎಚ್.ಕೆ. ಪಾಟೀಲರ ನೇತೃತ್ವದಲ್ಲಿ ಈ ಸಮಿತಿಯನ್ನು ಸರ್ಕಾರ ರಚಿಸಿತ್ತು. ಈ ಸಮಿತಿಯು ಮೂರು ಸಭೆಗಳನ್ನು ನಡೆಸಿ, 35 ಪುಟಗಳ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದೆ.

ವಸೂಲಾತಿ ಪ್ರಾಧಿಕಾರ ರಚಿಸುವ ಸಂಬಂಧ ಹೊಸ ಕಾಯ್ದೆ ರೂಪಿಸುವ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ಕಾನೂನು ಇಲಾಖೆಯು ಕರಡು ಮಸೂದೆಯನ್ನು ಸಿದ್ಧಪಡಿಸಿ ಸಮಿತಿಯ ಮುಂದೆ ಈಗಾಗಲೇ ಮಂಡಿಸಿದೆ. ಸಚಿವ ಸಂಪುಟದ ಅನುಮೋದನೆ ಪಡೆಯಲು ಆ ಕರಡು ಮಸೂದೆಯನ್ನೂ ವರದಿಯ ಜೊತೆಗೆ ಮುಖ್ಯಮಂತ್ರಿಗೆ ಸಲ್ಲಿಸಲಾಗಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಗಣಿ ಅಕ್ರಮಗಳ ಪ್ರಕರಣಗಳನ್ನು ವಿಚಾರಣೆ ನಡೆಸಲು ರಾಜ್ಯದಲ್ಲಿ ಪ್ರತ್ಯೇಕವಾದ ವಿಶೇಷ ನ್ಯಾಯಾಲಯ ಇಲ್ಲ. ವಿಶೇಷ ತನಿಖಾ ತಂಡವು (ಎಸ್‌ಐಟಿ) ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ಮತ್ತು ಭಾರತೀಯ ದಂಡ ಸಂಹಿತೆಯಡಿ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಹಾಗೂ ಸೆಷನ್ಸ್ ಕೋರ್ಟ್‌ನಲ್ಲಿ (ಶಾಸಕರು– ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ) ದಾಖಲಿಸಿರುವ ಪ್ರಕರಣಗಳ ವಿಚಾರಣೆ ನಡೆಯುತ್ತಿದೆ. ಈ ಕೋರ್ಟ್‌ಗಳಲ್ಲಿ ಎಸಿಬಿ, ಲೋಕಾಯುಕ್ತ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಗಳ ಜೊತೆಗೆ ಎಸ್‌ಐಟಿ ದಾಖಲಿಸಿರುವ ಅಕ್ರಮ ಗಣಿಗಾರಿಕೆ ಪ್ರಕರಣಗಳ ವಿಚಾರಣೆಯೂ ನಡೆಯುತ್ತಿದೆ. ಹೀಗಾಗಿ, ಅಕ್ರಮ ಗಣಿಗಾರಿಕೆ ಪ್ರಕರಣಗಳ ವಿಲೇವಾರಿ ವಿಳಂಬವಾಗುವ ಸಾಧ್ಯತೆ ಇದೆ ಎಂದು ಸಮಿತಿಯು ತನ್ನ ವರದಿಯಲ್ಲಿ ಅಭಿಪ್ರಾಯಪಟ್ಟಿದೆ.

ಎಸ್‌ಐಟಿ ಈ ನ್ಯಾಯಾಲಯದಲ್ಲಿ ದಾಖಲಿಸುವ ಅಕ್ರಮ ಗಣಿಗಾರಿಗೆ ಪ್ರಕರಣಗಳ ಸಂಖ್ಯೆ ಕಡಿಮೆ ಇದ್ದರೂ, ಸರ್ಕಾರಕ್ಕೆ ದೊಡ್ಡ ಮೊತ್ತದ ಆರ್ಥಿಕ ನಷ್ಟ ಉಂಟಾದ ಪ್ರಕರಣಗಳಾಗಿದ್ದು, ಆ ನಷ್ಟವನ್ನು ತ್ವರಿತಗತಿಯಲ್ಲಿ ವಸೂಲಾತಿ ಮಾಡಲು ಅನುಕೂಲವಾಗುವಂತೆ, ಗಣಿ ಪ್ರಕರಣಗಳಿಗೆ ಸೀಮಿತವಾಗಿ ವಿಶೇಷ ನ್ಯಾಯಾಲಯ ಸ್ಥಾಪಿಸುವುದು ಸೂಕ್ತವಾಗಿದೆ. ಅಲ್ಲದೆ, ಈ ನ್ಯಾಯಾಲಯದಲ್ಲಿನ ಪ್ರಕರಣಗಳನ್ನು ಸಮರ್ಪಕವಾಗಿ ನಿರ್ವಹಿಸಲು ಗಣಿ ಪ್ರಕರಣಗಳಲ್ಲಿ ಪರಿಣತಿ ಹೊಂದಿರುವ ಕಾನೂನು ಅಧಿಕಾರಿಗಳ ತಂಡವನ್ನು ರಚಿಸಬೇಕು. ಬೆಂಗಳೂರು ಹಾಗೂ ನವದೆಹಲಿಯ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳನ್ನು ಸಮರ್ಪಕವಾಗಿ ನಿರ್ವಹಿಸುವ ಸಂಬಂಧ ಇಂತಹ ಎರಡು ಪ್ರತ್ಯೇಕ ತಂಡಗಳನ್ನು ಎಸ್‌ಐಟಿ ಅಡಿಯಲ್ಲಿ ಸ್ಥಾಪಿಸಬೇಕು ಎಂದು ಸಮಿತಿಯು ವರದಿಯಲ್ಲಿ ಹೇಳಿದೆ.

ಅಕ್ರಮ ಗಣಿಗಾರಿಕೆಗೆ ಸಹಕರಿಸಿದ ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿ ಮತ್ತು ಮಧ್ಯವರ್ತಿಗಳು, ಖಾಸಗಿ ವ್ಯಕ್ತಿಗಳ ವಿರುದ್ಧ ಲೋಕಾಯುಕ್ತ ಶಿಫಾರಸಿನಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಎಸ್‌ಐಟಿ ದಾಖಲಿಸುವ ಪ್ರಕರಣಗಳನ್ನು ನ್ಯಾಯಾಲಯಗಳಲ್ಲಿ ತ್ವರಿತಗತಿಯಲ್ಲಿ ಸಮರ್ಥಿಸಿಕೊಳ್ಳಲು ಇಲಾಖೆಗಳ ಜೊತೆ ಸಮನ್ವಯ ಸಾಧಿಸಲು ಮೇಲುಸ್ತುವಾರಿ ಸಮಿತಿ ರಚಿಸಬೇಕು ಎಂದೂ ಸಮಿತಿ ಶಿಫಾರಸು ಮಾಡಿದೆ.

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಶಿಫಾರಸು ಮಾಡಲು ಜುಲೈ 2ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಎಚ್.ಕೆ. ಪಾಟೀಲ ನೇತೃತ್ವದಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ಜುಲೈ 5ರಂದು ಸರ್ಕಾರ ರಚಿಸಿತ್ತು. ಗೃಹ ಸಚಿವ ಜಿ. ಪರಮೇಶ್ವರ, ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಅರಣ್ಯ ಸಚಿವ ಈಶ್ವರ ಖಂಡ್ರೆ, ಗಣಿ ಮತ್ತು ಭೂ ವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಈ ಸಮಿತಿಯಲ್ಲಿದ್ದರು.

ಸಮನ್ವಯಕ್ಕೆ ‘ಮೇಲುಸ್ತುವಾರಿ ಸಮಿತಿ’ ಪ್ರಸ್ತಾವ

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಎಸ್‌ಐಟಿ ಒಟ್ಟು 109 ಪ್ರಕರಣಗಳನ್ನು ದಾಖಲಿಸಿದೆ. ಈ ಪ್ರಕರಣಗಳ ತನಿಖೆಯು ತ್ವರಿತಗತಿಯಲ್ಲಿ ನಡೆದಿಲ್ಲ. ಈ ವಿಳಂಬಕ್ಕೆ ವಿವಿಧ ಇಲಾಖೆಗಳಿಂದ ಸರಿಯಾದ ರೀತಿಯಲ್ಲಿ ಸ್ಪಂದನೆ ಸಿಗದಿರುವುದೂ ಕಾರಣ. ಹೀಗಾಗಿ, ಪ್ರಕರಣಗಳನ್ನು ತನಿಖೆಯನ್ನು ತ್ವರಿತಗತಿಯಲ್ಲಿ ಹಾಗೂ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಿ ಸಕ್ಷಮ ನ್ಯಾಯಾಲಯದಲ್ಲಿ ದೋಷರೋಪಣೆ ಪಟ್ಟಿ ಸಲ್ಲಿಸುವ ಅಗತ್ಯದ ಬಗ್ಗೆಯೂ ವರದಿಯಲ್ಲಿ ಸಮಿತಿಯು ಪ್ರತಿಪಾದಿಸಿದೆ. ಈ ಕಾರಣಕ್ಕೆ, ಎಸ್‌ಐಟಿ ತಂಡಕ್ಕೆ ಅನುಕೂಲ ಮಾಡಿಕೊಡಲು ಸಂಬಂಧಿಸಿದ ಎಲ್ಲ ಇಲಾಖೆಗಳ ಜೊತೆ ಸಮನ್ವಯ ಸಾಧಿಸಲು ನಿರ್ದೇಶನ ನೀಡಲು ಮೇಲುಸ್ತುವಾರಿ ಸಮಿತಿ ರಚಿಸಬೇಕು. ಈ ಸಮಿತಿಗೆ ಮುಖ್ಯಮಂತ್ರಿ ಅಥವಾ ಸಚಿವ ಸಂಪುಟ ನಿರ್ದೇಶಿಸುವ ಸಚಿವರು ಅಥವಾ ಮುಖ್ಯ ಕಾರ್ಯದರ್ಶಿ ಅಥವಾ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವೃಂದದ ಅಧಿಕಾರಿ ಅಥವಾ ಸಚಿವ ಸಂಪುಟವು ತೀರ್ಮಾನಿಸುವ ಪ್ರಾಧಿಕಾರದ ನೇತೃತ್ವದಲ್ಲಿ ಉನ್ನತ ಮಟ್ಟದ ಮೇಲುಸ್ತುವಾರಿ ಸಮಿತಿ ರಚಿಸಬೇಕು ಎಂದೂ ಸಮಿತಿಯು ಶಿಫಾರಸು ಮಾಡಿದೆ.

ಚಟಕೆ ಸುದ್ದಿ

ಬಾಗಲಗುಂಟೆಯಲ್ಲಿ ನಂದಿನಿ ಕೆಫೆ ಶುರು

ಬಾಗಲಗುಂಟೆಯಲ್ಲಿ ಆರಂಭಿಸಿರುವ ನಂದಿನಿ ಕೆಫೆ ಮೂ ಮಳಿಗೆ

ಬೆಂಗಳೂರು: ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಬೆಂಗಳೂರಿನ ಬಾಗಲಗುಂಟೆಯ ಎಂಇಐ ಲೇಔಟ್‌ನ 60 ಅಡಿ ರಸ್ತೆಯಲ್ಲಿ ನಂದಿನಿ ಕೆಫೆ ಮೂ ಆರಂಭಿಸಿದೆ.

ಬೆಂಗಳೂರಿನ ವಿವಿಧ ಭಾಗಗಳಲ್ಲಿ ಕೆಎಂಎಫ್ ಈಗಾಗಲೇ ಪ್ರಾರಂಭಿಸಿರುವ ನಂದಿನಿ ಕೆಫೆಗೆ ಉತ್ತಮ ಪ್ರತಿಕ್ರಿಯೆ ದೊರೆತ ನಂತರ ಈ ಸೇವೆಯನ್ನು ವಿಸ್ತರಣೆ ಮಾಡಲಾಗಿದೆ.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಅವರು ನೂತನ ಕೆಫೆಯನ್ನು ಸೋಮವಾರ ಉದ್ಘಾಟಿಸಿದರು.

‘ಖಾಸಗಿ ಬಸ್: ಹೆಸರು ಕನ್ನಡದಲ್ಲಿರಲಿ’

ಬೆಂಗಳೂರು: ರಾಜ್ಯದ ಒಳಗೆ ಸಂಚರಿಸುವ ಅನೇಕ ಬಸ್‌ಗಳಲ್ಲಿನ ಫಲಕಗಳು ಹಾಗೂ ಬಸ್‌ನ ಹೆಸರುಗಳಲ್ಲಿ ಕನ್ನಡ ಭಾಷೆ ಕಾಣೆಯಾಗಿದ್ದು, ಸಾರಿಗೆ ಇಲಾಖೆ ಕ್ರಮಕ್ಕೆ ಮುಂದಾಗಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ.

ಬಿಳಿಮಲೆ

ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇಲಾಖೆಯ ಆಯುಕ್ತರಿಗೆ ಪತ್ರ ಬರೆದಿರುವ ಬಿಳಿಮಲೆ, ‘ಖಾಸಗಿ ಸಾರಿಗೆ ಸಂಸ್ಥೆಗಳು ಕನ್ನಡವನ್ನು ಕಡೆಗಣಿಸುವುದು ಸಾಮಾಜಿಕವಾಗಿ ತಪ್ಪು ಸಂದೇಶವನ್ನು ರವಾನಿಸುತ್ತದೆ. ಕಾನೂನು ಉಲ್ಲಂಘನೆಯನ್ನು ಸಾರಿಗೆ ಇಲಾಖೆ ಗಂಭೀರವಾಗಿ ಪರಿಗಣಿಸುತ್ತಿಲ್ಲ’ ಎಂದು ತಿಳಿಸಿದ್ದಾರೆ.

ವಾಹನಗಳ ಸಂಚಾರಕ್ಕೆ ಪರವಾನಗಿ ನೀಡುವ ಅಥವಾ ನವೀಕರಿಸುವ ಸಂದರ್ಭದಲ್ಲಿ ಕನ್ನಡದ ಅನುಷ್ಠಾನ ಬಗ್ಗೆ ಇಲಾಖೆ ಗಮನ ಹರಿಸಬೇಕು. ನಿಯಮ ಉಲ್ಲಂಘಿಸುವ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರವೇಶ ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜು, ಬ್ಯಾಟರಾಯನಪುರ–ಬಾಗಲೂರು ಕ್ಯಾಂಪಸ್ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಆ.25ರವರೆಗೆ ವಿಸ್ತರಿಸಲಾಗಿದೆ.

ದಂಡ ಶುಲ್ಕ ₹250 ಪಾವತಿಸಿ ಆ.30ರವರೆಗೂ ಅರ್ಜಿ ಸಲ್ಲಿಸಬಹುದು. ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ www.bcu.ac.in ವೆಬ್‌ಸೈಟ್ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಆರ್‌ಟಿಒ ವಿರುದ್ಧ ಪ್ರಕರಣ

ನೆಲಮಂಗಲ: ‘ಮಹಿಳಾ ಅಧಿಕಾರಿಯೊಂದಿಗೆ ಅಸಭ್ಯ ವರ್ತನೆ ತೋರಿದ್ದಾರೆ’ ಎಂಬ ಆರೋಪದಡಿ ನೆಲಮಂಗಲ ಪ್ರಾದೇಶಿಕ ಸಾರಿಗೆ ಅಧಿಕಾರಿ ರಾಜಕುಮಾರ್ ಅವರ ವಿರುದ್ಧ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸಾರಿಗೆ ನಿರೀಕ್ಷಕಿಯೊಬ್ಬರು ಕರ್ತವ್ಯಕ್ಕೆ ಜಾಕೆಟ್ ಹಾಕಿಕೊಂಡು ಬಂದಿದ್ದರು. ಜಾಕೆಟ್ ತೆಗೆಯಿರಿ ಎಂದು ಅಧಿಕಾರಿ ರಾಜಕುಮಾರ್ ಅವರು ಹೇಳಿ ಅಸಭ್ಯ ವರ್ತನೆ ತೋರಿದ್ದಾರೆ’ ಎಂದು ದೂರು ನೀಡಲಾಗಿದೆ.

ಮಹಿಳಾ ಅಧಿಕಾರಿ ನೀಡಿದ ದೂರು ಆಧರಿಸಿ ಮಾದನಾಯಕನಹಳ್ಳಿ ಪೊಲೀಸರು ಬಿಎನ್‌ಎಸ್ 75ರ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ರಾಜಕುಮಾರ್ ಅವರಿಗೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಮ್ಮನಿಂದಲೇ ಅಣ್ಣನ ಕೊಲೆ

ಬಂಗಾರಪೇಟೆ: ಜಮೀನು ವಿವಾದದ ದಾಯಾದಿ ಕಲಹದಲ್ಲಿ ಸೋದರನೇ ಅಣ್ಣನನ್ನು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ನಡೆದಿದೆ.

ತಾಲ್ಲೂಕಿನ ರಾಮಾಪುರದಲ್ಲಿ ಸೋಮವಾರ ಮುಂಜಾನೆ ಶೆಡ್‌ನಲ್ಲಿದ್ದ ಕುರಿಗಳಿಗೆ ಮೇವು ನೀಡಲು ಹೋದ ಅಣ್ಣ ಚಲಪತಿ ಅವರನ್ನು ಹಿಂಬಾಲಿಸಿದ ತಮ್ಮ ಮುನಿರಾಜು ತಲ್ವಾರ್‌ನಿಂದ ಕೊಚ್ಚಿ ಕೊಲೆ ಮಾಡಿದ್ದಾನೆ ಎಂದು ಬೂದಿಕೋಟೆ ಪೊಲೀಸರು ತಿಳಿಸಿದ್ದಾರೆ.

ನಗರದ ಕೆಲವು ಭಾಗದಲ್ಲಿ ಫ್ಲೆಕ್ಸ್ ತೆರವು

ದಂಡ, ವೆಚ್ಚ ವಸೂಲಿ, ಎಫ್‌ಐಆರ್ ದಾಖಲಿಸಲು ಜಾರಿಯಾಗದ ಎಸ್‌ಒಪಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ರಸ್ತೆ, ಜಂಕ್ಷನ್‌ಗಳಲ್ಲಿ ಹಬ್ಬದ ಶುಭಾಶಯದ ಫ್ಲೆಕ್ಸ್‌ಗಳು
- ಜನ್ಮದಿನಾಚರಣೆ, ಶುಭ ಹಾರೈಕೆಗೆ ಬೃಹತ್ ಕಟೌಟ್‌ಗಳು
- ಫ್ಲೆಕ್ಸ್ ಕಟ್ಟಲು ರಾಜಕೀಯ ಮುಖಂಡರ ಪೈಪೋಟಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಯಲಹಂಕ ಹಾಗೂ ಪಶ್ಚಿಮ ವಲಯದ ಕೆಲವು ಪ್ರದೇಶಗಳಲ್ಲಿ ಅನಧಿಕೃತವಾಗಿ ಹಾಕಲಾಗಿದ್ದ ಫ್ಲೆಕ್ಸ್, ಬ್ಯಾನರ್‌ಗಳನ್ನು ಬಿಬಿಎಂಪಿ ಸಿಬ್ಬಂದಿ ಸೋಮವಾರ ತೆರವು ಮಾಡಿದರು.

ಯಲಹಂಕ ಉಪನಗರದಲ್ಲಿ ಮುಖ್ಯ ರಸ್ತೆಗಳಲ್ಲಿ ವಿದ್ಯುತ್ ಕಂಬಗಳಿಗೆ ಫ್ಲೆಕ್ಸ್‌ಗಳನ್ನು ಹಾಕಲಾಗಿತ್ತು. ಅವುಗಳನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು.

ಪುಲಕೇಶಿನಗರ ವ್ಯಾಪ್ತಿಯ ಟ್ಯಾನರಿ ರಸ್ತೆಯಲ್ಲಿ ಹಲವು ರೀತಿಯ ಫ್ಲೆಕ್ಸ್, ಬ್ಯಾನರ್‌ಗಳನ್ನು ಹಾಕಲಾಗಿತ್ತು. ಬಿಬಿಎಂಪಿ ಸಿಬ್ಬಂದಿ ‘ತೆರವು ಅಭಿಯಾನ’ ನಡೆಸಿ, ನೂರಾರು ಫ್ಲೆಕ್ಸ್‌ಗಳನ್ನು ತೆಗೆದು ಹಾಕಿದರು. ರಾಜರಾಜೇಶ್ವರಿ ನಗರ ವಲಯದ ಅನ್ನಪೂರ್ಣೇಶ್ವರಿ ನಗರದಲ್ಲಿ ಫ್ಲೆಕ್ಸ್‌ಗಳನ್ನು ತೆರವು ಮಾಡಲಾಯಿತು.

ನಗರದಲ್ಲಿ ಬ್ಯಾನರ್, ಫ್ಲೆಕ್ಸ್, ಕಟೌಟ್ ಅಳವಡಿಸುವವರು, ಅದರಲ್ಲಿರುವ ವ್ಯಕ್ತಿಗಳು, ಮುದ್ರಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ, ತೆರವಿನ ಸಂಪೂರ್ಣ ವೆಚ್ಚವನ್ನು ಅವರಿಂದಲೇ ವಸೂಲಿ ಮಾಡಲು ಅನುವಾಗುವ ಪರಿಷ್ಕೃತ ಪ್ರಮಾಣಿತ ಕಾರ್ಯಾಚಾರಣಾ ವಿಧಾನವನ್ನು (ಎಸ್‌ಒಪಿ) ಏಪ್ರಿಲ್ 24ರಿಂದ ಜಾರಿ ಮಾಡಲಾಗಿದೆ.

ಬಿಬಿಎಂಪಿ ಕಾಯ್ದೆ 2020ರ ಸೆಕ್ಷನ್ 158ರಂತೆ ಪಾಲಿಕೆಯ ವ್ಯಾಪ್ತಿಯಲ್ಲಿನ ಯಾವುದೇ ಕಟ್ಟಡ, ಪ್ರದೇಶ, ಗೋಡೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಮುಖ್ಯ ಆಯುಕ್ತರ ಲಿಖಿತ ಅನುಮತಿಯಿಲ್ಲದೆ ಫ್ಲೆಕ್ಸ್, ಬ್ಯಾನರ್, ಕಟೌಟ್ ಹಾಗೂ ಯಾವುದೇ ರೀತಿಯ ಜಾಹೀರಾತು ಪ್ರದರ್ಶಿಸುವುದನ್ನು ನಿಷೇಧಿಸಲಾಗಿದೆ. ಮುದ್ರಣ ಘಟಕದವರ ಮೇಲೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಬಿಬಿಎಂಪಿ ಮುಖ್ಯ ಆಯುಕ್ತರು ಆದೇಶ ಹೊರಡಿಸಿದ್ದರು. ಆದರೆ, ಎಸ್‌ಒಪಿ ಜಾರಿಯಾಗದೆ ನಗರದಲ್ಲಿ ಫ್ಲೆಕ್ಸ್, ಬ್ಯಾನರ್‌ಗಳು ರಾರಾಜಿಸುತ್ತಲೇ ಇವೆ.

ಎಸ್‌ಒಪಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡಲು ವಲಯದ ಜಂಟಿ ಆಯುಕ್ತರನ್ನು ನೋಡಲ್ ಅಧಿಕಾರಿಯಾಗಿ ಹಾಗೂ ವಲಯ ಆಯುಕ್ತರನ್ನು ಮೇಲ್ವಿಚಾರಣೆ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ವಲಯ ಆಯುಕ್ತರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಉಪ ಪೊಲೀಸ್ ಕಮಿಷನರ್ (ಡಿಸಿಪಿ) ಹಾಗೂ ಪಾಲಿಕೆಯ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಭೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ. ಆದರೆ, ಈ ಕ್ರಮಗಳು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿಲ್ಲ ಎಂದು ನಾಗರಿಕರು ಆರೋಪಿಸಿದ್ದಾರೆ.

ಟ್ಯಾನರಿ ರಸ್ತೆಯಲ್ಲಿ ಬಿಬಿಎಂಪಿ ಸಿಬ್ಬಂದಿ ಸೋಮವಾರ ಫ್ಲೆಕ್ಸ್ ತೆರವುಗೊಳಿಸಿದರು

‘ಪ್ರಭಾವಿಗಳ ವಿರುದ್ಧ ಕ್ರಮವಿಲ್ಲ’

‘ಫ್ಲೆಕ್ಸ್, ಬ್ಯಾನರ್ ಹಾಕುವಂತಿಲ್ಲ ಎಂದು ಹೈಕೋರ್ಟ್ ಆದೇಶ ನೀಡಿದೆ. ಅದರ ಅನುಷ್ಠಾನಕ್ಕೆ ಬಿಬಿಎಂಪಿ ಎಸ್‌ಒಪಿ ಜಾರಿಮಾಡಿದ್ದರೂ ಅಧಿಕಾರಿಗಳು ರಾಜಕೀಯ ಒತ್ತಡಕ್ಕೆ ಮಣಿದು, ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ರಾಜಕಾರಣಿಗಳು, ಅವರ ಹಿಂಬಾಲಕರು ಹಾಗೂ ಪ್ರಭಾವಿಗಳ ಫ್ಲೆಕ್ಸ್‌ಗಳನ್ನು ತೆಗೆಯುತ್ತಿಲ್ಲ. ಅವರ ವಿರುದ್ಧ ಎಫ್‌ಐಆರ್ ಕೂಡ ಹಾಕುತ್ತಿಲ್ಲ. ಹೆಚ್ಚು ಪ್ರಭಾವವಿಲ್ಲದ ವ್ಯಕ್ತಿಗಳ ಮೇಲೆ ದರ್ಪ ತೋರಿ, ಎಫ್‌ಐಆರ್ ದಾಖಲಿಸುತ್ತಿದ್ದಾರೆ’ ಎಂದು ನಾಗರಿಕರಾದ ಮನೋಜ್, ಚಂದ್ರಶೇಖರ್, ಶ್ರೀನಿವಾಸ್, ಜಗದೀಶ್ ದೂರಿದರು.

‘ನಗರದಲ್ಲಿ ಈ ವರ್ಷ 27 ಸಾವಿರ ಫ್ಲೆಕ್ಸ್/ ಬ್ಯಾನರ್‌ಗಳನ್ನು ತೆರವು ಮಾಡಿದ್ದೇವೆ. 461 ಎಫ್‌ಐಆರ್ ದಾಖಲಿಸಿದ್ದೇವೆ’ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

‘ಸಚಿವರು ಹಾಗೂ ಶಾಸಕರ ಹೆಸರಿನಲ್ಲೇ ಹಲವು ಫ್ಲೆಕ್ಸ್‌ಗಳಿವೆ. ರಾಜಕೀಯ ಪಕ್ಷಗಳ ಬೆಂಬಲಿಗರ ಫ್ಲೆಕ್ಸ್/ ಬ್ಯಾನರ್ ತೆಗೆಯಲು ಹೋದರೆ ಹೆಚ್ಚು ಸಮಸ್ಯೆಯಾಗುತ್ತದೆ. ಒಬ್ಬರು ಇನ್ನೊಬ್ಬರ ಮೇಲೆ ಹೇಳಿ, ಅವರ ಫ್ಲೆಕ್ಸ್ ಮೊದಲು ತೆಗೆಯಿರಿ ಎನ್ನುತ್ತಾರೆ. ಒತ್ತಡ ಹಾಗೂ ಪ್ರಭಾವದಿಂದಾಗಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ’ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ದರ್ಶನ್ ಸ್ಥಳಾಂತರ: ಅರ್ಜಿ ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ದರ್ಶನ್

ಪವಿತ್ರಾಗೌಡ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ, ಆರೋಪಿ ದರ್ಶನ್ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವುದಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾದ ಅರ್ಜಿಯ ವಿಚಾರಣೆಯನ್ನು ಸಿಸಿಎಚ್ 64ನೇ ನ್ಯಾಯಾಲಯ ಆಗಸ್ಟ್ 23ಕ್ಕೆ ಮುಂದೂಡಿತು.

ಪರಪ್ಪನ ಅಗ್ರಹಾರದಲ್ಲಿ ವಿಶೇಷ ಆತಿಥ್ಯ ಪಡೆದಿದ್ದರಿಂದ ರಾಜ್ಯದ ಬೇರೆ ಬೇರೆ ಕಾರಾಗೃಹಕ್ಕೆ ಕೊಲೆ ಆರೋಪಿಗಳನ್ನು ಈ ಹಿಂದೆ ಸ್ಥಳಾಂತರಿಸಲಾಗಿತ್ತು. ಅದೇ ಕಾರಾಗೃಹಕ್ಕೆ ಐವರು ಆರೋಪಿಗಳನ್ನು ಸ್ಥಳಾಂತರ ಮಾಡಲು ಅನುಮತಿ ನೀಡುವಂತೆ ಕೋರಿ ಪ್ರಾಸಿಕ್ಯೂಷನ್ ಪರ ವಕೀಲರು ನ್ಯಾಯಾಲಯಕ್ಕೆ ಸೋಮವಾರ ಅರ್ಜಿ ಸಲ್ಲಿಸಿದರು.

‘ಬೇರೆ ಕಾರಾಗೃಹಕ್ಕೆ ಸ್ಥಳಾಂತರ ಮಾಡುವುದಾದರೆ ನಮ್ಮ ವಾದವನ್ನೂ ಆಲಿಸಬೇಕು’ ಎಂದು ಆಗಸ್ಟ್ 14ರಂದೇ ದರ್ಶನ್ ಪರ ವಕೀಲರು ನ್ಯಾಯಾಲಯದಲ್ಲಿ ಮನವಿ ಮಾಡಿದ್ದರು. ಅರ್ಜಿಯ ವಿಚಾರಣೆಯನ್ನು ಸೋಮವಾರ ನಡೆಸಿದ ನ್ಯಾಯಾಧೀಶರು, ದರ್ಶನ್ ಪರ ವಕೀಲರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿ ಮುಂದಿನ ವಿಚಾರಣೆಯನ್ನು ಆಗಸ್ಟ್ 23ಕ್ಕೆ ಮುಂದೂಡಿದರು.

‘ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ, ಜಗದೀಶ್ ಮತ್ತು ಲಕ್ಷ್ಮಣ್ ಅವರನ್ನು ಶಿವಮೊಗ್ಗ ಕಾರಾಗೃಹಕ್ಕೆ, ನಾಗರಾಜ್ ಅವರನ್ನು ಕಲಬುರಗಿ ಜೈಲಿಗೆ, ಪ್ರದೂಷ್ ರಾವ್ ಅವರನ್ನು ಬೆಳಗಾವಿ ಕಾರಾಗೃಹಕ್ಕೆ ವರ್ಗಾವಣೆ ಮಾಡುವಂತೆ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಪವಿತ್ರಾ ಗೌಡ ಮತ್ತು ಅನುಕುಮಾರ್ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲೇ ಇರಿಸುವಂತೆ ಅರ್ಜಿಯಲ್ಲಿ ಮನವಿ ಮಾಡಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ವಿಜಯಲಕ್ಷ್ಮಿ ಅವರು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಸೋಮವಾರ ಸಂಜೆ ಭೇಟಿ ನೀಡಿ ಪತಿ ದರ್ಶನ್ ಅವರ ಆರೋಗ್ಯ ವಿಚಾರಿಸಿದರು. ಮುಂದಿನ ಕಾನೂನು ಹೋರಾಟದ ಬಗ್ಗೆ ಅವರೊಂದಿಗೆ ಚರ್ಚಿಸಿದರು ಎಂದು ಗೊತ್ತಾಗಿದೆ.

‘ವಕೀಲ ಜಗದೀಶ್ ವಿರುದ್ಧ ಹಕ್ಕುಚ್ಯುತಿ’

ಬೆಂಗಳೂರು: ‘ಬಿಜೆಪಿಯ ಎಸ್.ಆರ್. ವಿಶ್ವನಾಥ್ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ ವಕೀಲ ಜಗದೀಶ್ ವಿರುದ್ಧದ ಪ್ರಕರಣದ ವಿಚಾರಣೆಯನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಗುವುದು’ ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಅವರು ರೂಲಿಂಗ್ ನೀಡಿದರು.

ವಿಧಾನಸಭೆ ಕಲಾಪದ ಮಧ್ಯೆ ವಿಷಯ ಪ್ರಸ್ತಾಪಿಸಿದ ವಿಶ್ವನಾಥ್, ‘ಜಗದೀಶ್ ಎಂಬ ವ್ಯಕ್ತಿ ನನ್ನ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾನೆ. ಈ ಹಿಂದೆಯೂ ಆತ ಹೇಳಿದ ಮಾತುಗಳನ್ನು ಇಲ್ಲಿ ಪ್ರಸ್ತಾಪಿಸಿದ್ದೆ. ಅದಕ್ಕೆ ಪ್ರತಿಕ್ರಿಯಿಸಿದ್ದ ಆತ, ನಾನು ಮುಖ್ಯಮಂತ್ರಿಯಾಗಲು ಏನು ಬೇಕೊ ಅದನ್ನು ಮಾಡುತ್ತಿದ್ದೇನೆ. ನಾನು ನೀಡಿದ ಹೇಳಿಕೆ ವಿಧಾನಸಭೆಯಲ್ಲಿ ಚರ್ಚೆಯಾಗಿದೆ ಎಂದು ಹೇಳಿಕೊಂಡಿದ್ದಾನೆ’ ಎಂದರು.

‘ಶಾಸಕನಾದ ನನಗೆ ಈ ಮನೆಯಲ್ಲಿ (ವಿಧಾನಸಭೆ) ಮಾತನಾಡುವ ಅಧಿಕಾರ ಇದೆ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ನನ್ನನ್ನು ಗುರಿ ಮಾಡಲಾಗುತ್ತಿದೆ. ನನ್ನ ವಿರುದ್ಧ ಕಪ್ಪುಹಣದ ಆರೋಪ ಮಾಡಲಾಗಿದೆ. ಅಲ್ಲಾಳಸಂದ್ರದಲ್ಲಿನ ಧರ್ಮಸ್ಥಳಕ್ಕೆ ಸೇರಿದ ಜಮೀನು ಒಂದನ್ನು ಪರಭಾರೆ ಮಾಡಿಸಿಕೊಟ್ಟಿದ್ದೇನೆ ಎಂದು ಆತ ಟೀಕೆ ಮಾಡಿದ್ದಾನೆ. ನನ್ನ ಹಕ್ಕುಗಳಿಗೆ ಚ್ಯುತಿಯಾಗಿದೆ’ ಎಂದರು.

ಆಗ ಸಭಾಧ್ಯಕ್ಷರು, ‘ಈ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸುತ್ತೇನೆ’ ಎಂದು ಪ್ರಕಟಿಸಿದರು.

ಬನಶಂಕರಿ ಎರಡನೇ ಹಂತದಲ್ಲಿರುವ ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕ್ಯಾಂಪಸ್‌ನಲ್ಲಿ ಸೋಮವಾರ ನಡೆದ ಪದವಿ ಪ್ರದಾನ ದಿನಾಚರಣೆ ಕಾರ್ಯಕ್ರಮದಲ್ಲಿ ಎಲೆಕ್ಟ್ರಾನಿಕ್ ಆ್ಯಂಡ್ ಕಮ್ಯುನಿಕೇಷನ್ ವಿಭಾಗದ ವಿದ್ಯಾರ್ಥಿನಿ ಆರ್. ಅನಘಾ ಅವರಿಗೆ ನಾಲ್ಕು ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು. ಸಂಸ್ಥೆಯ ನಿರ್ದೇಶಕ ಎಸ್.ವೈ. ಕುಲಕರ್ಣಿ, ಬಿಎನ್‌ಎಂ ಚಾರಿಟೀಸ್‌ನ ಅಧ್ಯಕ್ಷ ನಾರಾಯಣ್ ರಾವ್ ಆರ್. ಮಾನೆ, ಐಐಟಿ ಅಲಹಾಬಾದ್‌ನ ಮಾಜಿ ನಿರ್ದೇಶಕ ಪಿ. ನಾಗಭೂಷಣ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಅತ್ಯಾಚಾರ, ಕೊಲೆ ಬೆದರಿಕೆ ಆರೋಪ • ನೋಟಿಸ್ ಜಾರಿಗೆ ಪೊಲೀಸರ ಸಿದ್ಧತೆ

ಶಿವಸೇನೆ ಮಾಜಿ ಶಾಸಕನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಹಾಗೂ ಕೊಲೆ ಬೆದರಿಕೆ ಆರೋಪದಡಿ ಉತ್ತರಪ್ರದೇಶದ ಶಿವಸೇನೆಯ ಮಾಜಿ ಶಾಸಕ ಭಗವಾನ್ ಶರ್ಮಾ ವಿರುದ್ಧ ದೇವನಹಳ್ಳಿಯಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ (ಬಿಐಎಎಲ್) ಭಾನುವಾರ ರಾತ್ರಿ ಎಫ್‌ಐಆರ್ ದಾಖಲಾಗಿದೆ.

ಉತ್ತರಪ್ರದೇಶದ 40 ವರ್ಷದ ಮಹಿಳೆ ನೀಡಿದ ದೂರಿನ ಮೇರೆಗೆ ಮಾಜಿ ಶಾಸಕನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 69ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಬರುವಂತೆ ಸೂಚಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಮದುವೆ ಆಗುವುದಾಗಿ ನಂಬಿಸಿ ಆಗಸ್ಟ್ 14ರಂದು ಭಗವಾನ್ ಶರ್ಮಾ ಅವರು ದೂರುದಾರೆ ಹಾಗೂ ಅವರ ಎಂಟು ವರ್ಷದ ಪುತ್ರನನ್ನು ಬೆಂಗಳೂರಿನ ವಿಮಾನ ನಿಲ್ದಾಣದ ಸಮೀಪದ ಹೋಟೆಲ್‌ವೊಂದಕ್ಕೆ ಕರೆದುಕೊಂಡು ಬಂದಿದ್ದರು. ಸಂತ್ರಸ್ತೆಯನ್ನು ನಗರದ ಹಲವು ಕಡೆ ಸುತ್ತಾಡಿಸಿದ್ದರು. ಆಗಸ್ಟ್ 16ರಂದು ಚಿತ್ರದುರ್ಗಕ್ಕೆ ಕರೆದೊಯ್ದು ನಂತರ ವಾಪಸ್ ಕರೆದುಕೊಂಡು ಬಂದಿದ್ದರು. ಮತ್ತೆ ಅದೇ ಹೋಟೆಲ್‌ನಲ್ಲಿ ಕೊಠಡಿ ಪಡೆದಿದ್ದರು. ಅವರ ಜತೆಗೆ ಫೋಟೊ ತೆಗೆದುಕೊಂಡು, ದೂರುದಾರೆಯ ಮೇಲೆ ಅತ್ಯಾಚಾರ ಎಸಗಿದ್ದರು. ನಂತರ ಕೊಲೆ ಬೆದರಿಕೆ ಹಾಕಿ ಪರಾರಿ ಆಗಿದ್ದಾರೆ’ ಎಂದು ಮಹಿಳೆ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಮದುವೆ ಆಗುವುದಾಗಿ ನಂಬಿಸಿದ್ದ ಭಗವಾನ್ ಶರ್ಮಾ ಅವರು 2017ರಿಂದಲೂ ಮಹಿಳೆಯೊಂದಿಗೆ ಸಹಜೀವನ ನಡೆಸುತ್ತಿದ್ದರು. ಆದರೆ, ಮದುವೆ ಆಗಿರಲಿಲ್ಲ. ಸಹಜೀವನ ನಡೆಸುತ್ತಿದ್ದಾಗ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಉತ್ತರಪ್ರದೇಶದ ಠಾಣೆಗೂ ಮಹಿಳೆ ದೂರು ನೀಡಿದ್ದರು. ಬೆಂಗಳೂರಿಗೆ ಬಂದಾಗಲೂ ಇಬ್ಬರ ನಡುವೆ ಗಲಾಟೆ ಆಗಿತ್ತು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಭಗವಾನ್ ಶರ್ಮಾ ಅವರು ಉತ್ತರಪ್ರದೇಶದ ಬುಲಂದ್‌ಶಹರ್‌ನ ದೇಬಾಯ್ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ. ವ್ಯಾಪಾರದ ಉದ್ದೇಶದಿಂದ ಆಗಸ್ಟ್ 14ರಂದು ಶರ್ಮಾ ಅವರು ಬೆಂಗಳೂರಿಗೆ ಬಂದಿದ್ದರು. ತಮ್ಮೊಂದಿಗೆ ಮಹಿಳೆ ಹಾಗೂ ಅವರ ಪುತ್ರನನ್ನೂ ಕರೆದುಕೊಂಡು ಬಂದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಹೋರಿಗಳ ಕತ್ತು ಕೊಯ್ದ ಪ್ರಕರಣ: ಮೂವರ ಬಂಧನ

ನೆಲಮಂಗಲ: ಅರಳಸಂದ್ರ ಗ್ರಾಮದಲ್ಲಿ ಹಳ್ಳಿಕಾರ್ ತಳಿಯ ಎರಡು ಹೋರಿಗಳ ಕತ್ತು ಕೊಯ್ದು ರಸ್ತೆಯಲ್ಲಿ ಎಸೆದು ಪರಾರಿಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ನೆಲಮಂಗಲ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಎಂಎಸ್ ಪಾಳ್ಯದ ನಿವಾಸಿ ಇಮ್ರಾನ್ (30), ಮೊಹಮ್ಮದ್ ಸಾಬ್ ಪಾಳ್ಯದ ನಿವಾಸಿ ಸೈಯದ್ ನವಾಜ್ (35), ಶ್ರೀನಿಧಿ ಬಡಾವಣೆಯ ನಿವಾಸಿ ವೆಂಕಟೇಶ್ ಅಲಿಯಾಸ್ ಮೊಹಮ್ಮದ್ ಶುಯೇಬ್ (20) ಬಂಧಿತರು.

ಆಗಸ್ಟ್ 10ರಂದು ತಾಲ್ಲೂಕಿನ ಅರಳಸಂದ್ರ ಗ್ರಾಮದ ಸೇತುವೆ ಮೇಲೆ ಎರಡು ಹಳ್ಳಿಕಾರ್ ತಳಿಯ ಹೋರಿಗಳ ಕತ್ತು ಕೊಯ್ದು ಎಸೆಯಲಾಗಿತ್ತು.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಆರಂಭಿಸಿದ್ದರು.

ಆಗಸ್ಟ್ 10ರ ಮಧ್ಯರಾತ್ರಿ ಟೆಂಪೊ ಮೂಲಕ ಬೆಂಗಳೂರಿನಿಂದ ಕೇರಳಕ್ಕೆ ದನಗಳನ್ನು ಆರೋಪಿಗಳು ಸಾಗಣೆ ಮಾಡುತ್ತಿದ್ದರು. ಮಾರ್ಗ ಮಧ್ಯದಲ್ಲಿ ಒಂದು ಹೋರಿ ಉಸಿರಾಟದ ಸಮಸ್ಯೆಯಿಂದ ಮೃತಪಟ್ಟಿತ್ತು.

ಶುಯೇಬ್

ಇಮ್ರಾನ್

ಸೈಯದ್

ಮತ್ತೊಂದು ಹೋರಿ ತೀವ್ರ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿತ್ತು. ಅವುಗಳ ಕತ್ತು ಕೊಯ್ದು ಅಲ್ಲಿಯೇ ಎಸೆದು ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ.ಬಾಬಾ ಅವರು ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಿದ್ದರು. ವಾಹನ ಚಲಿಸಿದ್ದ ಮಾರ್ಗದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಟೆಂಪೊ ನಂಬರ್ ಅನ್ನು ಪತ್ತೆ ಮಾಡಲಾಗಿತ್ತು. ಅದನ್ನು ಆಧರಿಸಿ ಆರೋಪಿಗಳನ್ನು ಪತ್ತೆ ಮಾಡುವಲ್ಲಿ ಪೊಲೀಸರು ಯಶಸ್ವಿ ಆಗಿದ್ದಾರೆ.

518 ಮಂದಿ ವಿರುದ್ಧ ಪ್ರಕರಣ

ಬೆಂಗಳೂರು: ನಗರ ಸಂಚಾರ ವಿಭಾಗದ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದ 518 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ವಿವಿಧ ಮಾದರಿಯ 38,804 ವಾಹನಗಳ ಚಾಲಕರನ್ನು ಪರೀಕ್ಷೆಗೆ ಒಳಪಡಿಸಿ ಮದ್ಯಪಾನ ಮಾಡಿ ಚಾಲನೆ ಮಾಡುತ್ತಿದ್ದವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಅತಿ ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದ 44 ಜನರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು, ₹44 ಸಾವಿರ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಆಗಸ್ಟ್ 1ರಿಂದ 17ರವರೆಗೆ ನಡೆದ ಕಾರ್ಯಾಚರಣೆಯಲ್ಲಿ ನಿರ್ಬಂಧಿತ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆ ಉಂಟು ಮಾಡಿದ್ದವರ ವಿರುದ್ಧ 17,436 ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

‘ಆಸ್ತಿ ವಿವರ: ಫಲಿತಾಂಶ ಅಸಿಂಧು ಆಗದು’

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಜೇತ ಅಭ್ಯರ್ಥಿಯು ಆಸ್ತಿ ವಿವರಗಳನ್ನು ಬಹಿರಂಗಪಡಿಸಿಲ್ಲ ಎಂಬ ಕಾರಣಕ್ಕಾಗಿ, ನ್ಯಾಯಾಲಯಗಳು ಅತ್ಯಂತ ನಿಷ್ಠುರ ಮತ್ತು ಅತಿಸೂಕ್ಷ್ಮ ವಿಧಾನವನ್ನು ಅಳವಡಿಸಿಕೊಂಡು ಚುನಾವಣೆಯ ಫಲಿತಾಂಶವನ್ನು ಅಸಿಂಧುಗೊಳಿಸಲು ಆತುರಪಡಬಾರದು ಎಂಬ ಮಹತ್ವದ ಅಭಿಪ್ರಾಯವನ್ನು ಸುಪ್ರೀಂ ಕೋರ್ಟ್ ಸೋಮವಾರ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠವು, ನಿರ್ದಿಷ್ಟ ಅಭ್ಯರ್ಥಿಯು ಆಸ್ತಿ ವಿವರ ಬಹಿರಂಗ ಪಡಿಸದಿರುವುದು ಚುನಾವಣೆ ಫಲಿತಾಂಶದ ಮೇಲೆ ಪ್ರಭಾವ ಬೀರುವಷ್ಟು ಗಂಭೀರ ಸ್ವರೂಪದ್ದಾಗಿತ್ತೇ ಎಂಬುದನ್ನು ನ್ಯಾಯಾಲಯಗಳು ಖಚಿತಪಡಿಸಿಕೊಳ್ಳಬೇಕು ಎಂದು ಹೇಳಿದೆ.

2023ರ ಡಿಸೆಂಬರ್ 3ರಂದು ನಡೆದ ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಬಿಆರ್‌ಎಸ್‌ನ ಕೋವ ಲಕ್ಷ್ಮಿ ಅವರ ಆಯ್ಕೆಯನ್ನು ಪ್ರಶ್ನಿಸಿ ಕಾಂಗ್ರೆಸ್ ಅಭ್ಯರ್ಥಿ ಅಜ್ಮೇರಾ ಶ್ಯಾಮ್ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿತು.

ಗೆದ್ದ ಅಭ್ಯರ್ಥಿಯು ಕಳೆದ ಐದು ವರ್ಷಗಳಲ್ಲಿ ನಾಲ್ಕು ವರ್ಷಗಳ ಆದಾಯ ತೆರಿಗೆ ರಿಟರ್ನ್ಸ್‌ಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಮಾಣಪತ್ರದಲ್ಲಿ ಬಹಿರಂಗಪಡಿಸದಿರುವುದು ಗಂಭೀರ ಸ್ವರೂಪದ ದೋಷ ಅಲ್ಲ ಎಂದಿದೆ.

ಅರ್ಜಿ ವಜಾ: 2024ರಲ್ಲಿ ನಡೆದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ಬಾಂಬೆ ಹೈಕೋರ್ಟ್ ನೀಡಿದ್ದ ತೀರ್ಪಿನ ವಿರುದ್ಧ ಚೇತನ್ ಚಂದ್ರಕಾಂತ್ ಎಂಬವರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಎನ್.ಕೋಟೀಶ್ವರ್ ಸಿಂಗ್ ಅವರ ಪೀಠ ನಿರಾಕರಿಸಿತು.

ಮತದಾನದ ದಿನ ಸಂಜೆ 6 ಗಂಟೆಯ ನಂತರ ಮತದಾನ ಮುಗಿಯುವವರೆಗೆ 76 ಲಕ್ಷ ಮತಗಳು ಚಲಾವಣೆಯಾಗಿವೆ ಎಂಬ ಕಾರಣ ಮುಂದಿಟ್ಟು ಚೇತನ್ ಅವರು ಅರ್ಜಿ ಸಲ್ಲಿಸಿದ್ದರು. ಅವರ ಅರ್ಜಿಯನ್ನು ಬಾಂಬೆ ಹೈಕೋರ್ಟ್ ಇದೇ ಜೂನ್ 25ರಂದು ತಿರಸ್ಕರಿಸಿತ್ತು.

ಬೆಂಕಿ ದುರಂತ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲಸೂರು ಗೇಟ್ ಠಾಣಾ ವ್ಯಾಪ್ತಿಯ ನಗರ್ತಪೇಟೆಯಲ್ಲಿ ಸಂಭವಿಸಿದ್ದ ಅಗ್ನಿ ದುರಂತಕ್ಕೆ ಕಾರಣವೇನು ಎಂಬುದನ್ನು ಪತ್ತೆಹಚ್ಚಲು ಪೊಲೀಸರು ಹಾಗೂ ತಾಂತ್ರಿಕ ತಜ್ಞರು ತನಿಖೆ ಚುರುಕುಗೊಳಿಸಿದ್ದಾರೆ.

ದುರಂತ ಸಂಭವಿಸಿದ ಕಟ್ಟಡದ ಆಸುಪಾಸಿನಲ್ಲಿರುವ ಸ್ಥಳೀಯರಿಂದ ಮಾಹಿತಿ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

‘ಅವಘಡ ಸಂಭವಿಸುವುದಕ್ಕೂ ಮೂರು ದಿನಗಳ ಮೊದಲು ಕಟ್ಟಡದ ಹೊರಗಡೆಯಿದ್ದ ವಿದ್ಯುತ್ ವೈಯರ್‌ನಲ್ಲಿ ಬೆಂಕಿಯ ಕಿಡಿ ಕಾಣಿಸುತ್ತಿತ್ತು. ಅದನ್ನು ಮಾಲೀಕರ ಗಮನಕ್ಕೂ ತರಲಾಗಿತ್ತು’ ಎಂಬುದಾಗಿ ಸ್ಥಳೀಯರೊಬ್ಬರು ಮಾಹಿತಿ ನೀಡಿದ್ದಾರೆ ಎಂದು ತಿಳಿಸಿದರು.

‘ಮತ್ತೊಂದೆಡೆ ಅವಘಡ ಸಂಭವಿಸಿದಾಗ ನಾಲ್ಕನೇ ಮಹಡಿಯಲ್ಲಿ ವಾಸವಿದ್ದ ಕುಟುಂಬವನ್ನು ಪತ್ತೆ ಹಚ್ಚಲಾಗಿದೆ. ಏಳು ಜನರಿದ್ದ ಮೋಹನ್ ಲಾಲ್ ಎಂಬುವವರ ಕುಟುಂಬದಿಂದ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಬೆಂಕಿ, ದಟ್ಟವಾದ ಹೊಗೆ ಕಾಣಿಸಿಕೊಳ್ಳುತ್ತಿದ್ದಂತೆ ಕಟ್ಟಡದ ಮೇಲ್ಮಹಡಿಗೆ ಹೊಂದಿಕೊಂಡಂತಿರುವ ಪಕ್ಕದಲ್ಲಿನ ಕಟ್ಟಡಕ್ಕೆ ಜಿಗಿದು ಪಾರಾಗಿರುವುದಾಗಿ ಮೋಹನ್ ಲಾಲ್ ಕುಟುಂಬದ ಸದಸ್ಯರು ಮಾಹಿತಿ ನೀಡಿದ್ದಾರೆ. ಸದ್ಯ ಘಟನಾ ಸ್ಥಳದಲ್ಲಿ ಎಫ್‌ಎಸ್‌ಎಲ್ ತಂಡ ಪರಿಶೀಲನೆ ನಡೆಸಿದ್ದು, ಶಾರ್ಟ್ ಸರ್ಕಿಟ್ ಅಥವಾ ಅಡುಗೆ ಅನಿಲ ಸೋರಿಕೆಯಿಂದ ಅವಘಡ ಸಂಭವಿಸಿದೆಯಾ ಎಂಬುದರ ಕುರಿತು ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಆ. 16ರ ಬೆಳಗಿನ ಜಾವ 3.30ರ ಸುಮಾರಿಗೆ ಹಲಸೂರು ಗೇಟ್ ಪೊಲೀಸ್ ಠಾಣಾ ವ್ಯಾಪ್ತಿಯ ನಗರ್ತಪೇಟೆಯಲ್ಲಿ ಸಂಭವಿಸಿದ ಅವಘಡದಲ್ಲಿ ರಾಜಸ್ಥಾನದ ಐವರು ಸಜೀವದಹನವಾಗಿದ್ದರು.

ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದ ಸಿಬಿಐ

ಯೋಗೀಶ್ ಗೌಡ ಕೊಲೆ ಪ್ರಕರಣ: ಜಾಮೀನು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ 9ನೇ ಆರೋಪಿ ಎಸ್.ಅಶ್ವತ್ಥ್ ಬಿನ್ ಶಿವಣ್ಣಗೌಡ ಅವರ ಜಾಮೀನನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಕಾಯ್ದಿರಿಸಿದ್ದ ಆದೇಶವನ್ನು ಸೋಮವಾರ ಪ್ರಕಟಿಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಪ್ರಾಸಿಕ್ಯೂಷನ್ ಸಾಕ್ಷಿಗಳ ವಿಚಾರಣೆ ಮುಗಿಯುವತನಕ ಆರೋಪಿ ಜೈಲಿನಲ್ಲಿರಬೇಕು. ಉಲ್ಲೇಖಿತ ಸಾಕ್ಷಿಗಳ ವಿಚಾರಣೆ ಮುಗಿದ ಬಳಿಕ ಪುನಃ ಜಾಮೀನು ಕೋರಿ ಅರ್ಜಿ ಸಲ್ಲಿಸಬಹುದು’ ಎಂದು ತಿಳಿಸಿದೆ.

ಪ್ರಕರಣವೇನು?: ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2016ರ ಜೂನ್ 15ರಂದು ಯೋಗೀಶ್‌ಗೌಡ ಗೌಡರ್ ಕೊಲೆ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ಪ್ರಕರಣದ ಪ್ರಮುಖ ಆರೋಪಿ ಧಾರವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದು ಪ್ರಕರಣದ ವಿಚಾರಣೆ ಎದುರಿಸುತ್ತಿದ್ದಾರೆ.

ಪಿಂಚಣಿ–ಭತ್ಯೆ ನಿರಾಕರಣೆ: ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೋಟಿಸ್

ನಿವೃತ್ತಿ ಬಳಿಕ ಪಿಂಚಣಿ ಹಾಗೂ ಇತರ ನಿವೃತ್ತಿ ಭತ್ಯೆಗಳನ್ನು ನಿರಾಕರಿಸಿದ ಕ್ರಮವನ್ನು ಪ್ರಶ್ನಿಸಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಿವೃತ್ತ ನೌಕರರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 20 ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿರುವ ಎಸ್. ನಾರಾಯಣ (73) ಸೇರಿದಂತೆ ಐವರು ನಿವೃತ್ತ ನೌಕರರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಹಾಗೂ ಆರ್ಥಿಕ ಇಲಾಖೆ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ‘ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಅಕಾಡೆಮಿಯಲ್ಲಿ 1979ರಿಂದ 1992ರ ಅವಧಿಯಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕೊಂಡಿದ್ದ ನಾವೆಲ್ಲರೂ 2013ರಿಂದ 2017ರ ಅವಧಿಯಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ್ದೇವೆ. ಎರಡು ದಶಕಗಳಿಗೂ ಹೆಚ್ಚಿನ ಸೇವೆ ಸಲ್ಲಿಸಿದ್ದರೂ ನಮಗೆ ಪಿಂಚಣಿ ಇನ್ನಿತರ ನಿವೃತ್ತಿ ಭತ್ಯೆಗಳನ್ನು ನಿರಾಕರಿಸಲಾಗಿದೆ. ಗುತ್ತಿಗೆ ಆಧಾರದಲ್ಲಿ ನೇಮಕೊಂಡಿದ್ದರೂ 2007ರ ಏಪ್ರಿಲ್ 1ರಿಂದ ಸರ್ಕಾರ ಸಾಮಾನ್ಯ ವೇತನ ಶ್ರೇಣಿಯನ್ನು ನಮಗೂ ವಿಸ್ತರಿಸಲಾಗಿತ್ತು’ ಎಂದು ಅರ್ಜಿದಾರರು ವಿವರಿಸಿದ್ದಾರೆ.

ಕೆಕೆಆರ್‌ಡಿಬಿಗೆ ನೇಮಕ ಕಾನೂನು ಬಾಹಿರ: ‘ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಶಾಸಕ ಡಾ.ಅಜಯ್ ಧರಂ ಸಿಂಗ್ ಅವರನ್ನು ಕಾನೂನುಬಾಹಿರವಾಗಿ ನೇಮಕ ಮಾಡಲಾಗಿದ್ದು, ಇದನ್ನು ರದ್ದುಪಡಿಸಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲು ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಕಲಬುರಗಿಯ ಸಾಯಿಬಣ್ಣ ಜಮಾದಾರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಶಂಕರಪ್ಪ ವಾದ ಆಲಿಸಿದ ಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಕೆಕೆಆರ್‌ಡಿಬಿ ಕಾರ್ಯದರ್ಶಿ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಅನಿಲ ಸೋರಿಕೆ: ಮತ್ತೆ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀರಾಮ ಕಾಲೊನಿಯಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟಗೊಂಡ ಘಟನೆಯಲ್ಲಿ ಗಾಯಗೊಂಡಿದ್ದ 9 ಮಂದಿಯ ಪೈಕಿ ಸೋಮವಾರ ಮತ್ತೆ ಇಬ್ಬರು ಮೃತಪಟ್ಟಿದ್ದಾರೆ. ಇದರಿಂದಾಗಿ ಮೃತರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

ಕಸ್ತೂರಮ್ಮ (35) ಮತ್ತು ಅವರ ಪುತ್ರಿ ಕಯಾಲ್ (8) ಮೃತಪಟ್ಟವರು.

ಆಗಸ್ಟ್ 15ರಂದು ಕಸ್ತೂರಮ್ಮ ಅವರ ಮನೆಯಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿತ್ತು. 13 ಮನೆಗಳು ಕುಸಿದಿದ್ದವು. ಕಸ್ತೂರಮ್ಮ ಅವರ ಪಕ್ಕದ ಮನೆಯಲ್ಲಿದ್ದ ಬಾಲಕ ಮುಬಾರಕ್ ಅಂದೇ ಮೃತಪಟ್ಟಿದ್ದ.

ಸ್ಫೋಟ ಸಂಭವಿಸಿದ ವೇಳೆ ಮನೆಯೊಳಗಿದ್ದ ಕಸ್ತೂರಮ್ಮ ಮತ್ತು ಕಯಾಲ್ ಅವರಿಗೆ ಶೇ 30ರಷ್ಟು ಸುಟ್ಟ ಗಾಯಗಳಾಗಿದ್ದವು. ಇಬ್ಬರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕಸ್ತೂರಮ್ಮ ಅವರು ಮನೆಗೆಲಸ ಮಾಡುತ್ತಿದ್ದರು. ಬಾಲಕಿ ಕಯಾಲ್, 3ನೇ ತರಗತಿ ಓದುತ್ತಿದ್ದಳು ಎಂದು ಪೊಲೀಸರು ಹೇಳಿದರು.

ಸರಸಮ್ಮ ಎಂಬುವವರ ಕೈ ಮುರಿದಿದ್ದು, ಚಿಕಿತ್ಸೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ವಿಶ್ವ ಫೋಟೊಗ್ರಫಿ ದಿನ: ಅತಿಥಿ: ಪಿ. ಶೇಷಾದ್ರಿ, ಸ್ಥಳ: ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಸಂಜೆ 5.30

ರಾಜೀವ್ ಗಾಂಧಿ ಜನ್ಮದಿನದ ಅಂಗವಾಗಿ ಸದ್ಭಾವನಾ ದಿನಾಚರಣೆ, ಸಾಂಸ್ಕೃತಿಕ ಕಾರ್ಯಕ್ರಮ: ಸಾನ್ನಿಧ್ಯ: ಬಸವ ಹರಳಯ್ಯ ಸ್ವಾಮೀಜಿ, ಖ್ವಾಜಾ ಸುಲ್ತಾನ್ ಷಾ ಚಿಶ್ತಿ ಸಹರವರ್ದಿ ಖಾದ್ರಿ, ಸದಾನಂದ ಬಂತೇಜಿ, ಟಿಜೋ ಕೊಚ್ಚುತರೈಲ್, ಉದ್ಘಾಟನೆ: ರಹೀಂ ಖಾನ್, ಅಧ್ಯಕ್ಷತೆ: ಕೆ. ಅಬ್ದುಲ್ ಜಬ್ಬಾರ್, ಅತಿಥಿಗಳು: ಬಿಲ್ಕಿಸ್ ಬಾನು, ರಘುನಾಥ್ ನಾಯ್ಡು, ಆಯೋಜನೆ: ದಿಶಾ ಚಾರಿಟಬಲ್ ಟ್ರಸ್ಟ್, ಸುವರ್ಣ ಕರ್ನಾಟಕ ಜಾಗೃತಿ ವೇದಿಕೆ, ಸ್ಥಳ: ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

ವಚನ ಶ್ರಾವಣ: ವಚನ ಗಾಯನ: ನಾಗರಾಜು, ವಚನ ಚಿಂತನ: ಸಿದ್ಧು, ಧವನ್, ಅತಿಥಿ: ಯೋಗಿತಾ ರಾಣಿ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ನಂದಿನಿ ಸಿ., ವಿರೂಪಾಕ್ಷಯ್ಯನವರ ಮನೆ, ಬಸವೇಶ್ವರ ಲೇಔಟ್, ಟಿ. ದಾಸರಹಳ್ಳಿ, ಸಂಜೆ 6

ಸೇಬು ಮತ್ತು ಬಾಳೆಹಣ್ಣಿಗಿಂತಲೂ ಕಡಿಮೆ ಕ್ಯಾಲೋರಿ ಹಾಗೂ ಸಕ್ಕರೆ ಅಂಶವನ್ನು ಹೊಂದಿರುವ ಸ್ಟ್ರಾಬೆರಿಗಳ ಸೇವನೆಯಿಂದ ದೇಹಕ್ಕೆ ಹೆಚ್ಚಿನ ನಾರಿನಂಶ ಸಿಗುತ್ತದೆ.

ಮಗುವಿನಲ್ಲಿ ಆಟಿಸಂ ಕಾಣಿಸಿಕೊಳ್ಳಲು ನಮ್ಮ ಸುತ್ತಮುತ್ತಲ ವಾತಾವರಣ ಹಾಗೂ ಪರಿಸ್ಥಿತಿಗಳು ಹೇಗೆ ಪ್ರಭಾವ ಬೀರುತ್ತವೆ ಎಂದು ಈ ಮೊದಲಿನ ಅಧ್ಯಯನಗಳು ಹೇಳಿದ್ದವು. ಪ್ರಸ್ತುತ ಅಧ್ಯಯನವು ಪೋಷಕರ ಕೆಲಸದ ವಾತಾವರಣವನ್ನು ಮಗುವಿನ ಆಟಿಸಂ ಸಮಸ್ಯೆಯ ಜೊತೆಗೆ ತಾಳೆ ಹಾಕಿ ನೋಡಿದೆ. ಉದ್ಯೋಗಕ್ಕೂ ನಮ್ಮ ಮಕ್ಕಳ ಆರೋಗ್ಯಕ್ಕೂ ನಂಟಿದೆ.

ಆಟಿಸಂಗೂ ಇದೆ ಉದ್ಯೋಗದ ನಂಟು

• ಅಮೃತೇಶ್ವರಿ ಬಿ.

ಆಟಿಸಂ ಕಾಯಿಲೆ ಬಗ್ಗೆ ನೀವೆಲ್ಲಾ ಕೇಳಿರಬಹುದು. ಇದು, ಒಬ್ಬ ವ್ಯಕ್ತಿ ತನ್ನೊಳಗೇ ಲೀನವಾಗಿರುವ, ಸಾಮಾಜಿಕವಾಗಿ ಬೆರೆಯಲಿಚ್ಛಿಸದ, ಮಾತು ಬಾರದ ಅಥವಾ ಬಂದರೂ ಇತರರೊಂದಿಗೆ ಸಂವಹಿಸಲು ಕಷ್ಟಪಡುವ, ಹಾಗೂ ಪುನರಾವರ್ತಿತ ವರ್ತನೆಗಳಿರುವ, ಮಿದುಳು ಹಾಗೂ ನರಕ್ಕೆ ಸಂಬಂಧಿಸಿದ ಕಾಯಿಲೆ. ಭಾರತದಲ್ಲಿ ನೂರು ಮಕ್ಕಳಲ್ಲಿ ಒಂದು ಮಗುವಿನಲ್ಲಿ ಆಟಿಸಂ ಕಾಣಿಸುತ್ತಿದೆ ಎನ್ನುತ್ತವೆ, ದತ್ತಾಂಶಗಳು.

ಆಟಿಸಂ ಸಾಮಾನ್ಯವಾಗಿ ಹುಟ್ಟಿನಿಂದಲೇ ಕಾಣಿಸಿಕೊಳ್ಳುತ್ತದೆ. ಕಾಯಿಲೆಯ ಮಟ್ಟ ಸಾಧಾರಣವಾಗಿದ್ದರೆ ಲಕ್ಷಣಗಳು ಸೌಮ್ಯವಾಗಿದ್ದು, ತೀವ್ರವಾಗಿದ್ದಾಗ ಹೆಚ್ಚು ಜಟಿಲವಾಗಿರುವವು. ಆಟಿಸಂ ಇರುವ ವ್ಯಕ್ತಿ ಕೆಲವೊಮ್ಮೆ ಮಾತು ಕಲಿತರೂ ಸಾಮಾನ್ಯರಂತೆ ಮಾತನಾಡದಿರಬಹುದು ಅಥವಾ ಮಾತು ಕಲಿಯುವುದೇ ನಿಧಾನವಾಗಬಹುದು. ನಿಧಾನವೆಂದರೆ ತೊದಲು ಮಾತನಾಡಲೂ ಸುಮಾರು ಹತ್ತಾರು ವರ್ಷಗಳೇ ಆಗಿಬಿಡುತ್ತದೆ. ಒಟ್ಟಾರೆ ಇದೊಂದು ನರಸಂಬಂಧಿ ದೌರ್ಬಲ್ಯಗಳ ಸಮೂಹವೆನ್ನಬಹುದು. ಕಾಯಿಲೆ ಬಹಳ ಗಂಭೀರವೆನಿಸಿದರೂ ಅದಕ್ಕೆ ಕಾರಣಗಳು ಮಾತ್ರ ಬಹಳ ಸಾಮಾನ್ಯ. ಇದುವರೆಗಿನ ಸಂಶೋಧನೆಗಳ ಪ್ರಕಾರ ಗರ್ಭಿಣಿತಾಯಿಯ ಮಾನಸಿಕ ಒತ್ತಡ, ಮಧುಮೇಹ, ಸ್ಥೂಲಕಾಯ, ರೋಗನಿರೋಧಕ ವ್ಯವಸ್ಥೆಗೆ ಸಂಬಂಧಿಸಿದ ದೌರ್ಬಲ್ಯ, ಪ್ರಸವದ ಸಮಯದಲ್ಲಿನ ಜಟಿಲತೆಗಳು – ಇವುಗಳೇ ಕಾರಣವಿರಬಹುದೆಂದು ತಿಳಿಯಲಾಗಿತ್ತು. ಆದರೆ ಈಗ ಹೊಸದೊಂದು ಕಾರಣವನ್ನು ಪತ್ತೆ ಮಾಡಿದ್ದಾರೆ. ಅದುವೇ, ಆಟಿಸಂ ಕಾಯಿಲೆಯಿರುವ ಮಗುವಿನ ತಂದೆತಾಯಿಗಳು ಕೆಲಸ ಮಾಡುವ ಜಾಗದಲ್ಲಿನ ರಾಸಾಯನಿಕಗಳು!

ಹೌದು. ಯಾವುದೇ ವ್ಯಕ್ತಿಯು ತಾನು ಕೆಲಸ ಮಾಡುವಲ್ಲಿ ಅಪಾಯಕಾರಿ ರಾಸಾಯನಿಕಗಳಿಗೆ ಹೆಚ್ಚೆಚ್ಚು ಒಡ್ಡಿಕೊಳ್ಳುತ್ತಿದ್ದಲ್ಲಿ ಅದು ಅವರನ್ನಷ್ಟೇ ಬಾಧಿಸದೆ ಮುಂದಿನ ಪೀಳಿಗೆಯನ್ನೂ ತೊಂದರೆಗೀಡುಮಾಡಬಲ್ಲದು. ಹೀಗೆಂದು, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಸಂಶೋಧಕರು ಇತ್ತೀಚೆಗಷ್ಟೆ 'ಇಂಟರ್ ನ್ಯಾಷನಲ್ ಜರ್ನಲ್ ಆಫ್ ಹೈಜೀನ್ ಅಂಡ್ ಎನ್ವಿರಾನ್ಮೆಂಟಲ್ ಹೆಲ್ತ್' ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ.

ಆಟಿಸಂಗೆ ನಮ್ಮ ಸುತ್ತಮುತ್ತಲ ವಾತಾವರಣ ಹಾಗೂ ಪರಿಸ್ಥಿತಿಗಳು ಹೇಗೆ ಪ್ರಭಾವ ಬೀರುತ್ತವೆ ಎಂದು ಈ ಮೊದಲಿನ ಅಧ್ಯಯನಗಳು ಹೇಳಿದ್ದವು. ಆದರೆ ಪ್ರಸ್ತುತ ಅಧ್ಯಯನವು ಪೋಷಕರ ಕೆಲಸದ ವಾತಾವರಣವಕ್ಕೂ ಮಗುವಿನ ಆಟಿಸಂ ಸಮಸ್ಯೆಗೂ ಸಂಬಂಧ ಇದೆ ಎನ್ನುತ್ತದೆ, ಸಂಶೋಧಕರಾದ ಹರ್ಟ್ಸ್ ಪೀಚಿಯೋಟೊ. ಆಟಿಸಂ ಕಾಯಿಲೆಯ ಬಗ್ಗೆ ತಿಳಿಯಲೆಂದೆ ಕ್ಯಾಲಿಫೋರ್ನಿಯಾದ ಯುಸಿ ಡೇವಿಸ್ ಎನ್ವಿರಾನ್ಮೆಂಟಲ್ ಹೆಲ್ತ್ ಸೈನ್ಸಸ್ ಸೆಂಟರ್ ಒಂದು ದೊಡ್ಡ ಅಧ್ಯಯನವನ್ನು ನಡೆಸಿದೆ. ಅದುವೇ CHARGE – 'ಚೈಲ್ಡ್‌ಹುಡ್ ಆಟಿಸಂ ರಿಸ್ಕ್ಸ್ ಫ್ರಮ್ ಜೀನ್ಸ್ ಆ್ಯಂಡ್ ಎನ್ವಿರಾನ್ಮೆಂಟ್'. ಈ 'CHARGE' ಮತ್ತು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಆಕ್ಯುಪೇಷನಲ್ ಸೇಫ್ಟಿ ಅಂಡ್ ಹೆಲ್ತ್' – ಈ ಎರಡೂ ತಂಡಗಳು ಈಗಾಗಲೆ ಆಟಿಸಂ ಪತ್ತೆಯಾಗಿರುವಂತಹ ಸುಮಾರು ಐದುನೂರು ಕುಟುಂಬಗಳನ್ನು ಅಧ್ಯಯನ ಮಾಡಿವೆ.

ಕೈಗಾರಿಕಾ ಆರೋಗ್ಯತಜ್ಞರು, ಈ ಕುಟುಂಬಗಳ ತಂದೆ–ತಾಯಿಯರನ್ನು ಪರೀಕ್ಷೆ ಮಾಡಿ ಗರ್ಭಿಣಿಯಾಗುವ ಮೂರು ತಿಂಗಳ ಮೊದಲಿನಿಂದ ಮಗು ಹುಟ್ಟುವವರೆಗೂ, ಅವರವರ ಕೆಲಸಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಕಲೆಹಾಕಿದ್ದಾರೆ. ಆ ಪೋಷಕರು ಸತತವಾಗಿ ತಮ್ಮ ದೇಹವನ್ನು ಒಡ್ಡಿಕೊಳ್ಳುತ್ತಿರುವ ಸುಮಾರು 16 ರಾಸಾಯನಿಕಗಳನ್ನು ಅಂದಾಜಿಸಿ ಪಟ್ಟಿ ಮಾಡಿದ್ದಾರೆ. ಆ ಪಟ್ಟಿಯಲ್ಲಿ ಪ್ಲಾಸ್ಟಿಕ್, ಕಾರಿನಲ್ಲಿ ಬಳಸುವ ದ್ರಾವಣಗಳು, ಕೀಟನಾಶಕಗಳು, ಔಷಧಗಳು ಹಾಗೂ ಇನ್ನಿತರೆ ರಾಸಾಯನಿಕಗಳು ಸೇರಿದ್ದವು. ಈ ದತ್ತಾಂಶವನ್ನು ನಂತರ ಮಕ್ಕಳ ಆಟಿಸಂ ತೀವ್ರತೆಯ ಮಾಪನದೊಂದಿಗೆ ಹೋಲಿಸಿ, ಅವರ ವರ್ತನೆ, ಅರಿವಿನ ಕೌಶಲಗಳು ಮತ್ತು ದಿನನಿತ್ಯದ ಕೌಶಲಗಳನ್ನು ಅಳೆದಿದ್ದಾರೆ. ಪಾಲಿ–ಇಥಿಲೀನ್, ಪಾಲಿಪ್ರೊಪೈಲೀನ್, ಪಾಲಿವಿನೈಲುಕ್ಲೋರೈಡುಗಳಂತಹ ಪ್ಲಾಸ್ಟಿಕ್‌ಗಳು ಹಾಗೂ ಪಾಲಿಮರ್‌ಗಳನ್ನು ಹೆಚ್ಚೆಚ್ಚು ಬಳಸಿದವರಲ್ಲಿ ಕಡಿಮೆ ಅರಿವಿನ ಮಟ್ಟದ ಜೊತೆಗೆ, ಹೊಂದಿಕೊಳ್ಳುವ ಕೌಶಲಗಳಲ್ಲಿ ಕೊರತೆ, ಹೈಪರ್ ಆಕ್ಟಿವಿಟಿ ಮತ್ತು ಸಾಮಾಜಿಕವಾಗಿ ದೂರವಿರುವಂತಹ ಲಕ್ಷಣಗಳು ಕಂಡುಬಂದಿವೆಯಂತೆ.

ಈ ರಾಸಾಯನಿಕಗಳಂತೂ ಗರ್ಭಚೀಲ ಹಾಗೂ ಬ್ಲಡ್ ಬ್ರೈನ್ ಬ್ಯಾರಿಯರ್ ಅನ್ನು ದಾಟಿ ನರಸಂಬಂಧಿ ಸಮಸ್ಯೆಗಳನ್ನೂ ತರಬಲ್ಲವಂತೆ. ಹೀಗಾಗಿಯೇ ಮಗುವು ತಡವಾಗಿ ಮಾತು ಕಲಿಯುವುದು, ಸಾಮಾಜಿಕವಾಗಿ ಬೆರೆಯದೆ ಒಬ್ಬಂಟಿಯಾಗಿರುವುದು, ಕಲಿಕೆಯಲ್ಲಿ ಹಿಂದುಳಿಯುವುದು, ನೆನಪಿನ ಶಕ್ತಿ ಕುಂದುವುದು ಮುಂತಾದ ತೊಂದರೆಗಳಿಗೆ ತುತ್ತಾಗುವುದು. ಹಾಗೆಯೇ, ಕ್ರಿಮಿನಾಶಕವಾಗಿ ಬಳಸುವ ಇಥಿಲೀನ್ ಡೈಯಾಕ್ಸೈಡ್ ರಾಸಾಯನಿಕವನ್ನು ಹೆಚ್ಚಾಗಿ ಬಳಸಿದವರ ಮಕ್ಕಳಲ್ಲಿ ದಿನನಿತ್ಯದ ಕೌಶಲಗಳಲ್ಲಿ ದುರ್ಬಲವಾಗಿದ್ದುದು ಕಂಡುಬಂದಿತ್ತಂತೆ. ಫಿನಾಯಿಲ್‌ಗಳೊಂದಿಗೆ ಹೆಚ್ಚಾಗಿ ಕೆಲಸ ಮಾಡಿದವರ ಮಕ್ಕಳಲ್ಲಿ ಆಟಿಸಂನ ಲಕ್ಷಣಗಳು ಜಟಿಲವಾಗಿರುತ್ತಿತ್ತು ಎನ್ನುತ್ತಾರೆ, ಹರ್ಟ್ಸ್.

ಈ ವಿಷಕಾರಿ ರಾಸಾಯನಿಕಗಳೆಲ್ಲವೂ ವಾಹನಗಳ ತಯಾರಿಕೆ, ಪಿವಿಸಿ ಪ್ಲಾಸ್ಟಿಕ್ ತಯಾರಿಕೆ, ಫುಡ್ ಪ್ಯಾಕೇಜಿಂಗ್ ಪ್ಲಾಸ್ಟಿಕ್, ಸೌಂದರ್ಯವರ್ಧಕಗಳು, ಫಾರ್ಮಾಸ್ಯುಟಿಕಲ್ಸ್ ಮುಂತಾದ ಕಡೆಗಳಲ್ಲಿ ಸಾಮಾನ್ಯ. ಈ ಜಾಗಗಳಲ್ಲಿ ಕೆಲಸ ಮಾಡುವವರ ದೇಹವನ್ನು ಈ ರಾಸಾಯನಿಕಗಳು ಸೇರುವ ಸಾಧ್ಯತೆ ಜಾಸ್ತಿ. ಮಗು ಹೊಟ್ಟೆಯಲ್ಲಿರುವ ಸಮಯದಲ್ಲಿ ಇಂತಹ ರಾಸಾಯನಿಕಗಳಿಗೆ ತೆರೆದುಕೊಂಡಾಗ ಮಾತ್ರ ಆಟಿಸಂ ಅಮರಿಕೊಂಡಿರುವುದಲ್ಲ; ತಂದೆ–ತಾಯಿಯಾಗುವವರು, ಮುಂಚಿನಿಂದಲೂ ತಮ್ಮ ವೃತ್ತಿಜೀವನದಲ್ಲಿ ಎಷ್ಟು ಪ್ರಮಾಣದಲ್ಲಿ ತಮ್ಮನ್ನು ಇಂತಹ ರಾಸಾಯನಿಕಗಳಿಗೆ ಒಡ್ಡಿಕೊಂಡಿದ್ದಾರೆ ಎನ್ನುವುದೂ ಭವಿಷ್ಯದಲ್ಲಿ ಅವರ ಮಗುವಿಗೆ ಆಟಿಸಂ ಕಾಣಿಸಿಕೊಳ್ಳುವಂತೆ ಮಾಡಿರುವುದು ಆತಂಕಕಾರಿ ವಿಷಯ. ಈ ರಾಸಾಯನಿಕಗಳು ಕಾಯಿಲೆಯ ತೀವ್ರತೆಯನ್ನೂ ಇಮ್ಮಡಿಗೊಳಿಸಬಹುದಂತೆ. ಆದರೆ ಇವು ಹೇಗೆ ಮಿದುಳಿನ ಬೆಳವಣಿಗೆಯನ್ನು ಪ್ರಭಾವಿಸಬಹುದು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಇನ್ನಷ್ಟು ಸಂಶೋಧನೆಗಳಾಗಬೇಕಿವೆ ಎನ್ನುತ್ತಾರೆ, ಸಂಶೋಧಕರು. ಕಾಯಿಲೆಯನ್ನು ನಿಖರವಾಗಿ ಅಧ್ಯಯನ ಮಾಡಲು, ತಾಯಿಯರಷ್ಟೇ ಅಲ್ಲದೆ ತಂದೆಯರ ಜೀವನಶೈಲಿಯನ್ನೂ ಅಧ್ಯಯನಕ್ಕೆ ಸೇರಿಸಿಕೊಳ್ಳಬೇಕು ಮತ್ತು ರಾಸಾಯನಿಕಗಳು ಭವಿಷ್ಯದಲ್ಲಿ ಹುಟ್ಟುವ ಮಕ್ಕಳ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎನ್ನುವುದನ್ನೂ ಗಣನೆಗೆ ತೆಗೆದುಕೊಳ್ಳಬೇಕು ಎನ್ನುತ್ತಾರೆ, ಸಂಶೋಧಕರಾದ ಹರ್ಟ್ಸ್ ಪೀಚಿಯೋಟೊ.

ನಮ್ಮ ಉದ್ಯೋಗದ ಸ್ಥಳಗಳು ನಮಗೆ ಅನ್ನವನ್ನು ಕೊಡುವ ಸ್ಥಳಗಳು ಹೌದು. ಆದರೆ ಇವು ನಮ್ಮ ಭವಿಷ್ಯದ ಸಂತತಿಯ ಅನಾರೋಗ್ಯಕ್ಕೂ ಕಾರಣವಾಗಬಲ್ಲ ಸ್ಥಳಗಳೂ ಆಗಬಲ್ಲವು ಎಂಬ ಆತಂಕಕಾರಿ ಸಂಗತಿ. ನಮ್ಮ ಆರೋಗ್ಯಕ್ಕೆ ಮಾರಕವಾಗಬಲ್ಲ ರಾಸಾಯನಿಕಗಳಿಂದ ನಾವು ಹೇಗೆ ದೂರವಾಗಿ ಜೀವನವನ್ನು ನಡೆಸಬಹುದು ಎಂಬುದರ ಬಗ್ಗೆ ಸಮಾಜ ಒಂದಾಗಿ ಯೋಚಿಸಬೇಕಿದೆ. ❖

ಕಿವಿಯ ಆರೋಗ್ಯಕ್ಕೆ ಕಿವಿಮಾತು

• ಡಾ. ವಿಜಯಲಕ್ಷ್ಮಿ ಪಿ.

ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ – ಈ ಎರಡೂ ಕರ್ಮಗಳನ್ನು ನಿರ್ವಹಿಸುವ ಇಂದ್ರಿಯ ಎಂದರೆ ಕಿವಿ. ಕಿವಿಯು ಶ್ರವಣೇಂದ್ರಿಯವೂ ಹೌದು, ಜೊತೆಗೆ ದೇಹದ ಸಮತೋಲನವನ್ನು ಕಾಪಾಡುವ ಅಂಗವೂ ಹೌದು. ಈ ಎರಡೂ ಕ್ರಿಯೆಗಳೂ ಸಮರ್ಪಕವಾಗಿ ನಡೆಯಲು ಆರೋಗ್ಯಕರವಾದ ಕಿವಿಯು ಅವಶ್ಯಕ. ಗಂಟಲಿನ ಅಂಗಾಂಗಗಳಿಂದಲೇ ಧ್ವನಿ ಹೊರಡುವುದು. ಆ ಹೊರಟ ಧ್ವನಿಯನ್ನು ಗ್ರಹಿಸುವುದು ಕಿವಿ. ಅಲ್ಲದೆ ಗರ್ಭದಲ್ಲಿ ಕಿವಿಯ ಭಾಗಗಳು ಉತ್ಪತ್ತಿಯಾಗುವುದೂ ಧ್ವನಿಪೆಟ್ಟಿಗೆಯ ಭಾಗಗಳಿಂದಲೇ. ಹಾಗಾಗಿ ಕೇಳುವ ಶಬ್ದಕ್ಕೂ, ಆಡುವ ಮಾತಿಗೂ ಅವಿನಾಭಾವ ಸಂಬಂಧ. ಮೂಗು, ಗಂಟಲಿಗೆ ಬರುವ ತೊಂದರೆಗಳು, ಆಗುವ ಕಫದ ಸಂಚಯವು ಕಿವಿಯ ರೋಗಕ್ಕೂ ಕಾರಣವಾಗಬಹುದು. ಎಷ್ಟೋ ಜನರಿಗೆ ನೆಗಡಿಯಾದಾಗ ಕಿವಿ ಕೇಳುವುದೂ ಮಂದವಾಗುತ್ತದೆ.

• ಇಂದ್ರಿಯಗಳ ಅತಿಯಾದ ಅಥವಾ ವಿಕೃತವಾದ ಅಥವಾ ಅತಿ ಕಡಿಮೆ ಉಪಯೋಗಗಳು ಆಯಾ ಇಂದ್ರಿಯಗಳ ರೋಗಗಳಿಗೆ ಕಾರಣವಾಗುತ್ತದೆ. ಹಾಗೆಯೇ ಅತಿಯಾದ, ಜೋರಾದ ಶಬ್ದಗಳ ನಿರಂತರ ಶ್ರವಣ, ನಿರಂತರವಾಗಿ ಕಿವಿಗೆ ಶಬ್ದಗ್ರಾಹಕಗಳನ್ನು (earphone) ಧರಿಸಿ ಅತಿ ಹತ್ತಿರದಿಂದ ಕೇಳುವುದು, ಧ್ವನಿಯನ್ನು ಜೋರಾಗಿರಿಸಿ ಕೇಳುವುದು, ವಿಕೃತವಾದ, ಅತಿ ಕರ್ಕಶವಾದ ಧ್ವನಿಗಳನ್ನು ನಿರಂತರವಾಗಿ ಆಲಿಸುವುದು, ಯಾವ ಧ್ವನಿಯನ್ನು ಕೇಳದೆ ಇರುವ ನಿರಂತರ ಏಕಾಂತವೂ ಕಿವಿ ಮತ್ತು ಮಾತಿನ ಮೇಲೆ ಪರಿಣಾಮವನ್ನು ಬೀರುತ್ತದೆ.

• ಅನೇಕ ಕಾರಣಗಳಿಂದ ಕಿವುಡುತನ ಉಂಟಾಗಬಹುದು. ಒಂದು ಹುಟ್ಟಿನಿಂದಲೇ ಬರುವ ಕಿವುಡುತನ. ಎರಡನೆಯದು ಕಾಲಾಂತರದಲ್ಲಿ ಉಂಟಾಗುವ ಕಿವುಡುತನ. ಹುಟ್ಟಿನಿಂದಲೇ ಬರುವ ಕಿವುಡುತನವು ತಂದೆ ಅಥವಾ ತಾಯಿಯ ವಂಶವಾಹಿಗಳ ವಿಕೃತಿಯಿಂದ ಬರಬಹುದು. ಗರ್ಭಿಣಿಗೆ ತಗಲುವ ಸರ್ಪಸುತ್ತು, ಕಾಮಾಲೆ, ರುಬೆಲ್ಲಾ, ಅಥವಾ ಅತಿಯಾದ ವಾಂತಿ, ಬಾಯಿ ರುಚಿಯೇ ಇಲ್ಲದೆ, ಸರಿಯಾಗಿ ಆಹಾರ ಸೇವಿಸದೆ ಪೋಷಕಾಂಶಗಳ ಕೊರತೆ ಉಂಟಾಗುವುದು, ಗರ್ಭಿಣಿಗೆ ಆಗುವ ಅಪಘಾತಗಳಿಂದ, ಪ್ರಸವಕಾಲದಲ್ಲಿ ಉಂಟಾಗುವ ತೊಂದರೆಗಳಿಂದಾಗಿ ಮಗುವಿನ ತಲೆಗೆ, ಅಥವಾ ನರಗಳಿಗೆ ಪೆಟ್ಟಾಗುವುದರಿಂದ, ಗರ್ಭಿಣಿಯು ಸೇವಿಸುವ ಕೆಲವು ತೀಕ್ಷ್ಣವಾದ ಔಷಧಗಳಿಂದ – ಹೀಗೆ ಅನೇಕ ಕಾರಣಗಳಿಂದ ಮಗುವಿನ ಇಂದ್ರಿಯಗಳ ಬೆಳವಣಿಗೆ ಕುಂಠಿತವಾಗುತ್ತದೆ. ಇದು ಕಿವಿಯ ಮತ್ತು ಕೇಳುವಿಕೆಗೆ ಸಂಬಂಧಿಸಿದ ಭಾಗಗಳಿಗೆ ಅಥವಾ ಅದಕ್ಕೆ ಸಂಬಂಧಿಸಿದ, ರಕ್ತನಾಳಗಳು ಅಥವಾ ನರಗಳ ಮೇಲೆ ಪರಿಣಾಮ ಬೀರಿದರೆ, ಅದರ ಪರಿಣಾಮ ಮಗುವಿನಲ್ಲಿ ಕಿವುಡುತನವನ್ನು ಉಂಟುಮಾಡುತ್ತದೆ.

• ಆಯುರ್ವೇದವು ಶಾರೀರಿಕವಾದ ಇಂದ್ರಿಯಗಳ ಪ್ರಾದುರ್ಭಾವ, ಬೆಳವಣಿಗೆ, ಮನಸ್ಸು ಬುದ್ಧಿಗಳೊಡನೆ ಸಂಬಂಧವನ್ನು ಬೆಳೆಸುವುದು ಇವೆಲ್ಲವೂ ಸುಮಾರು ನಾಲ್ಕರಿಂದ ಏಳನೇ ತಿಂಗಳ ಮಧ್ಯದಲ್ಲಿ ಉಂಟಾಗುತ್ತದೆ ಎಂದು ತಿಳಿಸುತ್ತದೆ. ಆದ್ದರಿಂದ ಗರ್ಭಿಣಿಯು ಇಂದ್ರಿಯಗಳ, ಮನಸ್ಸಿನ ಪ್ರಸನ್ನತೆಗೆ ಹೆಚ್ಚು ಗಮನ ಕೊಡಬೇಕು. ಆಕೆಯ ಪ್ರತಿಯೊಂದು ಪ್ರವೃತ್ತಿಯು ಮಗುವಿನ ಇಂದ್ರಿಯ, ಮನಸ್ಸು, ಬುದ್ಧಿಯ ಮೇಲೆ ಪರಿಣಾಮ ಬಿರುತ್ತದೆ. ಆ ಸಮಯದಲ್ಲಿ ಗರ್ಭವು ಕೇಳುವ ಶಬ್ದಗಳು ಮಗುವಿನ ಕಿವಿಯ ಬೆಳವಣಿಗೆ ಮತ್ತು ನರಗಳ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಈ ಸಮಯದಲ್ಲಿ ಗರ್ಭಿಣಿಯರು ಶಬ್ದಗ್ರಾಹಕಗಳನ್ನು ಧರಿಸಿ ಇಡೀ ದಿನ ಶಬ್ದಗಳನ್ನು ಕೇಳುವುದು, ಎತ್ತರದ ಧ್ವನಿಯ ಶಬ್ದಗಳನ್ನು ನಿರಂತರವಾಗಿ ಆಲಿಸುವುದು, ಕಿರುಚಿ ಮಾತನಾಡುವುದು, ಮಿತಿಯಿಲ್ಲದ, ಅತಿಯಾದ ಮಾತು, ವಿಕೃತವಾದ ಧ್ವನಿಗಳನ್ನು ಆಲಿಸುವುದು, ಇಂತಹ ಮಾತು ಮತ್ತು ಧ್ವನಿಯ ಏರಿಳಿತಗಳು ಮಗುವಿನ ಇಂದ್ರಿಯಗಳ ಬೆಳವಣಿಗೆಯ ಮೇಲೂ ಪರಿಣಾಮ ಬೀರುತ್ತವೆ. ಗರ್ಭಿಣಿಯು ಸ್ವೀಕರಿಸುವ ವಿರುದ್ಧಾಹಾರ, ವಿಕೃತಾಹಾರಗಳು ಮಗುವಿನ ಇಂದ್ರಿಯಗಳ ಬೆಳವಣಿಗೆಯ ಮೇಲೆ ಪರಿಣಾಮ ಬಿರುತ್ತವೆ. ಆದ್ದರಿಂದ ಸರಿಯಾದ ರೀತಿಯಲ್ಲಿ ಗರ್ಭಿಣಿಯ ಆರೈಕೆ ಅತ್ಯಗತ್ಯ.

• ಹಿರಿಯರಲ್ಲಿ ವಯಸ್ಸಿನ ಪರಿಣಾಮವಾಗಿ ಕೇಳುವ ಶಕ್ತಿಯು ಮಂದವಾಗುತ್ತದೆ. ವರ್ಷಾನುಗಟ್ಟಲೆ ನೆಗಡಿಯಿಂದ ಬಳಲುತ್ತಿದ್ದರೆ, ವಿಪರೀತವಾಗಿ ನೀರಿನಲ್ಲಿ ಆಡುತ್ತಿದ್ದರೆ, (ಈಜು ಮೊದಲಾದ ಜಲಕ್ರೀಡೆಗಳು) ಆಗಾಗ ಕಿವಿಯಲ್ಲಿ ನವೆಯಾಗುವುದು, ಸೋರುವುದು ಇದ್ದರೆ, ದೇಹಕ್ಕೆ ಒಗ್ಗದ ಆಹಾರಗಳನ್ನು ನಿರಂತರವಾಗಿ ಸೇವಿಸುತ್ತಿದ್ದರೆ, ಜೋರಾದ ಶಬ್ದಗಳನ್ನು ನಿರಂತರವಾಗಿ ಕೇಳುವುದರಿಂದ, ಕಿವಿಯಲ್ಲಿ ವಿಪರೀತ ಗುಗ್ಗೆ ಸೇರುವುದರಿಂದ, ಕಿವಿಯಲ್ಲಿ ಕೀವು ಗುಳ್ಳೆ ಆಗುವುದರಿಂದ, ಅರೆತಲೆನೋವಿನಿಂದ ಬಹಳ ಕಾಲ ಬಳಲುತ್ತಿದ್ದರೆ, ಗಂಟಲದಡಿಕೆ ರೋಗ ಬಂದಾಗ, ಸಿಡುಬು, ದಡಾರ ಮುಂತಾದ ರೋಗಗಳು ಬಂದಾಗ, ಡಾಕ್ಟರರ ಸಲಹೆ ಇಲ್ಲದೆ, ರಕ್ತಕ್ಕೆ ಸಂಬಂಧಿಸಿದ, ಅಥವಾ ನೋವಿನ ಔಷಧಗಳನ್ನು ನಿರಂತರವಾಗಿ ಬಳಸುತ್ತಿದ್ದರೆ, ಕಫ, ಪಿತ್ತ ಸಂಬಂಧಿ ರೋಗಗಳಲ್ಲಿ ರಕ್ತ ಹಾಳಾಗುತ್ತಿದ್ದರೆ, ಅಜೀರ್ಣ, ಗ್ರಹಣೀರೋಗ, ಅಮಶಂಕೆ ಇವುಗಳ ಪರಿಣಾಮ ಕಿವಿಯ ಭಾಗಗಳಿಗೆ ಆಗುತ್ತಿದ್ದರೆ, ಕಿವಿಯ ಶ್ರವಣಶಕ್ತಿ ಮಂದವಾಗುತ್ತದೆ; ಅಲ್ಲದೆ ಒಳಕಿವಿಯಲ್ಲಿ ಅನೇಕ ರೋಗಗಳು ಉತ್ಪನ್ನವಾಗುತ್ತವೆ. ಕಿವಿಯ ಶಬ್ದಗ್ರಾಹಕ ನರಗಳ ವಿಕೃತಿಯಿಂದಲೂ ಕಿವುಡುತನ ಬರಬಹುದು. ಇಂತಹ ಸಂದರ್ಭದಲ್ಲಿ ತಲೆ ಸುತ್ತುವುದು, ತಲೆನೋವು, ದೇಹದ ಸಮತೋಲನದ ವ್ಯತ್ಯಾಸ – ಹೀಗೆ ಬೇರೆ ಬೇರೆ ತೊಂದರೆಗಳೂ ಉಂಟಾಗಬಹುದು.

ಯಾವುದೇ ಕಾರಣದಿಂದ ಕಿವಿ ಕೇಳಿಸುವಿಕೆಯಲ್ಲಿ ವ್ಯತ್ಯಾಸವಾದರೆ ಕೂಡಲೇ ವೈದ್ಯರನ್ನು ಭೇಟಿಯಾಗಿ ಚಿಕಿತ್ಸೆ ಪಡೆಯಬೇಕು. ಇದರಿಂದ ಕಿವುಡಾಗುವುದನ್ನು ತಡೆಯಬಹುದು. ಕಿವಿ ಮತ್ತು ಕಿವಿಯ ಇತರೆ ಭಾಗಗಳಲ್ಲಿ ತೊಂದರೆಯಾಗುವುದನ್ನು ತಪ್ಪಿಸಲು ನಿತ್ಯವೂ ಶರೀರಕ್ಕೆ ಎಣ್ಣೆ ಹಚ್ಚಿ ಸ್ನಾನ ಮಾಡಬೇಕು ಎಂದು ಆಯುರ್ವೇದ ತಿಳಿಸುತ್ತದೆ. ಕಡೇಪಕ್ಷ ತಲೆಗೆ, ಪಾದಕ್ಕೆ, ಮತ್ತು ಕಿವಿಗೆ ನಿತ್ಯವೂ ಎಣ್ಣೆ ಹಚ್ಚಬೇಕು. ಅಜೀರ್ಣ, ಅಮಶಂಕೆ, ಅತಂಕದಿಂದ ಉಂಟಾಗುವ ಅತಿಸಾರ, ಈ ಲಕ್ಷಣಗಳಿದ್ದರೆ ಕೂಡಲೇ ವೈದ್ಯರನ್ನು ಕಂಡು ಸರಿಯಾ ಚಿಕಿತ್ಸೆಯನ್ನು ಪಡೆಯಬೇಕು. ಮಕ್ಕಳಿಗೆ ಬರುವ ಜ್ವರ, ಬೇಧಿ, ನೆಗಡಿ, ಅಜೀರ್ಣ ಇವುಗಳು ಹೆಚ್ಚಾಗದಂತೆ, ಪದೇ ಪದೇ ಬರದಂತೆ ಜಾಗ್ರತೆಯನ್ನು ವಹಿಸಬೇಕು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

MATHS

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.3

2) ಕೆಳಗಿನ ಸಮಸ್ಯೆಗಳಿಗೆ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ರಚಿಸಿರಿ ಮತ್ತು ವರ್ಜಿಸುವ ವಿಧಾನದಿಂದ ಅವುಗಳಿಗೆ ಪರಿಹಾರಗಳನ್ನು (ಇರುವುದಾದರೆ) ಕಂಡುಹಿಡಿಯಿರಿ.

(ii) ಐದು ವರ್ಷಗಳ ಹಿಂದೆ ನೂರಿಯ ವಯಸ್ಸು ಸೋನುವಿನ ವಯಸ್ಸಿನ ಮೂರು ಪಟ್ಟು ಆಗಿತ್ತು. ಹತ್ತು ವರ್ಷಗಳ ಬಳಿಕ ನೂರಿಯ ವಯಸ್ಸು ಸೋನುವಿನ ವಯಸ್ಸಿನ ಎರಡು ಪಟ್ಟು ಆಗುತ್ತದೆ. ಹಾಗಾದರೆ, ನೂರಿ ಮತ್ತು ಸೋನುವಿನ ಈಗಿನ ವಯಸ್ಸೆಷ್ಟು?

ಪರಿಹಾರ:– ನೂರಿಯ ಈಗಿನ ವಯಸ್ಸು x ವರ್ಷಗಳು ಮತ್ತು ಸೋನುವಿನ ಈಗಿನ ವಯಸ್ಸು y ಆಗಿರಲಿ

* ಐದು ವರ್ಷಗಳ ಹಿಂದೆ ನೂರಿಯ ವಯಸ್ಸು $=(x-5)$ ವರ್ಷಗಳು ಮತ್ತು ಸೋನುವಿನ ವಯಸ್ಸು $= (y-5)$

$x - 5 = 3(y - 5)$
$x - 3y = -10$
$x - 3y+10 = 0$ ……………………………(1)

* ಹತ್ತು ವರ್ಷಗಳ ನಂತರೆ ನೂರಿಯ ವಯಸ್ಸು $= (x + 10)$ ವರ್ಷಗಳು ಮತ್ತು ಸೋನುವಿನ ವಯಸ್ಸು $= (y + 10)$

ಸಮಸ್ಯೆಯ ಪ್ರಕಾರ

$x + 10 = 2(y +10)$
$x - 2y = 10$
$x - 2y -10 = 0$ ……………………………(2)

ಸಮೀಕರಣ (1) ರಿಂದ ಸಮೀಕರಣ (2) ಕಳೆದಾಗ, ನಾವು ಕೆಳಗಿನದನ್ನು ಪಡೆಯುತ್ತೇವೆ

$y = 20$ ……………….(3)

$y = 20$ ಮೌಲ್ಯವನ್ನು ಸಮೀಕರಣ (1)ರಲ್ಲಿ ಹಾಕಿದಾಗ ನಾವು ಕೆಳಗಿನದ್ದನ್ನು ಪಡೆಯುತ್ತೇವೆ

$x - 3.20 = -10$
$x - 60 = -10$
$x = 50$

ನೂರಿಯ ಈಗಿನ ವಯಸ್ಸು 50 ವರ್ಷಗಳು ಮತ್ತು ಸೋನುವಿನ ಈಗಿನ ವಯಸ್ಸು 20 ವರ್ಷಗಳು

(iii) ಎರಡಂಕೆಯ ಒಂದು ಸಂಖ್ಯೆಯ ಅಂಕೆಗಳ ಮೊತ್ತ 9. ಇದರಲ್ಲಿರುವ ಅಂಕೆಗಳ ಕ್ರಮವನ್ನು ಅದಲು ಬದಲು ಮಾಡಿದಾಗ ಸಿಗುವ ಸಂಖ್ಯೆಯನ್ನು, ಇಮ್ಮಡಿಗೊಳಿಸಿದರೆ, ಅದು ಮೊದಲನೇ ಸಂಖ್ಯೆಯ ಒಂಭತ್ತರಷ್ಟಕ್ಕೆ ಸಮವಾಗುತ್ತದೆ. ಆ ಸಂಖ್ಯೆಯನ್ನು ಕಂಡುಹಿಡಿಯಿರಿ.

ಪರಿಹಾರ:– ಸಂಖ್ಯೆಯ ಹತ್ತರ ಸ್ಥಾನದಲ್ಲಿರುವ ಅಂಕಿ x ಮತ್ತು ಬಿಡಿ ಸ್ಥಾನದಲ್ಲಿರುವ ಅಂಕಿ y ಆಗಿರಲಿ

ಸಂಖ್ಯೆಯು $10x + y$ ಆಗಿದೆ

ಹಾಗಾದಾರೆ ಸಂಖ್ಯೆಯ ಅಂಕೆಗಳ ಮೊತ್ತ $x + y = 9$

ಅಂಕಿಗಳನ್ನು ಅದಲುಬದಲು ಮಾಡಿದರೆ ಸಂಖ್ಯೆಯು $10y+ x$

ದತ್ತ $x + y = 9$…………..(1)

$9(10x + y) = 2(10y + x)$
$90x + 9y = 20y + 2x$
$90x - 2x + 9y - 20y = 0$
$88x - 11y = 0$
$8x - y = 0$………(2)

ಸಮೀಕರಣ(1) ಮತ್ತು (2) ಕೂಡಿದಾಗ

$x + y = 9$
$8x - y = 0$
$9x = 9$

$x = 9/9$
$x = 1$

xನ ಬೆಲೆಯನ್ನು ಸಮೀಕರಣ (1)ರಲ್ಲಿ ಆದೇಶಿಸಿದಾಗ

$x + y = 9$
$1 + y = 9$
$y = 9-1$
$y = 8$

ಆದ್ದರಿಂದ ಸಂಖ್ಯೆಯು $10x + y = 10(1) + 8 = 10+8 = 18$

(iv) ₹ 2000 ವನ್ನು ಹಿಂಪಡೆಯಲು ಮೀನಾ ಬ್ಯಾಂಕಿಗೆ ಹೋದಳು. ಅವಳು ನಗದು ಗುಮಾಸ್ತರಲ್ಲಿ ₹ 50 ಮತ್ತು ₹ 100 ರ ನೋಟುಗಳನ್ನು ಮಾತ್ರ ನೀಡುವಂತೆ ಹೇಳಿದಳು. ಮೀನಾಳಿಗೆ ಒಟ್ಟು 25 ನೋಟುಗಳು ದೊರೆತವು. ₹ 50 ರ ಮತ್ತು ₹ 100 ರ ಎಷ್ಟೆಷ್ಟು ನೋಟುಗಳನ್ನು ಅವಳು ಪಡೆದಳು ಎಂಬುದನ್ನು ಕಂಡುಹಿಡಿಯಿರಿ.

ಪರಿಹಾರ:– ರೂ. 50ರ ನೋಟಗಳ ಸಂಖ್ಯೆ x ಮತ್ತು ರೂ 100ರ ನೋಟುಗಳ ಸಂಖ್ಯೆ y ಆಗಿರಲಿ

ದತ್ತ ಮೀನಾಳಿಗೆ ಒಟ್ಟು 25 ನೋಟುಗಳು ದೊರೆತವು

$x + y = 25$……….(1)

ಮೀನಾ ರೂ 2000 ಹಿಂಪಡೆದಳು

$50x + 100y = 2000$
$50(x + 2y) = 2000$
$(x + 2y) = 2000/50$
$(x + 2y) = 40$ ………..(2)

ಸಮೀಕರಣ (1)ರಿಂದ ಸಮೀಕರಣ (2) ನ್ನು ಕಳೆದಾಗ

$x + y = 25$
$x + 2y = 40$
$-y = -15$

$y = 15$

ಆದ್ದರಿಂದ ಮೀನಾ ರೂ 50ರ 10 ನೋಟುಗಳು ಮತ್ತು ರೂ 100ರ 15 ನೋಟುಗಳನ್ನು ಪಡೆದಳು

(V) ಒಂದು ಎರವಲು ಗ್ರಂಥಾಲಯದಲ್ಲಿ ಮೊದಲ ಮೂರು ದಿನಕ್ಕೆ ಒಂದು ನಿಗದಿತ ಶುಲ್ಕವಿರುತ್ತದೆ. ಆ ಬಳಿಕದ ಪ್ರತಿಯೊಂದು ದಿನಕ್ಕೂ ಒಂದು ಹೆಚ್ಚುವರಿ ಶುಲ್ಕವಿರುತ್ತದೆ. ಪುಸ್ತಕವನ್ನು ಏಳು ದಿನ ತನ್ನಲ್ಲಿ ಇರಿಸಿಕೊಂಡದ್ದಕ್ಕಾಗಿ ಸರಿತಾ ₹ 27 ನ್ನು ಪಾವತಿಸಿದರೆ, ಪುಸ್ತಕವನ್ನು 5 ದಿನ ಇರಿಸಿಕೊಂಡದ್ದಕ್ಕಾಗಿ ಸೂಸಿ ₹ 21 ನ್ನು ಪಾವತಿಸಿದಳು. ನಿಗದಿತ ಶುಲ್ಕ ಮತ್ತು ಪ್ರತಿಯೊಂದು ಹೆಚ್ಚುವರಿ ದಿನದ ಶುಲ್ಕವನ್ನು ಕಂಡುಹಿಡಿಯಿರಿ

ಪರಿಹಾರ:– ಮೊದಲ ಮೂರು ದಿನಕ್ಕೆ ನಿಗದಿತ ಶುಲ್ಕ x ಮತ್ತು ಪ್ರತಿಯೊಂದು ದಿನಕ್ಕೂ ಹೆಚ್ಚುವರಿ ಶುಲ್ಕ y ಆಗಿರಲಿ

ಪುಸ್ತಕವನ್ನು ಏಳು ದಿನ ತನ್ನಲ್ಲಿ ಇರಿಸಿಕೊಂಡದಕ್ಕಾಗಿ ಸರಿತಾ ಪಾವತಿಸಿದ ಹಣ ರೂ 27

$x + 4y = 27$…………..(1)

ಪುಸ್ತಕವನ್ನು ಐದು ದಿನ ಇರಿಸಿಕೊಂಡದ್ದಕ್ಕಾಗಿ ಸೂಸಿ ಪಾವತಿಸಿದ ಹಣ ರೂ 21

$x + 2y = 21$…………..(1)

ಸಮೀಕರಣ(2)ನ್ನು ಸಮೀಕರಣ(1) ರಿಂದ ಕಳೆದಾಗ

$y = 3$

(ಮುಂದುವರಿಯುವುದು)

DIFFERENTIABILITY

30) If $y=(x^2+a^2)^6$; show that

$$(x^2+a^2)\frac{d^2y}{dx^2}-10x\frac{dy}{dx}-12y=0$$

Soln: *(……Contd)*

$$\Rightarrow (x^2+a^2)\frac{d^2y}{dx^2}+\frac{dy}{dx}.2x$$

$$=12\left(x.\frac{dy}{dx}+y.1\right)=12x\frac{dy}{dx}+12y$$

$$\Rightarrow (x^2+a^2)\frac{d^2y}{dx^2}+2x\frac{dy}{dx}-12x\frac{dy}{dx}-12y=0$$

$$(x^2+a^2)\frac{d^2y}{dx^2}-10x\frac{dy}{dx}-12y=0;\text{ hence proved.}$$

31) If $x=a\left[\text{Cos}t+\log(\tan t/2)\right]$ and $y=a\text{Sin}t$. Find the value of $\frac{d^2y}{dx^2}$ at $t=\frac{\pi}{4}$.

Soln: – Given, $x=a\left[\text{Cos}t+\log(\tan t/2)\right]$

$$\frac{dx}{dt}=a\left(-\text{Sin}t+\frac{1}{\tan t/2}.\text{Sec}^2 t/2.\frac{1}{2}\right)$$

$$=a\left(-\text{Sin}t+\frac{1}{\frac{\text{Sin}\, t/2}{\text{Cos}\, t/2}}.\frac{1}{\text{Cos}^2 t/2}.\frac{1}{2}\right)$$

$$=a\left(-\text{Sin}t+\frac{1}{2\text{Sin}\,t/2\,\text{Cos}\,t/2}\right)$$

$$=a\left(-\text{Sin}t+\frac{1}{\text{Sin}\,t}\right)=a\left(\frac{-\text{Sin}^2t+1}{\text{Sin}\,t}\right)$$

$$=a\left(\frac{1-\text{Sin}^2t}{\text{Sin}\,t}\right)=\frac{a\,\text{Cos}^2t}{\text{Sin}\,t}$$

$$(\because 1-\text{Sin}^2t=\text{Cos}^2t)$$

Now consider $y=a\,\text{Sin}\,t$

$$\therefore \frac{dy}{dx}=\frac{a\,\text{Cos}t}{a.\frac{\text{Cos}^2t}{\text{Sin}t}}=\frac{\text{Sin}\,t}{\text{Cos}t}=\tan t$$

$$\therefore \frac{d^2y}{dx^2}=\frac{d}{dx}(\tan t)$$

$$=\text{Sec}^2t.\frac{dt}{dx}\frac{1}{\frac{a\,\text{Cos}^2t}{\text{Sin}t}}=\frac{\text{Sin}\,t}{a\,\text{Cos}^4t}$$

$$\therefore \left(\frac{d^2y}{dx^2}\right)_{t=\frac{\pi}{4}}=\frac{\text{Sin}\frac{\pi}{4}}{a\,\text{Cos}^4\frac{\pi}{4}}=\frac{2\sqrt{2}}{a}.$$

32) If $y=x^{x^{x^{\cdot^{\cdot^{\infty}}}}}$ find $\frac{dy}{dx}$

Soln: - $y=x^{x^{x^{\cdot^{\cdot^{\infty}}}}}$ i.e., $y=x^y$

Taking logarithm on both sides,

$$\log_e y=\log_e(x^y)=y\log_e x$$

$$\frac{dy}{dx}(\log_e y)=\frac{d}{dx}(y\log_e x)$$

$$\frac{1}{y}.\frac{dy}{dx}=y.\frac{1}{x}+\log x.\frac{dy}{dx}$$

$$\Rightarrow \frac{1}{y}.\frac{dy}{dx}-\log x.\frac{dy}{dx}=y.\frac{1}{x}$$

$$\Rightarrow \frac{dy}{dx}\left(\frac{1}{y}-\log x\right)=\frac{y}{x}$$

$$\frac{dy}{dx}\left(\frac{1-y\log x}{y}\right)=\frac{y}{x}$$

$$\therefore \frac{dy}{dx}=\frac{y^2}{x(1-y\log x)}$$

Exponential Function

If a is positive real and $a \neq 1$, then the function that associates each x of R to a^x is called genera exponential function with base a.

Let $f(x)=a^x$; $(a>0, a\neq 1)$; $D_f = R$ and $R_f=(0,\infty)$



Graph of $f(x) = a^x$ for $a > 1$ and $a < 1$ are shown above. a^x increase if $a > 1$ and decreases if $a < 1$.

Note: a^x increase if $a > 1$ and decreases if $a < 1$.

Case 1: $a > 1$

$$\text{Note that, } f(x)=a^x\begin{cases}<1 \text{ for } x<0\\ =1 \text{ for } x=0\\ >1 \text{ for } x>0\end{cases}$$

Case 2: $0 < a < 1$

$$f(x)=a^x\begin{cases}>1 \text{ for } x<0\\ =1 \text{ for } x=0\\ <1 \text{ for } x>0\end{cases}$$

Note:

1. Exponential function with base 10 is called Common Exponential Function.
2. Exponential function with base e which is sum of the series
$$1+\frac{1}{\lfloor 1}+\frac{1}{\lfloor 2}+\frac{1}{\lfloor 3}+......\infty.$$
And lies between 2 and 3 is called Natural Exponential Function.

The graph of $f(x) = e^x$ is identical to $f(x) = a^x$ for $a > 1$

The graph of $f(x) = e^{-x}$ is identical to $f(x) = a^x$ for $0 < a < 1$ because

$$f(x)=e^{-x}=\left(\frac{1}{e}\right)^x \text{ and } \frac{1}{e}<1$$

Logarithmic Function (General)

The function defined by $f(x) = \log_a x$, *(Contd)*

ಜನಧನ: ರಾಜ್ಯದಲ್ಲಿ 54 ಲಕ್ಷ ಖಾತೆ ನಿಷ್ಕ್ರಿಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಮಂತ್ರಿ ಜನ ಧನ ಯೋಜನೆಯಡಿ ಕರ್ನಾಟಕದಲ್ಲಿ ತೆರೆಯಲಾಗಿದ್ದ ₹2.08 ಕೋಟಿ ಖಾತೆಗಳ ಪೈಕಿ 54 ಲಕ್ಷ ಖಾತೆಗಳು ನಿಷ್ಕ್ರಿಯ ಆಗಿವೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಲೋಕಸಭೆಗೆ ಸೋಮವಾರ ತಿಳಿಸಿದೆ.

ದೇಶದಲ್ಲಿ ಜುಲೈ 31ರವರೆಗೆ ಒಟ್ಟು 56.04 ಕೋಟಿ ಜನಧನ ಖಾತೆಗಳನ್ನು ತೆರೆಯಲಾಗಿದೆ. ಈ ಪೈಕಿ, ₹13.04 ಲಕ್ಷ ಖಾತೆಗಳು ನಿಷ್ಕ್ರಿಯವಾಗಿವೆ. ಭಾರತೀಯ ರಿಸರ್ವ್ ಬ್ಯಾಂಕ್ 2009ರಲ್ಲಿ ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ, ಎರಡು ವರ್ಷಗಳಿಗಿಂತ ಹೆಚ್ಚು ಕಾಲ ಖಾತೆಯಲ್ಲಿ ಯಾವುದೇ ವಹಿವಾಟು ನಡೆಯದಿದ್ದರೆ ಉಳಿತಾಯ ಖಾತೆಯನ್ನು ನಿಷ್ಕ್ರಿಯ ಎಂದು ಪರಿಗಣಿಸಬೇಕು ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಸದನಕ್ಕೆ ತಿಳಿಸಿದರು.

ನೇರ ನಗದು ವರ್ಗಾವಣೆಯಂತಹ ಸರ್ಕಾರದ ವಿವಿಧ ಯೋಜನೆಗಳ ಮೊತ್ತವನ್ನು ಜನ ಧನ ಖಾತೆ ಸೇರಿದಂತೆ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತದೆ. ಈ ಮೊತ್ತವನ್ನು ನಿಷ್ಕ್ರಿಯ ಖಾತೆಗಳಿಗೂ ವರ್ಗಾಯಿಸಲಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

ಖಾತೆ ನಿಷ್ಕ್ರಿಯಗೊಳ್ಳುವ ಬಗ್ಗೆ ಬ್ಯಾಂಕುಗಳು ಖಾತೆದಾರರಿಗೆ ಪತ್ರಗಳು, ಇಮೇಲ್ ಅಥವಾ ಎಸ್‌ಎಂಎಸ್ ಮೂಲಕ ಲಿಖಿತವಾಗಿ ಮಾಹಿತಿ ನೀಡುತ್ತವೆ ಎಂದರು.

ರಾಯಚೂರಿನಲ್ಲಿ ನರಿ ದಾಳಿ: ನಾಲ್ವರಿಗೆ ಗಾಯ

ರಾಯಚೂರು: ಇಲ್ಲಿನ ಶ್ರೀರಾಮನಗರ ಬಡಾವಣೆಗೆ ಆಹಾರ ಅರಸಿ ಬಂದಿದ್ದ ನರಿಯೊಂದು ಬಾಲಕಿ, ಮಹಿಳೆ, ಇಬ್ಬರು ವೃದ್ಧರಿಗೆ ಕಚ್ಚಿದೆ. ಗಾಯಾಳುಗಳನ್ನು ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿದ್ಯಾ ಭಾರತಿ ಶಾಲೆ ಹತ್ತಿರದ ಕೋದಂಡರಾಮ ದೇವಸ್ಥಾನ ಸುತ್ತಲಿನ ಪ್ರದೇಶದಲ್ಲಿ ನರಿ ಓಡಾಡಿಕೊಂಡಿತ್ತು.

ಅರಣ್ಯ ಇಲಾಖೆ ಕಾರ್ಯಾಚರಣೆ ಆರಂಭಿಸಿದ ನಂತರ ತಪ್ಪಿಸಿಕೊಂಡು ರೈಲ್ವೆ ಹಳಿಯ ಕಡೆಯಿಂದ ನಿಜಲಿಂಗಪ್ಪ ಕಾಲೊನಿಯ ಶಿವಶಕ್ತಿ ಅಪಾರ್ಟ್‌ಮೆಂಟ್ ಒಳಗಡೆ ಪ್ರವೇಶಿಸಿತು. ಅರಣ್ಯ ಇಲಾಖೆ ಸಿಬ್ಬಂದಿ ಬಲೆ ಬೀಸಿ ನರಿಯನ್ನು ಹಿಡಿದರು.

ಚಿಟಿಕೆ ಸುದ್ದಿ

ರಂದೀಪ್ ವರ್ಗಾವಣೆ

ಬೆಂಗಳೂರು: ಐಎಎಸ್ ಅಧಿಕಾರಿ ರಂದೀಪ್ ಅವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿದೆ.

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಹುದ್ದೆಯನ್ನೂ ರಂದೀಪ್ ಅವರಿಗೆ ಹೆಚ್ಚುವರಿಯಾಗಿ ವಹಿಸಲಾಗಿದೆ. ಬಾಗಲಕೋಟೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಪ್ರಧಾನ ವ್ಯವಸ್ಥಾಪಕರಾಗಿದ್ದ ಕೆ.ಎಂ. ಜಾನಕಿ ಅವರನ್ನು ಬೆಳಗಾವಿ ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತರ ಹುದ್ದೆಗೆ ವರ್ಗಾಯಿಸಲಾಗಿದೆ.

126 ವಚನ ಹೇಳಿದ ಫಿಜಾ ಅಂಜುಮ್

ಹಾನಗಲ್ (ಹಾವೇರಿ ಜಿಲ್ಲೆ): ತಾಲ್ಲೂಕಿನ ಬೊಮ್ಮನಹಳ್ಳಿಯ ಗುರುಪಾದೇಶ್ವರ ವಿರಕ್ತಮಠದಲ್ಲಿ ನಡೆದ ತಾಲ್ಲೂಕು ಮಟ್ಟದ ವಚನ ಕಂಠಪಾಠ ಸ್ಪರ್ಧೆ ಪ್ರೌಢಶಾಲೆ ವಿಭಾಗದಲ್ಲಿ ವಿದ್ಯಾರ್ಥಿನಿ ಫಿಜಾ ಅಂಜುಮ್ ಬುಕ್ಕಿಟಗಾರ ಪ್ರಥಮ ಸ್ಥಾನ ಗಳಿಸಿದ್ದಾರೆ.

ಫಿಜಾಅಂಜುಂ ಬುಕ್ಕಿಟಗಾರ

ಪ್ರಭಾಕರ ನೆಲವಿಗಿ ಪ್ರೌಢಶಾಲೆಯ ವಿದ್ಯಾರ್ಥಿನಿಯಾದ ಫಿಜಾ, 152 ವಚನ ಪ್ರಸ್ತುತಪಡಿಸಿದರು. ಈ ಪೈಕಿ 126 ವಚನಗಳನ್ನು ತಪ್ಪಿಲ್ಲದೇ ಹೇಳಿದ್ದಾರೆ. ವಿಜೇತೆಗೆ ₹5 ಸಾವಿರ ನಗದು ನೀಡಲಾಯಿತು.

ವೈದ್ಯಕೀಯ ಛಾಯ್ಸ್ ನಮೂದು: ಇಂದು ಕೊನೆ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿರುವವರಿಗೆ ಛಾಯ್ಸ್ ದಾಖಲಿಸಲು ಮತ್ತು ಶುಲ್ಕ ಪಾವತಿಸಲು ಆ.19ರಂದು ಮಧ್ಯಾಹ್ನ 3ರವರೆಗೆ ಅವಕಾಶ ನೀಡಲಾಗಿದೆ.

ಶುಲ್ಕ ಪಾವತಿ ನಂತರ ಸೀಟು ಖಾತರಿ ಚೀಟಿ ಡೌನ್‌ಲೋಡ್‌ಕೊಂಡು ಅಂದು ಸಂಜೆ 5.30ರ ಒಳಗೆ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು. ಇದುವರೆಗೂ ಯಾವುದೇ ಛಾಯ್ಸ್ ನಮೂದಿಸದವರು ಹಾಗೂ ಶುಲ್ಕ ಪಾವತಿಸದವರು ಅವಕಾಶ ಬಳಸಿಕೊಳ್ಳಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಛಾಯ್ಸ್ ನಮೂದಿಸದ ಹಾಗೂ ಶುಲ್ಕ ಪಾವತಿ ಮಾಡದಿರುವವರ ಸೀಟುಗಳನ್ನು ರದ್ದುಪಡಿಸಿ, ಆ ಸೀಟುಗಳನ್ನು 2ನೇ ಸುತ್ತಿನ ಸೀಟು ಹಂಚಿಕೆಗೆ ಸೇರಿಸಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ 'ಶಕ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಕ್ತಿ' ಯೋಜನೆಯಡಿ ಸಾರಿಗೆ ನಿಗಮಗಳ ಬಸ್‌ಗಳಲ್ಲಿ 500 ಕೋಟಿ ಬಾರಿ ಮಹಿಳೆಯರು ಪ್ರಯಾಣಿಸಿರುವುದು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಕೆಆರ್‌ಟಿಸಿ, ಕೆಕೆಆರ್‌ಟಿಸಿ ಆಡಳಿತ ಮಂಡಳಿ, ಅಧಿಕಾರಿಗಳು ಮತ್ತು ಸಿಬ್ಬಂದಿಯ ಪರಿಶ್ರಮ, ಪ್ರಾಮಾಣಿಕತೆ ಇದಕ್ಕೆ ಕಾರಣ. ಶಕ್ತಿ ಯೋಜನೆಯು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮಹಿಳೆಯರನ್ನು ಸಬಲರನ್ನಾಗಿಸುತ್ತದೆ ಎಂಬ ಕಾರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ಯೋಜನೆ ಜಾರಿಗೊಳಿಸಿದ್ದರು ಎಂದು ಹೇಳಿದ್ದಾರೆ.

ಎರಡು ವರ್ಷಗಳಲ್ಲಿ 5,800 ಹೊಸ ಬಸ್‌ಗಳ ಸೇರ್ಪಡೆ, 10,000 ಸಿಬ್ಬಂದಿ ನೇಮಕ, ಸಾಲ ಪಾವತಿಸಲು ಸರ್ಕಾರದಿಂದ ₹2,000 ಕೋಟಿ ಸಹಾಯ, ಸಾರಿಗೆ ಸಂಸ್ಥೆಗಳ ಪ್ರಯಾಣಿಕರ ಸಂಖ್ಯೆಯಲ್ಲಿ ಹೆಚ್ಚಳ ಸೇರಿದಂತೆ ಅನೇಕ ಬದಲಾವಣೆಗಳು ಆಗಿವೆ ಎಂದಿದ್ದಾರೆ.

ಎರಡು ಪ್ರಶಸ್ತಿ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕೈಗೊಂಡಿರುವ ಅತ್ಯುತ್ತಮ ನೇಮಕಾತಿ ಉಪಕ್ರಮಗಳಿಗಾಗಿ ಎರಡು ಪ್ರಶಸ್ತಿಗಳು ಬಂದಿವೆ. 'ಅವಾರ್ಡ್ ಫಾರ್ ಇನ್‌ಸ್ಟಿಟ್ಯೂಷನ್ ಬಿಲ್ಡಿಂಗ್', 'ಬೆಸ್ಟ್ ಇನ್‌ಕ್ಲೂಷನ್ ರಿಕ್ರೂಟ್‌ಮೆಂಟ್ ಪ್ರೋಗ್ರಾಂ' ಪ್ರಶಸ್ತಿಗಳನ್ನು ಸಿಂಗಪುರದಲ್ಲಿ ನಡೆದ ಸಮಾರಂಭದಲ್ಲಿ ಸ್ವೀಕರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ (ವಾಣಿಜ್ಯ) ಇಲಾಖೆ, 2ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಕೆ..ಹೆಚ್.ರಸ್ತೆ, ಬೆಂಗಳೂರು-560027 ದೂರವಾಣಿ ಸಂಖ್ಯೆ: 080 22537575
ವೆಬ್‌ಸೈಟ್ : www.mybmtc.com ಇ-ಮೇಲ್ : ctmc@mybmtc.com
ಸಂಖ್ಯೆ:ಬೆಂಮಸಾಸಂ/ಕೇಕ/ಸಂ/ವಾ/1890/2162/2025-26 ದಿನಾಂಕ:16.08.2025.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-21/2025-26 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೆಂಗೇರಿ ಟಿಟಿಎಂಸಿ ಬಸ್ ನಿಲ್ದಾಣದ ವಾಣಿಜ್ಯ/ಕಛೇರಿ ಸ್ಥಳ, 2ನೇ ಮಹಡಿ ಮತ್ತು ಟೆರೇಸ್ ಜಾಗಕ್ಕೆ ಮಾಸಿಕ ಪರವಾನಗಿ ಶುಲ್ಕದ ಆಧಾರದ ಮೇಲೆ ಪರವಾನಗಿದಾರರ ಆಯ್ಕೆಗಾಗಿ ಆಸಕ್ತ ವ್ಯಕ್ತಿ/ಏಜೆನ್ಸಿ/ಕಂಪನಿಗಳಿಂದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಟೆಂಡರ್ ಪ್ರಕಟಿಸಿ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಪೂರ್ವ ಸಭೆಯ ದಿನಾಂಕ	20.08.2025 ರಂದು 11.45 ಗಂಟೆಗೆ	ಸ್ಥಳ: ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) ರವರ ಕೊಠಡಿ, 2ನೇ ಮಹಡಿ, ಕೇಂದ್ರ ಕಛೇರಿ, ಬೆಂಮಸಾಸಂಸ್ಥೆ, ಶಾಂತಿನಗರ, ಬೆಂಗಳೂರು
ಬಿಡ್ ಸಲ್ಲಿಸುವ ಕೊನೆಯ ದಿನಾಂಕ	01.09.2025 ರಂದು 17:00 ಗಂಟೆಯವರೆಗೆ.	
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	02.09.2025 ರಂದು 17:05 ಗಂಟೆಗೆ	

ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ, ವಿಸ್ತೀರ್ಣ ಹಾಗೂ ಇನ್ನಿತರ ಮಾಹಿತಿಗಾಗಿ www.kppp.karnataka.gov.in ಗೆ ಲಾಗಿನ್ ಆಗಿ ಅಥವಾ ಇ-ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 09240214000, 09240214001; 22371090; 22340060; 22340948 ಅಥವಾ 7760997519 & 7760991222 ಇ-ಮೇಲ್: ctmc@mybmtc.com ಗೆ ಸಂಪರ್ಕಿಸಬಹುದು.
ಸಹಿ/- ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ
1. KMCRI/SUP(5)/Surgical Oncology/Tender-01/144/2025-26 Date:18-08-2025
2. KMCRI/SUP(5)/Surgical Oncology/Tender-01/147/2025-26 Date:18-08-2025

ಇ-ಟೆಂಡರ ಪ್ರಕಟಣೆ (ಇ-ಪ್ರೋಕ್ಯೂರಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ ಇವರು ಅರ್ಹ ಟೆಂಡರ್‌ದಾರರು, ಉತ್ಪಾದಕರು, ಅಧೀಕೃತ ಏಜೆಂಟ್ಸ್ ಮತ್ತು ಅಧಿಕೃತ ವಿತರಕರಿಂದ ಕೆ.ಎಂ.ಸಿ. & ಆರ್.ಐ. ಆಸ್ಪತ್ರೆಗೆ ಅವಶ್ಯವಿರುವ Surgical Oncology ವಿಭಾಗದ ವೈದ್ಯಕೀಯ ಉಪಕರಣಗಳನ್ನು ಪೂರೈಸುವುದಕ್ಕಾಗಿ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಪೂರೈಕೆ ಕಾಯ್ದೆ 1999 ಶಾಸನ 2000 ಅನ್ವಯ ಇ-ಟೆಂಡರ್ ಮೂಲಕ ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ https://www.kppp.karnataka.gov.in ನಲ್ಲಿ ಪಡೆಯಬಹುದು. ಟೆಂಡರ್ ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/- (ನಿರ್ದೇಶಕರು),
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ 571428
E-mail: manmultransport@gmail.com ದೂರವಾಣಿ: 08232 – 274571/257
ಐ.ಎಫ್.ಟಿ ಸಂಖ್ಯೆ:ಮಂಹಾಒ/ಪಿಡಿಜಿ/ಸಾರಿಗೆ/ಇ-ಪ್ರೊಕ್ಯೂರ್‌ಮೆಂಟ್/56/2025-2026 ದಿನಾಂಕ: 16.08.2025

ಮರು ಟೆಂಡರ್ ಪ್ರಕಟಣೆ: KMF/2025-26/SE3785, SE3786, SE3787

ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟಕ್ಕೆ ಹಾಲಿನ ಟ್ಯಾಂಕರ್‌ಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಇ.ಎಂ.ಡಿ. ಮೊಬಲಗು ಪ್ರತಿ ಟೆಂಡರ್‌ಗೆ ರೂ. 25,000/- ಟೆಂಡರ್ ದಾಖಲಾತಿಯುನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ: http://kppp.karnataka.gov.in / website:www.kppp.karnataka.gov.in ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ ಹಾಗೂ ಸಹಾಯವಾಣಿ 080-46010000/68948777 e-mail: support@eprochelpdesk.com ನ್ನು ಸಂಪರ್ಕಿಸಬಹುದಾಗಿರುತ್ತದೆ. ಟೆಂಡರ್ ಶೆಡ್ಯೂಲ್‌ಗಳನ್ನು download ಮಾಡಿಕೊಳ್ಳಲು ದಿನಾಂಕ 16-08-2025 ರಿಂದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 30-08-2025 ಸಂಜೆ 5.00 ರ ವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01-09-2025 ರಂದು ಬೆಳಿಗ್ಗೆ 11:30 ಗಂಟೆಯ ನಂತರ, ವಾಣಿಜ್ಯ ಬಿಡ್ ತೆರೆಯುವ ದಿನಾಂಕವನ್ನು ನಂತರ ತಿಳಿಸಲಾಗುವುದು.
ವಿ.ಸೂ: ದಿನಾಂಕ 17.07.2025 ರಂದು ಕರೆದಿರುವ ಟೆಂಡರ್ ಪ್ರಕಟಣೆ ಸಂಖ್ಯೆ: KMF/2025-26/SE3731 ನ್ನು ತಾಂತ್ರಿಕ/ಆಡಳಿತಾತ್ಮಕ ಕಾರಣಗಳಿಂದ ರದ್ದುಪಡಿಸಲಾಗಿದೆ.
ಸಹಿ/-
ವ್ಯವಸ್ಥಾಪಕ ನಿರ್ದೇಶಕರು

ಲೋಕೋಪಯೋಗಿ ಇಲಾಖೆ
ಗುತ್ತಿಗೆ ಪ್ರಕಟಣೆ ತಿದ್ದುಪಡಿ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/5054/2025-26/1286/ದಿನಾಂಕ: 21- 07-2025ರಲ್ಲಿನ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಗಿನ ತಿದ್ದುಪಡಿ ಮಾಡಲಾಗಿದೆ. (ಕ್ರಸಂ. 9 ಕಾಮಗಾರಿ ವರ್ಕ್ ಇಂಡೆಂಟ್ ನಂ. 22129) ಕ್ಕೆ ಸಂಬಂಧಿಸಿದಂತೆ.

ಕ್ರಸಂ.	ಮೂಲ ಗುತ್ತಿಗೆ ಪ್ರಕಟಣೆಯಲ್ಲಿ ಪ್ರಚುರಪಡಿಸಿದಂತೆ	ಬದಲಾವಣೆ ಮಾಡಿರುವಂತೆ
1	ಮುಂಗಡ ಠೇವಣ ಮೊತ್ತ ರೂ. 100000.00 ಅಂತಾ ಇರುತ್ತದೆ.	ಮುಂಗಡ ಠೇವಣ ಮೊತ್ತ ಒಟ್ಟು ರೂ. 244000.00 ಇದ್ದು ಅದರಲ್ಲಿ ಭಾಗ-1ರ ರೂ. 100000.00 ಆನ್‌ಲೈನ್ ಮುಖಾಂತರ ಪಾವತಿಸಬೇಕು. ಬಾಕಿ ಉಳಿದ ಮೊತ್ತ ರೂ. 144000.00 ಗಳ ಮೊತ್ತವನ್ನು ಎಫ್.ಡಿ.ಆರ್ ಅಥವಾ ಬ್ಯಾಂಕ್ ಗ್ಯಾರಂಟಿ ಮೂಲಕ ಪಡೆದು KPPP ಪ್ರೊಟಲ್ ಮುಖಾಂತರ ಸಲ್ಲಿಸತಕ್ಕದು.

ಕ್ರಸಂ. 9 (ನಂ. 22129)ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನಂತೆ ದಿನಾಂಕಗಳನ್ನು ಮರು ನಿಗದಿಪಡಿಸಲಾಗಿದೆ.

1	ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ವೇಳೆ	ದಿನಾಂಕ: 04-09-2025ರ ಸಾಯಂಕಾಲ 04-00 ಗಂಟೆಯವರೆಗೆ
2	ಗುತ್ತಿಗೆ ಪತ್ರಗಳನ್ನು (ತಾಂತ್ರಿಕ ಬಿಡ್) ತೆರೆಯುವ ದಿನಾಂಕ ಹಾಗೂ ವೇಳೆ	ದಿನಾಂಕ:06-09-2025ರ ಸಾಯಂಕಾಲ 04-30 ಗಂಟೆಗೆ
3	ಹಣಕಾಸು ಬಿಡ್ ತೆರೆಯುವ ದಿನಾಂಕ ಹಾಗೂ ವೇಳೆ	ದಿನಾಂಕ: 08-09-2025ರ ಬೆಳ್ಳಿಗ್ಗೆ 11.00 ಗಂಟೆಗೆ

ಕಾಮಗಾರಿ ವರ್ಕ್ ಇಂಡೆಂಟ್ ನಂ. 22449ಕ್ಕೆ ಸಂಬಂಧಿಸಿದಂತೆ. ಈ ಕಛೇರಿ ಮುಂದೂಡಿದ ಪ್ರಕಟಣೆ-1ರಲ್ಲಿ ವರ್ಕ್ ಇಂಡೆಂಟ್ ನಂ.23049ಎಂದು ಬದಲಾವಣೆ ಮಾಡಲಾಗಿದೆ ಎಂದು ಪ್ರಕಟಿಸಲಾಗಿತ್ತು. ಇದರ ಬದಲಾಗಿ 22446 ಎಂದು ಮರು ಬದಲಾವಣೆ ಮಾಡಲಾಗಿದೆ.
ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಸಹಿ/-
ಕಾರ್ಯನಿರ್ವಾಹಕ ಇಂಜನೀಯರರು,
dipr/hvr/dipo/322/25-26 ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ - ಯಲಹಂಕ ವಿಭಾಗ, 3ನೇ ಮಹಡಿ, ಮಿನಿ ವಿಧಾನಸೌಧ, ಯಲಹಂಕ, ಬೆಂಗಳೂರು- 560 064
ಸಂಖ್ಯೆ:ಕಾಪಾಅ(ರಮೂಸೌ-ಯಲಹಂಕ)/ಟೆಂಡರ್/02/2025-26 ದಿನಾಂಕ: 18.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತಸೌಕರ್ಯ-ಯಲಹಂಕ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಗಳ ಹೆಸರು
ರಸ್ತೆ ಮೂಲಭೂತ ಸೌಕರ್ಯ- ಯಲಹಂಕ ವಿಭಾಗದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಆಯ್ದ ಪ್ರಧಾನ, ಉಪಪ್ರಧಾನ ಮತ್ತು ಇತರೆ ಪ್ರಮುಖ ರಸ್ತೆಗಳಲ್ಲಿ ಮಿಲ್ಲಿಂಗ್ ಸಂಪೂರ್ಣ ಸರ್ಫೇಸ್ ಒಳಗೊಂಡಂತೆ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸುಧಾರಣೆ ಮತ್ತು ಡಾಂಬರೀಕರಣ ಮಾಡುವುದು. (ಪ್ಯಾಕೇಜ್ ಸಂಖ್ಯೆ. YNK-5) ಟೆಂಡರಿಗಿಟ್ಟ ಮೊತ್ತ: ₹.1694.75 ಲಕ್ಷಗಳು, ಇಎಂಡಿ: ₹.16,95 ಲಕ್ಷಗಳು (₹.1 ಲಕ್ಷ ಕೆಪಿಪಿ ಪೋರ್ಟಲ್ ಉಳಿದ ₹15.95 ಲಕ್ಷಗಳು ಬ್ಯಾಂಕ್ ಗ್ಯಾರಂಟಿ ಮೂಲಕ ಭರಿಸುವುದು)

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳುನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 19.08.2025ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 01.09.2025ರ ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ. (3) ಟೆಂಡರ್ ದಾಖಲೆಗಳು ದಿನಾಂಕ 19.08.2025ರಿಂದ ಲಭ್ಯವಿರುತ್ತದೆ. (4) ಬಿಡ್ ಪೂರ್ವಭಾವಿ ಸಭೆಯನ್ನು ಪ್ರಧಾನ ಅಭಿಯಂತರರ ಕಚೇರಿ, ಬೃಬೆಂಮಪಾಲಿಕೆ ಕೊಠಡಿ ಸಂಖ್ಯೆ-108 ಅನೆಕ್ಸ್-2 ಕಟ್ಟಡ ನರಸಿಂಹರಾಜ ಚೌಕ, ಬೆಂಗಳೂರು ಇಲ್ಲಿ ದಿನಾಂಕ 25.08.2025ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (5) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 01.09.2025ರ ಸಂಜೆ 4:00 ಗಂಟೆಗೆ. (6) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 02.09.2025ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (7) ಆರ್ಥಿಕ ಬಿಡ್ ತೆರೆಯುವಿಕೆ (ತಾಂತ್ರಿಕ ಮೌಲ್ಯಮಾಪನಗಳಿಗೆ ಅನುಮೋದನೆ ಪಡೆದ ನಂತರ ತಿಳಿಸಲಾಗುವುದು)
ಸಹಿ/- ಕಾರ್ಯಪಾಲಕ ಅಭಿಯಂತರರು, ರಮೂ ಸೌಕರ್ಯ-ಯಲಹಂಕ ವಿಭಾಗ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
ಕ್ರ.ಸಂ:ಬಿಜಿಎಂ:ಡಿಯುಡಿಸಿಆರ್-25:2021-22 ದಿನಾಂಕ: 18.08.2025

ಟೆಂಡರ್ ಅಧಿಸೂಚನೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ ರವರು ಬೆಳಗಾವಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗೆ KW-1 ಮತ್ತು 4 ಡಾಕುಮೆಂಟ್ ಉಪಯೋಗಿಸಿ ಟೆಂಡರ್ ಆಹ್ವಾನಿಸಲಾಗಿದೆ. ಬಿಡ್ ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಡೌನ್ ಲೋಡ್ ಹಾಗೂ ಸಲ್ಲಿಬಹುದಾಗಿರುತ್ತದೆ, ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸಿಂಗ್ ಫೀಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ವಿವರ ಈ ಕೆಳಗಿನಂತಿದೆ.
(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಟೆಂಡರಗಿಟ್ಟ ಮೊತ್ತ (GST ಹೊರತುಪಡಿಸಿ)	ಇ.ಎಂ.ಡಿ ಮೊತ್ತ	ಕರೆ ನಂ.
1	ಸದಲಗಾ ಪುರಸಭೆ ವ್ಯಾಪ್ತಿಯಲ್ಲಿ ಪೌರಕಾರ್ಮಿಕರ ವಿಶ್ರಾಂತಿ ಗೃಹ, ಸಾರ್ವಜನಿಕ ಶೌಚಾಲಯ, ಅಂಗನವಾಡಿ, ಸಮುದಾಯ ಭವನ, ಕಂಪೌಂಡ ಗೋಡೆ ನಿರ್ಮಾಣ ಮತ್ತ ಪೈಪಲೈನ್ ಕಾಮಗಾರಿ ಕೈಗೊಳ್ಳುವುದು. (Tender No. DMA/2025-26/BD/WORK_INDENT38082/call-2)	132.27	2.00	7ನೇ
2	ಸದಲಗಾ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ ಚರಂಡಿ ಮತ್ತು ಇತರೆ ಕಾಮಗಾರಿ ನಿರ್ಮಿಸುವುದು. (Tender No. DMA/2025-26/RD/WORK_INDENT45219)	133.48	2.00	1ನೇ
3	ಕಲ್ಲೋಳಿ ಪ.ಪಂ ವ್ಯಾಪ್ತಿಯ ವಾರ್ಡ್ ಸಂಖ್ಯೆ 10ರ ಫಿಲ್ಟರ್ ಹೌಸ್ ಅಭಿವೃದ್ಧಿಪಡಿಸುವುದು. (Tender No. DMA/2023-24 /WS/WORK_NDENT15395/call-7)	14.05	0.35	7ನೇ

ಟೆಂಡರ್ ವೇಳಾಪಟ್ಟಿ

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	:	03.09.2025 ರಂದು 17.00 ಘಂಟೆವರೆಗೆ
ಟೆಂಡರ್ ತೆರೆಯುವ ದಿನಾಂಕ: (ತಾಂತ್ರಿಕ ಬಿಡ್)	:	04.09.2025 ರಂದು 10.30 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ KPPP Portal ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/-
ಕಾರ್ಯಪಾಲಕ ಅಭಿಯಂತರರು
DIPR/BGM/RO.No. 836 /2025-26 ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)-2/ಅಇಂ(ವಿ)-1/2025-26/4454-89 ದಿನಾಂಕ:18.08.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್ ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ. ಸಂ.	ವಿಚಾರಣಾ ಸಂಖ್ಯೆಗಳು / ಕಾಮಗಾರಿಗಳ ವಿವರ
1.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2545** ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು **ನಿಗದಿಯಲ್ಲಿ 2x20ಎಂವಿಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು, ಹಾಗೂ 110ಕೆ.ವಿ ನರೇಂದ್ರ-ತಡಸಿನಕೊಪ್ಪ-ತರಿಹಾಳ್ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆ.ವಿ ನಿಗದಿ ಉಪಕೇಂದ್ರದವರೆಗೆ ಡ್ರೇಕ್(Drake) ವಾಹಕದಿಂದ **7.079ಕಿ.ಮೀಗಳ** ಉದ್ದಕ್ಕೆ 110ಕೆ.ವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
2.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2551** ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕು **ಸಂಡೂರು ಪಟ್ಟಣ(ದೌಲತ್‌ಪುರ)**ದಲ್ಲಿ **2x20 ಎಂವಿಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆವಿ ಮುನಿರಾಬಾದ್ ಪವರ್ ಹೌಸ್- ವ್ಯಾಸನಕೆರಿ(ದೋಣಿಮಲೈ) ಡಿಸಿ (DC) ಪ್ರಸರಣ ಮಾರ್ಗದಿಂದ ಒಂದು ಪ್ರಸರಣ ಮಾರ್ಗವನ್ನು ಪ್ರಸ್ತಾವಿತ 110/11 ಕೆವಿ ಸಂಡೂರು ಪಟ್ಟಣ(ದೌಲತ್‌ಪುರ) ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **0.416ಕಿ.ಮೀಗಳ** ಉದ್ದಕ್ಕೆ 110ಕೆವಿ ಲೀಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
3.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2541** ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕು, **ಯಾಗಪುರ (ಬೆಳಗೆರ)** ಗ್ರಾಮದಲ್ಲಿ **2x20 ಎಂ.ವಿ.ಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110 ಕೆವಿ ಎಸ್‌ಸಿ (SC) ನಾಲವಾರ-ಯಾದಗಿರಿ (North) ಎಸ್‌ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11 ಕೆವಿ ಯಾಗಪುರ (ಬೆಳಗೆರ) ಗ್ರಾಮ ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **15.680ಕಿ.ಮೀಗಳ** ಉದ್ದಕ್ಕೆ 110 ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
4.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2547** ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು **ಅರಳಿಕಟ್ಟಿ ಕ್ರಾಸ್ (ಹಿರೇಹೊನ್ನಳ್ಳಿ)** ನಲ್ಲಿ **2x20ಎಂ.ವಿ.ಎ, 110/11ಕೆ.ವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110 ಕೆ.ವಿ ಕಾಡನಕೊಪ್ಪ-ಕವಲ್ವಾಡ್ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆ.ವಿ ಅರಳಿಕಟ್ಟಿ ಕ್ರಾಸ್ (ಹಿರೇಹೊನ್ನಳ್ಳಿ) ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **3.643ಕಿ.ಮೀಗಳ** ಉದ್ದಕ್ಕೆ 110ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
5.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2543** ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು, **ದೋತಿಹಾಳ್ ಗ್ರಾಮದಲ್ಲಿ** 33/11ಕೆವಿ ವಿದ್ಯುತ್ ಉಪಕೇಂದ್ರವನ್ನು, **1x20ಎಂವಿಎ, 110/33ಕೆವಿ** ಹಾಗೂ 2x20ಎಂವಿಎ, 110/11ಕೆವಿ ಉಪಕೇಂದ್ರಕ್ಕೆ ಉನ್ನತೀಕರಿಸುವುದು ಹಾಗೂ 110ಕೆವಿ ಕುಷ್ಟಗಿ-ಇಳಕಲ್ ಮಾರ್ಗ-1 ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/33/11ಕೆವಿ ವಿದ್ಯುತ್ ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **5.775ಕಿ.ಮೀ** ಗಳ ಉದ್ದಕ್ಕೆ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
6.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2540** ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು **ಕೆ. ಬಸವನಹಳ್ಳಿಯಲ್ಲಿ 2x20 ಎಂ.ವಿ.ಎ, 110/11 ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110 ಕೆ.ವಿ ಯಗಟಿ-ಸಿಂಗಟಗೆರೆ ಎಸ್‌ಸಿ ಪ್ರಸರಣ ಮಾರ್ಗದಿಂದ ಪ್ರಸಾವಿತ 110 ಕೆ.ವಿ ಕೆ. ಬಸವನಹಳ್ಳಿ ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **11.958ಕಿ.ಮೀಗಳ** ಉದ್ದಕ್ಕೆ 110ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
7.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2539** ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು **ದೊಡ್ಡೆಕೊಪ್ಪಲು ಗೇಟ್ (ಹೆಜ್ಜೋಡ್ಲು/ಮುಳ್ಳೂರು)** ನಲ್ಲಿ **2x20ಎಂವಿಎ, 66/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಇಲವಾಲ-ಹುಣಸೂರು ಡಿಸಿ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11ಕೆವಿ ದೊಡ್ಡೆಕೊಪ್ಪಲು ಗೇಟ್(ಹೆಜ್ಜೋಡ್ಲು/ಮುಳ್ಳೂರು) ಉಪಕೇಂದ್ರದವರೆಗೆ 110ಕೆವಿ ಡಿಸಿ ಗೋಪುರಗಳ ಮೇಲೆ **4.624ಕಿಮೀ** ಗಳ ಉದ್ದಕ್ಕೆ ಕೊಯೋಟ್ ವಾಹಕದ 66ಕೆವಿ ಲಿಲೋ ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
8.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2544** ಕಲಬುರಗಿ ಜಿಲ್ಲೆ, ಕಲಬುರಗಿ ತಾಲ್ಲೂಕು **ಆಜಾದ್‌ಪುರ(ಹಗರಗ)** ಗ್ರಾಮದಲ್ಲಿ **2x20ಎಂ.ವಿ.ಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆ.ವಿ ಕಪನೂರು-ಗುಲ್ಬರ್ಗಾ(ಉತ್ತರ) ಎಸ್‌ಸಿ(SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11 ಕೆ.ವಿ ಆಜಾದ್‌ಪುರ(ಹಗರಗ) ಉಪಕೇಂದ್ರದವರೆಗೆ ಲಿಂಕ್ಸ್(Lynx) ವಾಹಕದಿಂದ **9.499ಕಿ.ಮೀಗಳ** ಉದ್ದಕ್ಕೆ 110ಕೆ.ವಿ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
9.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2542** ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, **ನೆಲೋಗಿಪುರ (ಬೈರಾಪುರ)** ಗ್ರಾಮದಲ್ಲಿ **2x20 ಎಂ.ವಿ.ಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆ.ವಿ ಮುಂಡರಗಿ-ಬೆಟಗೇರ ಎಸ್.ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆ.ವಿ ನೆಲೋಗಿಪುರ ಗ್ರಾಮದ ಉಪಕೇಂದ್ರದವರೆಗೆ ಡಿ.ಸಿ (DC) ಗೋಪುರಗಳ ಮೇಲೆ ಲಿಂಕ್ಸ್ (Lynx) ವಾಹಕದಿಂದ **5.693ಕಿ.ಮೀಗಳ** ಉದ್ದಕ್ಕೆ 110ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
10.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2552** ರಾಯಚೂರು ಜಿಲ್ಲೆ, ಮಸ್ಕಿ ತಾಲ್ಲೂಕು **ಪಾಮನಕಲ್ಲೂರಿನಲ್ಲಿ 2x20ಎಂವಿಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆವಿ ಹಟ್ಟಿ-ಮಸ್ಕಿ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110ಕೆವಿ ಪಾಮನಕಲ್ಲೂರು ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **0.05ಕಿ.ಮೀಗಳ** ಉದ್ದಕ್ಕೆ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
11.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2549** ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು **ಕೊಡಗನೂರು(ಕಬ್ಬೂರು)** ನಲ್ಲಿ **2x20ಎಂ.ವಿ.ಎ, 66/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆ.ವಿ ದಾವಣಗೆರೆ-ಚಿತ್ರದುರ್ಗ ಎಸ್.ಸಿ Line-2 (tapped to 66/11kV ಮಾಯಕೊಂಡ ಉಪಕೇಂದ್ರ) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11ಕೆ.ವಿ ಕೊಡಗನೂರು (ಕಬ್ಬೂರು) ಉಪಕೇಂದ್ರದವರೆಗೆ ಕೊಯೋಟ್ (Coyote) ವಾಹಕದಿಂದ **8.315ಕಿ.ಮೀಗಳ** ಉದ್ದಕ್ಕೆ 66ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
12.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2548** ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕು **ಸಾಲಾಪುರದಲ್ಲಿ 2x20 ಎಂವಿಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆವಿ ಸಾಲಹಳ್ಳಿ-ಲೋಕಪುರ ಎಸ್.ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110ಕೆವಿ ಸಾಲಾಪುರ ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **4.9ಕಿ.ಮೀಗಳ** ಉದ್ದಕ್ಕೆ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
13.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2550** ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ **ಭೋಗಸಂದ್ರದಲ್ಲಿ 2x20ಎಂ.ವಿ.ಎ, 66/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆ.ವಿ ಹೊಸಕೆರೆ-ಹಗಲವಾಡಿ ಎಸ್.ಸಿ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11ಕೆ.ವಿ ಭೋಗಸಂದ್ರ ಉಪಕೇಂದ್ರದವರೆಗೆ ಡಿ.ಸಿ (DC) ಗೋಪುರಗಳ ಮೇಲೆ ಕೊಯೋಟ್ (Coyote) ವಾಹಕದಿಂದ **6.87ಕಿ.ಮೀಗಳ** ಉದ್ದಕ್ಕೆ 66ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು ಹಾಗೂ ಪ್ರಸ್ತಾವಿತ 66ಕೆ.ವಿ ಪ್ರಸರಣ ಮಾರ್ಗವನ್ನು ಕೊನೆಗೊಳಿಸುವ ಸಲುವಾಗಿ, ಒಂದು (01) ಸಂಖ್ಯೆಯ 66ಕೆ.ವಿ ಟರ್ಮಿನಲ್ ಬೇಯನ್ನು ಹಾಲಿಯಿರುವ 66/11ಕೆ.ವಿ ಹೊಸಕೆರೆ ಉಪಕೇಂದ್ರದಲ್ಲಿ ನಿರ್ಮಿಸುವುದು.
14.	**ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2546** ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು **ಮದಲಗೆರೆ(ಬಂದ್ರಿ ಕ್ರಾಸ್)ಯಲ್ಲಿ 2x20ಎಂ.ವಿ.ಎ, 66/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಇಟ್ಟಗಿ-ಹರಪನಹಳ್ಳಿ SC ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11 ಕೆವಿ ಮದಲಗೆರೆ ಉಪಕೇಂದ್ರದವರೆಗೆ ಕೊಯೋಟ್ (Coyote) ವಾಹಕದಿಂದ **9.315ಕಿ.ಮೀಗಳ** ಉದ್ದಕ್ಕೆ 66 ಕೆ.ವಿ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ "ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ **22.08.2025 ರಂದು 15:00 ಗಂಟೆ ಅಥವಾ ನಂತರದಿಂದ** ಪಡೆಯಬಹುದು. ಮೇಲೆ ತಿಳಿಸಿರುವ ಕಾಮಗಾರಿಗಳಿಗೆ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **15.09.2025 ರಂದು 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.
ಸಹಿ/- ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್
ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು-560 009.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು-572120 ತುಮಕೂರು ಜಿಲ್ಲೆ. ಫೋನ್ ನಂ: 0816-2957008
ಇ-ಮೇಲ್: eehcidhebbur@gmail.com

ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 03/2025-26, ದಿನಾಂಕ: 16.08.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 05 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂ ರೇಟ್ ಆಧಾರದ ಮೇಲೆ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ:20.08.2025 ಮತ್ತು ಅಂತಿಮ ದಿನಾಂಕ: 03.09.2025. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ತನಿಖಾ ವಿಭಾಗ, ಕಾನೀನಿನಿ, ಹೆಬ್ಬೂರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪರು-1 ರವರ ಕಛೇರಿ, (ಬಿಎಸ್‌ಡಬ್ಲ್ಯೂಎಂಎಲ್), 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು - 560052.
ಸಂಖ್ಯೆ: ಡಿಜಿಎಂ-1/(ಬಿಎಸ್‌ಡಬ್ಲ್ಯೂಎಂಎಲ್)/ಪಿಆರ್/183/25-26 ದಿನಾಂಕ: 18-08-2025

ತಿದ್ದುಪಡಿ - 1

ವಿಷಯ : ಟೆಂಡರ್ ಅಧಿಸೂಚನೆಯ ವೇಳಾಪಟ್ಟಿಯಲ್ಲಿ ಬದಲಾವಣೆ.
ಉಲ್ಲೇಖ : ಈ ಕಛೇರಿಯ ಅಧಿಸೂಚನೆ ಸಂಖ್ಯೆ: DGM-1/BSWML/TEND/08/2025-26, ದಿನಾಂಕ: 30.07.2025.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕಟಣೆಯ ವೇಳಾಪಟ್ಟಿಯನ್ನು ತಾಂತ್ರಿಕ ಕಾರಣಗಳಿಂದ ವಿಸ್ತರಿಸಲಾಗಿದೆ. ವೇಳಾಪಟ್ಟಿಯ ಬದಲಾವಣೆಯನ್ನು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಷೆಡ್ಯೂಲ್ ಸಮಯ / ವೇಳಾಪಟ್ಟಿ:

ಕ್ರ. ಸಂ.		ಟೆಂಡರ್ ಅಧಿಸೂಚನೆಯ ಪ್ರಕಾರ	ಬದಲಾವಣೆ ದಿನಾಂಕಗಳನ್ನು ದಯವಿಟ್ಟು ಹೀಗೆ ಓದಿ
1	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	30.08.2025 ರಂದು ಸಂಜೆ 16:00 ಗಂಟೆಯವರೆಗೆ	**15.09.2025 ರಂದು ಸಂಜೆ 16:00 ಗಂಟೆಯವರೆಗೆ**
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	01.09.2025 ರಂದು ಬೆಳಿಗ್ಗೆ 10:30 ಗಂಟೆಯ ನಂತರ	**16.09.2025 ರಂದು ಸಂಜೆ 16:30 ಗಂಟೆಯ ನಂತರ**

ಹೆಚ್ಚಿನ ಮಾಹಿತಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಗೆ ಭೇಟಿ ನೀಡಿ.
ಸಹಿ/-
ವಾಸಾಸಂಇ/ವಾ.ಪ್ರ/2369/ಎಎಎ/2025-26 ಉಪ ಪ್ರಧಾನ ವ್ಯವಸ್ಥಾಪಕರು-1, ಬಿಎಸ್‌ಡಬ್ಲ್ಯೂಎಂಎಲ್

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು 560079
ದೂರವಾಣಿ ಸಂಖ್ಯೆ: +91-80-29619801, ಇ-ಮೇಲ್: md.ksmscl@gmail.com
No: HFW/KSMSCL/SCM/09/2025-26 Date:18.08.2025

ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ : KSMSCL/2025-26/SE0023, Dated: 18.08.2025
ಇ-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ-ಟೆಂಡರ್ ಕರೆಯಲಾಗಿದೆ.
2025-26ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಔಷಧ ಉಗ್ರಾಣದಲ್ಲಿರುವ (ಡಿಸೆಂಬರ್-2022 ರಿಂದ ಜೂನ್-2025 ರವರೆಗೆ) ಅವಧಿ ಮೀರಿದ / ಅವಧಿ ಮೀರಿದ ಉತ್ತಮ ಗುಣಮಟ್ಟವಲ್ಲದ ಔಷಧಗಳನ್ನು ಮತ್ತು ಉಪಭೋಗ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ನಾಶಪಡಿಸುವ ಪ್ರಕ್ರಿಯೆ ನಡೆಸಲು ಅರ್ಹ ಸೇವೆಯನ್ನು ನೀಡಲು ಟೆಂಡರ್ ಆಹ್ವಾನಿಸುವ ಅಧಿಸೂಚನೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸುವ ಕುರಿತು"- SE0023.
ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್ ಸೈಟ್ ಮುಖಾಂತರ: https://kppp.karnataka.gov.in ನಲ್ಲಿ ದಿನಾಂಕ: 18.08.2025 ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/-
ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಸಂಗ್ರಹಣೆ)
ವಾಸಾಸಂಇ/ವಾ.ಪ್ರ/2367/ಎಸ್‌ಎಸ್‌ಸಿ/2025-26 ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ
ಕಾರ್ಯಾಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.
ಇ-ಮೇಲ್:zped.cta@gmail.com ದೂರವಾಣಿ ಸಂ:08194-222372
ಸಂ:ಪಂರಾಜ್‌ಇಂವಿ/ಚಿದು/ಇಇ/ತಾಂ.ಶಾ/ಟೆಂಡರ್/2025-26/1285
ದಿನಾಂಕ: 16.08.2025

ಟೆಂಡರ್ ಪ್ರಕಟಣೆ
(Through e-Procurement Portal Only)

ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ಯೋಜನೆಯಡಿಯಲ್ಲಿ ವ್ಯಾಪ್ತಿಯ ವಿವಿಧ ಯೋಜನೆಯಡಿಯಲ್ಲಿ ಅನುಮೋದನೆಯಾದ 24 ಕಾಮಗಾರಿಗಳಿಗೆ (ಇಂಡೆಂಟ್ ಸಂ:16536/Call-2, 14656/Call-3, 18115,18117,18120,16991,16987,17772, 18939, 14390, 18104, 18111,18118, 18119, 18112, 18123, 18124, 18126, 17914, 18127, 17940, 18072, 14383, 10728) ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಟ ರೂ.5.60ಲಕ್ಷ ಗರಿಷ್ಠ ರೂ.200.00ಲಕ್ಷಗಳು ಒಟ್ಟು ರೂ: 898.10 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು ದಿನಾಂಕಗಳು ಈ ಕೆಳಕಂಡಂತಿವೆ:-
(1) ಟೆಂಡರ್‌ನ ಮಾಹಿತಿ ಪಡೆಯಲು ಕೊನೆಯ ದಿ: 25.08.2025ರ ಸಮಯ: 11.00 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ (1 ಕೋಟಿಗಿಂತ ಕಡಿಮೆ ಇರುವ ಕಾಮಗಾರಿಗಳಿಗೆ) 26.08.2025ರ : ಸಮಯ 16.00 (3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ (1 ಕೋಟಿಗಿಂತ ಮೇಲ್ಪಟ್ಟ ಕಾಮಗಾರಿಗಳಿಗೆ) 02.09.2025ರ : ಸಮಯ 16.00 ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (support@eprochelpdesk.com) or KPPP Helpdesk Phone No: tel:+91-8046010000, +91-8068948777 ಸಂಪರ್ಕಿಸಲು ಅಥವಾ ಈ ಕಛೇರಿ ದೂರವಾಣಿ ಸಂಖ್ಯೆ: 08194-222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.
RO.No.290:DIPR/CTA/KSMCA/2025-26
ಸಹಿ/- ಕಾರ್ಯಪಾಲಕ ಅಭಿಯಂತರರು
ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 080 22220227
E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 07/2025-26
ದಿನಾಂಕ: 14-07-2025

ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ-2000ರನ್ವಯ ಕೆಡಬ್ಲ್ಯೂ-1 & ಕೆಡಬ್ಲ್ಯೂ-4 ನಿಯಮಗಳಂತೆ ಕ್ರಮ ಸಂಖ್ಯೆ 01 ರಿಂದ 04ನೇ ಕಾಮಗಾರಿಗಳಿಗೆ ಬೆಂಗಳೂರಿನ ಕೆ.ಆರ್.ವೃತ್ತ ದಲ್ಲಿರುವ ಲೋಕೋಪಯೋಗಿ ಇಲಾಖೆಯ ಕಛೇರಿಗಳಿಗೆ ಹೊರಗುತ್ತಿಗೆ ನೌಕರರ ಸೇವೆಯನ್ನು ಒದಗಿಸುವುದು, ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಕಾಮಗಾರಿ ಮತ್ತು ಕೋರಮಂಗಲದಲ್ಲಿರುವ ಕೆ.ಎಸ್.ಆರ್.ಪಿ ವಸತಿಗೃಹಗಳ ದುರಸ್ಥಿ ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್‌ಟಲ್ ಮೂಲಕ (https://kppp.karnataka.gov.in/) ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ.
1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 14.08.2025 ರಿಂದ 23.08.2025 ಸಂಜೆ 4.30 ಗಂಟೆಯವರೆಗೆ.
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 23.08.2025 ಸಂಜೆ 4.30 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ ದಿನಾಂಕ : 25.08.2025 ರಂದು ಸಂಜೆ 4.30 ಕ್ಕೆ ತೆರೆಯಲಾಗುವುದು.
ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/-
ಕಾರ್ಯಪಾಲಕ ಅಭಿಯಂತರರು
DIPR/CP/2360/Zen/2025-26 ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.

ಮಂಗಳವಾರ • ಆಗಸ್ಟ್ 19, 2025 ಪ್ರಜಾವಾಣಿ

ರಾಜ್ಯದ ವಿವಿಧೆಡೆ ವರ್ಷಧಾರೆ: ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಭಾನುವಾರ ರಾತ್ರಿ ಹಾಗೂ ಸೋಮವಾರ ಭಾರಿ ವರ್ಷಧಾರೆಯಾಗಿದೆ. ಬೀದರ್ ಜಿಲ್ಲೆಯ ಮಾಂಜ್ರಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ.

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಬೋಂತಿ ಗ್ರಾಮದ ಕೆರೆ ಒಡೆದಿದ್ದು, ಭಂಡಾರಕುಮಟಾ, ಬಾವಲ್‌ಗಾಂವ್ ಹಾಗೂ ಖೇರ್ಡಾ ಗ್ರಾಮಗಳಿಗೆ ನೀರು ನುಗ್ಗಿದೆ. ಬೆಳೆ ಜಲಾವೃತಗೊಂಡಿದೆ.

ಮಹಾರಾಷ್ಟ್ರದಲ್ಲಿ ಹೆಚ್ಚು ಮಳೆಯಿಂದಾಗಿ, ಭಂಡಾರಕುಮಟಾ ಮತ್ತು ಬಾವಲ್‌ಗಾಂವ್ ಗ್ರಾಮಸ್ಥರಿಗೆ ಅಪಾಯ ಎದುರಾಗಿದೆ. ಜಿಲ್ಲಾಡಳಿತ ಈ ಗ್ರಾಮಗಳಲ್ಲಿ ಕಾಳಜಿ ಕೇಂದ್ರ ತೆರೆದಿದೆ.

ಕಮಲನಗರ ತಾಲ್ಲೂಕಿನ ದಾಬಕಾ ಹೋಬಳಿ ವ್ಯಾಪ್ತಿಯ ನಂದಿಬಿಜಲ್‌ಗಾಂವ್–ಚಿಕ್ಲಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ಕೊಚ್ಚಿ ಹೋಗಿದೆ. 15ಕ್ಕೂ ಹೆಚ್ಚು ಎಮ್ಮೆಗಳು ನೀರುಪಾಲಾಗಿವೆ.

ಯಾದಗಿರಿ ಜಿಲ್ಲೆಯಾದ್ಯಂತ ಧಾರಾಕಾರ ಮಳೆಯಾಗಿದ್ದು, ಕೆರೆ-ಕಟ್ಟೆಗಳು ಕೋಡಿಬಿದ್ದಿವೆ. ಹತ್ತಿಕುಣಿ ಜಲಾಶಯದ ಐದು ಕ್ರಸ್ಟ್‌ಗೇಟ್ ಎರಡು ಅಡಿ ಎತ್ತಿ ನೀರು ಹರಿಸಲಾಗುತ್ತಿದೆ. ಸೌದಾಗರ ಕೆರೆ ತುಂಬಿದೆ.

ಬಂದಳ್ಳಿ ಕೆರೆ, ಯಡ್ಡಳ್ಳಿ ಕೆರೆಗಳು ಭರ್ತಿಯಾಗಿದ್ದು, ಕೋಟಗೇರಾ ಸೇತುವೆ ಮೇಲೆ ಅಪಾಯದ ಮಟ್ಟ ಮೀರಿ ನೀರು ಹರಿಯುತ್ತಿದೆ. ಮೀನು ಹಿಡಿಯಲು ಮೀನುಗಾರರು ಕೆರೆಗಳಿಗೆ ಲಗ್ಗೆ ಹಾಕಿದ್ದಾರೆ.

ಕಲಬುರಗಿ ಜಿಲ್ಲೆಯಲ್ಲಿ ಮಳೆ ಅಬ್ಬರ ಮುಂದುವರಿದಿದ್ದು, ಜಿಲ್ಲೆಯ ಚಿತ್ತಾಪುರ ತಾಲ್ಲೂಕು, ಜೇವರ್ಗಿ, ಚಿತ್ತಾಪುರ, ಕಾಳಗಿ, ಚಿಂಚೋಳಿ, ಅಫಜಲಪುರ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ.

ರಾಯಚೂರು ನಗರ, ದೇವದುರ್ಗ, ಮಾನ್ವಿ, ಸಿಂಧನೂರು, ಸಿರವಾರ, ಲಿಂಗಸುಗೂರು ತಾಲ್ಲೂಕುಗಳಲ್ಲಿ ಮಳೆ ಸುರಿದಿದೆ. ಕೊಪ್ಪಳ ನಗರ, ಮುನಿರಾಬಾದ್ ಹಾಗೂ ಅಳವಂಡಿ ವ್ಯಾಪ್ತಿಯಲ್ಲಿ ಮಳೆ ಆಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗೊಂದಿ ಗ್ರಾಮದ 64 ಸಾಲಿನ ಕಲ್ಲಿನ ಮಂಟಪ ಮುಳುಗಿದೆ. ಕಂಪ್ಲಿ-ಗಂಗಾವತಿ ಮಾರ್ಗದ ಸಂಪರ್ಕ ಸೇತುವೆ ಮೇಲೆ ಸಂಚಾರಕ್ಕೆ ನಿರ್ಬಂಧಿಸಲಾಗಿದೆ.

ಸವದತ್ತಿ ಬಳಿಯ ನವಿಲುತೀರ್ಥ ಅಣೆಕಟ್ಟೆಯಿಂದ ಸೋಮವಾರ 10 ಸಾವಿರ ಕ್ಯೂಸೆಕ್ ನೀರು ಹರಿಸಲಾಯಿತು

ಚಿಕ್ಕಮಗಳೂರು: ಸತತ ಮಳೆ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಮತ್ತು ಸೋಮವಾರ ಬೆಳಿಗ್ಗೆ ಸುರಿದ ಮಳೆಗೆ ಜನ ಜೀವನ ಅಸ್ತವ್ಯಸ್ತಗೊಂಡಿದೆ.

ಚಿಕ್ಕಮಗಳೂರು ನಗರ, ಮೂಡಿಗೆರೆ, ಕೊಟ್ಟಿಗೆಹಾರ, ಕಳಸ, ಕೊಪ್ಪ, ನರಸಿಂಹರಾಜಪುರ, ತರೀಕೆರೆ ಕಡೆ ಭಾರಿ ಮಳೆ ಸುರಿದಿದೆ. ಕಡೂರು, ಅಜ್ಜಂಪುರ ತಾಲ್ಲೂಕಿನಲ್ಲಿ ಮಳೆಯಾಗಿದೆ.

ಕೆಲವೆಡೆ ಮನೆಗಳಿಗೆ ಹಾನಿಯಾಗಿದೆ. ಕೆಮ್ಮಣ್ಣುಗುಂಡಿ ರಾಜಭವನ ವಸತಿ ಗೃಹ ಸಮೀಪ ಗುಡ್ಡದ ಮಣ್ಣು ರಸ್ತೆಗೆ ಜರಿದು ಸಂಚಾರಕ್ಕೆ ತೊಂದರೆಯಾಗಿತ್ತು.

ಮಧ್ಯಾಹ್ನದ ಬಳಿಕ ಮಳೆ ಕಡಿಮೆಯಾಗಿದ್ದು, ತುಂಗಾ ನದಿಯ ಹರಿವು ಭಾನುವಾರಕ್ಕೆ ಹೋಲಿಸಿದರೆ ಕೊಂಚ ತಗ್ಗಿದೆ. ಮಂಗಳವಾರ ಐದು ತಾಲ್ಲೂಕು ವ್ಯಾಪ್ತಿಯಲ್ಲಿ ಶಾಲೆಗಳಿಗೆ ರಜೆ ಘೋಷಿಸಲಾಗಿದೆ.

ಉಡುಪಿ ಜಿಲ್ಲೆಯಾದ್ಯಂತ ಭಾನುವಾರ ರಾತ್ರಿಯಿಂದ ಸೋಮವಾರ ಮಧ್ಯಾಹ್ನದವರೆಗೆ ಧಾರಾಕಾರ ಮಳೆ ಸುರಿದಿದೆ.

ಪೋಕ್ಸೊ ಪ್ರಕರಣ ರದ್ದತಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೋಕ್ಸೊ ಕಾಯ್ದೆಗೆ ಬಾಲಕ-ಬಾಲಕಿ ಎಂಬ ಲಿಂಗಭೇದವಿಲ್ಲ. ಹೂವಿನಂತೆ ಅರಳಬೇಕಾದ ವಯೋಮಾನದಲ್ಲಿ ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳನ್ನು ತಡೆಯಲು ರೂಪಿಸಿರುವ ಕಠಿಣ ಶಾಸನವಾಗಿದೆ' ಎಂದು ಪೋಕ್ಸೊ ಕಾಯ್ದೆಯನ್ನು ವಿಶದೀಕರಿಸಿರುವ ಹೈಕೋರ್ಟ್, ದೇಶದಲ್ಲೇ ಮೊದಲು ಎನ್ನಬಹುದಾದ ಪ್ರಕರಣವೊಂದರಲ್ಲಿ ಮಧ್ಯವಯಸ್ಸಿನ ಮಹಿಳೆಯ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ರದ್ದುಪಡಿಸಲು ನಿರಾಕರಿಸಿದೆ.

'ನನ್ನ ವಿರುದ್ಧ ಬೆಂಗಳೂರಿನ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ ಆರೋಪಿತ ಮಹಿಳೆ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿದ್ದು, 'ಪೋಕ್ಸೊ ಕಾಯ್ದೆ ಮಗುವಿನ ಅಂಗರಚನಾ ಶಾಸ್ತ್ರದ ಬಗ್ಗೆ ಪಾಠ ಮಾಡುವ ಕೈಪಿಡಿಯಲ್ಲ' ಎಂದು ಘೋಷಿಸಿದೆ.

ಮಹಿಳೆಯ ಮನವಿಯನ್ನು ಸಾರಾಸಗಟಾಗಿ ತಿರಸ್ಕರಿಸಿರುವ ನ್ಯಾಯಪೀಠ, 'ಲೈಂಗಿಕ ಚಟುವಟಿಕೆಗಳಲ್ಲಿ, ಅದರಲ್ಲೂ ಸಂಭೋಗ ಕ್ರಿಯೆಯಲ್ಲಿ ಪುರುಷನೇ ಯಾವಾಗಲೂ ಸಕ್ರಿಯ ಮತ್ತು ಮಹಿಳೆ ಪುರುಷನ ಮನೋಭಿಲಾಷೆಗಳನ್ನೆಲ್ಲಾ ನಿಷ್ಕ್ರಿಯವಾಗಿ ಸ್ವೀಕರಿಸುವ ಪ್ರತಿಜೀವ ಎಂಬುದು ಓಬೀರಾಯನ ಪರಿಕಲ್ಪನೆ. ಈಗ ಕಾಲ ಬದಲಾಗಿದೆ. ಇಂತಹ ದೃಷ್ಟಿಕೋನ ಈಗ ಮಾಸಿದ ವ್ಯಾಖ್ಯಾನಗಳ ಕಂತೆ' ಎಂದು ಅಭಿಪ್ರಾಯಪಟ್ಟಿದೆ.

'ಅತಾರ್ಕಿಕ ತಳಹದಿಯಲ್ಲಿ ಅಪರಿಮಿತ ಬೌದ್ಧಿಕ ಕಸರತ್ತು ನಡೆಸಿ ನಿರ್ಬಂಧಿತ ವ್ಯಾಖ್ಯಾನಗಳ ಮೂಲಕ ಆರೋಪಿ ನಿರಪರಾಧಿ ಎಂದು ಸಾಬೀತುಪಡಿಸುವ ವ್ಯರ್ಥಪ್ರಯತ್ನ ಸಲ್ಲದು. ಕಾನೂನು ಪುರುಷ ಮತ್ತು ಮಹಿಳೆಯನ್ನು ಏಕೋಭಾವದೊಂದಿಗೆ, ನ್ಯಾಯದ ತಕ್ಕಡಿಯಲ್ಲಿ ಸಮಾನವಾಗಿ ತೂಗುತ್ತದೆ. ಈ ಪ್ರಕರಣದಲ್ಲಿ ಫಿರ್ಯಾದುದಾರರು ದೂರು ದಾಖಲಿಸಲು ತಡ ಮಾಡಿದ್ದಾರೆ ಎಂಬುದು ನಂಬಿಕೆಗೆ ಮಾರುದೂರದ ಅಂಶ. ಹಾಗಾಗಿ, ವಿಚಾರಣೆ ರದ್ದುಗೊಳಿಸಲು ಸಾಧ್ಯವಿಲ್ಲ. 18 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಪೋಕ್ಸೊ ಕಾಯ್ದೆ ಅಡಿ ಸೂಕ್ತ ರಕ್ಷಣೆ ದೊರೆಯಬೇಕು' ಎಂದು ಸಾರಿದೆ.

ಮುಖ್ಯಾಂಶಗಳು

- ಬಾಲಕರ ಮೇಲಿನ ಲೈಂಗಿಕ ದೌರ್ಜನ್ಯ ಶೇ 54.4 ರಷ್ಟು
- ಬಾಲಕಿಯರ ಮೇಲಿನ ದೌರ್ಜನ್ಯ ಶೇ 45.6 ರಷ್ಟು
- 53ರ ಮಹಿಳೆ–13ರ ಬಾಲಕ: ದೇಶದ ಮೊದಲ ತೀರ್ಪು

ಅಮಾಯಕ ಜೀವಗಳ ಮೇಲೆ ಕಾಮಾಂಧರು ಎಸಗುವ ಪೈಶಾಚಿಕ ಕೃತ್ಯಗಳನ್ನು ನಿರ್ದಾಕ್ಷಿಣ್ಯವಾಗಿ ತಡೆಗಟ್ಟಲಿಕ್ಕಾಗಿಯೇ ನಮ್ಮ ಶಾಸಕಾಂಗ ಪೋಕ್ಸೊದಂತಹ ಮಹತ್ತರ ಕಾಯ್ದೆಯನ್ನು ವಿನ್ಯಾಸಗೊಳಿಸಿದೆ ಎಂಬುದನ್ನು ಯಾರೂ ಮರೆಯಬಾರದು

ನ್ಯಾಯಮೂರ್ತಿ ಎಂ.ನಾಗಪ್ರಸನ್ನ

ಏನಿದು ಪ್ರಕರಣ?

ಗೇಟೆಡ್ ಕಮ್ಯುನಿಟಿಯ ವಿಲ್ಲಾದಲ್ಲಿ ವಾಸವಾಗಿದ್ದ 53 ವರ್ಷದ ಮಹಿಳೆ 13ರ ವಯಸ್ಸಿನ ನೆರೆಮನೆಯ ಬಾಲಕನನ್ನು ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ಸಖ್ಯ ಬೆಳೆಸಿಕೊಂಡು ಅವನೊಂದಿಗೆ ಸಂಭೋಗ ನಡೆಸಿಕೊಂಡ ಆರೋಪ ಎದುರಿಸುತ್ತಿದ್ದಾರೆ.

'ಒಬ್ಬಂಟಿಯಾಗಿದ್ದ ಆಕೆ ಬಾಲಕನನ್ನು ಪದೇ ಪದೇ ಮನೆಗೆ ಕರೆಯಿಸಿಕೊಂಡಿದ್ದಾರೆ. ಲೈಂಗಿಕ ಕ್ರಿಯೆಯಲ್ಲಿ ಆಕೆಯೇ ಕಾಂಡೋಮ್ ತೊಡಿಸಿ ಸಂಭೋಗಕ್ಕೆ ಪ್ರೇರೇಪಿಸಿ ಈ ವಿಷಯವನ್ನು ಬೇರೆಯವರಿಗೆ ತಿಳಿಸದಂತೆ ಬೆದರಿಸಿದ್ದಾರೆ' ಎಂದು ಆರೋಪಿಸಿ ಪೋಷಕರು ಪೊಲೀಸರಿಗೆ ದೂರು ನೀಡಿದ್ದರು. ಇದರನ್ವಯ ಮಹಿಳೆ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿದೆ. ಇದೀಗ ಹೈಕೋರ್ಟ್ ಆರೋಪಿ ಮಹಿಳೆ ವಿಚಾರಣೆ ಎದುರಿಸಲಿ ಎಂದಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.54	33,052	31,550
ಹಾರಂಗಿ	2,859	2,857.02	9,735	10,416
ಕಬಿನಿ	2,284.00	2,283.68	22,539	23,846
ಹೇಮಾವತಿ	2,922	2,921.90	32,087	32,925
ಲಿಂಗನಮಕ್ಕಿ	1,819	1,815.05	59,891	3,651
ಸೂಪಾ (ಮೀ)	564	553.64	31,672	435.10
ಮಾಣಿ	595	591.90	9,353	-
ತುಂಗಭದ್ರಾ	1,633	1,625.16	75,500	86,631
ಮಲಪ್ರಭಾ	2,079.5	2,077.50	7,170	5,594
ಘಟಪ್ರಭಾ	2175	2,174.66	13,337	5,290
ಭದ್ರಾ *	186	184.9	34,430	39,245
ಆಲಮಟ್ಟಿ (ಮೀ)	519.6	519.30	87,139	1,50000
ನಾರಾಯಣಪುರ (ಮೀ)	492.25	491.76	1,35,000	1,44,890

* ನೆಲಮಟ್ಟದಿಂದ

ಮಲೆನಾಡು: ನದಿಪಾತ್ರದಲ್ಲಿ ಕಟ್ಟೆಚ್ಚರ

ಹುಬ್ಬಳ್ಳಿ: ಕಿತ್ತೂರು ಕರ್ನಾಟಕ ಭಾಗದ ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ವಿಜಯಪುರ, ವಿಜಯನಗರ ಜಿಲ್ಲೆಯ ವಿವಿಧೆಡೆ ಸೋಮವಾರ ಧಾರಾಕಾರ ಮಳೆ ಸುರಿಯಿತು.

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಬಿರುಸಿನಿಂದ ಹಾಗೂ ಮಲೆನಾಡು ಮತ್ತು ಅರೆ ಮಲೆನಾಡು ಭಾಗದಲ್ಲಿ ನಿರಂತರ ಮಳೆ ಸುರಿಯುತ್ತಿದೆ. ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡಿರುವ ಹಿನ್ನೆಲೆಯಲ್ಲಿ ಮೀನುಗಾರಿಕೆ ದೋಣಿಗಳು ಬಂದರು ಪ್ರದೇಶದಲ್ಲಿ ಲಂಗರು ಹಾಕಿವೆ.

ಹಿಡಕಲ್ ಜಲಾಶಯ (ಹಿಡಕಲ್) ಶೇ 99ರಷ್ಟು ಭರ್ತಿಯಾಗಿದೆ. 30,800 ಕ್ಯೂಸೆಕ್ ನೀರು ಹೊರಬಿಡುವ ಸಾಧ್ಯತೆ ಇದ್ದು, ಘಟಪ್ರಭಾ, ಹಿರಣ್ಯಕೇಶಿ ನದಿಪಾತ್ರದ ಜನತೆಗೆ ಎಚ್ಚರಿಕೆ ನೀಡಲಾಗಿದೆ. ತುಂಗಭದ್ರಾ ಅಣೆಕಟ್ಟೆಗೆ ಅಪಾರ ಪ್ರಮಾಣದಲ್ಲಿ ನೀರು ಬರುತ್ತಿದೆ. 26 ಗೇಟ್ ತೆರೆದು 1.09 ಲಕ್ಷ ಕ್ಯೂಸೆಕ್ ನೀರು ನದಿಗೆ ಹರಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಶಿವಮೊಗ್ಗ: ಉಕ್ಕಿಹರಿದ ನದಿಗಳು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ/ದಾವಣಗೆರೆ: ಧಾರಾಕಾರ ಮಳೆಯಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಜನಜೀವನ ಏರುಪೇರಾಗಿದೆ. ಜಿಲ್ಲೆಯಾದ್ಯಂತ ಕಳೆದ 24 ಗಂಟೆಗಳಲ್ಲಿ ಸರಾಸರಿ 4.16 ಸೆಂ.ಮೀ ಮಳೆ ದಾಖಲಾಗಿದೆ.

ತುಂಗ-ಭದ್ರಾ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ತುಂಗಾ ಜಲಾಶಯದಿಂದ 76,000 ಕ್ಯುಸೆಕ್ ನೀರು ಹೊರಬಿಟ್ಟಿದ್ದು, ಕೋರ್ಪಾಲಯ್ಯನ ಛತ್ರದ ಮಂಟಪ ಮುಳುಗಡೆ ಆಗಿದೆ.

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಉಕ್ಕಡಗಾತ್ರಿ ಸಂಪರ್ಕಿಸುವ ಪತ್ಯಾಪುರ ಸೇತುವೆ ಮುಳುಗಿದೆ.

ತುಂಗಾ ಜಲಾಶಯದಿಂದ 77,000 ಕ್ಯೂಸೆಕ್, ಭದ್ರಾ ಜಲಾಶಯದಿಂದ 40,000 ಕ್ಯೂಸೆಕ್ ನೀರು ನದಿಗೆ ಬಿಡಲಾಗಿದೆ. ಹೊನ್ನಾಳಿಯಲ್ಲಿ ನದಿತೀರದಲ್ಲಿದ್ದ 8 ಕುಟುಂಬವನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಿದೆ.

ಪತ್ಯಾಪುರ ಸೇತುವೆ ಮುಳುಗಿದ್ದು, ಉಕ್ಕಡಗಾತ್ರಿ ಕರಿಬಸವೇಶ್ವರಸ್ವಾಮಿ ಭಕ್ತರು ರಾಣೆಬೆನ್ನೂರು ತಾಲ್ಲೂಕಿನ ತುಮ್ಮಿನಕಟ್ಟೆ, ಮಲ್ಲನಾಯಕನಹಳ್ಳಿ ಮಾರ್ಗವಾಗಿ ಉಕ್ಕಡಗಾತ್ರಿಗೆ ತಲುಪಬೇಕಿದೆ.

ಚಿತ್ರದುರ್ಗ ವರದಿ: ಚಿತ್ರದುರ್ಗ ಜಿಲ್ಲೆಯಲ್ಲಿ ನಿರಂತರ ಮಳೆಯಿಂದಾಗಿ ಹಿರಿಯೂರು, ಚಳ್ಳಕೆರೆ ತಾಲ್ಲೂಕಿನ ಹಲವೆಡೆ ಈರುಳ್ಳಿ ಬೆಳೆ ಕೊಚ್ಚಿಹೋಗಿದೆ.

ಹಾಸನ, ಕೊಡಗಿನಲ್ಲಿ ನಿಲ್ಲದ ಮಳೆ

ಮೈಸೂರು: ಮೈಸೂರು ಭಾಗದ ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಮಳೆ ಮುಂದುವರಿದಿದ್ದು, ಜನಜೀವನ ಅಸ್ತ-ವ್ಯಸ್ತಗೊಂಡಿದೆ. ಹವಾಮಾನ ಇಲಾಖೆ ಕೊಡಗಿಗೆ ಆರೆಂಜ್ ಅಲರ್ಟ್ ನೀಡಿದೆ.

ಕೊಡಗಿನಲ್ಲಿ ಮಂಜು ಆವರಿಸಿದೆ. ಸೋಮವಾರಪೇಟೆ ತಾಲ್ಲೂಕಿನ ಮುಟ್ಲು ಸಮೀಪ ರಸ್ತೆ ಸ್ಪಷ್ಟವಾಗಿ ಕಾಣದೆ, ಸಾರಿಗೆ ಬಸ್ ರಸ್ತೆಯ ದಿಬ್ಬಕ್ಕೆ ಡಿಕ್ಕಿ ಹೊಡೆದಿತ್ತು. ಯಾರಿಗೂ ಗಾಯವಾಗಿಲ್ಲ.

ಸಕಲೇಶಪುರ ತಾಲ್ಲೂಕಿನ ದೋಣಿಗಲ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ತಡೆಗೋಡೆ ಕುಸಿದಿದೆ. ಚತುಷ್ಪಥ ರಸ್ತೆ ಸುರಕ್ಷತೆಗಾಗಿ ಕಟ್ಟಿದ್ದ ಗೇಬಿಯನ್ ವಾಲ್ ಜಖಂಗೊಂಡಿದೆ.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದ ಗೋಸಾಯಿಘಾಟ್, ನಿಮಿಷಾಂಬ ದೇವಾಲಯಗಳು ಭಾಗಶಃ ಮುಳುಗಿದ್ದು, ವೆಲ್ಲೆಸ್ಲಿ ಸೇತುವೆಯವರೆಗೆ ನೀರು ಬಂದಿದೆ.

ಗೌತಮ ಕ್ಷೇತ್ರ ದ್ವೀಪದ ಸಂಪರ್ಕ ಕಡಿತವಾಗಿದೆ. ಗಜಾನನ ಸ್ವಾಮೀಜಿ ಸೇರಿ ನಾಲ್ವರು ಸಿಕ್ಕಿಬಿದ್ದಿದ್ದಾರೆ. ಕಾವೇರಿ ನದಿಯ ನಡುಗಡ್ಡೆಯಲ್ಲಿ ಸಿಲುಕಿದ್ದ ಉತ್ತರಪ್ರದೇಶದ ಲಕ್ಷ್ಮಣ್ ಅವರನ್ನು ರಕ್ಷಿಸಲಾಗಿದೆ.

1.01 ಲಕ್ಷ ಕ್ಯೂಸೆಕ್ ನೀರು ಹೊರಕ್ಕೆ: ಜಲಾನಯನ ಪ್ರದೇಶಗಳಲ್ಲಿ ಮಳೆಯಾಗುತ್ತಿರುವುದರಿಂದ ಹಾರಂಗಿ, ಕೆ.ಆರ್.ಎಸ್ ಹಾಗೂ ಹೇಮಾವತಿ ಜಲಾಶಯದ ಒಳ ಹರಿವಿನ ಪ್ರಮಾಣ ನಿರಂತರವಾಗಿ ಹೆಚ್ಚಾಗುತ್ತಿದೆ.

ಕೆಆರ್‌ಎಸ್‌ನಿಂದ ಸೋಮವಾರ 1.01 ಲಕ್ಷ ಕ್ಯೂಸೆಕ್ ನೀರನ್ನು ಹೊರಕ್ಕೆ ಹರಿಸಿದ್ದು, ಕಾವೇರಿ ನದಿಯಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಬಳಿ ಕಾವೇರಿ ನದಿ ಉಕ್ಕಿ ಹರಿಯುತ್ತಿದೆ.

ಸಕಲೇಶಪುರ ತಾಲ್ಲೂಕಿನ ಹಿರಿದನಹಳ್ಳಿ ಗ್ರಾಮದ ಕಿರಣ್ ಅವರ ಅರ್ಧ ಎಕರೆ ಕಾಫಿ ತೋಟ ಸಂಪೂರ್ಣ ಕುಸಿದಿದ್ದು, ಕಾಫಿ ಗಿಡಗಳು ಮಣ್ಣಿನಲ್ಲಿ ಮುಚ್ಚಿವೆ

ಮಳೆ: ಎಲ್ಲಿ, ಎಷ್ಟು? (ಸೆಂ. ಮೀ.ಗಳಲ್ಲಿ..)

ಶಿವಮೊಗ್ಗ ಜಿಲ್ಲೆ	
ಹೊಸನಗರ	7.25
ಮಾಣಿ	23.8
ಹುಲಿಕಲ್ ಘಾಟಿ	22
ಮಾಸ್ತಿಕಟ್ಟೆ	20.4
ಯಡೂರು	20
ಆಗುಂಬೆ	20.6
ಬೀದರ್ ಜಿಲ್ಲೆ	
ಔರಾದ್, ಕಮಲನಗರ	ತಲಾ 30
ಕಲಬುರಗಿ ಜಿಲ್ಲೆ	
ಯಾಗಾಪುರ	12.35
ಹಾಸನ ಜಿಲ್ಲೆ	
ಹೆತ್ತೂರು	12.3
ಸಕಲೇಶಪುರ	7.1
ಕೊಡಗು ಜಿಲ್ಲೆ	
ಶಾಂತಳ್ಳಿ	8.5
ಸಂಪಾಜೆ, ಹಾನಬಾಳು	7.8
ಶ್ರೀಮಂಗಲ	7.5
ಯಸಳೂರು	6.5
ಭಾಗಮಂಡಲ, ಹುದಕೇರಿ, ವಿರಾಜಪೇಟೆ	6
ಮಡಿಕೇರಿ, ಸೋಮವಾರಪೇಟೆ	5

ಪ್ರಧಾನಿ ಭೇಟಿಯಾದ ರಾಧಾಕೃಷ್ಣನ್

ಪಿಟಿಐ/ ಪ್ರಜಾವಾಣಿ ವಾರ್ತೆ

ನವದೆಹಲಿ: ಉಪರಾಷ್ಟ್ರಪತಿ ಚುನಾವಣೆಗೆ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ತಮ್ಮನ್ನು ಘೋಷಣೆ ಮಾಡಿದ ಬೆನ್ನಲ್ಲೇ ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದ ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರು ಧನ್ಯವಾದ ಸಲ್ಲಿಸಿದರು.

ಎನ್‌ಡಿಎ ಮೈತ್ರಿಕೂಟದ ವಿವಿಧ ಸಭೆಗಳಲ್ಲಿ ಪಾಲ್ಗೊಳ್ಳಲು ಮತ್ತು ಹಲವು ಮುಖಂಡರ ಭೇಟಿಗಾಗಿ ರಾಧಾಕೃಷ್ಣನ್ ಅವರು ಇಲ್ಲಿಗೆ ಆಗಮಿಸಿದ್ದರು.

ರಾಧಾಕೃಷ್ಣನ್ ಅವರು ಭೇಟಿಯಾದ ಮರುಕ್ಷಣವೇ ಪ್ರಧಾನಿ ಮೋದಿ ಅವರು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡರು. 'ರಾಧಾಕೃಷ್ಣನ್ ಅವರಿಗೆ ನನ್ನ ಶುಭಾಶಯ ತಿಳಿಸಿದ್ದೇನೆ. ಅವರ ಸಾರ್ವಜನಿಕ ಸೇವೆ ಮತ್ತು ವಿವಿಧ ಕ್ಷೇತ್ರಗಳಲ್ಲಿನ ಅನುಭವವು ದೇಶವನ್ನು ಇನ್ನಷ್ಟು ಉತ್ಕೃಷ್ಟಗೊಳಿಸ ಲಿದೆ. ಅದೇ ನಿಸ್ವಾರ್ಥ ಕಾರ್ಯವೈಖರಿ ಮತ್ತು ಪರಿಹಾರ ಮಾರ್ಗಗಳ ಮೂಲಕ ತಮ್ಮ ಸೇವೆಯನ್ನು ಮುಂದುವರೆಸಲಿ' ಎಂದು ಮೋದಿ ಹೇಳಿದ್ದಾರೆ. ಮಂಗಳವಾರ ನಡೆಯುವ ಎನ್‌ಡಿಎ ಸಂಸದೀಯ ಪಕ್ಷದ ಸಭೆಯಲ್ಲಿ ರಾಧಾಕೃಷ್ಣನ್ ಅವರನ್ನು ಸನ್ಮಾನಿಸಲಾಗುವುದು.

ಸ್ವಾತಂತ್ರ್ಯ ಸಂಭ್ರಮ...

ಪಿಟಿಐ ಚಿತ್ರ

ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಜನರು ಹೂಗ್ಲಿ ನದಿಯಲ್ಲಿ ರಾಷ್ಟ್ರಧ್ವಜ ಹಿಡಿದು ದೋಣಿ ವಿಹಾರ ನಡೆಸಿದರು. ದೇಶ ವಿಭಜನೆಯ ಸಮಯದಲ್ಲಿ ಬ್ರಿಟಿಷರು ನಕ್ಷೆಯಲ್ಲಿ ಮಾಡಿದ ದೋಷದಿಂದಾಗಿ ಬಾಂಗ್ಲಾದೇಶದ ಗಡಿಗೆ ಹೊಂದಿಕೊಂಡಿರುವ ಪಶ್ಚಿಮ ಬಂಗಾಳದ ಕೆಲವು ಹಳ್ಳಿಗಳಲ್ಲಿ ಆಗಸ್ಟ್ 18ರಂದು ಸ್ವಾತಂತ್ರ್ಯ ದಿನ ಆಚರಿಸಲಾಗುತ್ತದೆ

'ಇಂಡಿಯಾ' ಉಪರಾಷ್ಟ್ರಪತಿ ಅಭ್ಯರ್ಥಿ ಘೋಷಣೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ತನ್ನ ಉಪರಾಷ್ಟ್ರಪತಿ ಸ್ಥಾನದ ಅಭ್ಯರ್ಥಿಯನ್ನು ಮಂಗಳವಾರ ಮಧ್ಯಾಹ್ನ ಘೋಷಿಸುವ ಸಾಧ್ಯತೆಯಿದೆ. ಚಂದ್ರಯಾನ–1 ಯೋಜನೆ ಮುನ್ನಡೆಸಿದ್ದ ಇಸ್ರೊದ ಮಾಜಿ ವಿಜ್ಞಾನಿ ಮೈಲಸ್ವಾಮಿ ಅಣ್ಣಾದೊರೈ ಸೇರಿದಂತೆ ಹಲವು ಹೆಸರುಗಳ ಬಗ್ಗೆ ಚರ್ಚೆ ನಡೆದಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಮಧ್ಯಾಹ್ನ 12.30ಕ್ಕೆ ವಿರೋಧ ಪಕ್ಷಗಳ ನಾಯಕರ ಸಭೆ ಕರೆಯಲಾಗಿದ್ದು, ಆ ಬಳಿಕ ಅಧಿಕೃತ ಘೋಷಣೆ ಹೊರಬೀಳುವ ನಿರೀಕ್ಷೆಯಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಸಭೆಯ ಕುರಿತು ಮಾಡಿರುವ ಟ್ವೀಟ್‌ನಲ್ಲಿ 'ಇಂಡಿಯಾ' ಮೈತ್ರಿಕೂಟ ಎಂಬುದರ ಬದಲು 'ವಿರೋಧ ಪಕ್ಷಗಳು' ಎಂದು ಉಲ್ಲೇಖಿಸಿದ್ದಾರೆ. ಎಎಪಿಯಂತಹ ಪಕ್ಷಗಳೂ ಸಭೆಯಲ್ಲಿ ಪಾಲ್ಗೊಳ್ಳಲಿ ಎಂಬುದು ಇದರ ಹಿಂದಿನ ಉದ್ದೇಶ ಎಂದು ವಿಶ್ಲೇಷಿಸಲಾಗಿದೆ.

ಖರ್ಗೆ ನಿವಾಸದಲ್ಲಿ ಸೋಮವಾರ 'ಇಂಡಿಯಾ' ಮೈತ್ರಿಕೂಟದ ನಾಯಕರ ಸಭೆ ನಡೆದಿದ್ದು, ಉಪರಾಷ್ಟ್ರಪತಿ ಚುನಾವಣೆಗೆ ಅಭ್ಯರ್ಥಿಯನ್ನು ಕಣಕ್ಕಿಳಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು ಎಂದು ಮೂಲಗಳು ತಿಳಿಸಿವೆ.

'ಖರ್ಗೆ ಅವರು ವಿರೋಧ ಪಕ್ಷಗಳ ಎಲ್ಲ ನಾಯಕರ ಜತೆ ಮಾತನಾಡಿದ ಬಳಿಕ ಒಮ್ಮತದಿಂದ ಅಭ್ಯರ್ಥಿಯ ಆಯ್ಕೆ ನಡೆಯಲಿದೆ' ಎಂದು ಮೂಲಗಳು ಹೇಳಿವೆ.

ಬಾಹ್ಯಾಕಾಶ ನೀತಿ ಕುರಿತ ಚರ್ಚೆಯಲ್ಲಿ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಮಾಹಿತಿ

'ಆಕ್ಸಿಯಂ–4' ಮಿಷನ್‌ಗೆ ₹548 ಕೋಟಿ ವೆಚ್ಚ

ನವದೆಹಲಿ (ಪಿಟಿಐ): 'ಆಕ್ಸಿಯಂ–4'ರ ಭಾಗವಾಗಿ ಜೂನ್ 25ರಿಂದ ಜುಲೈ 15ರವರೆಗೆ ಬಾಹ್ಯಾಕಾಶ ದಲ್ಲಿ ಕಳೆದಿದ್ದ ಶುಭಾಂಶು ಅವರಿಗೆ ಭಾರತವು ₹548 ಕೋಟಿ ವ್ಯಯಿಸಿದೆ' ಎಂದು ಕೇಂದ್ರ ಬಾಹ್ಯಾಕಾಶ ಹಾಗೂ ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಲೋಕಸಭೆಯಲ್ಲಿ ಮಾಹಿತಿ ನೀಡಿದರು. ಕಾರ್ಯಾಚರಣೆಗೆ ತಗುಲಿದ ವೆಚ್ಚಗಳ ಕುರಿತು ಮೊದಲ ಸಲ ಅಧಿಕೃತವಾಗಿ ಮಾಹಿತಿ ನೀಡಲಾಗಿದೆ.

ಕೆಳಮನೆಯಲ್ಲಿ ಪ್ರತಿಪಕ್ಷಗಳ ಗದ್ದಲದ ನಡುವೆಯೇ ಸಚಿವರು ಈ ವಿಷಯ ಬಹಿರಂಗಪಡಿಸಿದರು. 'ನಾವು ಆಕ್ಸಿಯಂ-4' ಯೋಜನೆಗೆ ₹548 ಕೋಟಿ (65 ಮಿಲಿಯನ್ ಡಾಲರ್) ಖರ್ಚು ಮಾಡಿದ್ದು, ವಿಶ್ವದ ಇದೇ ಮಾದರಿಯ ಯೋಜನೆಗಳಿಗೆ ಹೋಲಿಸಿದರೆ ಕಡಿಮೆ ಮೊತ್ತವಾಗಿದೆ. ವೆಚ್ಚದ ಪರಿಣಾಮಕಾರಿ ಕಾರ್ಯತಂತ್ರದಲ್ಲಿ ನಾವು ವಿಶೇಷ ಪರಿಣತಿ ಹೊಂದಿದ್ದೇವೆ. ಚಂದ್ರಯಾನ್–3 ಯೋಜನೆಗೆ ₹600 ಕೋಟಿ ಖರ್ಚಾಗಿದ್ದು, ಗಗನಯಾನ್ ಬಜೆಟ್ ₹10 ಸಾವಿರ ಕೋಟಿಯಾಗಿರಲಿದೆ' ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದ ಗಗನಯಾತ್ರಿ ಶುಭಾಂಶು ಶುಕ್ಲಾ

ಈ ವೇಳೆ ಮಾತನಾಡಿದ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, 'ಬಾಹ್ಯಾಕಾಶದಂತಹ ವಿಚಾರವು 21ನೇ ಶತಮಾನದಲ್ಲಿ ಭಾರತದ ವೈಜ್ಞಾನಿಕ ಹಾಗೂ ಕಾರ್ಯತಂತ್ರದ ದೂರದೃಷ್ಟಿಗೆ ಅತ್ಯಂತ ಮಹತ್ವದ್ದಾಗಿದೆ. ಕನಿಷ್ಠ ಪಕ್ಷವು ಈ ವಿಚಾರವು ಪಕ್ಷಪಾತದ ರಾಜಕೀಯದಿಂದ ಹೊರಗಿರಬೇಕು' ಎಂದು ಸಲಹೆ ನೀಡಿದರು.

'ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರು ಬಾಹ್ಯಾಕಾಶದ-ಲ್ಲಿ ಕಳೆದು ಹಿಂತಿರುಗಿದ ವಿಚಾರದ ಕುರಿತಂತೆ ಲೋಕಸಭೆಯಲ್ಲಿ ವಿಶೇಷ ಚರ್ಚೆ ನಿಗದಿಯಾಗಿದೆ. ಪ್ರತಿಪಕ್ಷಗಳು ಸದನದಲ್ಲಿ ಗದ್ದಲ ಎಬ್ಬಿಸುತ್ತಿದ್ದು, ಸುಗಮ ಕಲಾಪಕ್ಕೆ ಅವಕಾಶ ನೀಡದಿರುವುದು ದುರದೃಷ್ಟಕರ' ಎಂದು ತಿಳಿಸಿದರು.

'ವಿರೋಧ ಪಕ್ಷದ ಸದಸ್ಯರು ಕೂಡ ಭಾರತೀಯ ಬಾಹ್ಯಾಕಾಶ ಯೋಜನೆಯ ಚರ್ಚೆಯಲ್ಲಿ ಭಾಗವಹಿಸಿ ರಚನಾತ್ಮಕ ವಿಮರ್ಶೆ, ಟೀಕೆ ಹಾಗೂ ಸಲಹೆಗಳನ್ನು ನೀಡಬಹುದಿತ್ತು' ಎಂದು ಹೇಳಿದರು.

2040ಕ್ಕೆ ಚಂದ್ರನಲ್ಲಿ ಕಾಲಿಡಲಿರುವ ಭಾರತದ ಗಗನಯಾತ್ರಿ: ಜಿತೇಂದ್ರ ಸಿಂಗ್

'ಭಾರತದ ಗಗನಯಾತ್ರಿಯೊಬ್ಬರು 2040ಕ್ಕೆ ಚಂದ್ರನ ಅಂಗಳಕ್ಕೆ ಕಾಲಿಡಲಿದ್ದು, 'ವಿಕಸಿತ ಭಾರತ'ಕ್ಕೆ ಆ ಸಂದರ್ಭ ಸಾಕ್ಷಿಯಾಗಲಿದೆ' ಎಂದು ಕೇಂದ್ರ ಭೂ ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ತಿಳಿಸಿದರು.

ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ (ಐಎಸ್‌ಎಸ್) ಭಾರತಕ್ಕೆ ಮರಳಿದ್ದರಿಂದ ಲೋಕಸಭೆಯಲ್ಲಿ ಸೋಮವಾರ ನಡೆದ ಚರ್ಚೆಯಲ್ಲಿ ಈ ವಿಷಯ ಪ್ರಸ್ತಾಪಿಸಿದರು.

ರೇಬಿಸ್: ಬಾಲಕಿ ಸಾವು

ದಾವಣಗೆರೆ: ಐದು ತಿಂಗಳ ಹಿಂದೆ ಬೀದಿನಾಯಿ ಕಚ್ಚಿದ್ದರಿಂದ ರೇಬಿಸ್ ಕಾಯಿಲೆಗೆ ತುತ್ತಾಗಿದ್ದ ಬಾಲಕಿಯೊಬ್ಬಳು ಭಾನುವಾರ ರಾತ್ರಿ ಮೃತಪಟ್ಟಿದ್ದಾಳೆ. ನಗರದ ಶಾಸ್ತ್ರಿ ಬಡಾವಣೆಯ ಖದೀರಾ ಬಾನು (4) ಮೃತ ಬಾಲಕಿ.'ಮನೆ ಬಳಿ ಆಟವಾಡುವಾಗ ಖದೀರಾ ಮೇಲೆ ನಾಯಿ ದಾಳಿ ನಡೆಸಿದ್ದು, ಚಿಕಿತ್ಸೆ ಕೊಡಿಸಲಾಗಿತ್ತು. ತಿಂಗಳ ಬಳಿಕ ಆರೋಗ್ಯ ಸ್ಥಿತಿಯು ಹದಗೆಟ್ಟಿದ್ದು, ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸ ಲಾಗಿತ್ತು ಎಂದು ಬಾಲಕಿಯ ಚಿಕ್ಕಪ್ಪ ಮೊಹಮ್ಮದ್ ಸಾಯಿದ್ ಅಲಿ ತಿಳಿಸಿದ್ದಾರೆ.



ಖದೀರಾ

'ಜನವಿಶ್ವಾಸ್' ಮಸೂದೆ ಲೋಕಸಭೆಯಲ್ಲಿ ಮಂಡನೆ

ನವದೆಹಲಿ (ಪಿಟಿಐ): ಸಣ್ಣ ಪುಟ್ಟ ತಪ್ಪುಗಳಿಗೆ ಶಿಕ್ಷೆಯಿಂದ ವಿನಾಯಿತಿ ನೀಡುವ, ಸುಗಮ ಜೀವನ ನಿರ್ವಹಣೆ ಹಾಗೂ ಸುಲಲಿತ ವ್ಯವಹಾರಕ್ಕೆ ಅನುವು ಮಾಡಿಕೊಡುವ ಉದ್ದೇಶದ 'ಜನ ವಿಶ್ವಾಸ್ (ತಿದ್ದುಪಡಿ)–2025' ಮಸೂದೆಯನ್ನು ಸೋಮವಾರ ಲೋಕಸಭೆಯಲ್ಲಿ ಮಂಡಿಸಲಾಗಿದೆ.

ಪೀಯೂಷ್ ಗೋಯಲ್

ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ಮಸೂದೆಯನ್ನು ಮಂಡಿಸಿದರು. ವ್ಯಾಪಾರ ನಡೆಸುವವರಲ್ಲಿ ವಿಶ್ವಾಸ ಮೂಡಿಸುವ ಗುರಿಯನ್ನು ಈ ಮಸೂದೆ ಹೊಂದಿದೆ. ಇದನ್ನು ಆಯ್ಕೆ ಸಮಿತಿಗೆ ವರ್ಗಾಯಿಸಲಾಗಿದೆ. ಸಂಸತ್‌ನ ಮುಂದಿನ ಅಧಿವೇಶನದ ಮೊದಲ ದಿನದಂದು ಈ ಸಮಿತಿಯು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದೆ.

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ವಿಶೇಷ ಸಮಗ್ರ ಪಟ್ಟಿ ಪರಿಷ್ಕರಣೆ ಹಾಗೂ ಇತರೆ ವಿಚಾರಗಳಿಗೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ಕೋರಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿದರೂ ಮಸೂದೆಯನ್ನು ಮಂಡಿಸಲಾಯಿತು.

ಈ ಮಸೂದೆಯ ಮೂಲಕ 335 ನಿಬಂಧನೆಗಳನ್ನು ತಿದ್ದುಪಡಿ ಮಾಡುವ ಪ್ರಸ್ತಾವವಿದೆ.

ವ್ಯವಹಾರಗಳನ್ನು ಸರಳೀಕರಿಸಲು 288 ನಿಬಂಧನೆಗಳನ್ನು ಅಪರಾಧ ಮುಕ್ತಗೊಳಿಸಲಾಗುತ್ತಿದ್ದು, 67 ನಿಬಂಧನೆಗಳು ಸುಗಮ ಜೀವನಕ್ಕೆ ಸಂಬಂಧಿಸಿರಲಿವೆ.

ಸಮಗ್ರ ಅಭಿವೃದ್ಧಿ, ವ್ಯಾಪಾರ ಸರಳ

ಭಾರತೀಯ ಬಂದರುಗಳ ಮಸೂದೆ–2025ಕ್ಕೆ ರಾಜ್ಯಸಭೆಯು ಸೋಮವಾರ ಅಂಗೀಕಾರ ನೀಡಿತು.

ಬಂದರುಗಳಿಗೆ ಸಂಬಂಧಿಸಿದ ಕಾನೂನುಗಳ ಕ್ರೋಡೀಕರಣ, ಬಂದರಿನ ಸಮಗ್ರ ಅಭಿವೃದ್ಧಿಗೆ ಉತ್ತೇಜನ, ವ್ಯಾಪಾರವನ್ನು ಸರಳಗೊಳಿಸುವಿಕೆ ಹಾಗೂ ದೇಶದ ಕರಾವಳಿಯ ಗರಿಷ್ಠ ಬಳಕೆಯ ಖಾತ್ರಿಯನ್ನು ಮಸೂದೆಯು ಒಳಗೊಂಡಿದೆ.

ಲೋಕಸಭೆಯಲ್ಲಿ ಆ.12ರಂದು ಅಂಗೀಕಾರಗೊಂಡಿದ್ದ ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಗದ್ದಲದ ನಡುವೆಯೂ ಸೋಮವಾರ ಮಂಡಿಸಲಾಯಿತು.

ಕಲ್ಲೆ ಶಿವೋತ್ತಮರಾವ್‌ಗೆ ಅರಸು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2025–26ನೇ ಸಾಲಿನ 'ಡಿ.ದೇವರಾಜು ಅರಸು ಪ್ರಶಸ್ತಿ'ಗೆ ಪತ್ರಕರ್ತ ಕಲ್ಲೆ ಶಿವೋತ್ತಮರಾವ್ ಅವರನ್ನು ರಾಜ್ಯ ಸರ್ಕಾರ ಆಯ್ಕೆ ಮಾಡಿದೆ.

ಶಿವೋತ್ತಮರಾವ್

'ಸಾಮಾಜಿಕ ನ್ಯಾಯದ ಪರವಾಗಿ ಅವರು ನಡೆಸಿದ ಹೋರಾಟ, ದೇವರಾಜು ಅರಸು ಅವರ ತತ್ವ–ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಅವರ ಶ್ರಮ ಮತ್ತು ಪತ್ರಕರ್ತ ರಾಗಿ ನೀಡಿದ ಕೊಡುಗೆಯಿಂದಾಗಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಸರ್ಕಾರ ತನ್ನ ಆದೇಶದಲ್ಲಿ ತಿಳಿಸಿದೆ.

ಪ್ರಶಸ್ತಿಯು ₹5 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ವಿಧಾನಸೌಧದಲ್ಲಿ ಆ.20ರಂದು ಬೆಳಿಗ್ಗೆ 10.45ಕ್ಕೆ ನಡೆಯುವ ದೇವರಾಜ ಅರಸು ಅವರ 110ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಉಡುಪಿ ಜಿಲ್ಲೆಯ ಕಾರ್ಕಳದವರಾದ 95ರ ವಯೋಮಾನದಲ್ಲಿರುವ ಕಲ್ಲೆ ಶಿವೋತ್ತಮರಾವ್ 14ನೇ ವಯಸ್ಸಿನಲ್ಲಿಯೇ ಮಂಗಳೂರಿನ ನವಭಾರತ ದೈನಿಕದ ವರದಿಗಾರರಾಗಿ ಕೆಲಸ ಆರಂಭಿಸಿದ್ದರು. ರಾಷ್ಟ್ರಬಂಧು, ರಾಷ್ಟ್ರಮತ, ತಾಯಿನಾಡು, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಕಂಠೀರವ ಪತ್ರಿಕೆಗಳಲ್ಲಿ ವರದಿಗಾರರಾಗಿ, ಜನ ಪ್ರಗತಿಯ ಸಂಪಾದಕರಾಗಿ ಕಾರ್ಯನಿ-ರ್ವಹಿಸಿದ್ದಾರೆ.

'ಜಯಪ್ರಕಾಶ ನಾರಾಯಣ, ರಾಮ ಮನೋಹರ ಲೋಹಿಯಾ ಮತ್ತು ಪೆರಿಯಾರ್ ಚಳವಳಿಗಳ ಪ್ರತಿಪಾದನೆಗಳ ಅನುಯಾಯಿಯಾಗಿದ್ದ ಶಿವೋತ್ತಮ ರಾವ್ ಅವರು, ಹಾವನೂರ ಆಯೋಗ ರಚನೆಗೂ ಮುನ್ನವೇ ಸಾಮಾಜಿಕ ನ್ಯಾಯದ ಪರವಾಗಿ ಹೋರಾಟ ನಡೆಸಿದ್ದರು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಪತ್ರಿಕೆಗಳ ಸಂಪಾದಕರಾಗಿದ್ದ ಅವಧಿಯಲ್ಲಿ ಹಿಂದುಳಿದ ವರ್ಗಗಳ ಯುವಕರಿಗೆ ವರದಿಗಾರಿಕೆಯ ಅವಕಾಶ ನೀಡಿದ್ದರು' ಎಂದು ವಿವರಿಸಲಾಗಿದೆ.

ಡಾ.ವಿಷ್ಣು ಸೇನಾ ಸಮಿತಿಯ ವೀರಕಪುತ್ರ ಶ್ರೀನಿವಾಸ್ ಹೇಳಿಕೆ

'ಅರ್ಧ ಎಕರೆಯಲ್ಲಿ ದರ್ಶನ ಕೇಂದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟ ಸುದೀಪ್ ಅವರ ನೇತೃತ್ವದಲ್ಲಿ ಕೆಂಗೇರಿ ಸಮೀಪ ಅಭಿಮಾನ್ ಸ್ಟುಡಿಯೊದಿಂದ ಮೂರ್ನಾಲ್ಕು ಕಿ.ಮೀ. ದೂರದಲ್ಲಿ ನಟ ವಿಷ್ಣುವರ್ಧನ್ ಅವರ ದರ್ಶನ ಕೇಂದ್ರ ಮಾಡಲಿದ್ದೇವೆ' ಎಂದು ಡಾ.ವಿಷ್ಣು ಸೇನಾ ಸಮಿತಿಯ ವೀರಕಪುತ್ರ ಶ್ರೀನಿವಾಸ್ ಹೇಳಿದರು.

ವಿಷ್ಣುವರ್ಧನ್

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜಾಗ ಎಲ್ಲಿದೆ ಎನ್ನುವುದನ್ನು ಕೆಲವೇ ದಿನಗಳಲ್ಲಿ ಹೇಳುತ್ತೇವೆ. ಇಲ್ಲಿರುವ ಅರ್ಧ ಎಕರೆ ಜಾಗವನ್ನು ಸುದೀಪ್ ಅವರೇ ಖರೀದಿಸಿದ್ದಾರೆ. ಸೆ.2ರಂದು ಸುದೀಪ್ ಅವರ ಜನ್ಮದಿನದಂದು ಈ ದರ್ಶನ ಕೇಂದ್ರ ಹೇಗಿರಲಿದೆ ಎನ್ನುವ ಮಾದರಿಯನ್ನು ಬಿಡುಗಡೆ ಮಾಡುತ್ತೇವೆ. ಸೆ.18ಕ್ಕೆ ಅಡಿಗಲ್ಲು ಹಾಕುತ್ತೇವೆ. ಬೆಂಗಳೂರಿನಲ್ಲಿ ವಿಷ್ಣುವರ್ಧನ್ ಅವರ ಜನ್ಮ ದಿನಾಚರಣೆಗೆ ಒಂದು ಜಾಗ ಈಗಿಲ್ಲ. ಹೀಗಾಗಿ ಒಂದು ಪರ್ಯಾಯ ದರ್ಶನ ಕೇಂದ್ರ ಬೇಕಾಗಿದೆ. ಒಂದು ವರ್ಷದೊಳಗೆ ಈ ಕೇಂದ್ರದ ನಿರ್ಮಾಣ ಆಗಲಿದೆ. ಇಲ್ಲಿ ವಿಷ್ಣುವರ್ಧನ್ ಅವರ 25 ಅಡಿ ಎತ್ತರದ ಪುತ್ಥಳಿ, ಗ್ರಂಥಾಲಯ ಮಾಡುವ ಯೋಜನೆ ಇದೆ. ಅಭಿಮಾನಿಗಳಿಂದಲೇ ಈ ದರ್ಶನ ಕೇಂದ್ರ ನಿರ್ಮಾಣವಾಗಲಿದೆ' ಎಂದರು.

'ಮೈಸೂರಿನ ಸ್ಮಾರಕಕ್ಕೆ ಅದರದ್ದೇ ಆದ ಘನತೆ ಇದೆ. ದರ್ಶನ ಕೇಂದ್ರ ಇದಕ್ಕೆ ಸಮ ಎಂದು ಹೇಳುವುದಿಲ್ಲ. ಇದನ್ನು ಹೇಗೆ ಪ್ರವಾಸಿ ಕೇಂದ್ರವಾಗಿ ಮತ್ತು ಅರ್ಥಪೂರ್ಣ ಕೆಲಸಗಳಿಗೆ ವೇದಿಕೆಯಾಗಿ ಬಳಸಿಕೊಳ್ಳಲಿ-ದ್ದೇವೆ ಎನ್ನುವುದನ್ನು ಸೆ.2ರಂದು ಹೇಳುತ್ತೇವೆ. ವಿಷ್ಣುವರ್ಧನ್ ಅವರ ಪುಣ್ಯಭೂಮಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಇಡೀ ಅಭಿಮಾನ್ ಸ್ಟುಡಿಯೊ ಜಾಗದ ವಿಚಾರವನ್ನೂ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಲಿದ್ದೇವೆ. ಆ ಜಾಗವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಆಗ್ರಹಿಸಿ ಹೋರಾಟ ಮಾಡುವ ನಿರ್ಧಾರಕ್ಕೆ ಬಂದಿದ್ದೇವೆ' ಎಂದರು.

'ವಿಷ್ಣುವರ್ಧನ್ ಅವರ ಸ್ಮಾರಕ ವಿಚಾರ ಬಂದಾಗಲಷ್ಟೇ ಕೆಲವರು 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎನ್ನುತ್ತಾರೆ. ಬಹುತೇಕರು ಈ ವಿಷಯದಿಂದ ಅಂತರ ಕಾಪಾಡಿಕೊಂಡಿದ್ದು, ಇದು ಖಂಡನೀಯ' ಎಂದು ಹೇಳಿದರು.

'ವಿಷ್ಣುವರ್ಧನ್ ಅವರ ಅಮೃತ ಮಹೋತ್ಸವಕ್ಕೆ ಕುಟುಂಬದವರು ಬರುತ್ತಾರೆ ಎಂದು ಕಾದೆವು. ಅವರು ಬರಲು ಸಾಧ್ಯವಿಲ್ಲ ಎಂದು ತಿಳಿಸಿದರು. ಹೀಗಾಗಿ ಮುಂದೂಡಿದ್ದೇವೆ. ಸೆ.18ರಂದು ಅಮೃತ ಮಹೋತ್ಸವ ಕಾರ್ಯಕ್ರಮ ಸರಳವಾಗಿ ನಡೆಯಲಿದೆ' ಎಂದು ತಿಳಿಸಿದರು.

'ಅಭಿಮಾನಿಗಳ ಹೃದಯವೇ ಗುಡಿ'

ನಟ ವಿಷ್ಣುವರ್ಧನ್ ಅವರ ಸ್ಮಾರಕ ನೆಲಸಮ ವಿಚಾರಕ್ಕೆ ಸಂಬಂಧಿಸಿದಂತೆ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ನಟಿ ರಮ್ಯಾ, 'ಸಾಧಕನಿಗೆ ಸಾವಿಲ್ಲ, ಅಭಿಮಾನಿಗಳ ಹೃದಯವೇ ನಿಮಗೆ ಗುಡಿ' ಎಂದು ಉಲ್ಲೇಖಿಸಿದ್ದಾರೆ.

‘ಒಳಮೀಸಲಾತಿ ವರದಿ ಪರಿಷ್ಕರಿಸಿ’

ರಾಜ್ಯ ಬಲಗೈ ಜಾತಿಗಳ ಒಕ್ಕೂಟದಿಂದ ಬೆಂಗಳೂರಿನಲ್ಲಿ ಪ್ರತಿಭಟನೆ

ಮುಖ್ಯಾಂಶಗಳು
- ವಿವಿಧ ಜಿಲ್ಲೆಗಳಿಂದ ಪ್ರತಿಭಟನಕಾರರ ಆಗಮನ
- ‘ಮೀಸಲಾತಿ ಹಂಚಿಕೆ ಬಗ್ಗೆ ಗೊಂದಲ ಸೃಷ್ಟಿಯಾಗಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾ. ನಾಗಮೋಹನದಾಸ್ ಆಯೋಗ ಸಲ್ಲಿಸಿರುವ ವರದಿಯು ಅವೈಜ್ಞಾನಿಕ ಹಾಗೂ ದುರುದ್ದೇಶದಿಂದ ಕೂಡಿದೆ ಎಂದು ಆರೋಪಿಸಿರುವ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಪ್ರತಿಭಟನಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಅಧಿಕಾರದ ವ್ಯಾಪ್ತಿ ಮೀರಿ ಕೆಲವು ಅಂಶಗಳನ್ನು ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಗೊಂದಲಮಯ ಆಗಿರುವ ವರದಿಯನ್ನು ಪರಿಷ್ಕರಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಮೀಕ್ಷೆಯನ್ನು ಸಮರ್ಪಕವಾಗಿ ನಡೆಸಿಲ್ಲ. ಮನೆಗಳಿಗೆ ಕೇವಲ ಚೀಟಿಗಳನ್ನು ಅಂಟಿಸುವ ಮೂಲಕ ಆಯೋಗದ ಸಮೀಕ್ಷೆ ಪೂರ್ಣಗೊಳಿಸಲಾಗಿದೆ ಎಂದು ತಿಳಿಸಲಾಗಿದೆ. ಸಮೀಕ್ಷೆಗೆ ಆ್ಯಪ್‌ವೊಂದನ್ನು ಸಿದ್ಧಪಡಿಸಲಾಗಿತ್ತು. ಆ ಆ್ಯಪ್ ಅನ್ನು ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಲು ಕೆಲವರಿಗೆ ಸಾಧ್ಯವಾಗಿರಲಿಲ್ಲ. ನಗರ ಸ್ಥಳೀಯ ಸಂಸ್ಥೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲ ಕುಟುಂಬಗಳ ಸಮೀಕ್ಷೆಯನ್ನೂ ನಡೆಸಿಲ್ಲ. ಆದ್ದರಿಂದ, ವರದಿಯನ್ನು ಪರಿಷ್ಕರಿಸಬೇಕು’ ಎಂದು ಮೈಸೂರು ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಆಗ್ರಹಿಸಿದರು.

ಆಯೋಗಕ್ಕೆ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳು ಸರಿಯಾಗಿದ್ದರೂ ಸಹ ಆಯೋಗವು ನೀಡಿದ ವರದಿಗೂ, ಸರ್ಕಾರದ ಮಾನದಂಡದ ಆಶಯಗಳಿಗೂ ತಾಳೆಯಾಗಿಲ್ಲ. ಕೆಲವು ಜಾತಿಗಳ ಸಾಕ್ಷರತಾ ಪ್ರಮಾಣವು ಶೇ 60ಕ್ಕಿಂತ ಕಡಿಮೆ ಇದ್ದು ಅವುಗಳನ್ನು ಅತಿ ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿಸಿ, ಒಳ ಮೀಸಲಾತಿ ಹಂಚಿಕೆಗೆ ತೊಡಕಾಗುವ ರೀತಿಯಲ್ಲಿ ಗೊಂದಲ ಸೃಷ್ಟಿಸಲಾಗಿದೆ ಎಂದು ಪ್ರತಿಭಟನಕಾರರು ಹೇಳಿದರು.

ರಾಜ್ಯ ಸಂಚಾಲಕ ಸಿದ್ದಯ್ಯ, ವಾಣಿ ಶಿವರಾಂ ಸೇರಿದಂತೆ ಹಲವರು ಹಾಜರಿದ್ದರು.

ನಾಗಮೋಹನದಾಸ್ ಆಯೋಗವು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ವರದಿಯು ಅವೈಜ್ಞಾನಿಕವಾಗಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು (ಎಡ ಚಿತ್ರ) ಮಾದಿಗ ದಂಡೋರ ಸದಸ್ಯರು ಒಳ ಮೀಸಲಾತಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರಗಳು

ದೋಷ ಸರಿಪಡಿಸಿ: ಆಗ್ರಹ

ನ್ಯಾ.ನಾಗಮೋಹನದಾಸ್ ವರದಿಯಲ್ಲಿರುವ ದೋಷ ಸರಿಪಡಿಸಿ ಅನುಷ್ಠಾನಗೊಳಿಸಬೇಕು ಎಂದು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ಆಗ್ರಹಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸೋಮವಾರ ಭೇಟಿಯಾದ ಒಕ್ಕೂಟದ ಪದಾಧಿಕಾರಿಗಳು ಈ ಕುರಿತು ಮನವಿ ಸಲ್ಲಿಸಿದರು.

ನೂರೊಂದು ಪರಿಶಿಷ್ಟ ಸಹೋದರ ಸಮುದಾಯಗಳ ಏಕತೆಯನ್ನು ಕಾಪಾಡಿಕೊಂಡು ಮೀಸಲಾತಿ ಹಂಚಿಕೆಯಲ್ಲಿ ಸಮಪಾಲು ಪಡೆಯುವ ದೃಷ್ಟಿಯಿಂದ ಒಕ್ಕೂಟದ ನೇತೃತ್ವದಲ್ಲಿ ಸಭೆ ನಡೆಸಿ ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಒಳಮೀಸಲಾತಿಗೆ ಸಂಬಂಧಿಸಿದಂತೆ ನೀಡಿರುವ ವರದಿಯಲ್ಲಿ ತಾಂತ್ರಿಕ ದೋಷಗಳಿವೆ. ಅವುಗಳನ್ನು ಪರಿಷ್ಕರಿಸಬೇಕು. ಮೀಸಲಾತಿ ಹಂಚಿಕೆಗಾಗಿ ಮಾಡಿದ ಗುಂಪು ರಚನೆಯಲ್ಲಿ, ಕುಟುಂಬ ಮತ್ತು ಸಮುದಾಯಗಳ ಹಿಂದುಳಿದಿರುವಿಕೆಯ ದತ್ತಾಂಶಗಳಲ್ಲಿ ನ್ಯೂನತೆ ಇದೆ. ಇದನ್ನು ಸರಿಪಡಿಸಬೇಕು. ಅನುಷ್ಠಾನದಲ್ಲಿ ಯಾವುದೇ ಸಮುದಾಯಕ್ಕೆ ಅನ್ಯಾಯವಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಒಕ್ಕೂಟದ ಮನವಿ ಹೇಳಿದೆ.

ಮುಖ್ಯಮಂತ್ರಿ ಭೇಟಿಯಾದ ನಿಯೋಗದಲ್ಲಿ ಗುರುಪ್ರಸಾದ್ ಕೆರಗೋಡು, ಇಂದೂಧರ ಹೊನ್ನಾಪುರ, ಮಾವಳ್ಳಿ ಶಂಕರ್, ಎನ್. ವೆಂಕಟೇಶ್, ಎನ್. ಮುನಿಸ್ವಾಮಿ, ವಿ. ನಾಗರಾಜ, ಅನಂತನಾಯಕ್ ಎನ್., ಎಂ. ವೆಂಕಟೇಶ್, ಆದರ್ಶ ಯಲ್ಲಪ್ಪ, ವೆಂಕಟೇಶ್ ವೊರ್ಸೆ, ಮೋಹನ್ ಎಳ್ಳಿಕಾರೆ, ಮರಿಯಪ್ಪ ಹಳ್ಳಿ ಭಾಗವಹಿಸಿದ್ದರು.

ವರದಿ ಜಾರಿಗೆ ಆಗ್ರಹಿಸಿ ಧರಣಿ

ನಾಗಮೋಹನದಾಸ್ ಆಯೋಗವು ಸಲ್ಲಿಸಿರುವ ವರದಿಯನ್ನು ತಕ್ಷಣವೇ ಜಾರಿ ಮಾಡಬೇಕು ಎಂದು ಒತ್ತಾಯಿಸಿ ಮಾದಿಗ ಮೀಸಲಾತಿ ಹೋರಾಟ ಸಮಿತಿಯ (ಮಾದಿಗ ದಂಡೋರ) ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

‘ಒಳಮೀಸಲಾತಿ ವರದಿಯನ್ನು ತಕ್ಷಣವೇ ಜಾರಿ ಮಾಡಬೇಕು. ವರದಿ ಜಾರಿ ಮಾಡದಿದ್ದರೆ ರಾಜ್ಯದಾದ್ಯಂತ ಹೋರಾಟ ತೀವ್ರಗೊಳಿಸುತ್ತೇವೆ’ ಎಂದು ಪ್ರತಿಭಟನಕಾರರು ಎಚ್ಚರಿಸಿದರು. ಮಾದಿಗ ಹಾಗೂ ಮಾದಿಗ ಉಪ ಜಾತಿಗಳಿಗೆ ಶೇ 7ರಷ್ಟು ಮೀಸಲಾತಿ ಕಲ್ಪಿಸುವ ವರದಿಯನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ರಾಜ್ಯ ಅಧ್ಯಕ್ಷ ಬಿ.ನರಸಪ್ಪ ದಂಡೋರ, ದೇವರಾಜ್, ರಾಮಕೃಷ್ಣ ಪಾಲ್ಗೊಂಡಿದ್ದರು.

‘ಮಾದಿಗ ಮುಖಂಡರೇ ಬನ್ನಿ’

ಒಳಮೀಸಲಾತಿ ಜಾರಿಯಾಗುವ ಮೂಲಕ ನಮ್ಮ ಬಹುವರ್ಷಗಳ ಕನಸು ನನಸಾಗುತ್ತಿದೆ. ಈ ಸಂದರ್ಭದಲ್ಲಿ ವಿಜಯೋತ್ಸವ ಆಚರಿಸಲು ಮಾದಿಗ ಸಮುದಾಯದ ಮುಖಂಡರು, ನೈಜ ಹೋರಾಟಗಾರರು ಆಗಸ್ಟ್ 19ರಂದು ಮಧ್ಯಾಹ್ನ 3ಕ್ಕೆ ಸ್ವಾತಂತ್ರ್ಯ ಉದ್ಯಾನಕ್ಕೆ ಬರಬೇಕು ಎಂದು ಮಾಜಿ ಸಚಿವ ಎಚ್. ಆಂಜನೇಯ ತಿಳಿಸಿದ್ದಾರೆ.

ಒಳ ಮೀಸಲಾತಿ ಜಾರಿಯಾದರೆ ಹಲವು ಅವಕಾಶಗಳು, ಸೌಲಭ್ಯಗಳು ಹರಿದು ಬರಲಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಳಮೀಸಲಾತಿ ಜಾರಿಗೊಳಿಸುವ ಐತಿಹಾಸಿಕ ನಿರ್ಣಯ ಕೈಗೊಳ್ಳಲಿದ್ದಾರೆ ಎಂದಿದ್ದಾರೆ.

ಕೊಲೆ ಆರೋಪ ಮಾಡಿದ್ದು ಯಾರು?

ಪ್ರಜಾವಾಣಿ ವಾರ್ತೆ

ಮಂಗಳೂರು: 2023ರ ಮೇ 22ರಂದು ವಿಧಾನಸಭಾ ಚುನಾವಣೆ ಬಳಿಕ ಬೆಳ್ತಂಗಡಿಯಲ್ಲಿ ನಡೆದಿದ್ದ ಬಿಜೆಪಿ ಅಭಿನಂದನಾ ಸಭೆಯಲ್ಲಿ ತುಳುವಿನಲ್ಲಿ ಮಾತನಾಡಿದ್ದ ಶಾಸಕ ಹರೀಶ್ ಪೂಂಜ, ‘ಸಿ.ಎಂ ಸಿದ್ದರಾಮಯ್ಯ ಅವರು 24 ಹಿಂದೂಗಳ ಹತ್ಯೆ ಮಾಡಿದ್ದಾರೆ’ ಎಂದು ಆರೋಪಿಸಿದ್ದರು.

ಹರೀಶ್ ಪೂಂಜ

ಬ್ರಹ್ಮಶ್ರೀ ನಾರಾಯಣ ಗುರು ವಿಚಾರ ವೇದಿಕೆ ಅಧ್ಯಕ್ಷ ಸತ್ಯಜಿತ್ ಸುರತ್ಕಲ್ ಹೆಸರು ಉಲ್ಲೇಖಿಸಿ ಮಾತನಾಡಿದ್ದ ಪೂಂಜ, ‘ಸಿದ್ದರಾಮಯ್ಯ ಪರ, ಬಜರಂಗದಳ ನಿಷೇಧಿಸುತ್ತೇನೆ ಎಂದ ಕಾಂಗ್ರೆಸ್ ಪರ ಮತ ಕೇಳಿದ್ದೀರಲ್ಲವೇ? ಸತ್ಯಣ್ಣ... ನಿಮ್ಮದು ಯಾವ ಹಿಂದುತ್ವ ಎಂದು ಬೆಳ್ತಂಗಡಿಯ ಜನ ಕೇಳುತ್ತಿದ್ದಾರೆ. ಇದಕ್ಕೆ ಸತ್ಯಣ್ಣ ಉತ್ತರ ನೀಡಬೇಕು’ ಎಂದು ಹೇಳಿದ್ದರು.

ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯ ಅಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿ ಅವರ ಹಿಂದುತ್ವದ ಬಗ್ಗೆಯೂ ಹರೀಶ್ ಪೂಂಜ ಪ್ರಶ್ನೆ ಎತ್ತಿದ್ದರು.

ಇದಕ್ಕೆ ಪ್ರತಿಕ್ರಿಯಿಸಲು 2023ರ ಮೇ 26ರಂದು ಸುದ್ದಿಗೋಷ್ಠಿ ನಡೆಸಿದ್ದ ಮಹೇಶ್ ಶೆಟ್ಟಿ ತಿಮರೋಡಿ, ‘ಶಾಸಕ ಹರೀಶ್ ಪೂಂಜ, ‘ಸಿದ್ದರಾಮಯ್ಯ 24 ಕೊಲೆ ಮಾಡಿದ್ದಾರೆ’ ಎಂದು ಆರೋಪಿಸಿದ್ದಾರೆ. ಸಿದ್ದರಾಮಯ್ಯ ಅವರು ತಕ್ಷಣ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಬೇಕು. ಹರೀಶ್ ಪೂಂಜ ಏನೇ ಇರಲಿ, ಅವರು ನಮ್ಮ ಶಾಸಕ. ಅವರು ಆರೋಪ ಮಾಡಿದ್ದು ಹೌದು’ ಎಂದಿದ್ದರು.

‘ಸಿದ್ದರಾಮಯ್ಯ ತಕ್ಷಣ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ನೀಡಬೇಕು. ಈ ಬಗ್ಗೆ ಪೊಲೀಸರು ಇನ್ನೂ ಏಕೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಲ್ಲ. ಸಿದ್ದರಾಮಯ್ಯ ಅವರನ್ನು ಜೈಲಿಗೆ ಹಾಕಬೇಕು. ಇಲ್ಲವೇ, ‘ನಾನು ಕೊಲೆ ಮಾಡಿಲ್ಲ ಹರೀಶ್ ಪೂಂಜ ಸುಳ್ಳ’ ಎಂದು ಅವರು ಸಾಬೀತು ಮಾಡಬೇಕು. ಎರಡರಲ್ಲಿ ಒಂದು ಆಗಬೇಕು’ ಎಂದು ಅವರು ಆಗ್ರಹಿಸಿದ್ದರು.

ಪೂಂಜ ಬಂಧಿಸಿ: ವಿಧಾನಸಭೆಯಲ್ಲಿ ನಡೆದಿದ್ದ ಚರ್ಚೆ ಬಗ್ಗೆ ಬೆಳ್ತಂಗಡಿಯಲ್ಲಿ ಸೋಮವಾರ ಪ್ರತಿಕ್ರಿಯಿಸಿದ ಮಹೇಶ್ ಶೆಟ್ಟಿ ತಿಮರೋಡಿ, ‘ಹರೀಶ್ ಪೂಂಜ ನೀಡಿದ್ದ ಹೇಳಿಕೆಯನ್ನು ನಾನು ಪ್ರಶ್ನಿಸಿದ್ದೆ. ಅದರಲ್ಲಿ ಏನು ತಪ್ಪು? ಎಂದು ಪ್ರಶ್ನಿಸಿದ್ದರು.

‘ಶಾಸಕ ಹರೀಶ್ ಪೂಂಜ ಅವರನ್ನು ಮೊದಲು ಬಂಧಿಸಿ. ಯಾವತ್ತೋ ನೀಡಿದ್ದ ಹೇಳಿಕೆ ಆಧರಿಸಿ ಹೇಳಿಕೆ ನೀಡುವುದಲ್ಲ. ನಮ್ಮ ಬಳಿ ದಾಖಲೆ ಇದೆ’ ಎಂದು ಗೃಹ ಸಚಿವರನ್ನುದ್ದೇಶಿಸಿ ಹೇಳಿದರು.

‘ಸಿ.ಎಂ 24 ಕೊಲೆ: ಆರೋಪಿ ವಿರುದ್ಧ ಕ್ರಮ’

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ 24 ಕೊಲೆ ಮಾಡಿದ್ದಾರೆ ಎಂದು ಹೇಳಿಕೆ ನೀಡಿದ ವ್ಯಕ್ತಿಯ ವಿರುದ್ಧ ಕಾನೂನಿನ ಪ್ರಕಾರ ತಕ್ಷಣ ಕ್ರಮ ಕೈಗೊಳ್ಳಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ ವಿಷಯ ಪ್ರಸ್ತಾಪಿಸಿ, ‘ಧರ್ಮಸ್ಥಳದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾತನಾಡುವ ವೇಳೆ ಒಬ್ಬ ವ್ಯಕ್ತಿ, ಮುಖ್ಯಮಂತ್ರಿ 24 ಕೊಲೆ ಮಾಡಿದ್ದಾರೆ ಎಂದಿದ್ದಾರೆ. ಇದನ್ನು ಕೇಳಿದ ಬಳಿಕವೂ ಕ್ರಮ ಕೈಗೊಳ್ಳದಿದ್ದರೆ ಹೇಗೆ? ಸರ್ಕಾರ ಇಷ್ಟೊಂದು ನಿಷ್ಕ್ರಿಯವಾಗಬೇಕೆ’ ಎಂದು ಪ್ರಶ್ನಿಸಿದರು.

ಅದಕ್ಕೆ ದನಿಗೂಡಿಸಿದ ಬಿಜೆಪಿಯ ವಿ. ಸುನಿಲ್‌ಕುಮಾರ್, ಎಸ್. ಸುರೇಶ್ ಕುಮಾರ್, ಆರಗ ಜ್ಞಾನೇಂದ್ರ ಮತ್ತಿತರರು, ‘ಮುಖ್ಯಮಂತ್ರಿ ಕೊಲೆಗಾರ ಎಂದು ಹೇಳಿರುವುದು ಈ ಸದನಕ್ಕೆ ಮಾಡಿದ ಅಪಮಾನ. ಇದನ್ನು ಸಹಿಸಲು ಸಾಧ್ಯವಿಲ್ಲ. ಆತನ ಹೇಳಿಕೆಗಳ ಬಗ್ಗೆ ತನಿಖೆ ನಡೆಸಲು ಮತ್ತೊಂದು ಎಸ್‌ಐಟಿ ಮಾಡಿ’ ಎಂದು ಆಗ್ರಹಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಹೆಬ್ಬಾಳ ವಿಭಾಗ, 2ನೇ ಮಹಡಿ, ಬಿಬಿಎಂಪಿ ಕಟ್ಟಡ, ಜೆಸಿ ನಗರ ಮುಖ್ಯ ರಸ್ತೆ, ಮುನಿರೆಡ್ಡಿಪಾಳ್ಯ, ಬೆಂಗಳೂರು–560 006.

ಸಂ: ಕಾನಿಅ/ಹೆಬ್ಬಾಳ/ಟೆಂಡ್/04/2025–26 ದಿನಾಂಕ: 18.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬಿಬಿಎಂಪಿಯ ಹೆಬ್ಬಾಳ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೋಂದಾಯಿತ ಗುತ್ತಿಗೆದಾರರಿಂದ ಅಥವಾ CPWD/KPWD/ರೈಲ್ವೆಗಳು/MES ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವವರಿಂದ ಕೆಳಗೆ ತಿಳಿಸಲಾದ ಕೆಲಸಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿಯ ವಿವರ
	ಸಾಮಾನ್ಯ ವರ್ಗಕ್ಕೆ ಮೀಸಲಿರಿಸಿದೆ
	ಹೆಬ್ಬಾಳ ವಿಭಾಗದ ಕೆಳಗಿನ ವಾರ್ಡ್‌ಗಳಲ್ಲಿ ಸಮಗ್ರ ಅಭಿವೃದ್ಧಿ ಮತ್ತು ರಸ್ತೆ ಚರಂಡಿಗಳು, ಪಾದಚಾರಿ ಮಾರ್ಗ ಸುಧಾರಣೆ ಮತ್ತು ಸಿ.ಸಿ. ರಸ್ತೆಗಳ ನಿರ್ಮಾಣ ಇತ್ಯಾದಿ.
1	ನಾಯ್ಡು ಲೇಔಟ್ ಮತ್ತು ಸುತ್ತಲಿನ ಪ್ರದೇಶದಲ್ಲಿ ವಾರ್ಡ್ ನಂ. 61, ರಾಧಾಕೃಷ್ಣ ದೇವಸ್ಥಾನ. **ಅಂದಾಜು ಮೊತ್ತ: ರೂ. 80 ಲಕ್ಷ. ಇಎಂಡಿ: ರೂ. 1,60,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 60000/– ಬಿಜಿ/ಎಫ್‌ಡಿಆರ್ ಮೂಲಕ).
2	ವಿಸ್ಪರಿಂಗ್ ಮೆಡೋಸ್ ಅಪಾರ್ಟ್‌ಮೆಂಟ್‌ನಿಂದ ಡಾಲರ್ಸ್ ಕಾಲೋನಿಯ HIG ಕಾಲೋನಿಯ 1 ನೇ ಕ್ರಾಸ್ ವರೆಗೆ, ವಾರ್ಡ್ ನಂ. 61 ರ ರಾಧಾಕೃಷ್ಣ ದೇವಸ್ಥಾನದ RMV 2 ನೇ ಹಂತ. **ಅಂದಾಜು ಮೊತ್ತ: ರೂ. 50 ಲಕ್ಷ. ಇಎಂಡಿ: ರೂ. 1,00,000/–.**
3	ವಾರ್ಡ್ ಸಂಖ್ಯೆ 62 ಸಂಜಯನಗರದಲ್ಲಿರುವ ಆರ್‌ಎಂಎಸ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 70 ಲಕ್ಷ. ಇಎಂಡಿ: ರೂ. 1,40,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 40,000/– ಬಿಜಿ/ಎಫ್‌ಡಿಆರ್ ಮೂಲಕ).
4	ವಾರ್ಡ್ ಸಂಖ್ಯೆ 62 ರ ಸಂಜಯನಗರದ ಕೆಇಬಿ ಲೇಔಟ್ ಜಿಎಂಆರ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 90 ಲಕ್ಷ. ಇಎಂಡಿ: ರೂ. 1,80,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 80,000/– ಬಿಜಿ/ಎಫ್‌ಡಿಆರ್ ಮೂಲಕ).
5	ವಾರ್ಡ್ ಸಂಖ್ಯೆ 63 ಹೆಬ್ಬಾಳದಲ್ಲಿ ಟೆಂಡ್ ರಸ್ತೆ ಮತ್ತು ಶಿವಶಂಕರ ಬ್ಲಾಕ್ ಸಂಪರ್ಕ ರಸ್ತೆಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳು ಸಿಸಿ ರಸ್ತೆಗಳು ಮತ್ತು ಚರಂಡಿಗಳನ್ನು ಹಾಕುವುದು. **ಅಂದಾಜು ಮೊತ್ತ: ರೂ. 80 ಲಕ್ಷ. ಇಎಂಡಿ: ರೂ. 1,60,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 60,000/– ಬಿಜಿ/ಎಫ್‌ಡಿಆರ್ ಮೂಲಕ).
6	ವಾರ್ಡ್ ಸಂಖ್ಯೆ 63 ಹೆಬ್ಬಾಳದ ಅಡ್ಡ ರಸ್ತೆಗಳು ಮತ್ತು ಮುಖ್ಯ ರಸ್ತೆ, ಎಸ್‌ಎಸ್‌ಎ ಮತ್ತು 3ನೇ ಮುಖ್ಯ ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 80 ಲಕ್ಷ. ಇಎಂಡಿ: ರೂ. 1,60,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 60,000/– ಬಿಜಿ/ಎಫ್‌ಡಿಆರ್ ಮೂಲಕ).
7	ಪ್ರಭಾಕರ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾರ್ಡ್ ಸಂಖ್ಯೆ 64 ವಿ. ನಾಗೇನಹಳ್ಳಿಯಲ್ಲಿ. **ಅಂದಾಜು ಮೊತ್ತ: ರೂ. 60 ಲಕ್ಷ. ಇಎಂಡಿ: ರೂ. 1,20,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 20,000/– ಬಿಜಿ/ಎಫ್‌ಡಿಆರ್ ಮೂಲಕ).
8	ವಿಶ್ವೇಶ್ವರಯ್ಯ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾರ್ಡ್ ಸಂಖ್ಯೆ 64 ವಿ ನಾಗೇನಹಳ್ಳಿಯಲ್ಲಿ. **ಅಂದಾಜು ಮೊತ್ತ: ರೂ. 95 ಲಕ್ಷ. ಇಎಂಡಿ: ರೂ. 1,90,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 90,000/– ಬಿಜಿ/ಎಫ್‌ಡಿಆರ್ ಮೂಲಕ).
9	ವಾರ್ಡ್ ನಂ 65 ಮನೋರಾಯನಪಾಳ್ಯದಲ್ಲಿ ಭುವನೇಶ್ವರಿ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 95 ಲಕ್ಷ. ಇಎಂಡಿ: ರೂ. 1,90,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 90,000/– ಬಿಜಿ/ಎಫ್‌ಡಿಆರ್ ಮೂಲಕ).
10	ವಾರ್ಡ್ ಸಂಖ್ಯೆ 66 ಚಾಮುಂಡಿ ನಗರದ 1ನೇ 2ನೇ 3ನೇ 4ನೇ ಮತ್ತು 5ನೇ ಅಡ್ಡರಸ್ತೆಗಳು 1ನೇ ಬ್ಲಾಕ್ ಆರ್‌ಟಿ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 90 ಲಕ್ಷ. ಇಎಂಡಿ: ರೂ. 1,80,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 80,000/– ಬಿಜಿ/ಎಫ್‌ಡಿಆರ್ ಮೂಲಕ).
11	ವಾರ್ಡ್ ಸಂಖ್ಯೆ 66, ಚಾಮುಂಡಿನಗರದ 1ನೇ, 2ನೇ, 3ನೇ ಪಿ ಮತ್ತು ಟಿ ಕಾಲೋನಿ ಮತ್ತು ಮಂಜುನಾಥ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 90 ಲಕ್ಷ. ಇಎಂಡಿ: ರೂ. 1,80,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 80,000/– ಬಿಜಿ/ಎಫ್‌ಡಿಆರ್ ಮೂಲಕ).
12	ಗಂಗಾನಗರದ ವಾರ್ಡ್ ಸಂಖ್ಯೆ 67 ರ ಹೆಚ್‌ಎಂಟಿ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 95 ಲಕ್ಷ. ಇಎಂಡಿ: ರೂ. 1,90,000/–** (ಇ–ಪಾವತಿ ಮೂಲಕ 1.00 ಲಕ್ಷ ರೂ. ಮತ್ತು ಬಾಕಿ ರೂ. 90,000/– ಬಿಜಿ/ಎಫ್‌ಡಿಆರ್ ಮೂಲಕ).
13	ಗಂಗಾನಗರದ ವಾರ್ಡ್ ಸಂಖ್ಯೆ 67 ರ ನೃಪತುಂಗ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 25 ಲಕ್ಷ. ಇಎಂಡಿ: ರೂ. 50,000/–**
14	ಗಂಗಾನಗರದ ವಾರ್ಡ್ ಸಂಖ್ಯೆ 67 ರ ಗುಡ್ಡಪ್ಪ ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 25 ಲಕ್ಷ. ಇಎಂಡಿ: ರೂ. 50,000/–**
	ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ
15	6ನೇ ಅಡ್ಡರಸ್ತೆ ಸಾಂದೀಪನಿ ಪಾರ್ಕ್‌ನಿಂದ ವಾಟಾಳ್ ನಾಗರಾಜ್ ಮನೆ ಮೂಲಕ 80 ಅಡಿ ರಸ್ತೆಯವರೆಗೆ ವಾರ್ಡ್ ನಂ.61, ರಾಧಾಕೃಷ್ಣ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶಗಳು. **ಅಂದಾಜು ಮೊತ್ತ: ರೂ. 95 ಲಕ್ಷ. ಇಎಂಡಿ: ರೂ. 95,000/–.**
16	ಮಸೀದಿ ಅಶ್ವಥ್ ನಗರದ ಬಳಿ ಮತ್ತು ಸಿಐಎಲ್‌ನಲ್ಲಿ ಮೋರಿಗಳ ನಿರ್ಮಾಣ. ಲೇಔಟ್, ಲೊಟ್ಟೆಗೊಲ್ಲಹಳ್ಳಿ ಗ್ರಾಮ ವೆಂಕಟಾಚಾರಿ ನಗರ ಭೋವಿ ಕಾಲೋನಿ ವಾರ್ಡ್ ನಂ.61, ರಾಧಾಕೃಷ್ಣ ದೇವಸ್ಥಾನ. **ಅಂದಾಜು ಮೊತ್ತ: ರೂ. 25 ಲಕ್ಷ. ಇಎಂಡಿ: ರೂ. 25,000/–.**
17	ಹೆಬ್ಬಾಳದ ವಾರ್ಡ್ ಸಂಖ್ಯೆ 63 ರಲ್ಲಿರುವ ಚೋಳನಾಯಕನಹಳ್ಳಿ ಕುಥಿಗ್ರಾಮ ಮತ್ತು ಗೋಸಾಯಿ ಕೊಳಚೆ ಪ್ರದೇಶ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 90 ಲಕ್ಷ. ಇಎಂಡಿ: ರೂ. 90,000/–.**
18	ವಾರ್ಡ್ ಸಂಖ್ಯೆ 64, ವಿ. ನಾಗೇನಹಳ್ಳಿಯ ಯಗಪ್ಪ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 95 ಲಕ್ಷ. ಇಎಂಡಿ: ರೂ. 95,000/–.**
19	ಚಾಮುಡಿಂಡಿನಗರದ ವಾರ್ಡ್ ಸಂಖ್ಯೆ 66 ರಲ್ಲಿರುವ ಧರ್ಮಣ್ಣ ಗಾರ್ಡನ್ ಮತ್ತು ಕೆಂಚಪ್ಪ ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 70 ಲಕ್ಷ. ಇಎಂಡಿ: ರೂ. 70,000/–.**
20	ಗಂಗಾನಗರದ ವಾರ್ಡ್ ಸಂಖ್ಯೆ 67 ರ ಎಲ್.ಡಿ. ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 25 ಲಕ್ಷ. ಇಎಂಡಿ: ರೂ. 25,000/–.**
21	ಜೆ.ಸಿ. ನಗರದ ವಾರ್ಡ್ ಸಂಖ್ಯೆ 68 ರ ಆನಂದಪ್ಪ ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 100 ಲಕ್ಷ. ಇಎಂಡಿ: ರೂ. 75,000/–.**
	ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ
22	ಸಂಜಯನಗರದ ವಾರ್ಡ್ ನಂ 62 ರಲ್ಲಿ ನಾಗಶೆಟ್ಟಿಹಳ್ಳಿ ಬಸವೇಶ್ವರ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 90 ಲಕ್ಷ. ಇಎಂಡಿ: ರೂ. 90,000/–.**
	CAT-II(A) ವರ್ಗಕ್ಕೆ ಮೀಸಲಿರಿಸಿದೆ
23	ಮನೋರಾಯನಪಾಳ್ಯದ ವಾರ್ಡ್ ಸಂಖ್ಯೆ 65 ರ ಸೀತಪ್ಪ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 95 ಲಕ್ಷ. ಇಎಂಡಿ: ರೂ. 95,000/–.**
24	ಮನೋರಾಯನಪಾಳ್ಯದ ವಾರ್ಡ್ ಸಂಖ್ಯೆ 65 ರ ನಂಜಮ್ಮ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 60 ಲಕ್ಷ. ಇಎಂಡಿ: ರೂ. 60,000/–.**
25	ಗಂಗಾನಗರದ ವಾರ್ಡ್ ಸಂಖ್ಯೆ 67 ರ ಮುತ್ತಪ್ಪ ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 80 ಲಕ್ಷ. ಇಎಂಡಿ: ರೂ. 80,000/–.**
26	ವಾರ್ಡ್ ಸಂಖ್ಯೆ 68, ಜೆ ಸಿ ನಗರದ 1 ನೇ ಬ್ಲಾಕ್ ಆರ್ ಟಿ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 25 ಲಕ್ಷ. ಇಎಂಡಿ: ರೂ. 25,000/–.**
27	ವಾರ್ಡ್ ಸಂಖ್ಯೆ 68, ಜೆಸಿ ನಗರದ 2 ನೇ ಬ್ಲಾಕ್ ಆರ್‌ಟಿ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 25 ಲಕ್ಷ. ಇಎಂಡಿ: ರೂ. 25,000/–.**
	CAT-I ವರ್ಗಕ್ಕೆ ಮೀಸಲಿರಿಸಿದೆ
28	ದಿನ್ನೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾರ್ಡ್ ಸಂಖ್ಯೆ 68, ಜೆ ಸಿ ನಗರ. **ಅಂದಾಜು ಮೊತ್ತ: ರೂ. 75 ಲಕ್ಷ. ಇಎಂಡಿ: ರೂ. 75,000/–.**
29	ವಾರ್ಡ್ ಸಂಖ್ಯೆ 68, ಜೆ.ಸಿ. ನಗರದ ನಂದಿ ವೀವ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ. **ಅಂದಾಜು ಮೊತ್ತ: ರೂ. 25 ಲಕ್ಷ. ಇಎಂಡಿ: ರೂ. 25,000/–.**

1) ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್ https://kppp. karnataka.gov.in ಮೂಲಕ 19.08.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆಯ ದಿನಾಂಕ: 26.08.2025ರ ಸಂಜೆ 03:00 ಗಂಟೆಗೆ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.09.2025ರ ಸಂಜೆ 04:00 ಗಂಟೆಯವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 03.09.2025ರ ಸಂಜೆ 04:30 ಗಂಟೆಯ ನಂತರ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 04.09.2025ರ ಸಂಜೆ 05:00 ಗಂಟೆಯ ನಂತರ. ಹೆಚ್ಚಿನ ಮಾಹಿತಿಯನ್ನು ಕೆಪಿಪಿ ಪೋರ್ಟಲ್ https://kppp.karnataka.gov.in ಮತ್ತು ಕೆಳಸಹಿದಾರರ ಕಚೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೆಬ್ಬಾಳ ವಿಭಾಗ.

ಧರ್ಮಸ್ಥಳ: ಮೃತನ ಮಗ, ಮಗಳಿಂದ ಎಸ್‌ಐಟಿಗೆ ದೂರು

ಜೋಡಿ ಕೊಲೆ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಧರ್ಮಸ್ಥಳ ಗ್ರಾಮದ ಬೂರ್ಜೆಯಲ್ಲಿ 2012ರ ಸೆ. 21ರಂದು ನಡೆದಿದ್ದ ಜೋಡಿ ಕೊಲೆ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಎಸ್‌ಐಟಿ ಕಚೇರಿಗೆ ದೂರು ನೀಡಲಾಗಿದೆ.

ಬೂರ್ಜೆಯಲ್ಲಿ ವಾಸವಿದ್ದ ನಾರಾಯಣ, ಅವರ ಸೋದರಿ ಯಮುನಾ 2012 ಸೆ. 21ರಂದು ಕೊಲೆಯಾಗಿತ್ತುಎಂದು ದಿ.ನಾರಾಯಣ ಅವರ ಮಕ್ಕಳಾದ ಬೆಳ್ತಂಗಡಿ ತಾಲ್ಲೂಕು ಮೇಲಂತಬೆಟ್ಟುವಿನ ಗಣೇಶ ಹಾಗೂ ಭಾರತಿ ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ದೂರು ನೀಡಿದರು.

‘ಕೊಲೆಯಾಗುವ ಐದು ವರ್ಷಗಳಿಂದ ಆ ಮನೆ ತೆರವಿಗೆ ಒತ್ತಾಯಿಸಿ ಸ್ಥಳೀಯ ಪ್ರಭಾವಿಯೊಬ್ಬರು ಜೀವ ಬೆದರಿಕೆ ಹಾಕಿದ್ದರು. ತಂದೆಗೆ ಎರಡು ಸಲ ಹಲ್ಲೆ ಮಾಡಲಾಗಿತ್ತು. 2012ರ ಸೆ. 20ರ ಸಂಜೆ ಆ ಪ್ರಭಾವಿ, ಮನೆಗೆ ಬಂದು, ‘ಮನೆ ತೆರವುಗೊಳಿಸದಿದ್ದರೆ ಸ್ಥಿತಿ ನೆಟ್ಟಗಿರುವುದಿಲ್ಲ’ ಎಂದು ಜೀವ ಬೆದರಿಕೆ ಹಾಕಿದ್ದರು’ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

‘ತಂದೆಗೆ ಯಾರೂ ವಿರೋಧಿಗಳಿರಲಿಲ್ಲ. ತಂದೆ ವಾಸವಾಗಿದ್ದ ಮನೆ ಮತ್ತು ಜಾಗವನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಅವರನ್ನು ಕೊಲೆ ಮಾಡಲಾಗಿದೆ’ ಎಂದು ಆರೋಪಿಸಿದ್ದಾರೆ.

‘ಕೊಲೆಯಾದ ಮೂರು ದಿನ್ನ ನಾವು ಆ ಪ್ರಭಾವಿಯ ಅಣ್ಣನನ್ನು ಖುದ್ದು ಭೇಟಿಯಾಗಿ ವಿಷಯ ತಿಳಿಸಿದಾಗ, ‘ಆಗಿದ್ದು ಆಗಿ ಹೋಯ್ತು. ಆ ವಿಷಯ ಬಿಟ್ಟು ಬಿಡಿ’ ಎಂದಿದ್ದರು ಎಂದು ಉಲ್ಲೇಖಿಸಿದ್ದಾರೆ.

‘ಈ ಪ್ರಕರಣ ಸಂಬಂಧ ಆಗಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ದೂರು ನೀಡಿದರೂ, ಸರಿಯಾದ ಸ್ಪಂದನೆ ಸಿಕ್ಕಿಲ್ಲ. ನಮಗೆ ನ್ಯಾಯ ಒದಗಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ಕೊಲೆಯಾದಾಗ ಶಾಲೆಗೆ ಹೋಗುತ್ತಿದ್ದೆವು’

‘ತಂದೆ ನಾರಾಯಣ ಧರ್ಮಸ್ಥಳದಲ್ಲಿ ಆನೆ ಮಾವುತರಾಗಿ ನಿವೃತ್ತರಾಗಿದ್ದರು. ಅತ್ತೆ ಡಿಎಂಸಿಗೆ ಕೆಲಸಕ್ಕೆ ಹೋಗುತ್ತಿದ್ದರು. ಕೊಲೆಯಾದ ಸಂದರ್ಭದಲ್ಲಿ ನಾವು ಅಜ್ಜಿ ಮನೆಯಲ್ಲಿದ್ದು ಶಾಲೆಗೆ ಹೋಗುತ್ತಿದ್ದೆವು. ಅಮ್ಮನೂ ನಮ್ಮ ಜೊತೆ ಅಜ್ಜಿಮನೆಯಲ್ಲೇ ಇದ್ದರು’ ಎಂದು ಗಣೇಶ ಹಾಗೂ ಭಾರತಿ ಸುದ್ದಿಗಾರರಿಗೆ ತಿಳಿಸಿದರು.

ಮುಖ್ಯಾಂಶಗಳು
- 2012ರಲ್ಲಿ ನಡೆದಿದ್ದ ಜೋಡಿ ಕೊಲೆ
- ತೆರವಿಗೆ ಒತ್ತಾಯಿಸಿ ಸ್ಥಳೀಯ ಪ್ರಭಾವಿಯಿಂದ ಬೆದರಿಕೆ: ಆರೋಪ

ಶಿವ ಪಂಚಾಕ್ಷರಿ ಮಂತ್ರ ಪಠಣಕ್ಕೆ ಚಾಲನೆ

ಮಂಗಳೂರು: ‘ಧರ್ಮಸ್ಥಳ ಕ್ಷೇತ್ರದ ವಿರುದ್ಧದ ಷಡ್ಯಂತ್ರ ಹಾಗೂ ಅಪಪ್ರಚಾರ ದೂರವಾಗಿ, ಮಂಜುನಾಥ ಸ್ವಾಮಿಯ ಮೇಲಿನ ಶ್ರದ್ಧೆ - ಭಕ್ತಿ ಹೆಚ್ಚಾಗಲಿ’ ಎಂದು ಪ್ರಾರ್ಥಿಸಿ, ಶಿವ ಪಂಚಾಕ್ಷರಿ ಮಂತ್ರ ಪಠಿಸುವ ಅಭಿಯಾನ ಆರಂಭಿಸಲಾಗಿದೆ.

ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮತ್ತು ಬಜರಂಗದಳ ಈ ಅಭಿಯಾನವನ್ನು ಇಲ್ಲಿನ ಕದ್ರಿ ಮಂಜುನಾಥ ದೇವಸ್ಥಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಸೋಮವಾರ ಚಾಲನೆ ನೀಡಿದವು.

ಭಟ್ಟಾರಕರಿಂದ ಧರ್ಮಸ್ಥಳ ಕ್ಷೇತ್ರಕ್ಕೆ ಭೇಟಿ

ಉಜಿರೆ (ದಕ್ಷಿಣ ಕನ್ನಡ): ರಾಜ್ಯದಲ್ಲಿರುವ ಎಲ್ಲ ಜೈನಮಠಗಳ ಭಟ್ಟಾರಕರು ಆ. 29ಕ್ಕೆ ಧರ್ಮಸ್ಥಳಕ್ಕೆ ಬಂದು, ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಆಗುವರು.

‘ಧರ್ಮಸ್ಥಳದ ಕುರಿತು ಸಮೂಹ ಮಾಧ್ಯಮಗಳಲ್ಲಿ ಆಗುತ್ತಿರುವ ಅಪಪ್ರಚಾರ ಹಾಗೂ ಸುಳ್ಳು ವದಂತಿ ಖಂಡಿಸಿ, ಜೈನಸಮಾಜದ ವತಿಯಿಂದ ಧರ್ಮಸ್ಥಳ, ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಸಂಪೂರ್ಣ ರಕ್ಷಣೆಯ ಭರವಸೆ ನೀಡುವುದೇ ಈ ಭೇಟಿಯ ಉದ್ದೇಶ’ ಎಂದು ಅಖಿಲ ಭಾರತ ಭಟ್ಟಾರಕ ಜೈನಮಠ ಪರಿಷತ್‌ನ ಅಧ್ಯಕ್ಷ, ಕನಕಗಿರಿ ಜೈನಮಠದ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಕಾರ್ಯದರ್ಶಿಯಾಗಿರುವ ಅರಿಹಂತಗಿರಿ ಜೈನಮಠದ ಧವಳಕೀರ್ತಿ ಭಟ್ಟಾರಕ ಸ್ವಾಮೀಜಿ ತಿಳಿಸಿದ್ದಾರೆ.

‘ಜೈನ್ ಮಿಲನ್ ಸೇರಿದಂತೆ ಜೈನಸಮಾಜದ ಮುಖಂಡರು, ಸೇವಾಸಂಸ್ಥೆಗಳ ಪದಾಧಿಕಾರಿಗಳು, ಜನಪ್ರತಿನಿಧಿಗಳೂ ಅಂದು ಧರ್ಮಸ್ಥಳಕ್ಕೆ ಬಂದು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕು’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಒಕ್ಕಲಿಗ’ ಎಂದೇ ನಮೂದಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಲಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಳೆ ಒಕ್ಕಲಿಗ ಸಮುದಾಯದವರು ‘ಒಕ್ಕಲಿಗ’ ಎಂದೇ ಬರೆಸಬೇಕು ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ. ಕೆಂಚಪ್ಪಗೌಡ ಮನವಿ ಮಾಡಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸೆ.22ರಿಂದ ಸಮೀಕ್ಷೆ ಆರಂಭವಾಗಲಿದೆ. ಸಮೀಕ್ಷೆದಾರರು ಮನೆಗೆ ಬಂದಾಗ ವಿವರಗಳನ್ನು ನಿಖರವಾಗಿ ನೀಡಬೇಕು. ಉಪಜಾತಿ ಕಲಂನಲ್ಲಿ ತಮ್ಮ ಉಪಜಾತಿಗಳನ್ನು ನಮೂದಿಸಬೇಕು. ಶಿಕ್ಷಣ, ಉದ್ಯೋಗ, ಆಸ್ತಿ, ಆರ್ಥಿಕ ಮಾಹಿತಿಗಳನ್ನು ಸರಿಯಾಗಿ ಒದಗಿಸಬೇಕು’ ಎಂದರು.

ಸಮುದಾಯದ ಸ್ವಾಮೀಜಿ, ಮುಖಂಡರು ಸೇರಿ ಆ.21ರಂದು ಸಭೆ ನಡೆಸಲಾಗುವುದು. ಸಮೀಕ್ಷೆ ನಡೆಯುವುದಕ್ಕಿಂತ ಮೊದಲು ಎಲ್ಲ ಜಿಲ್ಲೆ, ತಾಲ್ಲೂಕುಗಳಲ್ಲಿ ಸಮುದಾಯದವರಿಗೆ ತಿಳಿವಳಿಕೆ ನೀಡಲಾಗುವುದು. ಸಮೀಕ್ಷೆಗೆ ಆಧಾರ್ ಲಿಂಕ್ ಮಾಡಬೇಕು. ಮತದಾರರ ಪಟ್ಟಿಯಲ್ಲಿರುವ ಹೆಸರುಗಳ ವಿವರ ನೀಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಗೌರವ ಅಧ್ಯಕ್ಷರಾದ ಡಿ. ಹನುಮಂತಯ್ಯ, ಯಲುವಳ್ಳಿ ಎನ್. ರಮೇಶ್, ಉಪಾಧ್ಯಕ್ಷ ಎಲ್ ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಟಿ. ಕೋನಪ್ಪರೆಡ್ಡಿ, ಸಹ ಕಾರ್ಯದರ್ಶಿ ಆರ್. ಹನುಮಂತರಾಯಪ್ಪ, ಖಜಾಂಚಿ ಎನ್. ಬಾಲಕೃಷ್ಣ, ನಿರ್ದೇಶಕರಾದ ಎಚ್. ಎನ್. ಅಶೋಕ, ಟಿ.ಎಚ್. ಆಂಜಿನಪ್ಪ, ಬಿ.ಪಿ. ಮಂಜೇಗೌಡ, ಅಶೋಕ್, ಎಸ್.ಡಿ. ಜಯರಾಮ್, ಜೆ. ರಾಜು ಉಪಸ್ಥಿತರಿದ್ದರು.

ಜಾತಿವಾರು ವರ್ಗೀಕರಣ ಪರಿಷ್ಕರಣೆ?

ಒಂದನೇ ಪುಟದಿಂದ...

ಇವು ಪ್ರವರ್ಗ ‘ಸಿ’ ಜಾತಿಗೆ ಸಮಾನಂತರವಾಗಿವೆ. ಈ ರೀತಿಯ ವಿವಿಧ ಜಾತಿಗಳನ್ನು ಬೇರೆ ಬೇರೆ ಪ್ರವರ್ಗಗಳಲ್ಲಿ ವಿಂಗಡಿಸಿರುವುದು ಕಂಡುಬರುತ್ತಿದೆ.

2011ರ ಜನಗಣತಿಯ ಪ್ರಕಾರ ಬೇಡ ಸಂಗಮ, ಬುಡಗ ಜಂಗಮ ಸಮುದಾಯದವರ ಜನಸಂಖ್ಯೆಯು 1,17,164. ಆದರೆ, ಸಮೀಕ್ಷೆಯಲ್ಲಿ ಈ ಸಮುದಾಯದ ಒಟ್ಟು ಜನಸಂಖ್ಯೆ 3,22,049. ಈ ಹೆಚ್ಚಳವು ಕೃತಕವಾಗಿದೆ ಎಂದು ತಿಳಿದು, ಒಟ್ಟು 1,44,387 ಜನರನ್ನು ಮಾತ್ರ ಪ್ರವರ್ಗ ‘ಎ’ಯಲ್ಲಿ ಸೇರಿಸಿ, ಉಳಿದ 1,77,662 ಜನಸಂಖ್ಯೆಯನ್ನು ಕೈಬಿಡಲಾಗಿದೆ. ಈ ಬಗ್ಗೆ ಚರ್ಚಿಸುವ ಅಗತ್ಯವಿದೆ ಎಂದು ಟಿಪ್ಪಣಿ ಹೇಳಿದೆ.

‘ಬಲ್ಡೋಟಾ ಘಟಕ ನಿಲ್ಲಿಸಲು ಸಾಧ್ಯವಿಲ್ಲ’

ಬೆಂಗಳೂರು: ‘ಬಲ್ಡೋಟಾ ಸ್ಟೀಲ್ ಅಂಡ್ ಪವರ್ ಲಿಮಿಟೆಡ್, ಕೊಪ್ಪಳದಲ್ಲಿ ಆರಂಭಿಸಲು ಹೊರಟಿರುವ ಉಕ್ಕು ತಯಾರಿಕಾ ಘಟಕವನ್ನು ನಿಲ್ಲಿಸಲು ಸಾಧ್ಯವಿಲ್ಲ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಬಿಜೆಪಿಯ ಹೇಮಲತಾ ನಾಯಕ್ ಅವರು ಸೋಮವಾರ ನಿಯಮ 303ರ ಅಡಿ ಪ್ರಸ್ತಾಪಿಸಿದ ವಿಷಯಕ್ಕೆ ಪ್ರತಿಕ್ರಿಯೆ ನೀಡಿದ ಎಂ.ಬಿ.ಪಾಟೀಲ ಅವರು, ‘ಈ ಘಟಕ ಆರಂಭಕ್ಕೆ ಅಗತ್ಯವಿರುವ ಪರಿಸರ ಮತ್ತು ಅರಣ್ಯ ಅನುಮತಿಗಳನ್ನು ಬಲ್ಡೋಟಾ ಕಂಪನಿಯು ಕೇಂದ್ರ ಸರ್ಕಾರದಿಂದ 2021ರಲ್ಲೇ ಪಡೆದುಕೊಂಡಿದೆ’ ಎಂದರು.

‘ಈ ಘಟಕದಿಂದ ಪರಿಸರದ ಮೇಲೆ ಆಗುವ ಪರಿಣಾಮ ಕುರಿತು ಭಾರತೀಯ ವಿಜ್ಞಾನ ಸಂಸ್ಥೆಯ ಮೂಲಕ ಅಧ್ಯಯನ ನಡೆಸಲು ಚಿಂತನೆ ನಡೆಸಲಾಗಿದೆ. ಇದಕ್ಕಾಗಿ ₹50 ಲಕ್ಷ ತೆಗೆದಿರಿಸುವ ಪ್ರಸ್ತಾವವೂ ಇದೆ’ ಎಂದು ಸದನಕ್ಕೆ ತಿಳಿಸಿದರು.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/25–26/36886–90 ದಿನಾಂಕ: 18.08.2025

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ) ::

ಪಿಸಿ–1403 (ಕರೆ–3): ಗು.ವಿ.ಸ.ಕಂ.ನಿ.ಯ ನಿರ್ದಿಷ್ಟತೆಯಂತೆ ಇಲೆಕ್ಟ್ರಾನಿಕ್ ಇಂಡಕ್ಷನ್ ಪರೀಕ್ಷಕದೊಂದಿಗೆ ಜೋಡಿಸಲಾದ ಸುರಕ್ಷತಾ ಹೆಲ್ಮೆಟ್ ಪೂರೈಕೆ ಮಾಡುವುದು (ಟೆಂಡರ್ ಮೊತ್ತ: **ರೂ. 64.94 ಲಕ್ಷ**)

ದಿನಾಂಕ: ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: 20.08.2025 ರಂದು ಅಥವಾ ನಂತರ. ಟೆಂಡರ್ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: ಕೆ.ಪಿ.ಪಿ ಪೋರ್ಟಲ್‌ನಲ್ಲಿರುವಂತೆ

ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: www.kppp.karnataka.gov.in.KPP ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91 – 8046010000 / 8068948777 / 9240214000 / 9240214001 ಗೆ ಇಮೇಲ್ ವಿಳಾಸ: support@eprochelpdesk.comಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/403/ಕೆ.ಎಸ್.ಎಂ.ಸಿ.&ಎ/2025–26

ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು.

CITY MUNICIPAL COUNCIL, CHIKKAMAGALURU.

Phone : 08262-230420, Email ID : comm_ckg@yahoo.co.in, Website : www.chickmagalur.gov.in

ಸಂಖ್ಯೆ:ಸಿಎಂಸಿ/ಸಿಕೆಎಂ/ವಿ.ಯೋ/ಸಿಆರ್/65/2025–26 ದಿನಾಂಕ : 14.08.2025

: : ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ : :

15ನೇ ಹಣಕಾಸು ಯೋಜನೆ ಮತ್ತು ಎಸ್.ಎಫ್.ಸಿ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರ ಗುತ್ತಿಗೆದಾರರು ಷರತ್ತುಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ ಗಳಲ್ಲಿ)
1	DMA/2025-26/OW/WORK_INDENT47586	11.88	25,200.00
2	DMA/2025-26/OW/WORK_INDENT47615	9.60	20,300.00
3	DMA/2025-26/EL/WORK_INDENT47583	35.00	58,400.00
4	DMA/2025-26/EL/WORK_INDENT47585	28.60	47,900.00

ಟೆಂಡರ್ ಫಾರಂ ಬೆಲೆ– ಇ–ಪ್ರೊಕ್ಯೂರ್‌ಮೆಂಟ್‌ನಂತೆ, ಕಾಲಾವಧಿ–06 ತಿಂಗಳು. (ಮಳೆಗಾಲ ಹೊರತುಪಡಿಸಿ)

1. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30.08.2025ರ 17.30ಗಂಟೆಯವರೆಗೆ
2. ಬಿಡ್ ತೆರೆಯುವ ದಿನಾಂಕ: 01.09.2025ರ 11.00 ಗಂಟೆಗೆ

ಹೆಚ್ಚಿನ ವಿವರವನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯ ಬಹುದಾಗಿದೆ ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಾದ್ದಲ್ಲಿ. ಇ– ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಸಹಿ/– ಶ್ರೀಮತಿ ಬಿ ಶೀಲಾ ದಿನೇಶ್, ಅಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು
ಸಹಿ/– ಶ್ರೀಮತಿ ಅನು ಮಧುಕರ್, ಉಪಾಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು
ಸಹಿ/– ಶ್ರೀ ಬಿ.ಸಿ. ಬಸವರಾಜು ಕೆ.ಎಂ.ಎ.ಎಸ್., ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಮನುಷ್ಯನಲ್ಲಿರುವ ಪರಿಪೂರ್ಣತೆ ಮತ್ತು ವ್ಯಕ್ತಿತ್ವವನ್ನು ಹಿಗ್ಗಿಸುವುದೇ ನಿಜವಾದ ಶಿಕ್ಷಣ.

-ಸ್ವಾಮಿ ವಿವೇಕಾನಂದ

ಸಂಪಾದಕೀಯ

ಅಭಿವೃದ್ಧಿ ಜೊತೆ ರಾಷ್ಟ್ರೀಯ ಭದ್ರತೆ ಕಾಳಜಿ ಹಿಂದೆ ವಿಭಜನೆ ರಾಜಕೀಯ

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಹನ್ನೆರಡನೇ ವರ್ಷದ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ, ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿರುವ ವಿಚಾರಗಳು ವಿಶಾಲ ದೃಷ್ಟಿಕೋನದಿಂದ ಕೂಡಿವೆ. ಆರ್ಥಿಕತೆ, ಕಾನೂನು ಮತ್ತು ನ್ಯಾಯವ್ಯವಸ್ಥೆ, ಯುವಜನರ ಅಗತ್ಯಗಳು ಸೇರಿದಂತೆ ಅನೇಕ ಸಂಗತಿಗಳ ಬಗ್ಗೆ ಪ್ರಧಾನಿ ಮಾತನಾಡಿದ್ದಾರೆ. ಕೇಂದ್ರ ಸರ್ಕಾರದ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಉತ್ಸಾಹದಿಂದ ಪಟ್ಟಿ ಮಾಡಿದ್ದಾರೆ. ರಾಷ್ಟ್ರೀಯ ಕ್ಯಾಲೆಂಡರ್‌ನಲ್ಲಿ ಪ್ರಮುಖ ದಿನವಾದ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ, ದೇಶದ ಕುರಿತ ತಮ್ಮ ಕಳಕಳಿ, ವಿಶ್ವಾಸ, ಹಾಗೂ ನಿರೀಕ್ಷೆಗಳನ್ನು ಹಂಚಿಕೊಳ್ಳುವುದು ಪ್ರಧಾನಿ ಅವರಿಗೆ ಇರುವ ವಿಶೇಷಾಧಿಕಾರ. ಆದರೆ, ತಮ್ಮ ಸರ್ಕಾರದ ಸಾಧನೆಗಳನ್ನು ಹೆಮ್ಮೆಯಿಂದಲೂ ಸ್ಪಷ್ಟತೆಯಿಂದಲೂ ನೆನಪಿಸಿಕೊಂಡಿರುವ ಅವರು, ಉಳಿದವರ ವೈಫಲ್ಯದ ಬಗ್ಗೆ ಅಷ್ಟೇನೂ ಮನದಟ್ಟಾಗುವಂತೆ ಮಾತನಾಡುವಲ್ಲಿ ಯಶಸ್ವಿಯಾಗಿಲ್ಲ. ದೇಶದ ಉಜ್ವಲವಾದ 'ವಿಕಸಿತ' ಭವಿಷ್ಯಕ್ಕೆ ಸಂಬಂಧಿಸಿದಂತೆ ದೂರಾಲೋಚನೆಯ ಸಂಗತಿಗಳ ಮೇಲೆಯೇ ಅವರು ಹೆಚ್ಚು ಬೆಳಕು ಚೆಲ್ಲಿದ್ದಾರೆ. ಕಲ್ಪಿತ ಕಾಳಜಿಯ ವಿಚಾರಗಳನ್ನು ತುರ್ತು ಹಾಗೂ ಮಹತ್ವದವು ಎನ್ನುವಂತೆ ಹರಿಬಿಟ್ಟಿದ್ದಾರೆ; ತಮ್ಮ ವಿಚಾರಗಳನ್ನು ರಾಜಕೀಯ ಹಾಗೂ ಮತೀಯ ಪದಪುಂಜಗಳಿಂದ ಸಿಂಗರಿಸಿದ್ದಾರೆ. ರಾಷ್ಟ್ರೀಯ ವೇದಿಕೆಯಲ್ಲಿ ನಿಂತು ಮಾತನಾಡುವಾಗಲೂ ಪ್ರಧಾನಿ ನರೇಂದ್ರ ಮೋದಿ ಅವರು, ತಮ್ಮ ರಾಜಕೀಯ ಚೌಕಟ್ಟಿನಿಂದ ಹೊರಬರುವುದರಲ್ಲಿ ಕೆಲವೊಮ್ಮೆ ವಿಫಲರಾಗುತ್ತಾರೆ.

ಸ್ವಾತಂತ್ರ್ಯೋತ್ಸವ ಸಂದರ್ಭದ ಪ್ರಧಾನಿ ಅವರ ಭಾಷಣದಲ್ಲಿ ರಾಷ್ಟ್ರೀಯ ಭದ್ರತೆ– ಅಭಿವೃದ್ಧಿಗೆ ಹೆಚ್ಚು ಒತ್ತು ದೊರೆತಿದೆ. ಮತೀಯ ಸ್ಪರ್ಶದ ಕಲ್ಪಿತ ಕಾಳಜಿಗಳೂ ಅವರ ಮಾತುಗಳಲ್ಲಿವೆ.

'ಆಪರೇಷನ್ ಸಿಂಧೂರ' ಕಾರ್ಯಾಚರಣೆ ನಡೆಸಿದ ಸೇನಾಪಡೆಗಳನ್ನು ಪ್ರಧಾನಿ ಶ್ಲಾಘಿಸಿದ್ದಾರೆ; ದೇಶದ ರಕ್ಷಣೆಗಾಗಿ ಸೇನಾಪಡೆಗಳು ಕಟಿಬದ್ಧವಾಗಿರುವ ಸೇನೆಯ ಬದ್ಧತೆಯನ್ನು ಶಂಕಿಸುವವರ ಸ್ನೇಹಶೀಲವಲ್ಲದ ಧೋರಣೆಯನ್ನು ಕಟುವಾಗಿ ಟೀಕಿಸಿದ್ದಾರೆ. ದೇಶವನ್ನು ಸ್ವಾವಲಂಬಿ ಆಗಿಸಬೇಕು ಎಂದು ಹೇಳುತ್ತಾ, ದೇಸಿ ಉತ್ಪನ್ನಗಳತ್ತ ಒಲವು ತೋರಬೇಕು ಎನ್ನುವುದಕ್ಕೆ ವಿಶೇಷ ಮಹತ್ವ ನೀಡಿದ್ದಾರೆ. ಸ್ಥಳೀಯ ಉತ್ಪಾದನೆಗೆ ಒತ್ತುನೀಡುವ ಆತ್ಮನಿರ್ಭರ ನೀತಿಗಳನ್ನು ಉಲ್ಲೇಖಿಸಿದ್ದಾರೆ. ವಿಶೇಷವಾಗಿ, ಆರ್ಥಿಕ ಹಾಗೂ ರಕ್ಷಣಾ ಕ್ಷೇತ್ರಗಳಿಗೆ ಅವರ 'ಆತ್ಮನಿರ್ಭರ' ಪರಿಕಲ್ಪನೆ ಹೆಚ್ಚು ಒತ್ತು ನೀಡುವಂತಿದೆ. ಪಾಕಿಸ್ತಾನದೊಂದಿಗೆ ಮೇ ತಿಂಗಳಲ್ಲಿ ನಡೆದ ಸಂಘರ್ಷ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಮೇಲೆ ಸುಂಕ ಸಮರ ಸಾರಿರುವ ಪ್ರಸಕ್ತ ಸಂದರ್ಭದಲ್ಲಿ ಪ್ರಧಾನಿ ಅವರ ಈ ಮಾತುಗಳಿಗೆ ಮಹತ್ವವಿದೆ. ದೇಸಿ ರಕ್ಷಣಾ ವ್ಯವಸ್ಥೆ ಅಭಿವೃದ್ಧಿಪಡಿಸುವ 'ಸುದರ್ಶನ ಚಕ್ರ' ಹೆಸರಿನ ಮಹತ್ವಾಕಾಂಕ್ಷಿ ಯೋಜನೆಯನ್ನು ಅವರು ಪ್ರಕಟಿಸಿದ್ದು, 2035ರ ವೇಳೆಗೆ ಆ ಯೋಜನೆ ಸಾಕಾರಗೊಳ್ಳಲಿದೆ ಎನ್ನುವ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ. ಯುವಜನತೆಗೆ ಒಂದು ಕೋಟಿ ಉದ್ಯೋಗಾವಕಾಶ ಕಲ್ಪಿಸುವುದು, ನಾರೀಶಕ್ತಿಯ ಪ್ರತಿಪಾದನೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ದೇಶದ ಸಾಧನೆ, ಪ್ರಧಾನಿ ಅವರ ಭಾಷಣದಲ್ಲಿನ ಕೆಲವು ಮುಖ್ಯಾಂಶಗಳು. ದೀಪಾವಳಿ ವೇಳೆಗೆ ಜಿಎಸ್‌ಟಿ ಪರಿಷ್ಕರಣೆಯಾಗಲಿದೆ ಎನ್ನುವುದು ಅವರು ನೀಡಿದ ಭರವಸೆಗಳಲ್ಲಿ ಮುಖ್ಯವಾದುದು. ಉದ್ದೇಶಿತ ಪರಿಷ್ಕರಣೆಯಿಂದ ಸರಕು ಹಾಗೂ ಸೇವಾ ತೆರಿಗೆಯ ಭಾರ ಕೊಂಚ ಹಗುರವಾಗುವ ನಿರೀಕ್ಷೆಯಿದೆ.

ಸ್ವಾತಂತ್ರ್ಯೋತ್ಸವದ ವೇದಿಕೆಯಲ್ಲಿ ಆರ್‌ಎಸ್‌ಎಸ್ ಹಾಗೂ ಅದರ ಚಟುವಟಿಕೆಗಳ ಬಗ್ಗೆ ಮೋದಿ ಅವರು ಪ್ರಶಂಸೆ ವ್ಯಕ್ತಪಡಿಸಿದ್ದರಲ್ಲಿ ಅಚ್ಚರಿಯೇನೂ ಅಲ್ಲ. ಒಳನುಸುಳುವಿಕೆ ಮತ್ತು ಅಕ್ರಮ ವಲಸೆಯಿಂದಾಗಿ ದೇಶದ ಗಡಿಗೆ ಹೊಂದಿಕೊಂಡಿರುವ ಪ್ರದೇಶಗಳ ಜನಸಂಖ್ಯೆಯ ಸ್ವರೂಪದಲ್ಲಿ ಅಸಮತೋಲನ ಕಂಡುಬಂದಿರುವುದು ಕಳವಳಕ್ಕೆ ಕಾರಣವಾಗಿದೆ ಎಂದೂ ಅವರು ಹೇಳಿದ್ದಾರೆ. ರಾಷ್ಟ್ರೀಯ ಭದ್ರತೆಗೆ ಎದುರಾಗಿರುವ ಈ ಸವಾಲು ಎದುರಿಸಲು ಉನ್ನತ ಮಟ್ಟದ 'ಜನಸಂಖ್ಯಾ ಮಿಷನ್' ಪ್ರಾರಂಭಿಸುವುದಾಗಿ ಘೋಷಿಸಿದ್ದಾರೆ. ಆದರೆ, ಒಳನುಸುಳುವಿಕೆಯ ಕುರಿತ ಆತಂಕಕ್ಕೆ ಅವರು ಯಾವುದೇ ಸಾಕ್ಷ್ಯಗಳನ್ನು ಒದಗಿಸಿಲ್ಲ. ಹಿಂದುತ್ವ ಸಂಘಟನೆಗಳು ನಿರ್ದಿಷ್ಟ ಸಮುದಾಯಗಳನ್ನು ಗುರಿಯಾಗಿಸಿಕೊಂಡು ವ್ಯಕ್ತಪಡಿಸುವ ಅಭಿಪ್ರಾಯದ ಧಾಟಿಯಲ್ಲೇ ಪ್ರಧಾನಿ ಅವರ ಹೇಳಿಕೆಯೂ ಇದೆ. ಒಳನುಸುಳುವಿಕೆಯ ವಿಚಾರವನ್ನು ಈ ಹಿಂದೆ ಚುನಾವಣಾ ಸಂದರ್ಭದಲ್ಲಿ ರಾಜಕೀಯವಾಗಿ ಬಳಸಲಾಗಿತ್ತು. ಮುಂದಿನ ದಿನಗಳಲ್ಲಿ ಅದು ಮತ್ತೆ ಮುನ್ನೆಲೆಗೆ ಬರಲಿದೆ ಎನ್ನುವುದರ ಸೂಚನೆ ಅವರ ಮಾತಿನಲ್ಲಿ ಇರುವಂತಿದೆ. ಅಕ್ರಮ ವಲಸೆಯ ಬಗೆಗಿನ ಅವರ ಮಾತು ಆತಂಕಕ್ಕಷ್ಟೇ ಸೀಮಿತವಾಗಿರದೆ, ಸಮಾಜದ ನಿರ್ದಿಷ್ಟ ಸಮುದಾಯಗಳ ವಿರುದ್ಧದ ಸಂಕಥನವೊಂದನ್ನು ಧ್ರುವೀಕರಣ ಮಾಡುವ ಗುರಿಯನ್ನೂ ಹೊಂದಿರುವಂತಿದೆ.

ಚುರುಮುರಿ... ಚಾವಡಿ

ಕಳ್ಳರು ಯಾರು?

ಪೂಜಾರಪ್ಪ ಕಳ್ಳ ಅಂದ್ರೆ ದೇವರಿಗೆ ಅವಮಾನ. ಲೆಕ್ಕ ಬರಿಯೋನು ಕಳ್ಳ ಅಂದ್ರೆ ಧರ್ಮಕ್ಕೆ ಅವಮಾನ. ಸೆಕ್ಯುರಿಟಿ ಕಳ್ಳ ಅಂದ್ರೆ ಸಂವಿಧಾನಕ್ಕೆ ಅವಮಾನ. ಬಿಡಿ, ಪ್ರಶ್ನೆ ಮಾಡೋರೆ ಕಳ್ರು!

ಪ್ರಸಾದ್ ರಕ್ಷಿದಿ, ರಂಗಕರ್ಮಿ, ಫೇಸ್‌ಬುಕ್‌ನಿಂದ

ಕಿಡಿನುಡಿ

ವಿರೋಧ ಪಕ್ಷದ ನಾಯಕ ಶಿಕ್ಷಣ ಪಡೆದ ಶಾಲೆ ಯಾವುದು? ಸರ್ಕಾರವನ್ನು, ಸೈದ್ಧಾಂತಿಕ ವಿರೋಧಿಗಳನ್ನು ಟೀಕಿಸಲು ಅವರು ಬಳಸುವ ಭಾಷೆ ಪೋಕರಿ ಯುವಕರ ಗುಂಪಿನಲ್ಲಿ ಬಳಕೆಯಾಗುವ ಭಾಷೆಯಂತಿದೆ. ಎಸ್‌ಐಟಿ ತನಿಖೆಗೆ ಸಂಬಂಧಿಸಿ ಆಡುತ್ತಿರುವ ಮಾತುಗಳಂತೂ ಕಿವಿ ಮುಚ್ಚಿಕೊಳ್ಳುವಷ್ಟು ಅಸಹ್ಯಕರವಾಗಿವೆ.

ಮುನೀರ್ ಕಾಟಿಪಳ್ಳ, ಸಾಮಾಜಿಕ ಹೋರಾಟಗಾರ

25 ವರ್ಷಗಳ ಹಿಂದೆ

ಶನಿವಾರ, 19-8-2000

- **ವಿಷದ ಕಾಯಿ ತಿಂದು 29 ಶಾಲಾ ಮಕ್ಕಳು ಅಸ್ವಸ್ಥ**

ಕೆ.ಜಿ.ಎಫ್., ಆಗಸ್ಟ್ 18– ಶಾಲಾ ಆವರಣದಲ್ಲಿ ಬೆಳೆದಿದ್ದ ವಿಷದ ಕಾಯಿ ತಿಂದು ಇಲ್ಲಿಗೆ ಸಮೀಪದ ಎಂ.ಆರ್. ಕುಪ್ಪೂರಿನಲ್ಲಿ ಪ್ರಾಥಮಿಕ ಶಾಲೆಯ 20 ಮಕ್ಕಳು ಇಂದು ಅಸ್ವಸ್ಥರಾದರು.

ಸಂಜೆ 4 ಗಂಟೆಗೆ ಶಾಲೆ ಬಿಟ್ಟಾಗ ಮೊದಲು ಈ ಕಾಯಿ ತಿಂದ ಬಾಲಕ ಇತರರನ್ನೂ ತಿನ್ನುವಂತೆ ಪ್ರೇರೇಪಿಸಿದ. ನಂತರ ಕಾಯಿ ತಿಂದ ಆರರಿಂದ ಹನ್ನೊಂದು ವರ್ಷದೊಳಗಿನ 15 ಬಾಲಕಿಯರು ಹಾಗೂ 14 ಬಾಲಕರು ವಾಂತಿ ಮಾಡಿಕೊಳ್ಳಲು ಶುರು ಮಾಡಿದರು. ಕೂಡಲೇ, ಅವರನ್ನು ಇಲ್ಲಿನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿದ್ದು, ಅವರೆಲ್ಲಾ ಈಗ ಗುಣಮುಖರಾಗುತ್ತಿದ್ದಾರೆ.

- **ನೈರುತ್ಯ ರೈಲ್ವೆ ವಲಯ: ಹೈಕೋರ್ಟ್ ಆಜ್ಞೆಗೆ ತಡೆ**

ನವದೆಹಲಿ, ಆಗಸ್ಟ್ 18– ನೈರುತ್ಯ ರೈಲ್ವೆ ವಲಯವನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸಬಾರದೆಂದು ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆ ನೀಡಿ, ಮೇಲ್ಮನವಿಯನ್ನು ವಿಚಾರಣೆಗೆ ಸ್ವೀಕರಿಸಿದೆ.

75 ವರ್ಷಗಳ ಹಿಂದೆ

ಶನಿವಾರ, 19-8-1950

- **ಗಂಡಂದಿರು ಬೇಕು!**

ಜಲಂಧರ್, ಆಗಸ್ಟ್ 18– ವಿದ್ಯಾವಂತ, ಸುಸಂಸ್ಕೃತ ವಿವಾಹ ವಯಸ್ಕರಾದ ಅನೇಕ ಮಂದಿ ತರುಣಿಯರಿಗೆ ಒಳ್ಳೆಯ ಗಂಡಂದಿರನ್ನು ಹುಡುಕುವ ಕಾರ್ಯವನ್ನು ಪಂಜಾಬ್‌ನ ಪುನರ್ ವ್ಯವಸ್ಥಾ ಶಾಖೆ ಕೈಗೊಂಡಿದೆ.

ಸರ್ಕಾರಿ ಆಡಳಿತದಲ್ಲಿರುವ ಸ್ತ್ರೀಯರ ಗೃಹಗಳಲ್ಲಿ ವಾಸಿಸುತ್ತಿರುವ ಸ್ಥಾನ ಪಲ್ಲಟರಾದ ವಿಧವೆಯರ ಮಕ್ಕಳು, ಈ ತರುಣಿಯರು.

ಈ ಹುಡುಗಿಯರನ್ನು ವಿವಾಹವಾಗಲು ಮನಸ್ಸುಳ್ಳ ಜೀವನಾಧಾರವುಳ್ಳ ವಿದ್ಯಾವಂತರಾದ 25ರಿಂದ 30 ವಯಸ್ಸಿನ ಒಳಗಿರುವ ಯೋಗ್ಯ ತರುಣರ ಅರ್ಜಿಗಳನ್ನು ಜಲಂಧರದ ಪುನರ್ ವ್ಯವಸ್ಥಾ ಶಾಖೆಯ ಸ್ತ್ರೀ ವಿಭಾಗದ ನಿರ್ದೇಶಕರು ಬಯಸಿದ್ದಾರೆ.

- **ಚಿಕಾಗೋದಲ್ಲಿ 'ವರ್ಣ ಗಲಭೆ'**

ಚಿಕಾಗೋ, ಆಗಸ್ಟ್ 18– ನಿಗ್ರೋ ಕುಟುಂಬಗಳೆರಡು ಶ್ವೇತ ವರ್ಣೀಯರ ಕ್ಷೇತ್ರಕ್ಕೆ ಬಂದು ಬಿಡಾರ ಹೂಡಿದ್ದರಿಂದ ಚಿಕಾಗೋದಲ್ಲಿ 'ವರ್ಣ ಗಲಭೆ' ಉದ್ಭುತವಾಗಿ, 200 ಮಂದಿ ಪೊಲೀಸರು ಬಂದು ಅಡಗಿಸ ಬೇಕಾಯಿತು. 6 ಮಂದಿ ಶ್ವೇತ ವರ್ಣೀಯರ ಬಂಧನವಾಗಿದೆ. ನಿಗ್ರೋಗಳ ಮನೆಗಳ ಮೇಲೆ ಇಟ್ಟಿಗೆಗಳನ್ನು ಸೀಸೆಗಳನ್ನು ಎಸೆಯಲಾಯಿತು.

ಉನ್ನತ ಶಿಕ್ಷಣ ಮತ್ತು ಪ್ರಪಾತ

ವಿಶ್ಲೇಷಣೆ

ದೀಪಕ್ ನಯ್ಯರ್

ಯುವಜನರಿಗೆ ಶೈಕ್ಷಣಿಕ ಅವಕಾಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಬಲ್ಲ ದೊಡ್ಡ ವಿಶ್ವವಿದ್ಯಾಲಯಗಳು ನಿರ್ಲಕ್ಷ್ಯಕ್ಕೊಳಗಾಗಿವೆ. 'ಶ್ರೇಷ್ಠತೆಯ ದ್ವೀಪ'ಗಳ ರೂಪದಲ್ಲಿರುವ, ಮಾನ್ಯತೆ ಹೊಂದಿರುವ ಸಣ್ಣ ಸಣ್ಣ ಸಂಸ್ಥೆಗಳು ಕೆಲವರಿಗಷ್ಟೇ ಎಟಕುವಂತಿವೆ. ಶಿಕ್ಷಣ ಕ್ಷೇತ್ರದಲ್ಲಿ ಅಸಮಾನತೆ ಇರುವಾಗ ದೇಶ ನೈಜ ಅಭಿವೃದ್ಧಿ ಸಾಧಿಸುವುದು ಸಾಧ್ಯವೇ?



ಭಾರತದಲ್ಲಿ ಉನ್ನತ ಶಿಕ್ಷಣವು ಬಿಕ್ಕಟ್ಟಿನಿಂದ ಕೂಡಿದೆ ಮತ್ತು ಆ ಬಿಕ್ಕಟ್ಟು ತುಂಬಾ ಆಳವಾಗಿ ಬೇರೂರಿದೆ. ಶಾಲಾ ಶಿಕ್ಷಣವನ್ನು ಮುಗಿಸಿ ಬಂದವರಿಗೆ ಬೇಕಾದಷ್ಟು ಶೈಕ್ಷಣಿಕ ಅವಕಾಶಗಳು ನಮ್ಮಲ್ಲಿಲ್ಲ. ಇರುವ ಅವಕಾಶಗಳು ಕೂಡ ಅಷ್ಟೊಂದು ಉತ್ತಮವಾಗಿಲ್ಲ. ಹಾಗಾದರೆ, ಉನ್ನತ ಶಿಕ್ಷಣದಲ್ಲಿ ಅಲ್ಲಲ್ಲಿ ಕಾಣುವ ಶ್ರೇಷ್ಠತೆಗಳು ಹೇಗೆ ಸಾಧ್ಯವಾದವು? ಅಗಾಧವಾದ ಪ್ರತಿಭಾ ಸಂಗಮ ಹಾಗೂ ವ್ಯವಸ್ಥೆಯ ಮಿತಿಗಳಿಗೆ ಹೊಂದಿಕೊಂಡು ವಿಕಸನಗೊಳ್ಳುವ ಪ್ರಕ್ರಿಯೆಯ (Darwinian selection processes) ಫಲಶ್ರುತಿಗಳವು. ಸಾಧಾರಣ ಸಾಮರ್ಥ್ಯದವರಿಗೆ ಅಥವಾ ಸಾಮಾಜಿಕ ಅವಕಾಶಗಳಿಂದ ವಂಚಿತರಾದವರಿಗೆ ಉನ್ನತ ಶಿಕ್ಷಣ ವ್ಯವಸ್ಥೆಯು ನೀಡಿರುವುದು ತೃಣ ಮಾತ್ರದಷ್ಟು ಅಷ್ಟೆ.

ಭಾರತದಲ್ಲಿ ಉನ್ನತ ಶಿಕ್ಷಣವು ಎದುರಿಸುತ್ತಿರುವ ಸವಾಲು ಏನು ಎಂಬುದು ತೀರಾ ಸ್ಪಷ್ಟ: ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳಿಗೆ, ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಶಿಕ್ಷಣವನ್ನು ಒದಗಿಸುವುದಕ್ಕಾಗಿ ಉನ್ನತ ಶಿಕ್ಷಣ ವ್ಯವಸ್ಥೆಯು ಬೃಹತ್ ಗಾತ್ರದಲ್ಲಿ ವಿಸ್ತರಣೆಯಾಗಬೇಕು. ಶಿಕ್ಷಣದ ಗುಣಮಟ್ಟವನ್ನು ಎತ್ತರಿಸಬೇಕೆನ್ನುವುದರಲ್ಲಿ ಎರಡು ಮಾತಿಲ್ಲ. ಅದಕ್ಕಿಂತ ಹೆಚ್ಚಾಗಿ, ಭಾರತದಲ್ಲಿ ಉನ್ನತ ಶಿಕ್ಷಣವು– ಮುಖ್ಯವಾಗಿ ಪ್ರವೇಶಾತಿ ವಿಷಯದಲ್ಲಿ– ಎಲ್ಲರನ್ನೂ ಒಳಗೊಳ್ಳುವುದು ಅಗತ್ಯವಾಗಿದೆ. ಅದಕ್ಕಾಗಿ, ಜಗತ್ತಿನ ಶ್ರೇಷ್ಠ ಮಾದರಿಗಳಿಗೆ ಸರಿಸಮಾನವಾಗಿ ತೂಗಬಲ್ಲ ಕೆಲವು ಸಂಸ್ಥೆಗಳು ನಮಗೆ ಬೇಕಿವೆ. ಆದರೆ, ಆ ಮಟ್ಟಿಗಿನ ಶ್ರೇಷ್ಠತೆ ಭಾರತದಲ್ಲಿಲ್ಲ. ಅಲ್ಲಿ ಇಲ್ಲಿ ಇರುವ ಶ್ರೇಷ್ಠತೆಯ ಪುಟ್ಟ ಪುಟ್ಟ ದ್ವೀಪಗಳು ಕೂಡ ಕ್ಷಿಪ್ರವಾಗಿ ಮರೆಯಾಗುತ್ತಿವೆ. ವಿಶ್ವವಿದ್ಯಾಲಯಗಳ ಶ್ರೇಯಾಂಕ ಪಟ್ಟಿಯಲ್ಲೂ (ಈ ಶ್ರೇಯಾಂಕ ಇತ್ತೀಚಿನ ವರ್ಷಗಳಲ್ಲಿ ಒಂದು ರೀತಿಯ ಫ್ಯಾಷನ್ ಆಗಿದೆ) ನಮ್ಮ ಸಾಧನೆ ಕಳಪೆಯಾಗಿದೆ. ಹೌದು, ಉನ್ನತ ಗುಣಮಟ್ಟದ ಗುರಿ ಹೊಂದಿದವರಿಗೆ ಇದೊಂದು ನಿರಾಶಾದಾಯಕ ಸಂಗತಿಯಾಗಿದೆ.

'ವಿಶ್ವವಿದ್ಯಾಲಯಗಳ ಶ್ರೇಯಾಂಕ–2025' ಪಟ್ಟಿಯು ಜಗತ್ತಿನ ಅಗ್ರ ನೂರು ವಿಶ್ವವಿದ್ಯಾಲಯಗಳು ಜಗತ್ತಿನ ಯಾವ ಯಾವ ಭೂಭಾಗದಲ್ಲಿವೆ ಎಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ಅಮೆರಿಕ (26), ಪಶ್ಚಿಮ ಯುರೋಪ್‌ನ ದೇಶಗಳು (18), ಇಂಗ್ಲೆಂಡ್ (16), ಆಸ್ಟ್ರೇಲಿಯಾ (8), ಹಾಂಗ್‌ಕಾಂಗ್ (6), ದಕ್ಷಿಣ ಕೊರಿಯಾ (5), ಜಪಾನ್ (4), ಚೀನಾ (4), ಸಿಂಗಪುರ (2), ಮಲೇಷ್ಯಾ (1) ಮತ್ತು ತೈವಾನ್ (1) –ಅಗ್ರ ನೂರು ವಿಶ್ವವಿದ್ಯಾಲಯಗಳನ್ನು ಹೊಂದಿದ ರಾಷ್ಟ್ರಗಳಾಗಿವೆ. ಆಸ್ಟ್ರೇಲಿಯಾವೂ ಸೇರಿದಂತೆ ಪಾಶ್ಚಿಮಾತ್ಯ ಜಗತ್ತಿನಲ್ಲಿ 72 ಮತ್ತು ಏಷ್ಯಾದಲ್ಲಿ 23 ಅಗ್ರ ಶ್ರೇಯಾಂಕದ ವಿಶ್ವವಿದ್ಯಾಲಯಗಳಿವೆ. ಭಾರತದ್ದು ಒಂದೂ ಇಲ್ಲ.

ಸಹಜವಾಗಿಯೇ, ಈ ಶ್ರೇಯಾಂಕಗಳು ಸಂಯೋಜಿತ ಸೂಚ್ಯಂಕ ಸಂಖ್ಯೆಗಳ ಎಲ್ಲಾ ಮಿತಿಗಳನ್ನು ಹೊಂದಿವೆ. ಏಕೆಂದರೆ, ಗುಣಾತ್ಮಕತೆಯ ಗುಣಲಕ್ಷಣಗಳನ್ನು ಹೀಗೆ ಅಂಕಗಳಲ್ಲಿ ಅಳೆಯುವುದು ಕಷ್ಟ. ವಿಭಿನ್ನ ಘಟಕಗಳಿಗೆ ನಿಗದಿಪಡಿಸಲಾದ ಮೌಲ್ಯದ ಪ್ರಮಾಣವು ಇಲ್ಲಿ ಫಲಿತಾಂಶವನ್ನು ರೂಪಿಸುತ್ತದೆ ಎಂಬುದನ್ನೂ ಒಪ್ಪಿಕೊಳ್ಳಬೇಕು. ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡ ಬಳಿಕವೂ, ನಮ್ಮ ವಿಶ್ವವಿದ್ಯಾಲಯಗಳು ಜಾಗತಿಕ ಮಾನದಂಡಗಳನ್ನು ತಲುಪುವಲ್ಲಿ ಮೈಲಿಗಳಷ್ಟು ದೂರ ಕ್ರಮಿಸಬೇಕಾಗಿದೆ ಎಂಬುದು ಸ್ಪಷ್ಟ.

ಐಐಟಿಗಳು, ಐಐಎಂಗಳು ಮತ್ತು ಐಐಎಸ್ಸಿಯಂತಹ 'ಶ್ರೇಷ್ಠತೆಯ ದ್ವೀಪ'ಗಳಿಂದ ನಾವೇನೂ ಸಮಾಧಾನಪಡುವಂತಿಲ್ಲ. ಇದುವರೆಗೆ ಆಡಳಿತ ನಡೆಸಿದ ಸರ್ಕಾರಗಳೆಲ್ಲವೂ ಐಐಟಿಗಳು, ಐಐಎಂಗಳು ಮತ್ತು ಐಐಎಸ್ಸಿಯ (ಐಐಎಸ್‌ಇಆರ್‌ಗಳಾಗಿ) ಸಂಖ್ಯೆಯನ್ನು ಹೆಚ್ಚಿಸಲು ಒತ್ತು ನೀಡಿವೆ. ಅದರ ಪರಿಣಾಮ, ಶೈಕ್ಷಣಿಕ ಶ್ರೇಷ್ಠತೆಯನ್ನು ಸಾಧಿಸಿದ್ದ ಸಂಸ್ಥೆಗಳ ಮೌಲ್ಯ ಕುಗ್ಗುವಂತಾಗಿದೆ. ಗುಣಮಟ್ಟದಲ್ಲೂ ಅಸಮಾನತೆ ಹೆಚ್ಚಾಗಿದೆ. ಯುವಜನರಿಗೆ ಶೈಕ್ಷಣಿಕ ಅವಕಾಶಗಳನ್ನು ಒದಗಿಸಬಲ್ಲ ದೊಡ್ಡ ವಿಶ್ವವಿದ್ಯಾಲಯಗಳು ಉನ್ನತ ಶಿಕ್ಷಣದ ಜೀವಾಳವೇ ಹೊರತು, ಮಾನ್ಯತೆ ಗಳಿಸಿದ ಸಣ್ಣ ಸಣ್ಣ ಸಂಸ್ಥೆಗಳಲ್ಲ.

ದುರದೃಷ್ಟವಶಾತ್, ಭಾರತವು ತನ್ನ ಕೆಲವು ವಿಶ್ವವಿದ್ಯಾಲಯಗಳಲ್ಲಿ ಅತ್ಯಂತ ಕಡಿಮೆ ಖರ್ಚಿನಲ್ಲಿ ಮಾಡಿದ ಶ್ರೇಷ್ಠ ಸಾಧನೆಯನ್ನು ನಿಧಾನವಾಗಿ, ಆದರೆ ನಿಶ್ಚಿತವಾಗಿ ವ್ಯರ್ಥಗೊಳಿಸಲಾಗುತ್ತಿದೆ. ಮತ್ತೂ ದುಃಖದಾಯಕ ಸಂಗತಿಯೆಂದರೆ, ವಿಶ್ವವಿದ್ಯಾಲಯಗಳಲ್ಲಿ ಅಳಿದುಳಿದ ಶ್ರೇಷ್ಠತೆಯೂ ಹೆಚ್ಚುತ್ತಿರುವ ರಾಜಕೀಯ ಹಸ್ತಕ್ಷೇಪದಿಂದಾಗಿ ಕ್ರಮೇಣ ಮತ್ತಷ್ಟು ದುರ್ಬಲಗೊಳ್ಳುತ್ತಿದೆ. ಅಷ್ಟೇ ಅಲ್ಲ, ಅರ್ಥಹೀನ ಹಾಗೂ ಕಡಿಮೆ ಸಂಪನ್ಮೂಲ ವಿನಿಯೋಗವೂ ವಿಶ್ವವಿದ್ಯಾಲಯಗಳಲ್ಲಿನ ಗುಣಮಟ್ಟದಲ್ಲಿ ಸ್ಥಿರವಾದ ಹಿನ್ನಡೆಗೆ ಕಾರಣವಾಗಿದೆ.

ದಶಕದ ಹಿಂದಿನ ಸನ್ನಿವೇಶಕ್ಕೆ ಹೋಲಿಸಿದರೆ ಈಗಿನ ಸ್ಥಿತಿ ಇನ್ನೂ ಕೆಟ್ಟದಾಗಿದೆ. ಭಾರತದಲ್ಲಿ ವಿಶ್ವವಿದ್ಯಾಲಯಗಳು ಅತ್ಯಂತ ವೇಗವಾಗಿ ಹದಗೆಡುತ್ತಿವೆ. ಅದೇ ಅಭಿವೃದ್ಧಿಶೀಲ ದೇಶಗಳಲ್ಲಿ ವಿಶೇಷವಾಗಿ ಏಷ್ಯಾ, ಅದರಲ್ಲೂ ಚೀನಾದಲ್ಲಿ ವಿಶ್ವವಿದ್ಯಾಲಯಗಳು ಗುಣಾತ್ಮಕವಾಗಿ ಪ್ರಗತಿಯನ್ನು ಸಾಧಿಸುತ್ತಿವೆ. ಭಾರತದಲ್ಲಿನ ಶೈಕ್ಷಣಿಕ ಕುಸಿತ ದೊಡ್ಡ ಅಪಾಯದ ಸಂಕೇತ. ಸರಿಪಡಿಸಿಕೊಳ್ಳುವ ಕ್ರಮಗಳನ್ನು ತುರ್ತಾಗಿ ಕೈಗೊಳ್ಳದಿದ್ದರೆ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಒಂದೊಮ್ಮೆ ನಾಯಕರಂತೆ ಬೀಗಿದ್ದ ನಾವು ಹಿಂದುಳಿದವರಾಗಿ ಪರಿವರ್ತಿತರಾಗುವ ಅಪಾಯವಿದೆ.

ಗುಣಮಟ್ಟದಲ್ಲಿವ್ಯತ್ಯಾಸಗಳಿದ್ದರೂ, ಖ್ಯಾತಿಯನ್ನು ಹೊಂದಿರುವ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಕ್ಕಾಗಿ ವಿದ್ಯಾರ್ಥಿಗಳಲ್ಲಿ ತೀವ್ರ ಸ್ಪರ್ಧೆ ಇದೆ. ಹನ್ನೆರಡನೇ ತರಗತಿಯ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸುವ ಕೆಲವು ಅದೃಷ್ಟವಂತರು ಇಲ್ಲಿ ಕಡಿಮೆ ಸಂಖ್ಯೆಯಲ್ಲಿ ಲಭ್ಯವಿರುವ ಸ್ಥಾನಗಳನ್ನು ಪಡೆದುಕೊಳ್ಳುತ್ತಾರೆ. ಕಡಿಮೆ ಅದೃಷ್ಟವಂತರಾದ ಹೆಚ್ಚಿನವರು ಅಧಿಕ ಶುಲ್ಕ ತುಂಬಿ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯುತ್ತಾರೆ. ಆದರೆ, ಕೆಲವು ಅಪವಾದಗಳನ್ನು ಹೊರತುಪಡಿಸಿ, ಇಂತಹ ಸಂಸ್ಥೆಗಳಲ್ಲಿ ಗುಣಮಟ್ಟ ಕಳಪೆಯಾಗಿರುತ್ತದೆ. ಸರ್ಕಾರಿ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳ ನಡುವೆ ಗುಣಮಟ್ಟದಲ್ಲಿ ಅಸಮಾನತೆ ಇರುವುದು ಸಾಮಾನ್ಯ. ಇಲ್ಲೂ ಎಲ್ಲಿಯೋ ಕೆಲವು ಅಪವಾದಗಳು ಇರಬಹುದು, ಅಷ್ಟೆ. ವಿಶೇಷ ಸವಲತ್ತು ಹೊಂದಿದ ಕೆಲವೇ ವಿದ್ಯಾರ್ಥಿಗಳಿಗೆ ಮಾತ್ರ ಅವರನ್ನು ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ಕಳುಹಿಸಿ ಕೊಡುವಷ್ಟು ಶ್ರೀಮಂತ ಪೋಷಕರಿದ್ದಾರೆ.

ಕಳೆದ 25 ವರ್ಷಗಳಲ್ಲಿ, ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ತೆರಳುತ್ತಿರುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಕ್ಷಿಪ್ರಗತಿಯಲ್ಲಿ ಏರಿಕೆಯಾಗಿದೆ. 2000ರಲ್ಲಿ 50 ಸಾವಿರದಷ್ಟಿದ್ದ ಈ ಸಂಖ್ಯೆ, 2010ರ ವೇಳೆಗೆ ಎರಡು ಲಕ್ಷಕ್ಕೆ ಏರಿಕೆಯಾಗಿತ್ತು. 2015ರಲ್ಲಿ 3.5 ಲಕ್ಷದಷ್ಟಿದ್ದರೆ, 2019ರಲ್ಲಿ 6 ಲಕ್ಷಕ್ಕೆ ಜಿಗಿದಿತ್ತು. ಬಳಿಕ ಕೋವಿಡ್ ಕಾರಣದಿಂದ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಾವಕಾಶವನ್ನು ಸ್ಥಗಿತಗೊಳಿಸಲಾಗಿತ್ತು. 2023ರಲ್ಲಿ 9 ಲಕ್ಷದಷ್ಟು ಭಾರತೀಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ತೆರಳಿದ್ದರು. ಆ ವರ್ಷದ ಅಂದಾಜಿನ ಪ್ರಕಾರ, ವಿದೇಶಗಳಿಗೆ ಹೋದ ವಿದ್ಯಾರ್ಥಿಗಳಲ್ಲಿ ಶೇ 30ರಷ್ಟು ಅಮೆರಿಕ, ಶೇ 25ರಷ್ಟು ಕೆನಡಾ, ಶೇ 20ರಷ್ಟು ಇಂಗ್ಲೆಂಡ್, ಶೇ 10ರಷ್ಟು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ಗೆ ತೆರಳಿದ್ದರು.

2023ರಲ್ಲಿ ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ಹೋದ ವಿದ್ಯಾರ್ಥಿಗಳ ಸರಾಸರಿ ತಲಾ ವೆಚ್ಚ 30 ಸಾವಿರ ಡಾಲರ್ (ಅಂದಾಜು ₹29 ಲಕ್ಷ) ಎಂದುಕೊಳ್ಳೋಣ. ಈ ಲೆಕ್ಕದಲ್ಲಿ, ವಿದೇಶಗಳಲ್ಲಿ ಭಾರತೀಯ ವಿದ್ಯಾರ್ಥಿಗಳು ಮಾಡಿದ ವೆಚ್ಚ 270 ಕೋಟಿ ಡಾಲರ್ (₹2.36 ಲಕ್ಷ ಕೋಟಿ) ಆಗುತ್ತದೆ. ಅದು, 2023ರಲ್ಲಿ ಭಾರತವು ವಿದೇಶಿ ಪ್ರವಾಸಿಗರಿಂದ ಗಳಿಸಿದ ವರಮಾನಕ್ಕೆ ಸಮ. ಆದರೆ, ಶ್ರೀಮಂತ ರಾಷ್ಟ್ರಗಳಲ್ಲಿ ಶಿಕ್ಷಣದ ವಾರ್ಷಿಕ ವೆಚ್ಚ ಹಾಗೂ ಶುಲ್ಕದ ಪ್ರಮಾಣ ನಾವು ತೆಗೆದುಕೊಂಡ ಸರಾಸರಿಗಿಂತ ಹೆಚ್ಚಾಗಿದೆ. ಹೀಗಾಗಿ, ಭಾರತೀಯ ವಿದ್ಯಾರ್ಥಿಗಳು ಮಾಡುವ ವೆಚ್ಚದ ಪ್ರಮಾಣವೂ ಅಧಿಕವಾಗಿಯೇ ಇದೆ.

ವಿದೇಶಗಳಲ್ಲಿ ಮಾಡಲಾಗುತ್ತಿರುವ ಈ ವೆಚ್ಚದ ಮೊತ್ತವೇನಾದರೂ ಭಾರತದ ಉನ್ನತ ಶಿಕ್ಷಣಕ್ಕೆ ಒದಗಿಬಂದರೆ ಕೆಲವು ವಿಶ್ವವಿದ್ಯಾಲಯಗಳನ್ನಾದರೂ ಶ್ರೇಷ್ಠತೆಯತ್ತ ಕೊಂಡೊಯ್ಯಲು ಸಾಧ್ಯವಾದೀತು. ಇನ್ನೂ ಮುಖ್ಯವಾದ ಸಂಗತಿಯೆಂದರೆ, ವಿದೇಶಕ್ಕೆ ಹೋದ ಬಹುಪಾಲು ವಿದ್ಯಾರ್ಥಿಗಳು –ಹೆಚ್ಚು ಕಡಿಮೆ ಶೇ 75ರಷ್ಟು– ಶಿಕ್ಷಣ ಮುಗಿಸಿದ ಮೇಲೆ ಭಾರತಕ್ಕೆ ಹಿಂದಿರುಗುವುದೇ ಇಲ್ಲ. ಉನ್ನತ ಶಿಕ್ಷಣಕ್ಕಾಗಿ ಭಾರತಕ್ಕೆ ಬರುತ್ತಿದ್ದ ದಕ್ಷಿಣ ಏಷ್ಯಾ ರಾಷ್ಟ್ರಗಳ ವಿದ್ಯಾರ್ಥಿಗಳ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ನಮ್ಮ ಉನ್ನತ ಶಿಕ್ಷಣವು ಅಡಕತ್ತರಿಯಲ್ಲಿ ಸಿಲುಕಿಕೊಂಡಿದೆ.

ಒಂದೆಡೆ, ಶಿಕ್ಷಣವನ್ನು ಒಂದು ಉದ್ಯಮ ಎಂದು ಪರಿಭಾವಿಸುವ ಖಾಸಗಿ ವಲಯದಿಂದಲೇ ಸಮಸ್ಯೆಗೆ ಪರಿಹಾರ ಸಿಗಬಹುದು ಎಂಬ ಭಾವನೆ ಇದೆ. ಆದರೆ, ಸ್ವಂತ ಹಣಕಾಸಿನ ವ್ಯವಸ್ಥೆ ಇಲ್ಲದೆ ಹಲವು ಖಾಸಗಿ ಸಂಸ್ಥೆಗಳು ಬಾಗಿಲು ಮುಚ್ಚುತ್ತಿವೆ. ಇಂತಹ ಖಾಸಗಿ ಸಂಸ್ಥೆಗಳ ಶಿಕ್ಷಣದ ಗುಣಮಟ್ಟವನ್ನು ಖಾತರಿಪಡಿಸುವ ನಿಯಂತ್ರಣ ವ್ಯವಸ್ಥೆಯೂ ನಮ್ಮಲ್ಲಿಲ್ಲ. ಹೀಗಾಗಿ, ಸದ್ಯದ ಬಿಕ್ಕಟ್ಟಿಗೆ ಖಾಸಗಿ ವಲಯ ಪರಿಹಾರವಾಗಲಾರದು. ಇನ್ನೊಂದೆಡೆ, ಖಾಸಗಿ ವಲಯ ಏನಾದರೂ ಜಾದೂ ಮಾಡುತ್ತದೆ ಎಂದು ನಂಬಿರುವ ಸರ್ಕಾರಗಳು, ಸರ್ಕಾರಿ ವಿಶ್ವವಿದ್ಯಾಲಯಗಳ ಮೇಲೆ ಹೊಂದಿರುವ ಹಿಡಿತ ಮಾತ್ರ ಹುಚ್ಚಾಟದಿಂದ ಕೂಡಿದೆ. ವಿಶ್ವವಿದ್ಯಾಲಯಗಳನ್ನು ಸಿದ್ಧಾಂತದ ಆಡುಂಬೊಲವನ್ನಾಗಿ, ಹಿಂಬಾಲಕರ ಆಶ್ರಯ ತಾಣಗಳನ್ನಾಗಿ ಮಾಡಿಕೊಂಡು ಸ್ವಹಿತಾಸಕ್ತಿಗಾಗಿ ರಾಜಕೀಯ ಪ್ರಭಾವ ಬಳಸುವುದು ಹೆಚ್ಚಾಗಿದೆ. ಇದೊಂದು ದೊಡ್ಡ ಸಮಸ್ಯೆ.

ನಾವೀಗ ತಪ್ಪುಗಳನ್ನು ತಿದ್ದಿಕೊಳ್ಳದೆ ಹೋದರೆ ಯುವ ಭಾರತದ ಭವಿಷ್ಯವನ್ನು ಅಪಾಯದ ದವಡೆಗೆ ನೂಕುತ್ತೇವೆ ಮತ್ತು ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ನಾವು ಹೊಂದಿರುವ ಆಕಾಂಕ್ಷೆಗಳನ್ನೂ ಹತ್ತಿಕ್ಕುತ್ತೇವೆ.

(ಲೇಖಕ: ಅರ್ಥಶಾಸ್ತ್ರಜ್ಞ, ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ, ದೆಹಲಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ)

ವಾಚಕರ ವಾಣಿ

ಆಯೋಗ ಜನಸ್ನೇಹಿ ಆಗಬೇಕಿದೆ

ರಾತ್ರಿ ನೋಡಿದ ಬಾವಿ ಹುಡುಕಲು ಹಗಲು ತಡಕಾಡಿದಂತೆ ಚುನಾವಣಾ ಆಯೋಗವು ಆಲಾಪಿಸುತ್ತಿದೆ. ಮತದಾರರ ಹಕ್ಕುಗಳನ್ನು ಹೇಗೆ ಹನನ ಮಾಡಲಾಗುತ್ತಿದೆ ಎಂಬುದನ್ನು ಇಡೀ ದೇಶದ ಜನ ನೋಡುತ್ತಿದ್ದಾರೆ. ಇದು ಡಿಜಿಟಲ್ ಯುಗ. ಆಯೋಗ ಕಾಗಕ್ಕ ಗುಬ್ಬಕ್ಕನ ಕಥೆ ಹೇಳಬಾರದು. ಮತದಾರರ ಪಟ್ಟಿಯನ್ನು ಬೂತ್ ಪ್ರಕಾರ ವೆಬ್‌ಸೈಟ್‌ನಲ್ಲಿ ಸಿಗುವಂತೆ ಮಾಡಬೇಕು. ಜನನ ಮತ್ತು ಮರಣದ ದಾಖಲೆ ನೀಡುವ ಗ್ರಾಮ ಲೆಕ್ಕಾಧಿಕಾರಿಗಳನ್ನೇ ಬಿಎಲ್‌ಒಗಳಾಗಿ ಮಾಡಿ ಮತದಾರರ ಪಟ್ಟಿಯನ್ನು ಪರಿಷ್ಕರಣೆಗೆ ಒಳಪಡಿಸಬೇಕು. ಯಾವುದೇ ಬದಲಾವಣೆಯು ತಹಶೀಲ್ದಾರ್ ಅಥವಾ ಜಿಲ್ಲಾಧಿಕಾರಿ ಹಂತದಲ್ಲಿ ನಡೆಯಬೇಕು. ಯಾರು ಯಾರನ್ನೂ ದೂರದೆ ಯಾವುದಕ್ಕೂ ಕಿವಿಗೊಡದೆ, ಎಲ್ಲರೂ ಸೇರಿ ಚುನಾವಣಾ ಆಯೋಗವನ್ನು ಜನಸ್ನೇಹಿ ಮಾಡಬೇಕಿದೆ.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಕೋರ್ಟ್ ಮೇಲಿನ ನಂಬಿಕೆಗೆ ಬಲ

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಇತರ ಆರೋಪಿಗಳ ಜಾಮೀನು ರದ್ದುಪಡಿಸಿದ ಸುಪ್ರೀಂ ಕೋರ್ಟ್ ತೀರ್ಪು, ಕಾನೂನಿನ ಮುಂದೆ ಎಲ್ಲರೂ ಸಮಾನರು ಎನ್ನುವುದನ್ನು ಸಾಬೀತುಪಡಿಸಿದೆ. ತಮಗಿರುವ ಜನಪ್ರಿಯತೆಯನ್ನೇ ರಕ್ಷಣಾ ಕವಚವಾಗಿ ಬಳಸುವ ಸೆಲೆಬ್ರಿಟಿಗಳಿಗೆ ಇದೊಂದು ದೊಡ್ಡ ಪಾಠ. ಸಾಮಾಜಿಕ ಮೌಲ್ಯಗಳ ಮೇಲೆ ಪ್ರಭಾವ ಬೀರುವ ಇಂತಹ ನಟರು, ಸಚ್ಚಾರಿತ್ರ್ಯದ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು. ಅದನ್ನು ಬಿಟ್ಟು ಸಮಾಜಕ್ಕೆ ಮಾರಕವಾದರೆ ಅವರ ಅಭಿಮಾನಿಗಳೂ ನಟನ ಹಾದಿಯನ್ನೇ ತುಳಿಯುತ್ತಾರೆ. ಆನೆ ನಡೆದದ್ದೇ ದಾರಿ ಎಂಬಂತೆ ತಾವು ಏನು ಮಾಡಿದರೂ ನಡೆಯುತ್ತದೆ ಎನ್ನುವ ಅಹಮಿಕೆ ಸರಿಯಲ್ಲ.

ರಾಜಕೀಯ ಅಧಿಕಾರ ಕೂಡ ನ್ಯಾಯಾಂಗ ಪ್ರಕ್ರಿಯೆ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎನ್ನುವುದಕ್ಕೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರು ಆಜೀವ ಜೈಲು ಶಿಕ್ಷೆಗೆ ಗುರಿಯಾಗಿರುವುದೇ ಸಾಕ್ಷಿ. ಈ ಎರಡು ಪ್ರಕರಣಗಳು ಜನಸಾಮಾನ್ಯರಿಗೆ ನ್ಯಾಯಾಂಗದ ಮೇಲಿನ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿವೆ.

ವೀಣಾ ಸುಬ್ರಹ್ಮಣ್ಯ, ಬೆಂಗಳೂರು

ಅತ್ಯಾಚಾರ: ಆಘಾತಕಾರಿ ನಡೆ

ಅರವತ್ತೈದು ವರ್ಷದ ತಾಯಿ ಮೇಲೆ ಅತ್ಯಾಚಾರ ಎಸಗಿದ ಆರೋಪಿಯ ಸುದ್ದಿ ಓದಿ ಕಳವಳ ಉಂಟಾಯಿತು (ಪ್ರ.ವಾ., ಆಗಸ್ಟ್ 18). ಬಾಲ್ಯದಲ್ಲಿ ತನ್ನವರ ಅನೈತಿಕ ಅಥವಾ ಅಮಾನುಷ ವರ್ತನೆಗೆ ಬೇಸತ್ತು ವಿಶಿಷ್ಟ ವಿಘಟನೆಗೆ ತುತ್ತಾದ ಅನಾರೋಗ್ಯಕರ ಮಾನಸಿಕ ಸ್ಥಿತಿಗೆ ತಲುಪಿದ ವ್ಯಕ್ತಿಯಿಂದ ಹೀಗಾಗುವುದುಂಟು ಎಂದು ಮನಃಶಾಸ್ತ್ರ ಹೇಳುತ್ತದೆ. ದೊಡ್ಡವರ ನಡವಳಿಕೆ ಚಿಕ್ಕಮಕ್ಕಳ ಮೇಲೆ ಬೀರುವ ಪ್ರಭಾವವು ಸಮಾಜ ಕಂಟಕ ಪ್ರವೃತ್ತಿಗೆ ನಾಂದಿಯಾಗಲಿದೆ ಎಂಬುದು ಸಾಬೀತಾಗಿದೆ. ಹಾಗಾಗಿ, ಸುಸಂಸ್ಕೃತ ಪೀಳಿಗೆ ನಿರ್ಮಾಣವು ಸುಸಂಸ್ಕೃತ ಮನೆಯಿಂದಲೇ ಸಾಧ್ಯ ಎನ್ನುವುದನ್ನು ಮರೆಯಬಾರದು.

ಅನಿಲಕುಮಾರ ಮುಗಳಿ, ಧಾರವಾಡ

ದೇಗುಲದಲ್ಲಿ ಬಟ್ಟೆ ಕೈಚೀಲ ಬಳಸಿ

'ಪರಿಸರ ಸ್ನೇಹಿ ಕೈಚೀಲ ಬಳಸಿ' ಎನ್ನುವ ಸಚಿವ ರಾಮಲಿಂಗಾರೆಡ್ಡಿ ಅವರ ಸಾಂದರ್ಭಿಕ ಸಲಹೆ ಸ್ವೀಕಾರಾರ್ಹವಾಗಿದೆ (ಪ್ರ.ವಾ., ಆಗಸ್ಟ್ 18). ಪ್ಲಾಸ್ಟಿಕ್ ಮುಕ್ತ ದೇವಾಲಯಗಳ ಅಭಿಯಾನ ಕೇವಲ ಕಾಟಾಚಾರವಾಗದಿರಲಿ. ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಸೇರಿದ ದೇವಸ್ಥಾನಗಳನ್ನು ಪ್ಲಾಸ್ಟಿಕ್ ಮುಕ್ತವಾಗಿಸಲು ಸರ್ಕಾರ ಕೈಗೊಂಡಿರುವ ಅಭಿಯಾನದ ಯಶಸ್ಸಿಗೆ, ಸಾರ್ವಜನಿಕರ ಸಹಕಾರವೂ ಅತ್ಯಗತ್ಯ. ಪ್ಲಾಸ್ಟಿಕ್ ಕೈಚೀಲಕ್ಕೆ ಪರ್ಯಾಯವಾಗಿ, ಎಲ್ಲ ಮುಜರಾಯಿ ದೇವಸ್ಥಾನಗಳಲ್ಲಿ ಬಟ್ಟೆಯಿಂದ ತಯಾರಿಸಿದ ಕೈಚೀಲಗಳು ಲಭ್ಯವಾಗುವಂತೆ ಇಲಾಖೆಯು ಕ್ರಮವಹಿಸಬೇಕಿದೆ.

ಜಯವೀರ ಎ.ಕೆ., ರಾಯಬಾಗ

ದೇಗುಲ ಪ್ರವೇಶ: ಬೇಕಿದೆ ಪರಿವರ್ತನೆ

ಸ್ನೇಹಿತರೊಂದಿಗೆ ಇತ್ತೀಚೆಗೆ ದೇವಸ್ಥಾನವೊಂದಕ್ಕೆ ಹೋಗಿದ್ದೆ. ನಾವು ಪೂಜೆ ಮುಗಿಸಿ ಹೊರಗೆ ಬರುವಾಗ ಸುಮಾರು 70 ವರ್ಷದ ಹಿರಿಯರು ಸೇರಿದಂತೆ ಐವರು ಹೆಂಗಸರು, ಮೂರ್ನಾಲ್ಕು ಪುರುಷರು ದೇವಸ್ಥಾನದ ಮುಖ್ಯದ್ವಾರದಲ್ಲಿ ಹಣ್ಣುಕಾಯಿ, ಎಲೆ ಅಡಿಕೆ, ಅದರ ಮೇಲೆ ₹500 ನೋಟು ಇಟ್ಟು ಕಾಯುತ್ತಿದ್ದರು. ಆಶ್ಚರ್ಯಚಕಿತನಾಗಿ 'ಏಕೆ' ಒಳಗೆ ಹೋಗುವುದಿಲ್ಲವೇ?' ಎಂದೆ. 'ಹಿಂದಿನ ಕಾಲದಿಂದಲೂ ನಡೆದು ಬಂದಿರುವ ಪದ್ಧತಿಯನ್ನು ಮುರಿಯೋದಕ್ಕೆ ಆಗುತ್ತಾ?' ಎಂದರು. ಹಳ್ಳಿಗಳಲ್ಲಿ ಇಂದಿಗೂ ಇಂತಹ ಚಿತ್ರಣ ಸಾಮಾನ್ಯವಾಗಿದೆ. ಸೌಮ್ಯ ಹಾದಿಯಲ್ಲಿ ಮನಃಪರಿವರ್ತನೆ ಮಾಡುವ ಕೆಲಸ ನಡೆಯಬೇಕಿದೆ.

ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಹೆದ್ದಾರಿ ಗುಂಡಿ: ಜೀವಕ್ಕೆ ಸಂಚಕಾರ

ರಾಷ್ಟ್ರೀಯ ಹೆದ್ದಾರಿ–218ರ ವ್ಯಾಪ್ತಿಗೆ ಬರುವ ಹುಬ್ಬಳ್ಳಿ–ಸೋಲಾಪುರ ರಸ್ತೆಯು ಗುಂಡಿಗಳಿಂದ ಆವೃತವಾಗಿದೆ. ಈ ಮಾರ್ಗದಲ್ಲಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತವೆ. ಹಲವು ದ್ವಿಚಕ್ರವಾಹನ ಸವಾರರು ಗುಂಡಿಗಳನ್ನು ತಪ್ಪಿಸಲು ಹೋಗಿ ಅಥವಾ ಆಳವಾದ ಗುಂಡಿಗಳಿಗೆ ಬಿದ್ದು ಗಾಯಗೊಂಡಿದ್ದಾರೆ. ಇದೇ ಮಾರ್ಗದಲ್ಲಿ ಬರುವ ಕುಳಗೇರಿ, ಕೊಣ್ಣೂರು, ನವಲಗುಂದ ಸಮೀಪದ ರಸ್ತೆಗಳು ಇದಕ್ಕಿಂತ ಭಿನ್ನವಾಗಿಲ್ಲ. ರಾತ್ರಿ ವೇಳೆ ಸಂಚರಿಸುವ ವಾಹನ ಚಾಲಕರಿಗೆ ಈ ಗುಂಡಿಗಳು ಕಾಣಿಸುವುದಿಲ್ಲ. ಸಂಬಂಧಪಟ್ಟವರು ಗುಂಡಿಗಳನ್ನು ಮುಚ್ಚಿಸಿ ಪ್ರಯಾಣಿಕರ ಜೀವ ಉಳಿಸಬೇಕಿದೆ.

ಸುರೇಶ ಅರಳಿಮರ, ಬಾದಾಮಿ

ಚುರುಮುರಿ



ನ್ಯಾಯ ಪಂಚಾತ್ಕೆ

• ಡಿ.ಎಸ್. ಲಿಂಗರಾಜು

'ಭಾರತದೋರು ಬಲೆ ಹೆಚ್ಚಿಕ್ಯಬುಟ್ಟವ್ರೆ ಕನೋ ಪುಟ್ಟಿನ ಬಾಮೈದ. ಮೊನ್ನೆ ನೀನೇ ಕಂಡಲ್ಲ, ನಾನೇ ಯುದ್ಧ ನಿಲ್ಲಿಸಿದ್ದು ಅಂದುದ್ಕೆ ನನ್ನೇ ಬೋದು ಕೆಡಗಿಬುಟ್ರಲ್ಲ' ಟ್ರಂಪಣ್ಣ ನ್ಯಾಯ ಸುರು ಮಾಡಿದ.

'ನೋಡು ಟ್ರಂಪಣ್ಣ ಮಾವ, ಭಾರತದೋರು ನಮ್ಮ ಕಳ್ಳು–ಬಳ್ಳಿ ಇದ್ದಂಗೆ ಕನಾ. ಕಷ್ಟ ಕಾಲದಾಗೆ ನಮ್ಮ ತಾವು ಪೆಟ್ರೋಲು, ಇಮಾನ ಖರೂದಿ ಮಾಡಿ ಆತುಗಂಡವರೆ. ಅವರಿಗೆ ಎರಡು ಬಗೆದ್ರೆ ದೇವರು ಮೆಚ್ಚಾನೇ. ನೀನು ಉಕ್ರೇನಿಗೆ, ಪಾಕಿಗೆ ಇಮಾನ, ಮಿಸೈಲು ಕೊಟ್ಟು ಸಾಕ್ಕೊಂಡಿಲ್ವೇ?' ಪುಟ್ಟಿನಣ್ಣ ತಲೆ ಒಗೆದ.

'ಲೇ ದಡ್ಡಾ, ಚೀನದೋನ್ನ ನೋಡಿ ಚಮಕಾಯಿಸದೆಂಗೆ ಅಂತ ಕಲೀಲಾ. ನೀನು ಯಾಕೆ ಉಕ್ರೇನ್ ಮ್ಯಾಲೆ ಕವ್ಕಂದು ಬಿದ್ದಿದ್ದೀಯ? ಯುದ್ಧ ನಿಲ್ಲಿಸಿ ಒಂದಾಗಿರಿ' ಟ್ರಂಪಣ್ಣ ಸಿಟ್ಟಾದ.

'ನಿನ್ನ ಮಾತು ಕೇಳಿ ಹಂಗೆಲ್ಲ ಮಾಡಿಕ್ಕೇ ಆಗ್ಕುಲ್ಲ ಮಾವ. ನೀನೇನೊ ನೊಬೆಲ್ ಬರಲಿ ಅಂತ ವರಸೆ ತೆಗುದಿದ್ದೀಯ. ಭಾರತದೋರು ನಿನಗೆ ಚೆನ್ನಾಗಿ ಅಂದು ಕಳಿಸಿದ್ರೂ ಬುದ್ಧಿ ಬಂದುಲ್ಲ. ಮೊದಲು ಉಕ್ರೇನಿನೋರಿಗೆ ದುಡ್ಡು–ಕಾಸು ಕೊಡದು ನಿಲ್ಸು. ಆಮೇಲೆ ನೋಡನೆ' ಪುಟ್ಟಿನಣ್ಣ ಮಕ್ಕುಗಿದ.

'ಲೇ ಬಾಮೈದ ಬ್ಯಾಡ ಕಲಾ. ನಾವು ನಾವು ಆತುಗಂಡು ಗಟ್ಟಿಯಾಗಿರಬೇಕು ಕಲಾ. ನೋಡು ಬಾಮೈದ, ನಮಗೂ ನಿಮಗೂ ಹತ್ತಿದ್ದು ಹರಿಯದಿದ್ರೂ ನಿಮ್ಮ ತಾವೇ ರೇರ್ ಅರ್ತ್ ಮಟೀರಿಯಲ್ ತಕ್ಕತಿದ್ದೀವಲ್ವಾ? ನಾನು–ನೀವು ಒಂದೇ ತಾಯಿ ಮಕ್ಕಳಿದ್ದಂಗಿರನ. ಏನಂತೀಯ?' ಅಂದ ಟ್ರಂಪಣ್ಣ.

'ನೀನು ಬುಡು ಮಾವ, ಸದರ ಕೊಟ್ರೆ ಪದರಕ್ಕೆ ಕೈ ಮಡಗ್ತೀಯ. ಬಾ ಈಗ ವೋಗನ' ಅಂದ ಪುಟ್ಟಿನಣ್ಣ–ಟ್ರಂಪಣ್ಣ ಜಂಟಿ ಹೇಳಿಕೆ ಕೊಟ್ಟರು: 'ನಮ್ಮ ನಡುವಿನ ಮಾತುಕತೆಯಲ್ಲಿ ಎಲ್ಲಾ ಸಮಸ್ಯೆ ಪರಿಹಾರಾಯ್ತದೆ. ನಾವು ಇನ್ನು ಮ್ಯಾಲೆ ಒಂದಾಗಿ ಬಾಳತೀವಿ' ಅಂದು ಇಬ್ಬರೂ ಕೈ ಮುಗಿದರು.

ಈ ನಾಟಕ ಕಂಡು ಜಗತ್ತಿನ ಜನರೆಲ್ಲಾ ಗೊಳ್ ಅಂತ ನಕ್ಕಿದ್ದು ಅವರಿಗೆ ಗೊತ್ತಾಗಲೇ ಇಲ್ಲ.

ಸಂಗತ

ಜಾತಿ: ನಾವೇ ಎಳೆದಿರುವ ಲಕ್ಷ್ಮಣರೇಖೆ

ಮಾತಿನಲ್ಲಿ ಮೀರುವ ಜಾತಿ–ಧರ್ಮ ಆಚರಣೆಯಲ್ಲಿ ಇಣುಕುತ್ತಿರುತ್ತದೆ. ಬಹುತೇಕ ಸಾಹಿತಿ, ಕಲಾವಿದರು ಜಾತಿವ್ಯಸನದಿಂದ ಪಾರಾಗಿಲ್ಲ.

• ಬಿಂಡಿಗನವಿಲೆ ಭಗವಾನ್

ಗಾಳಿ, ನೀರು, ಮಣ್ಣು, ಅಗ್ನಿ, ಆಕಾಶ –ಈ ಪಂಚಭೂತಗಳಿಂದ ರೂಪುಗೊಂಡ ಕಾಯ ಅಳಿದ ಮೇಲೆ ಮತ್ತೆ ಪಂಚಭೂತಗಳಲ್ಲೇ ಐಕ್ಯವಾಗಬೇಕು. ಯಾರಾದರೂ ಮೃತರಾಗಿ, ಅವರ ಅಂತ್ಯಸಂಸ್ಕಾರ ಆಗುತ್ತಲೇ 'ಪಂಚಭೂತಗಳಲ್ಲಿ ಲೀನರಾದರು' ಎನ್ನುತ್ತೇವೆ. 'ಮರಣ ಹೊಂದಿದರು', 'ಕೊನೆಯುಸಿರೆಳೆದರು' ಅಥವಾ 'ಕಾಲವಶರಾದರು' ಮುಂತಾಗಿ ಹೇಳುವುದಕ್ಕಿಂತ, 'ಪಂಚಭೂತಗಳಲ್ಲಿ ಲೀನರಾದರು' ಎನ್ನುವ ಹೇಳಿಕೆಯೆ ಹೆಚ್ಚು ವೈಜ್ಞಾನಿಕ ಹಾಗೂ ಅರ್ಥಪೂರ್ಣ. 'ಮರಳಿ ಮಣ್ಣಿಗೆ' ಎನ್ನುವ ಪರಿಕಲ್ಪನೆ ಹೇಳುವುದೂ ಇದನ್ನೇ.

ಗಣ್ಯರು, ಪ್ರತಿಷ್ಠಿತರ ನಿಧನದ ಸುದ್ದಿ ಪ್ರಕಟಗೊಳ್ಳುವುದೇ ತಡ, ಅವರ ಸಂಬಂಧಿಕರು ಮಾಧ್ಯಮದವರಿಂದ ಒಂದು ಸಿದ್ಧಸೂತ್ರದ ಪ್ರಶ್ನೆ ಎದುರಿಸುತ್ತಾರೆ. ಎಷ್ಟು ಹೊತ್ತಿಗೆ ಅಂತ್ಯವಿಧಿ, ವಿಧಾನಗಳು ಎನ್ನುವುದು ಹಾಗಿರಲಿ; ಯಾವ ಸಂಪ್ರದಾಯದಂತೆ ಅಂತಿಮ ಸಂಸ್ಕಾರ ಎನ್ನುವ ಪ್ರಶ್ನೆಯದು.

ಅಗಲಿದ ಗಣ್ಯರಿಗೆ ಸಲ್ಲುವ ಶ್ರದ್ಧಾಂಜಲಿ ಸಭೆಗಳಲ್ಲೂ ಅದೇ ಜಾಡು. ಮೃತರ ವರ್ಗಕ್ಕೆ ಸೇರಿದವರೇ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ನುಡಿನಮನ ಸಲ್ಲಿಕೆಗೆ ಆ ಪಂಗಡದವರ ಹೊರತಾಗಿ ಮತ್ತೆ ಯಾರೂ ಅರ್ಹರಲ್ಲ ಎಂಬ ಗ್ರಹಿಕೆ ಮೇಲಾಗಿರುವಂತೆ ಕಾಣಿಸುತ್ತದೆ.

ನಮ್ಮದು ಜಾತ್ಯತೀತ, ಧರ್ಮ ನಿರಪೇಕ್ಷಿತ ದೇಶ ಎಂದುಕೊಂಡರೆ ಸಾಕೆ? ಮೃತ ಶರೀರಕ್ಕೂ ಧರ್ಮ, ಜಾತಿ, ಉಪಜಾತಿ, ವರ್ಗ ಎಂಬ ಹಂಗು ತೊಡಿಸುತ್ತೇವಲ್ಲ! ವ್ಯಕ್ತಿ ಬದುಕಿದ್ದಾಗ ಅವನ ಉಸಿರು, ರಕ್ತ, ಮಾಂಸ, ಮೂಳೆಯಲ್ಲಿ ಮತ, ಧರ್ಮ ಎನ್ನುವುದಿರಲಿಲ್ಲ. ಆತನ ಕಳೇಬರದ ಅಂತ್ಯಕ್ರಿಯೆಯಲ್ಲಿ ಅವು ಗೋಚರಿಸುವುದಾದರೂ ಹೇಗೆ? ಸಾಕುಪ್ರಾಣಿಗಳು ಅಸುನೀಗಿದಾಗಲೂ ಅವಕ್ಕೆ ಸಂಪ್ರದಾಯದ ಸಂಕೇತವಿರಿಸಿ ಅವನ್ನು ವಿಲೇವಾರಿ ಮಾಡುವುದನ್ನು ಕಾಣುತ್ತೇವೆ.

ವ್ಯಕ್ತಿಯ ನಿಧನದ ನಂತರ ಅವರ ಪೂರ್ವ ನಿರ್ಧಾರದಂತೆ ಹಾಗೂ ಕುಟುಂಬದವರ ಅಪೇಕ್ಷೆಯಂತೆ ಮೃತದೇಹವನ್ನು ಆಸ್ಪತ್ರೆಗೋ, ಪ್ರಯೋಗಾಲಯಕ್ಕೋ ದಾನ ಮಾಡುವ ಉದಾಹರಣೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿವೆ. ಸತ್ತವರು ಬದುಕಿದವರಿಗೆ ನೆರವಾಗುವ ಈ ಕ್ರಮ ಮೆಚ್ಚತಕ್ಕದ್ದು. ಈ 'ದೊಡ್ಡವರ ದಾರಿ' ಎಲ್ಲರೂ ನಡೆಯುವ ಹೆದ್ದಾರಿ ಆಗಬೇಕು. ಹಾಗೆ ದೇಹ ಒಪ್ಪಿಸುವ ಸಂದರ್ಭದಲ್ಲಿ ಜಾತಿ, ಧರ್ಮದ ನಮೂದಿನ ಅಗತ್ಯವೇ ಇರದೆನ್ನಿ.

ನಿಸ್ಸಂದೇಹವಾಗಿ ನಮ್ಮ ಸಂವಿಧಾನದಲ್ಲಿ ಆಯಾ ಧಾರ್ಮಿಕ ಪದ್ಧತಿಯ ಅನುಸರಣೆಗೆ ಅವಕಾಶವಿದೆ. ವೈಜ್ಞಾನಿಕ ಮನೋಭಾವ, ವೈಚಾರಿಕತೆಯನ್ನು ಪ್ರತಿಯೊಬ್ಬ ಭಾರತೀಯ ಪ್ರಜೆಯೂ ರೂಢಿಸಿಕೊಳ್ಳಬೇಕೆಂಬ ಆಶಯವೂ ಸಂವಿಧಾನದಲ್ಲಿದೆ.



ಈಗೀಗ ಸ್ಥಳಾವಕಾಶದ ಕೊರತೆಯ ಕಾರಣಕ್ಕೆ ಕಳೇಬರಗಳನ್ನು ಹೂಳುವ ಬದಲು ಸುಡುವ ಪ್ರಸಂಗಗಳು ಹೆಚ್ಚುತ್ತಿವೆ. ಹೌದು, ದಿನಮಾನಗಳೇ ಔಚಿತ್ಯವನ್ನು ನಿರ್ದೇಶಿಸುವುದು ಇತಿಹಾಸದಲ್ಲಿ ಸಾಗಿಬಂದಿದೆ.

ಇಂಥ ಪದ್ಧತಿಯನ್ನು ಪಾಲಿಸಿದರೇನೆ ಗತಿಸಿದವರಿಗೆ ಮುಕ್ತಿ, ಶಾಂತಿ ಎನ್ನುವ ಭಾವೋದ್ವೇಗಗಳಿಂದ ನಾವು ಬಿಡಿಸಿಕೊಳ್ಳಬೇಕಿದೆ. ಚಾಮರಸನು ತನ್ನ 'ಪ್ರಭುಲಿಂಗ ಲೀಲೆ' ಕೃತಿಯಲ್ಲಿ ಸೊಗಸಾಗಿ ಹೀಗೆ ನುಡಿದಿದ್ದಾನೆ: 'ದೇಹಿಯಾದವನಿಗೆ ಇರುವ ಅಂತರಂಗ ಬಹಿರಂಗ ಎಂಬ ಸ್ಥಾನಗಳಲ್ಲಿ ಬಹಿರಂಗವು ಸಕಲ ಮಾಯಾಮೋಹಗಳಿಂದ ಕೂಡಿದುದು. ಅಂತರಂಗವು ನಿಸ್ಸಂಗ ಚಿಹ್ನೆ. ಆದಕಾರಣ ಸಾಹಸಿಗತನದಿಂದ ಆ ನಿರ್ಮೋಹದಲಿ ನಿಲ್ಲುವವನೆ ನಿಸ್ಸೀಮ'.

ಕಲೆ, ಸಾಹಿತ್ಯ, ಸಂಗೀತ ಅಥವಾ ಅಭಿನಯ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಗುತ್ತದೆ ಎನ್ನಿ. ಆ ಸನ್ನಿವೇಶಕ್ಕೆ ಬಹುತೇಕ ಆಯಾ ಜಾತಿ, ಧರ್ಮಾನುಯಾಯಿಗಳೇ ವೇದಿಕೆಯಲ್ಲಿರುತ್ತಾರೆ. ಆಮಂತ್ರಿಸಲಾಗುವ ಮಠಾಧೀಶರು, ಸಚಿವರು, ಚಿಂತಕರು, ಕಲಾವಿದರು ಸಹ ಅದೇ ಪಂಗಡದವರೇ. ಹೀಗೇಕೆ? ಆ ಮೇಧಾವಿಗಳ ಮಹತ್ಕಾರ್ಯ ಇತರರಿಗೆ ಅಪಥ್ಯವೆ? ಪ್ರತಿಭೆಗೆ ಗೋಡೆಗಳಿಲ್ಲ ಎನ್ನುವ ಮಾತು ಕೇವಲ ಮಾತಿನ ಓಘಕ್ಕೆ ಸೀಮಿತವಾಗುವುದು ದುರ್ದೈವ.

ಬಹುತೇಕ ಪುಸ್ತಕದ ಬಿಡುಗಡೆ ಕಾರ್ಯಕ್ರಮಗಳೂ ಭಿನ್ನವಲ್ಲ. ಅದೇ ಹಾಡುಪಾಡು. ಆಮಂತ್ರಣ ಪತ್ರಿಕೆಯ ದಪ್ಪ ಅಕ್ಷರಗಳ ಮೇಲೆ ಕಣ್ಣಾಡಿಸಿ ಯಾರ, ಯಾವ ಗ್ರಂಥ ಲೋಕಾರ್ಪಣೆಯಾಗುತ್ತಿದೆ ಅಂತ ಗೊತ್ತಾದರೆ ಸಾಕು. ಉಳಿದ ಸಾಲುಗಳನ್ನು ಓದುವುದೇ ಬೇಡ. ಇಂತಹವರೇ ಅಧ್ಯಕ್ಷರು, ಮುಖ್ಯ ಅತಿಥಿಗಳು, ಇವರಿಂದಲೇ ಪುಸ್ತಕ ಕುರಿತು ಮಾತು ಎಂದು ಹೇಳಿಬಿಡಬಹುದು. ಹಾರ, ಉಡುಗೊರೆ ಹಿಡಿದು ಅಭಿನಂದಿಸಲು ಸರದಿಯಲ್ಲಿ ನಿಂತವರೂ ಅದೇ ವರ್ಗದವರೇ! ಜಮಾಯಿಸಿದ ಸಭಿಕರ ಪೈಕಿಯೆ ಒಬ್ಬರನ್ನು ಕರೆದು, 'ಬನ್ನಿ, ಇದೋ ಇದು ನಿಮ್ಮದೇ ಪುಸ್ತಕ' ಎಂದು ಆಯೋಜಕರು ಪ್ರೀತಿಯಿಂದ ವೇದಿಕೆಗೆ ಬರಮಾಡಿಕೊಂಡರೆ ಅದಲ್ಲವೆ ಸರ್ವರಿಗೂ ಸ್ವಾಗತವೆನ್ನುವ ಒಕ್ಕಣೆಯ ಸಾರ್ಥಕ್ಯ.

ಸೃಜನಶೀಲತೆಯನ್ನು ಯಾವುದೇ ಮತ, ಧರ್ಮದಿಂದ ಕಟ್ಟಿಹಾಕಿದರೆ ಚಲನಶೀಲ ಮತ್ತು ನಾವೀನ್ಯದ ಸಮಾಜ ರೂಪುಗೊಳ್ಳುವುದು ಅಸಾಧ್ಯ. ತಮ್ಮ ಸಹಭಾಗಿತ್ವ, ಸಾಮರ್ಥ್ಯ ಗಮನಿಸುತ್ತಿಲ್ಲ ಎಂಬ ಭಾವನೆ ಜನರಲ್ಲಿ ಮೂಡಬಾರದು. ಜಾತಿ, ಪಂಥದ ತಾರತಮ್ಯವಿಲ್ಲದೆ ಸರ್ವರನ್ನೂ ತೊಡಗಿಸಿದರೆ ಅಲ್ಲಿ ನಿಜವಾದ ಸಾಂಸ್ಕೃತಿಕ ಪರಿಮಳದ ಹಾಜರಿ ಇರುತ್ತದೆ. ಆಗುಹೋಗುಗಳಲ್ಲಿ ವ್ಯವಸ್ಥಿತ ಪಕ್ಷಪಾತಗಳು ಮರೆದರೆ ಸಮಾನತೆಯು ಸೊರಗುವುದು ನಿಶ್ಚಿತ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

• ಪಿ.ಜಿ.ಭಟ್

ಮತದಾರರ ಪಟ್ಟಿ ದಶಕಗಳ ನಿರ್ಲಕ್ಷ್ಯ ಲೋಪ ಅಸಂಖ್ಯ

ರಾಹುಲ್ ಗಾಂಧಿ ಅವರು ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದಾಗ, ಮಹದೇವಪುರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿನ ಲೋಪಗಳನ್ನು ಆಧರಿಸಿ ದೇಶದಾದ್ಯಂತ ಮತದಾರರ ಪಟ್ಟಿಯಲ್ಲಿರುವ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದ್ದರು. ಇದು ಹೊಸ ವಿಷಯವೇನಲ್ಲ. ಬಹುಕಾಲದಿಂದಲೂ ಗುರುತರವಾದ ಲೋಪಗಳು ಮತದಾರರ ಪಟ್ಟಿಯಲ್ಲಿ ಕಾಣಿಸಿಕೊಳ್ಳುತ್ತಲೇ ಇದ್ದು, ಮತದಾರರ ವಿವರಗಳು ಸಮಸ್ಯೆಗಳಿಂದ ಕೂಡಿದೆ ಎನ್ನುವುದನ್ನು ಹೇಳುತ್ತಿವೆ.

ಒಂದಕ್ಕಿಂತ ಹೆಚ್ಚು ಕಡೆ ಹೆಸರು ಇರುವುದು ಮತ್ತು ಅಸಿಂಧುವಾದ ವಿವರಗಳು ಬಹುದೊಡ್ಡ ಸಮಸ್ಯೆಯಾಗಿವೆ. ಸಾಫ್ಟ್‌ವೇರ್ ಮತ್ತು ಪರಿಷ್ಕರಣೆ ಪ್ರಕ್ರಿಯೆಯಲ್ಲಿನ ಲೋಪಗಳಿಂದಾಗಿ ಪ್ರಜ್ಞಾಪೂರ್ವಕವಾಗಿ ಮತ್ತು ಆಕಸ್ಮಿಕವಾಗಿ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಟ್ಟಿರುವುದು ಮತ್ತೊಂದು ಸಮಸ್ಯೆಯಾಗಿದೆ. ಒಂದು ಪ್ರಕರಣದಲ್ಲಿ, ಒಂದು ರಸ್ತೆಯ–ಬಿಪಿ ವಾಡಿಯಾ ರಸ್ತೆ–ಎಲ್ಲ ಮತದಾರರ ಹೆಸರನ್ನೂ ಪಟ್ಟಿಯಿಂದ ಕೈಬಿಡಲಾಗಿತ್ತು. ಮತದಾರರ ಪಟ್ಟಿಯಲ್ಲಿರುವ ಶೇ 50ರಷ್ಟು ಮಂದಿಯ ವಿಳಾಸಗಳನ್ನು ಪತ್ತೆ ಮಾಡಲು ಸಾಧ್ಯವಿಲ್ಲ ಎಂದು ಪೋಸ್ಟ್ ಮಾಸ್ಟರ್ ಜನರಲ್ ಅವರೇ ಒಪ್ಪಿಕೊಂಡಿದ್ದರು.

ಕೆಲವು ವಿಳಾಸಗಳು ಕೇವಲ ಒಂದೇ ಪದದಿಂದ ಕೂಡಿರುತ್ತವೆ, ಮತ್ತೆ ಕೆಲವು ತಪ್ಪಾಗಿರುತ್ತವೆ, ಇಲ್ಲವೇ ಅಸ್ತಿತ್ವದಲ್ಲೇ ಇರುವುದಿಲ್ಲ. ಒಂದೇ ವಿಳಾಸದಲ್ಲಿ ವಾಸವಾಗಿರುವ ದಂಪತಿಯನ್ನು ಬೇರೆ ಬೇರೆ ಸ್ಥಳಗಳಲ್ಲಿ ತೋರಿಸಲಾಗಿರುತ್ತದೆ. ತಪ್ಪು ವಿಳಾಸಗಳಲ್ಲಿ ಇರುವವರನ್ನು ಮತಗಟ್ಟೆ ಅಧಿಕಾರಿ (ಬಿಎಲ್‌ಒ) ಪರಿಶೀಲನೆ ನಡೆಸುವ ವೇಳೆ ಪಟ್ಟಿಯಿಂದ ಕೈಬಿಡುವುದು ಅವರ ಕೆಲಸದ ಮುಖ್ಯ ಭಾಗ. ಹೆಸರು, ವಯಸ್ಸು, ಲಿಂಗ, ಸಂಬಂಧ ಮತ್ತು ವಿಳಾಸ ಬರೆಯುವಾಗ ಅಕ್ಷರ ದೋಷಗಳಂತೂ ಅತ್ಯಂತ ಸಾಮಾನ್ಯವಾಗಿವೆ.

ಮತದಾರರ ಪಟ್ಟಿಯ ನಿಜವಾದ ಸಮಸ್ಯೆ ಏನು ಎನ್ನುವುದನ್ನು ಅರಿಯಬೇಕೆಂದರೆ, ಮತದಾರರ ಮಾಹಿತಿಯನ್ನು ಪಡೆದು, ವಿಶ್ಲೇಷಣೆ ಮಾಡಬೇಕು. ಆದರೆ, 2017ರಿಂದ ಸ್ಕ್ಯಾನ್ ಮಾಡಲಾದ ಪಿಡಿಎಫ್ ಪ್ರತಿಗಳು ಮಾತ್ರ ಲಭ್ಯವಿದ್ದು, ಅವುಗಳಲ್ಲಿ ನಮಗೆ ಅಗತ್ಯವಾದ ಮಾಹಿತಿಯನ್ನು ಹುಡುಕಲು ಸಾಧ್ಯವಿಲ್ಲ. ಅವುಗಳನ್ನು ತೆರೆಯಲು ಪಾಸ್‌ವರ್ಡ್ ಅಗತ್ಯ. ಆಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನಿಷನ್ (ಒಸಿಆರ್) ಮೂಲಕ ದತ್ತಾಂಶ ಹೊರತೆಗೆಯಲು ಸಾಧ್ಯವಿದೆ ಎಂದರೂ ಅದಕ್ಕೆ ತುಂಬಾ ಸಮಯ ಬೇಕು. ಬೆಂಗಳೂರಿನ ದತ್ತಾಂಶ ಹೊರತೆಗೆಯಲು ಒಂದು ತಿಂಗಳಿಗೂ ಹೆಚ್ಚು ಅವಧಿ ಬೇಕಾಗುತ್ತದೆ.

ಬೆಂಗಳೂರಿನ 65 ಲಕ್ಷ ಮತದಾರರ ಪೈಕಿ 13.73 ಲಕ್ಷ ಮತದಾರರನ್ನು ಪ್ರಜ್ಞಾಪೂರ್ವಕವಾಗಿ ಮತ್ತು ಕಾನೂನುಬಾಹಿರವಾಗಿ ಕೈಬಿಟ್ಟಿದ್ದರ ಬಗ್ಗೆ 2012ರ ಸಾರ್ವಜನಿಕ ಹಿತಾಸಕ್ತಿಯ ಪ್ರಕರಣವು ಹಲವು ಪ್ರಶ್ನೆಗಳನ್ನು ಮೂಡಿಸಿತ್ತು. ಜತೆಗೆ, ದತ್ತಾಂಶದ ಗುಣಮಟ್ಟದ ಬಗ್ಗೆಯೂ ಪ್ರಶ್ನೆಗಳು ಕೇಳಿಬಂದಿದ್ದವು. ಆಗ ರಾಜ್ಯದ ಹೈಕೋರ್ಟ್ ತನ್ನ ತೀರ್ಪಿನಲ್ಲಿ ಹೀಗೆ ಹೇಳಿತ್ತು: ‘ರಿಟ್ ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿರುವ ವಿಚಾರಗಳು ಸತ್ಯಾಂಶದಿಂದ ಕೂಡಿವೆ. ಕೆಲವು ಹೆಸರುಗಳನ್ನು ಕಾನೂನುಬಾಹಿರವಾಗಿ ಪಟ್ಟಿಯಿಂದ ಕೈಬಿಡಲಾಗಿದೆ. ಮುಖ್ಯ ಚುನಾವಣಾಧಿಕಾರಿಯು ಸ್ವಯಂಪ್ರೇರಿತವಾಗಿ ಈ ವಿಚಾರಗಳನ್ನು ಪರಿಶೀಲಿಸಬೇಕು ಮತ್ತು ಕೈಬಿಟ್ಟಿರುವ ಹೆಸರುಗಳನ್ನು ಸೇರ್ಪಡೆ ಮಾಡಬೇಕು’. ಕೈಬಿಡಲಾಗಿದ್ದ ಹೆಸರುಗಳನ್ನು ನ್ಯಾಯಾಲಯದ ತೀರ್ಪಿನ ನಂತರ ಸೇರ್ಪಡೆ ಮಾಡಲಾಯಿತು.

ಮತದಾರರ ಪಟ್ಟಿಯಲ್ಲಿ ಸಮಸ್ಯೆಗಳಿರುವುದು ಬೆಂಗಳೂರಿಗೆ ಸೀಮಿತವಲ್ಲ. ಲೋಕಸಭಾ ಚುನಾವಣೆಯ ವೇಳೆ ಪಟ್ಟಿಯಿಂದ ಹೆಸರುಗಳು ಕಾಣೆಯಾಗಿದ್ದ ಬಗ್ಗೆ ಮಹಾರಾಷ್ಟ್ರ ಚುನಾವಣಾ ಆಯುಕ್ತ ಎಚ್.ಎಸ್.ಬ್ರಹ್ಮ ಅವರು 2014ರಲ್ಲಿ ಮುಂಬೈ ಜನರ ಕ್ಷಮೆಯಾಚಿಸಿದ್ದರು.

ಮನೆ ಮನೆ ಸಮೀಕ್ಷೆಯ ಆಧಾರದಲ್ಲಿ ದೆಹಲಿಯ ಮತದಾರರ ಪಟ್ಟಿಯಲ್ಲಿ 15 ಲಕ್ಷ ಬೋಗಸ್ ಮತದಾರರು ಇರುವುದಾಗಿ ದೆಹಲಿಯ ಮುಖ್ಯ ಚುನಾವಣಾಧಿಕಾರಿ 2013ರಲ್ಲಿ ಹೇಳಿದ್ದರು. ಅನೇಕ ಹೆಸರುಗಳು ಒಂದಕ್ಕಿಂತ ಹೆಚ್ಚು ಕಡೆ ನೋಂದಣಿಯಾಗಿದ್ದವು. ಶಂಕಾಸ್ಪದರಾಗಿದ್ದ ಎಲ್ಲರಿಗೂ ನೋಟಿಸ್‌ಗಳನ್ನು ಕಳಿಸಲಾಗಿತ್ತು. ಅದರ ಜತೆಗೆ, ಪಟ್ಟಿಯಲ್ಲಿ 1.5 ಲಕ್ಷ ಎಪಿಕ್ ಸಂಖ್ಯೆಗಳು ಸಮಸ್ಯಾತ್ಮಕವಾಗಿದ್ದವು. ತಮ್ಮ ಮತದಾರ ದಾಖಲೆಗೆ ಬದಲಾವಣೆಗಳನ್ನು ಮಾಡಿರುವುದೇ ಅವರ ಅರಿವಿಗೆ ಬರುತ್ತಿರಲಿಲ್ಲ. ಅದಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಯುವುದು ಅಷ್ಟು ಸುಲಭದ ಕೆಲಸವೂ ಅಲ್ಲ.

ಸರ್ವಜ್ಞನಗರ ಕ್ಷೇತ್ರದ ಎರಡು ಭಾಗಗಳ (ಪಾರ್ಟ್) ಮತದಾರರ ಪಟ್ಟಿಯನ್ನು ಸರಿಪಡಿಸಲು ಕಮಾಂಡರ್ ವಿಕ್ರಮ್ ಸತ್ಪಥಿ (ನಿವೃತ್ತ) ಅವರು ಪ್ರಯತ್ನಿಸುತ್ತಲೇ ಇದ್ದಾರೆ. 2023ರ ಜುಲೈ 8ರಂದು ಅವರು ಸಹಾಯಕ ಚುನಾವಣಾ ನೋಂದಣಾಧಿಕಾರಿಗೆ ಕಳುಹಿಸಿದ ಇ–ಮೇಲ್‌ನಿಂದ 177 ಮತ್ತು 184ನೇ ಮತಗಟ್ಟೆಗಳಲ್ಲಿ ಅಪಾಯಕಾರಿ ಪ್ರಮಾಣದಲ್ಲಿ ನೋಂದಣಿಯಾಗಿದ್ದ ನಕಲಿ ಮತದಾರರ ಮಾಹಿತಿ ಸಿಕ್ಕಿತು; ಪಟ್ಟಿಯಲ್ಲಿದ್ದ ಒಟ್ಟು 1,698 ಮತದಾರರ ಪೈಕಿ 901 ಮತದಾರರು ಮಾತ್ರ ಕ್ರಮಬದ್ಧವಾಗಿ ನೋಂದಣಿಯಾದ ಮತದಾರರಾಗಿದ್ದರು. ಮುಂದಕ್ಕೆ, ಅವರಿಗೆ ಸಿಕ್ಕಿದ್ದು ದಿವ್ಯ ನಿರ್ಲಕ್ಷ್ಯ ಮತ್ತು ಅವಮಾನಗಳು ಮಾತ್ರ.

ರಾಜಕೀಯ ಇಚ್ಛಾಶಕ್ತಿಯ ಕೊರತೆ

ನಾನು ಸುಮಾರು ಎರಡು ದಶಕಗಳಿಂದ ಕರ್ನಾಟಕದ ಮತದಾರರ ಪಟ್ಟಿಯನ್ನು ಅವಲೋಕಿಸುತ್ತಿದ್ದೇನೆ. ಕರ್ನಾಟಕ, ಆಂಧ್ರಪ್ರದೇಶ ಮತ್ತು ದೆಹಲಿಯ ಮತದಾರರ ಪಟ್ಟಿಯನ್ನು ತಮ್ಮ ಪಕ್ಷದ ಪದಾಧಿಕಾರಿಗಳು ಪರಿಶೀಲಿಸಿದ್ದಾಗಿಯೂ, ಅಸಂಖ್ಯ ದೋಷಗಳನ್ನು ಕಂಡಿದ್ದಾಗಿಯೂ 2013ರಲ್ಲಿ ಎಐಸಿಸಿ ಮುಖಂಡರು ಮಾಧ್ಯಮಕ್ಕೆ ತಿಳಿಸಿದ್ದರು. 2014ರಲ್ಲಿ ನನ್ನನ್ನು ಭೇಟಿಯಾಗಿದ್ದ ಕಾಂಗ್ರೆಸ್‌ನ ಮಾಹಿತಿ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ, ಮತದಾರರ ಪಟ್ಟಿಯ ನಿರ್ವಹಣಾ ವ್ಯವಸ್ಥೆಯ ಗುಣಮಟ್ಟದಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದರು. ಆನಂತರ ಕೆಪಿಸಿಸಿ ಕಾರ್ಯದರ್ಶಿ ಮತ್ತು ಇತರ ಮೂವರು ನನ್ನನ್ನು ಎರಡು ಬಾರಿ ಭೇಟಿಯಾಗಿ ವಿವರವಾಗಿ ಚರ್ಚಿಸಿದ್ದರು. ನಂತರ ಅವರು ನನ್ನನ್ನು ಸಂಪರ್ಕಿಸಲೇ ಇಲ್ಲ.

ನಾನು ಬೆಂಗಳೂರಿನ ಹಲವು ಶಾಸಕರನ್ನು ಭೇಟಿ ಮಾಡಿ, ವ್ಯವಸ್ಥೆಯನ್ನು ಸರಿಪಡಿಸುವ ಬಗ್ಗೆ ಚರ್ಚಿಸಿದ್ದೆ. ಸಹಕಾರ ಸಚಿವರಾಗಿದ್ದ ಕೆ.ಎನ್.ರಾಜಣ್ಣ ಅವರು, ‘ಈ ಎಲ್ಲ ತಪ್ಪುಗಳೂ ನಮ್ಮ ಕಣ್ಣಮುಂದೆಯೇ ನಡೆದಿದ್ದು, ನಾವು ಆಗ ಇದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ’ ಎಂದರು. ಅವರನ್ನು ಸಂಪುಟದಿಂದ ವಜಾ ಮಾಡಲಾಯಿತು.

ಕಾಂಗ್ರೆಸ್ ಸೇರಿದಂತೆ ರಾಜಕೀಯ ಪಕ್ಷಗಳಿಗೆ ಈ ಬಗ್ಗೆ ಕಾಳಜಿ ಇದ್ದಿದ್ದರೆ, ಕನಿಷ್ಠ 18 ವರ್ಷಗಳ ಹಿಂದೆಯೇ ಈ ವಿಚಾರದಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿತ್ತು. ಅವರಿಗೆ ಈ ಸಂಬಂಧ ಹಲವು ಅನುಕೂಲಗಳಿರುತ್ತವೆ. ಅವರು ತಮ್ಮ ಜವಾಬ್ದಾರಿಯನ್ನು ನಿರ್ಲಕ್ಷಿಸಬಾರದು. ಅವರು ಜಗತ್ತನ್ನು ಬದಲಾಯಿಸಬಲ್ಲರು. ಅದು ಅವರ ಜವಾಬ್ದಾರಿಯೂ ಹೌದು.

ನಾನು ಕೆಲವು ಚುನಾವಣಾ ಆಯುಕ್ತರನ್ನೂ ಭೇಟಿಯಾಗಿ, ಅವರ ಮುಂದೆ ಮತದಾರರ ಪಟ್ಟಿಯ ನಿರ್ವಹಣಾ ವ್ಯವಸ್ಥೆಯ ಸಮಸ್ಯೆಗಳ ಬಗ್ಗೆ ಅವರಿಗೆ ತಿಳಿಸಿದ್ದೇನೆ. ಅವುಗಳನ್ನು ಸರಿಪಡಿಸುವ ದಿಸೆಯಲ್ಲಿ ಸಹಾಯ ಮಾಡುವುದಾಗಿಯೂ ಅವರಿಗೆ ಭರವಸೆ ನೀಡಿದ್ದೇನೆ. ವೈಯಕ್ತಿಕವಾಗಿ ಅವರು ಸಹೃದಯರು. ಆದರೆ, ಕಾರ್ಯಸಾಧನೆ ಶೂನ್ಯ. ಇದೆಲ್ಲದರಿಂದ ನನಗೆ ದತ್ತಾಂಶದ ನಿರಾಕರಣೆಯು ಹೆಚ್ಚಾಯಿತು.

‘ಮತದಾನ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸುವ ವಿಚಾರದಲ್ಲಿ ಚುನಾವಣಾ ಆಯೋಗವು ಗಣನೀಯ ಪ್ರಗತಿ ಸಾಧಿಸಿದೆ’ ಎಂದು 2012ರ ಜ.23ರಂದು ಆಯೋಗವು ಪ್ರತಿಪಾದಿಸಿತ್ತು. ‘ಮತದಾರರ ಪಟ್ಟಿಯಲ್ಲಿ ನಕಲು ಇಲ್ಲದೇ ಇರುವ ಮೊದಲ ರಾಷ್ಟ್ರ ಭಾರತ’ ಎಂದು ಮುಖ್ಯ ಚುಣಾವಣಾಧಿಕಾರಿಯು 2014ರಲ್ಲಿ ಮತ್ತೆ ಘೋಷಿಸಿದ್ದರು. ಮತದಾರರ ಪಟ್ಟಿಗಳಲ್ಲಿನ ಲೋಪಗಳ ಬಗ್ಗೆ ನಾವು ಪುರಾವೆಗಳನ್ನು ಮುಂದಿಟ್ಟರೂ ಆಯೋಗವು ನಿರಾಕರಿಸುತ್ತದೆ. ಆಯೋಗವು ಮತದಾರರ ನಿರಾಸಕ್ತಿಯ ಬಗ್ಗೆ ಮಾತನಾಡುತ್ತದೆ. ಆದರೆ, ಅದು ಮತ್ತು ಅದರ ದತ್ತಾಂಶ ಹೆಚ್ಚು ಹೆಚ್ಚು ಅಪಾರದರ್ಶಕವಾಗುತ್ತಿವೆ.

ರಾಹುಲ್ ಗಾಂಧಿ ಹೇಳಿಕೆ ನಿಜವಲ್ಲ

2024ರ ಲೋಕಸಭಾ ಚುನಾವಣೆಗೂ ಮುನ್ನ ಮತದಾರರ ಪಟ್ಟಿಗಳನ್ನು ತಿರುಚಲಾಗಿದೆ ಎಂಬ ರಾಹುಲ್ ಗಾಂಧಿ ಅವರ ಹೇಳಿಕೆ ನಿಜವಲ್ಲ. ಬೆಂಗಳೂರಿನ ಇತರ ಕ್ಷೇತ್ರಗಳಂತೆ ಮಹದೇವಪುರದ ಮತದಾರರ ಪಟ್ಟಿಯಲ್ಲೂ ದೋಷಗಳಿವೆ. ಪಟ್ಟಿಯಲ್ಲಿ ಎಷ್ಟು ಮಂದಿಯ ಹೆಸರುಗಳು ಹಲವು ಬಾರಿ ಸೇರ್ಪಡೆಯಾಗಿವೆ ಅಥವಾ ನಕಲಿ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಅಂದಾಜು ಸಂಖ್ಯೆಯಷ್ಟನ್ನೇ ನೀಡಲು ಸಾಧ್ಯ.

ನನ್ನ ವಿಶ್ಲೇಷಣೆಯ ಪ್ರಕಾರ, 2024ರ ಚುನಾವಣೆಗೂ ಮೂರು ವರ್ಷಗಳ ಮೊದಲೇ ಮತದಾರರ ಪಟ್ಟಿಯಲ್ಲಿ ಈ ದೋಷಗಳಿವೆ. ಕೆಲವು ಪುನರಾವರ್ತಿತ ಹೆಸರುಗಳನ್ನು 2025ರ ವೇಳೆಗೆ ತೆಗೆದುಹಾಕಿರಬಹುದು. ಉದಾಹರಣೆಗೆ 2021ರ ಜನವರಿಯಲ್ಲಿ ಮಹದೇವಪುರ ಕ್ಷೇತ್ರದಲ್ಲಿ ಒಂದೇ ಮನೆ ವಿಳಾಸದಲ್ಲಿ 735 ಹೆಸರುಗಳು ಸೇರ್ಪಡೆಯಾಗಿದ್ದವು. ಅದೇ ಭಾಗದ ಬೇರೆ ಮನೆಗಳ ವಿಳಾಸಗಳಲ್ಲಿ 2,144 ಹೆಸರುಗಳು ನೋಂದಣಿಯಾಗಿದ್ದವು. ಅದೇ ಕ್ಷೇತ್ರದ ಬೇರೆ ಭಾಗಗಳಲ್ಲಿ 28,188 ಹೆಸರುಗಳು ಸೇರ್ಪಡೆಯಾಗಿದ್ದವು. ಒಟ್ಟಾರೆಯಾಗಿ ಇಂತಹ ಶಂಕಿತ ಹೆಸರುಗಳ ಸಂಖ್ಯೆ 31,067.

ಈ ಪೈಕಿ 11,555 ಚೀಟಿಗಳಲ್ಲಿ ಮನೆ ಸಂಖ್ಯೆ ಇರಲಿಲ್ಲ. 8,500 ಚೀಟಿಗಳಲ್ಲಿ ಮನೆ ಸಂಖ್ಯೆ ‘0’ ಎಂದು, 2,961 ಚೀಟಿಗಳಲ್ಲಿ ಮನೆ ಸಂಖ್ಯೆ ‘00’ ಎಂದೂ 20 ಚೀಟಿಗಳಲ್ಲಿ ಮನೆ ಸಂಖ್ಯೆ ‘000’ ಎಂದಿತ್ತು. ಪುರುಷ ಮತದಾರರಿಗೆ ಸೇರಿದ ಚೀಟಿಯಲ್ಲಿ ‘ಪತಿ’ಯ ಹೆಸರಿತ್ತು! ಮಹಿಳೆಯರನ್ನೂ ಪುರುಷ ಎಂದು ಉಲ್ಲೇಖಿಸಿದ ಪ್ರಕರಣಗಳೂ ಇದ್ದವು. ಇವುಗಳಲ್ಲದೇ ಬೇರೆ ಬೇರೆ ಸ್ವರೂಪದ ಹಲವು ತಪ್ಪುಗಳೂ ಕಂಡು ಬಂದಿದ್ದವು. ಮಹದೇವಪುರವೂ ಸೇರಿದಂತೆ ಎಲ್ಲ ಕ್ಷೇತ್ರಗಳ ಮತದಾರರ ಪಟ್ಟಿಗಳಲ್ಲೂ ಇಂತಹ ಅಸಂಬದ್ಧಗಳು, ನಿಗೂಢಗಳು ಇವೆ. ಇವು ಈಗಿನದ್ದಲ್ಲ; 18 ವರ್ಷಗಳಿಂದಲೂ ಇವೆ.

ಪರಿಸ್ಥಿತಿ ಹೀಗಿರುವಾಗ, ರಾಹುಲ್ ಗಾಂಧಿ ಅವರ ಆರೋಪಗಳು ಮಾಧ್ಯಮಗಳಲ್ಲಿ ಗಮನ ಸೆಳೆಯಬಹುದು. ಆದರೆ, ಇದು ನಿಜವಾದ ಸಮಸ್ಯೆಯಿಂದ ನಮ್ಮ ಗಮನವನ್ನು ಬೇರೆಡೆಗೆ ಸೆಳೆಯುವಂತಹದ್ದು. ದೇಶದಲ್ಲಿ ಮತದಾರರ ಪಟ್ಟಿಗಳನ್ನು ತಿರುಚಿರುವುದು ಇತ್ತೀಚಿನ ಬೆಳವಣಿಗೆ ಏನಲ್ಲ. ಹಲವು ವರ್ಷಗಳಿಂದ ಈ ವಿಚಾರದಲ್ಲಿ ರಾಜಿ ಮಾಡಿಕೊಳ್ಳಲಾಗಿದೆ. ಇದರಲ್ಲಿ ಎಲ್ಲ ರಾಜಕೀಯ ಪಾಲುದಾರರೂ ಶಾಮೀಲಾಗಿದ್ದಾರೆ.

ಗಂಭೀರವಾದ ಈ ಸಮಸ್ಯೆಗೆ ರಾಜಕೀಯ ಆರೋಪಗಳು ಪರಿಹಾರವಲ್ಲ; ಬದಲಿಗೆ ಸಾಂಸ್ಥಿಕ ಸುಧಾರಣೆಗಾಗಿ ಸುಸ್ಥಿರವಾದ ಬದ್ಧತೆ ಬೇಕಾಗಿದೆ. ರಾಜಕಾರಣಿಗಳು ಮತ್ತು ಅಧಿಕಾರಿಗಳು ತಮ್ಮ ಚಿಂತನೆಯಲ್ಲಿ ಮತ್ತು ಕ್ರಿಯೆಯಲ್ಲಿ ಸಮತೋಲನ ಹಾಗೂ ಪ್ರಾಮಾಣಿಕತೆ ಕಾಯ್ದುಕೊಳ್ಳದಿದ್ದರೆ, ಮತದಾರರ ಪಟ್ಟಿಯ ಲೋಪಗಳನ್ನು ಸರಿಪಡಿಸಲು ಸಾಧ್ಯವೇ ಇಲ್ಲ.

(ಲೇಖಕರು 15 ವರ್ಷಗಳಿಂದ ಮತದಾರರ ಪಟ್ಟಿಗಳಲ್ಲಿರುವ ದೋಷಗಳ ಬಗ್ಗೆ ಅಧ್ಯಯನ ನಡೆಸುತ್ತಿದ್ದಾರೆ)

ಒಂದೇ ವಿಳಾಸದಲ್ಲಿ ಹಲವು ಹೆಸರುಗಳು ಹೇಗೆ?

- ಜನರು ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರಕ್ಕೆ ಹೋದಾಗ, ಹೊಸ ಮತದಾರರ ಚೀಟಿಗೆ ಅರ್ಜಿ ಸಲ್ಲಿಸುತ್ತಾರೆ. ಜೊತೆಗೆ ಹಳೆಯ ಚೀಟಿಯನ್ನೂ ಇಟ್ಟುಕೊಳ್ಳುತ್ತಾರೆ. ಇದರಿಂದಾಗಿ ಒಂದೇ ವಿಳಾಸದಲ್ಲಿ ಹಲವರು ಮತದಾರರ ಚೀಟಿ ಹೊಂದುವಂತಾಗುತ್ತದೆ
- ಗುರುತಿನ ಚೀಟಿಯಲ್ಲಿರುವ ಹೆಸರಿನಲ್ಲಿ ಅಕ್ಷರ ದೋಷಗಳಿದ್ದರೆ, ಜನರು ಅದನ್ನು ತಿದ್ದುಪಡಿ ಮಾಡುವ ಬದಲು ಹೊಸ ಚೀಟಿಗಾಗಿ ಅರ್ಜಿ ಸಲ್ಲಿಸುತ್ತಾರೆ
- ಒಬ್ಬ ವ್ಯಕ್ತಿ ಹಲವು ಅರ್ಜಿಗಳನ್ನು ಸಲ್ಲಿಸಿದ ಸಂದರ್ಭದಲ್ಲೂ ಒಂದೇ ವಿಳಾಸದಲ್ಲಿ ಹಲವು ಹೆಸರುಗಳ ನೋಂದಣಿಗೆ ದಾರಿ ಮಾಡುತ್ತದೆ
- ನೋಂದಣಿಯ ನಂತರ ಬಿಎಲ್‌ಒಗಳು ಸಮರ್ಪಕವಾಗಿ ಪರಿಶೀಲನೆ ನಡೆಸದೇ ಇರುವುದು ಕೂಡ ಒಂದು ಕಾರಣ
- ಪಟ್ಟಭದ್ರಹಿತಾಸಕ್ತಿಗಳು ಉದ್ದೇಶಪೂರ್ವಕವಾಗಿಯೂ ಒಂದು ವಿಳಾಸದಲ್ಲಿ ಹಲವು ಹೆಸರುಗಳು ನೋಂದಣಿಯಾಗುವಂತೆ ಮಾಡುತ್ತಾರೆ

ಹೆಸರು ನೋಂದಣಿ, ತಿದ್ದುಪಡಿ, ತೆಗೆಯುವ ಬಗೆ

ಅರ್ಜಿ ನಮೂನೆ 6: ಹೊಸ ಮತದಾರರ ನೋಂದಣಿಗೆ

ಅರ್ಜಿ ನಮೂನೆ 7: ಮತದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕಲು

ಅರ್ಜಿ ನಮೂನೆ 8/8ಎ: ಹಾಲಿ ಕ್ಷೇತ್ರದ ವ್ಯಾಪ್ತಿಯಲ್ಲಿ ಮನೆ ವಿಳಾಸವನ್ನು ವರ್ಗಾಯಿಸುವುದಕ್ಕೆ (8ಎ), ಹಾಲಿ ಮತದಾರರ ಚೀಟಿಯಲ್ಲಿ ತಿದ್ದುಪಡಿ ಮಾಡಲು/ ಬೇರೆ ಕ್ಷೇತ್ರಕ್ಕೆ ಹೆಸರು ವರ್ಗಾಯಿಸಲು

ಯಾವಾಗ, ಏನು ಮಾಡಬೇಕು?

ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೆ	ಅರ್ಜಿ ನಮೂನೆ 6 ಭರ್ತಿ ಮಾಡಿ ಪೂರಕ ದಾಖಲೆಗಳೊಂದಿಗೆ ಸಲ್ಲಿಸಬೇಕು ಅಥವಾ ಕರಡು ಮತದಾರರ ಪಟ್ಟಿ ಪ್ರಕಟವಾದ ನಂತರ ಆಕ್ಷೇಪಣೆ ಸಲ್ಲಿಸಬೇಕು
ಹಲವು ಹೆಸರುಗಳು ಸೇರ್ಪಡೆಗೊಂಡಿದ್ದರೆ	ಹಳೆಯ ಹೆಸರುಗಳನ್ನು ತೆಗೆದುಹಾಕಲು ರಾಷ್ಟ್ರೀಯ ಮತದಾರರ ಸೇವಾ ಪೋರ್ಟಲ್ (ಎನ್‌ವಿಎಸ್‌ಪಿ) ಮೂಲಕ ಅರ್ಜಿ ಹಾಕಬೇಕು
ಹೆಸರು, ವಿಳಾಸ ಮತ್ತು ವಿವರಗಳಲ್ಲಿ ತಪ್ಪಿದ್ದರೆ	ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಬೇಕು ಅಥವಾ ಹಳೆಯ ಹೆಸರನ್ನು ತೆಗೆದುಹಾಕಿ ಮತ್ತೆ ಹೊಸದಾಗಿ ನೋಂದಣಿ ಮಾಡಬೇಕು
ಅನಧಿಕೃತವಾಗಿ ಹೆಸರು ನೋಂದಣಿಯಾಗಿದ್ದರೆ	ಆಕ್ಷೇಪಣೆ ಸಲ್ಲಿಸಲು ಅರ್ಜಿ ನಮೂನೆ 7 ಅನ್ನು ಭರ್ತಿ ಮಾಡಿ ಸಲ್ಲಿಸಬೇಕು

ಸುಧಾರಣೆ ಆಗಬೇಕಾಗಿದ್ದೇನು?

ಮತದಾರರ ಪಟ್ಟಿಯಲ್ಲಿನ ದೋಷಗಳು ಹಿಂದಿನಿಂದಲೂ ಇವೆ. ಈ ಸಮಸ್ಯೆಯು ಹಲವು ರಾಜ್ಯಗಳು ಮತ್ತು ಕ್ಷೇತ್ರಗಳ ಮೇಲೆ ಪರಿಣಾಮ ಬೀರುತ್ತಿದೆ ಎಂಬುದನ್ನು ಸಾಕ್ಷ್ಯಗಳು ಹೇಳುತ್ತಿವೆ.

ಹೀಗಿರುವಾಗ, ಮೂಲ ಸಮಸ್ಯೆಯನ್ನು ಕಡೆಗಣಿಸಿ ರಾಜಕೀಯ ಆರೋಪಗಳನ್ನು ಮಾಡುವ ಬದಲಾಗಿ ಪರಸ್ಪರ ಸಹಕಾರದಿಂದ, ಪಾರದರ್ಶಕವಾಗಿ ಮತ್ತು ದತ್ತಾಂಶ ಆಧಾರಿತವಾಗಿ ಮತದಾರರ ಪಟ್ಟಿ ನಿರ್ವಹಣಾ ವ್ಯವಸ್ಥೆಯ (ಇಆರ್‌ಎಂಎಸ್) ಸುಧಾರಣೆಗೆ ಗಮನವನ್ನು ಕೇಂದ್ರೀಕರಿಸಬೇಕು.

ನಮ್ಮ ಚುನಾವಣಾ ವ್ಯವಸ್ಥೆಯಲ್ಲಿರುವ ಅಸಂಬದ್ಧಗಳು ದೇಶದ ಪ್ರಜಾಪ್ರಭುತ್ವದ ಸಮಗ್ರತೆಗೆ ಹಾನಿ ಮಾಡದಿದ್ದರೆ ಅದು ನಿಜಕ್ಕೂ ವ್ಯಂಗ್ಯವೇ ಸರಿ. ಚುನಾವಣಾ ವ್ಯವಸ್ಥೆಯ ಸಮಗ್ರತೆಯನ್ನು ಕಾಪಾಡಬೇಕಾದರೆ, ರಾಜಕೀಯ ಪ್ರಹಸನಗಳನ್ನು ಮೀರಿ ಸುಧಾರಣೆ ಮಾಡುವ ಅಗತ್ಯವಿದೆ

- **ಪಾರದರ್ಶಕತೆ:** ಮತದಾರರ ಪಟ್ಟಿಯ ವಿವರಗಳು ಪಾಸ್‌ವರ್ಡ್ ಹೊಂದಿರುವ ಸ್ಕ್ಯಾನ್ ಮಾಡಿದ ಚಿತ್ರದ ಬದಲಾಗಿ, ಹುಡುಕಬಹುದಾದ ಡಿಜಿಟಲ್ ದತ್ತಾಂಶದ ರೂಪದಲ್ಲಿ ಲಭ್ಯವಾಗಬೇಕು. ಪ್ರಜಾಪ್ರಭುತ್ವದ ಮೂಲ ಸೌಲಭ್ಯವನ್ನು ದೃಢೀಕರಿಸುವ ಮೂಲಭೂತ ಹಕ್ಕು ದೇಶದ ಪ್ರಜೆಗಳಿಗೆ ಇದೆ
- **ತಾಂತ್ರಿಕತೆಯಲ್ಲಿ ಆಧುನೀಕರಣ:** ಇಆರ್‌ಎಂಎಸ್‌ನ ತಾಂತ್ರಿಕತೆಯಲ್ಲಿ ಸಮಗ್ರವಾದ ಬದಲಾವಣೆ ಅಗತ್ಯ. ಸ್ವಯಂ ಆಗಿ ದೋಷ ಪತ್ತೆಹಚ್ಚುವ, ಎರಡೆರಡು ಬಾರಿ ಹೆಸರು ನೋಂದಣಿಯನ್ನು ತಡೆಯುವ ಮತ್ತು ನಿಯಮಿತವಾಗಿ ಸ್ವಯಂಚಾಲಿತವಾಗಿ ಪರಿಶೋಧನೆಗೆ ಒಳಪಡಿಸುವ ವ್ಯವಸ್ಥೆ ಅಭಿವೃದ್ಧಿ ಪಡಿಸಬೇಕು
- **ಸಾಂಸ್ಥಿಕ ಉತ್ತರದಾಯಿತ್ವ:** ಲೋಪರಹಿತವಾದ ಮತದಾರರ ಪಟ್ಟಿ ಸಿದ್ಧಪಡಿಸಲು ವಿಫಲರಾದ ಅಧಿಕಾರಿಗಳು ಅದರ ಪರಿಣಾಮವನ್ನು ಎದುರಿಸುವಂತಾಗಬೇಕು. ಅವರನ್ನು ಶಿಕ್ಷಿಸಬೇಕೇ ವಿನಾ, ಅವರು ಪ್ರಶಸ್ತಿ ಸ್ವೀಕರಿಸುವಂತಾಗಬಾರದು. ಶಿಕ್ಷೆಯಿಂದ ವಿನಾಯಿತಿ ನೀಡುವ ಈಗಿನ ವ್ಯವಸ್ಥೆ ನಿಲ್ಲಬೇಕು
- **ರಾಜಕೀಯ ಪಕ್ಷಗಳ ಸಹಕಾರ:** ಲಾಭ ಪಡೆಯುವುದಕ್ಕಾಗಿ ವ್ಯವಸ್ಥೆಯಲ್ಲಿನ ವೈಫಲ್ಯಗಳನ್ನು ಬಳಸಿಕೊಳ್ಳುವುದರ ಬದಲು ಎಲ್ಲ ರಾಜಕೀಯ ಪಕ್ಷಗಳು ತಾವು ಪರಸ್ಪರ ಹಂಚಿಕೊಂಡಿರುವ ಜವಾಬ್ದಾರಿಗಳನ್ನು ಒಪ್ಪಿಕೊಂಡು ವ್ಯವಸ್ಥೆ ಸುಧಾರಿಸಲು ಪರಸ್ಪರ ಸಹಕಾರದಿಂದ ಕೆಲಸ ಮಾಡಬೇಕು
- **ನಾಗರಿಕರನ್ನು ತೊಡಗಿಸಿಕೊಳ್ಳುವುದು:** ಅಧಿಕಾರಶಾಹಿಯ ಅಡೆತಡೆ ಇಲ್ಲದೇ ತಮ್ಮ ನೋಂದಣಿಯನ್ನು ಪರಿಶೀಲಿಸಲು ಮತ್ತು ಕುಂದುಕೊರತೆಗಳನ್ನು ವರದಿ ಮಾಡಲು ಜನರಿಗೆ ಸುಲಭವಾಗಿ ಸಾಧ್ಯವಾಗುವಂತಹ ವ್ಯವಸ್ಥೆ ಇರಬೇಕು

ಪದ್ಮಭೂಷಣ ಹರ್ಡೀಕರ್

ದೀಪಾ ಹಿರೇಗುತ್ತಿ

1923ನೇ ಇಸವಿ. ದೇಶದ ಬೇರೆ ಬೇರೆ ಭಾಗಗಳಿಂದ ಬಂದು ನಾಗಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರರನ್ನು ಬ್ರಿಟಿಷ್ ಸರ್ಕಾರ ಬಂಧಿಸಿತು. ಕಾರಾಗೃಹವಾಸ ಎಂದರೆ ನರಕವಾಸವೇ. ಆ ಕಷ್ಟ ತಾಳಲಾಗದೇ ಕೆಲವು ತರುಣರು ಕ್ಷಮಾಪಣೆ ಪತ್ರ ಬರೆದುಕೊಟ್ಟು ಜೈಲಿನಿಂದ ಹೊರಗೆ ಬಂದರು. ಕರ್ನಾಟಕದಿಂದ ಸತ್ಯಾಗ್ರಹಕ್ಕೆ ಹೋಗಿ ಶಿಕ್ಷೆಗೆ ಗುರಿಯಾಗಿದ್ದ ತರುಣರೊಬ್ಬರು ಯುವಕರ ಈ ನಡೆಯಿಂದ ಬಹಳ ನೊಂದುಕೊಂಡರು. ನಮ್ಮ ಯುವಕರಲ್ಲಿ ರಾಷ್ಟ್ರಪ್ರೇಮ, ಶಿಸ್ತು, ಸಂಯಮ, ಕಷ್ಟಸಹಿಷ್ಣುತೆಯ ಅಂಶಗಳನ್ನು ಬೆಳೆಸುವ ಮತ್ತು ದೈಹಿಕವಾಗಿಯೂ ಅವರನ್ನು ತರಬೇತುಗೊಳಿಸುವ ಅಗತ್ಯ ಬಹಳಷ್ಟಿದೆ ಎಂದು ವೈದ್ಯಕೀಯ ಪದವಿ ಪಡೆದಿದ್ದ ಆ ಯುವಕ ಯೋಚಿಸಿದರು. ದೈಹಿಕ ಹಾಗೂ ಮಾನಸಿಕವಾಗಿ ಸದೃಢ ಸ್ಥಿತಿಯಲ್ಲಿರುವ ಯುವಕರು ಸ್ವಾತಂತ್ರ್ಯ ಹೋರಾಟದ ಆ ಸಂದರ್ಭದಲ್ಲಿ ಅಗತ್ಯವಿರುವುದು ಯುವವೈದ್ಯನ ಅರಿವಿಗೆ ಬಂತು.

ಜೈಲಿನಿಂದ ಬಿಡುಗಡೆಯಾದ ಮೇಲೆ ಆ ಯುವವೈದ್ಯ ಲಾಲಾ ಲಜಪತ್‌ರಾಯ್ ಅವರ ಬಳಿ ಈ ಬಗ್ಗೆ ಚರ್ಚಿಸಿದರು. ಜವಾಹರಲಾಲ್ ನೆಹರೂ ಅವರನ್ನು ಭೇಟಿಯಾಗಿ ನೆರವನ್ನು ಕೋರಿದರು. 1923ರ ಡಿಸೆಂಬರ್‌ನಲ್ಲಿ ಹುಬ್ಬಳ್ಳಿಯಲ್ಲಿ ಈ ಸಂಸ್ಥೆ ಕಾರ್ಯಾರಂಭ ಮಾಡಿತು. ಕಾಕಿನಾಡದಲ್ಲಿ ನೆಹರೂ ಅವರ ಅಧ್ಯಕ್ಷತೆಯಲ್ಲಿ ಸ್ವಯಂಸೇವಕ ಸಮ್ಮೇಳನ ನಡೆಯಿತು. ನಂತರ ಇಡೀ ದೇಶದಾದ್ಯಂತ ಸುತ್ತಾಡಿ ಸೇವಾದಳದ ಶಾಖೆಗಳನ್ನು ತೆರೆದರು. ಮಹಿಳಾ ಸಮಿತಿಯನ್ನೂ ತೆರೆಯಲಾಯಿತು. ಈ ಸಂಸ್ಥೆಯೇ ಹಿಂದೂಸ್ಥಾನ ಸೇವಾದಳ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶಿಸ್ತಿನ ಸಿಪಾಯಿಗಳಂತಹ ಸದಸ್ಯರನ್ನು ನೀಡಿ ಸಕ್ರಿಯ ಪಾತ್ರ ವಹಿಸಿದ ಸಂಸ್ಥೆ ಇದು. ಉಪ್ಪಿನ ಸತ್ಯಾಗ್ರಹವಿರಲಿ, ಕಾನೂನು ಭಂಗ ಚಳವಳಿಯಿರಲಿ ಸೇವಾದಳ ಸಕ್ರಿಯವಾಗಿ ಭಾಗವಹಿಸಿತು.

ಹೀಗೆ ನಮ್ಮ ಯುವಕರು ಸ್ವಾತಂತ್ರ್ಯ ಹೋರಾಟದಿಂದ ವಿಮುಖರಾಗುವುದನ್ನು ತಪ್ಪಿಸಲು ಈ ಸೇವಾದಳವನ್ನು ಸ್ಥಾಪಿಸಿದವರು ಡಾ.ನಾರಾಯಣ್ ಸುಬ್ಬರಾವ್ ಹರ್ಡೀಕರ್. ನಾ ಸು ಹರ್ಡೀಕರರ ಹೆಸರನ್ನು ಕೇಳದವರ್ಯಾರು? ಅವರೊಬ್ಬ ವಿಶಿಷ್ಟ ವ್ಯಕ್ತಿತ್ವ ಹೊಂದಿದ ಅಪರೂಪದ ವ್ಯಕ್ತಿ. ಸ್ವಂತ ಸುಖವನ್ನು ತ್ಯಜಿಸಿ ದೇಶದ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ದುಡಿದ ಜೀವವದು. ಕೋಲ್ಕತ್ತದಲ್ಲಿ ವೈದ್ಯಕೀಯ ಪದವಿ ಪಡೆದು ಅಮೆರಿಕದಲ್ಲಿ ಉನ್ನತ ಶಿಕ್ಷಣ ಮುಗಿಸಿದವರು. ಆದರೆ, ವೃತ್ತಿಯನ್ನು ಬದಿಗಿರಿಸಿ ಭಾರತವನ್ನು ವಿದೇಶಿಯರ ಬಂಧನದಿಂದ ಬಿಡಿಸುವುದೇ ತಮ್ಮ ಆದ್ಯ ಕರ್ತವ್ಯವೆಂದು ನಂಬಿ ಶ್ರಮಿಸಿದವರು. ಲಾಲಾ ಲಜಪತ್ ರಾಯ್, ಗಾಂಧೀಜಿ ಮುಂತಾದವರ ಆದರ್ಶಗಳನ್ನು ಪಾಲಿಸುತ್ತ ಹಲವಾರು ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಜನರನ್ನು ಜಾಗೃತಗೊಳಿಸಿದವರು. ಭಗಿನೀ ಮಂಡಲವನ್ನು ಸ್ಥಾಪಿಸಿ ಕರ್ನಾಟಕದ ಮಹಿಳೆಯರು ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿದವರು. ತಮ್ಮ ಸಂಘಟನಾ ಚಾತುರ್ಯದ ಮೂಲಕ ದೇಶ ಕಟ್ಟಲು ಅಹರ್ನಿಶಿ ದುಡಿದವರು. ಪದ್ಮಭೂಷಣ ಹರ್ಡೀಕರ್ ಅವರಂತಹವರ ನೆನಪೇ ಒಂದು ಸ್ಫೂರ್ತಿ. ಇಂಥವರು ಕರ್ನಾಟಕದವರೆಂಬ ಹೆಮ್ಮೆ ನಮ್ಮದು. ❖

ಗುಂಡಣ್ಣ

ಪದಬಂಧ 6139

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಳ್ಳಿಯ ಲೆಕ್ಕಪತ್ರಗಳನ್ನು ಬರೆಯುವವನು (4)
2.ಪಾರುವಿನ ಮೇಲ್ವಿಚಾರಣೆಯಿದು! (4)
4.ಮನುಷ್ಯನಿಗೆ ಸಂಬಂಧಪಟ್ಟದ್ದು! (4)
6.ಕೊನೆಗೆ ಪದ ಇಟ್ಟರೆ ಐಶ್ವರ್ಯ ಕಾಣುತ್ತದೆಯಲ್ಲಾ! (3)
7.ಕನಸಲ್ಲಿ ತೆಗೆದ ಗಲೀಜು! (2)
9.ಈತ ಪಾರಂಗತ (3)
11.ಸರಸದಲ್ಲೂ ವಿರಸದಲ್ಲೂ ಬಂದಿರುವ ದ್ರವ (2)
13.ಪ್ರತಿಕೂಲವಾದುದು ಇಲ್ಲಿದೆ (3)
14.ಕನ್ನಡಿಗನ ಚಾಳೀಸು (4)
16.ಒಂದು ಬಗೆಯ ನಯವಾದ ಬಟ್ಟೆ (4)
17.ಅವನ ಕೆಟ್ಟ ಗುಣ! (4)

ಮೇಲಿಂದ ಕೆಳಕ್ಕೆ

1.ಉಷ್ಣದ ಪ್ರಮಾಣವನ್ನು ಕಂಡು ಹಿಡಿಯುವ ಸಾಧನ (5)
2.ಕ್ರೈಸ್ತ ಗುರು ಇಲ್ಲಿದ್ದಾರೆ (2)
3.ಇತರರಿಗೆ ಉಪಕಾರವನ್ನು ಮಾಡುವುದು (5)
5.ಈಕೆ ವಿದೇಶದವಳು (3)
8.ಜೊತೆಯಲ್ಲಿ ಆಲೋಚಿಸುವವನು (5)
10.ಅತಿಯಾದ ಆತುರ (3)
12.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
15.ಬಾಯಿಂದ ಸುರಿವ ಲಾಲಾರಸ (2)



6138ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತಡಸಲು 3.ಅಂಗರಾಗ 5.ಹಗರಣ 7.ಮಾರಾಮಾರಿ 8.ರತ್ನಖಚಿತಪೀಠ 11.ಸೆರೆಮನೆ 12.ಅಡಾವುಡಿ 14.ಗುಣಗ್ರಾಹಿ 15.ಪರದೇಶಿ

ಮೇಲಿಂದ ಕೆಳಕ್ಕೆ:
2.ಸಪೂರ 4.ಗಡಾರಿ 6.ಗಮಾರ 7.ಮಾರುತ 9.ಖಜಾನೆ 10.ಠರಾವು 11.ಸೆರಗು 12.ಡಾಮರ

ಸುಡೊಕು 6523

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5	6		8	7			9	3
								4
	8		5	2		1	6	
1		5					8	9
4			2	9	5			1
	9						2	
		9	3		2		4	
7			9		8	5		2
	5			4			3	

6522 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

19 ಆಗಸ್ಟ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಏಕಾದಶಿ ಗಂ. 15-33 ನಕ್ಷತ್ರ: ಆರ್ದ್ರಾ ಗಂ. 25-08 **ಯೋಗ:** ವಜ್ರ ಗಂ. 20-30 **ಕರಣ:** ಬಾಲವ ಗಂ. 15-33 ಸಿಂಹ ಮಾಸದ 02 ನೇ ದಿನ. **ಮಳೆ ನಕ್ಷತ್ರ:** ಮಘಾ 1 ನೇ ಪಾದ. **ರಾಹುಕಾಲ:** ಮಧ್ಯಾಹ್ನ 03-00 04-30, **ಸೂರ್ಯೋದಯ:** 06-22 **ಸೂರ್ಯಾಸ್ತ:** 06-46, **ಮುಸ್ಲಿಂ ದಿನಾಂಕ:** 24 ಸಫರ್, **ಅದೃಷ್ಟ ಸಂಖ್ಯೆ:** 5, 8

ಮೇಷ: ಅವಿವಾಹಿತ ಹೆಣ್ಣುಮಕ್ಕಳಿಗೆ ಅನಿರೀಕ್ಷಿತವಾಗಿ ಕಂಕಣಬಲ ಕೂಡಿಬರುವುದು. ಸ್ನೇಹಿತರಲ್ಲಿ ಅನಗತ್ಯ ಮಾತನಾಡುವುದಕ್ಕಿಂತ ಮೌನವಾಗಿ ಇರುವುದು ಲೇಸು. ಸ್ವವಿಮರ್ಶೆಯಿಂದ ತಪ್ಪುಗಳು ಗೋಚರವಾಗಲಿವೆ.

ವೃಷಭ: ಎಂಥ ಅನಿವಾರ್ಯ ಪರಿಸ್ಥಿತಿಯಲ್ಲಿಯೂ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ. ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ತಿಳಿಯಿರಿ. ನಿಧಾನವಾಗಿಯಾದರೂ ಲಾಭ ಬಂದು ಕೈ ಸೇರಲಿದೆ.

ಮಿಥುನ: ಸಮಯವನ್ನು ಯಾಚಿಸುತ್ತಿರುವುದರಿಂದ ಸ್ವಂತ ಕೆಲಸಗಳು ನಿಧಾನಗತಿಯಲ್ಲಿ ಸಾಗಲಿವೆ. ಗೃಹದಲ್ಲಿ ಶುಭ ಸಮಾರಂಭಗಳು ನಡೆಯಲಿವೆ. ಕುಟುಂಬದಲ್ಲಿ ಉತ್ತಮ ವಾತಾವರಣವಿದ್ದು ಸಂತಸ ತರಲಿದೆ.

ಕರ್ಕಾಟಕ: ವ್ಯಾಪಾರ ವ್ಯವಹಾರಗಳಲ್ಲಿ ತುಸು ಚೇತರಿಕೆ ಕಂಡುಬಂದು ಮುಂದುವರಿಯಲು ಸಹಾಯವಾಗುತ್ತದೆ. ಹಂತಹಂತವಾಗಿ ಸುಧಾರಿಸಲಿರುವ ಪರಿಸ್ಥಿತಿ ನಿರಾಶೆಯನ್ನು ತರದು. ಮಕ್ಕಳ ಅಗತ್ಯಗಳನ್ನು ಪೂರೈಸಿ.

ಸಿಂಹ: ಆಲಸ್ಯತನ ದೂರಮಾಡಿ. ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ಕಂಪ್ಯೂಟರ್ ಅಧ್ಯಯನ ಮಾಡುವ ಬಗ್ಗೆ ಅಥವಾ ಬೇರೆ ಬೇರೆ ಭಾಷೆ ಕಲಿಯುವ ಬಗ್ಗೆ ಯೋಚಿಸಿ. ಭವಿಷ್ಯಕ್ಕೆ ಅನುಕೂಲ ಮಾಡಿಕೊಡುವುದು.

ಕನ್ಯಾ: ಪೊಲೀಸ್ ಸಿಬ್ಬಂದಿಗೆ ಹೆಚ್ಚಿನ ಕೆಲಸವಿರಲಿದೆ. ನ್ಯಾಯಾಲಯದ ಮೆಟ್ಟಿಲೇರಿದ ನಿಮ್ಮ ಸಮಸ್ಯೆಗಳನ್ನು ರಾಜಿ ಒಪ್ಪಂದದ ಮೂಲಕ ಬಗೆಹರಿಸಿ ಕೊಳ್ಳಿ. ಅಶ್ವತ್ಥ ವೃಕ್ಷದ ಪ್ರದಕ್ಷಿಣೆ ಶುಭ ತರಲಿದೆ.

ತುಲಾ: ಸ್ತ್ರೀವರ್ಗದಿಂದ ಸಹಾಯ ಪ್ರಾಪ್ತ. ಪತ್ರಿಕೆ ಮತ್ತು ಕೆಲವು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಕೆಲಸದ ಅಸ್ಥಿರತೆ ಅನುಭವಕ್ಕೆ ಬರಲಿದೆ. ಮಕ್ಕಳ ಯಶಸ್ಸನ್ನು ಕಂಡು ಸಂಭ್ರಮಿಸುವಿರಿ.

ವೃಶ್ಚಿಕ: ಕಲಾತ್ಮಕ ಮತ್ತು ಸೃಜನಶೀಲ ವ್ಯಕ್ತಿತ್ವ ಮುಂದಿನ ದಿನಗಳಲ್ಲಿ ಇನ್ನಷ್ಟು ವರ್ಧಿಸಲಿದೆ. ಪ್ರಾಪಂಚಿಕ ವಿಷಯಗಳಲ್ಲಿ ಮಹತ್ವಾಕಾಂಕ್ಷೆ ಇರುವವರಿಗೆ ಶುಭ ದಿನ. ಕೌಟುಂಬಿಕ ವಿಷಯಗಳಲ್ಲಿ ಬದಲಾವಣೆ ಕಾಣಲಿದೆ.

ಧನು: ಸುತ್ತಮುತ್ತಲಿನ ಜನರೊಂದಿಗೆ ಬೆರೆಯುವುದರ ಪ್ರಯೋಜನ ಅನುಭವಕ್ಕೆ ಬರಲಿದೆ. ನಿಮ್ಮ ಸುತ್ತಲಿನ ವಾತಾವರಣ ಸಂತಸದಾಯಕ. ಬ್ಯಾಂಕ್ ಅಧಿಕಾರಿಗಳಿಗೆ ಎದುರಾಗುವ ವರ್ಗಾವಣೆ ತಲೆನೋವು ತರಿಸಬಹುದು.

ಮಕರ: ವೈಯಕ್ತಿಕ ಜೀವನದ ಸಮಸ್ಯೆ ಬಗೆಹರಿದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ಮಕ್ಕಳೊಡನೆ ಉಪಯುಕ್ತ ಸಮಯ ಕಳೆಯುವಿರಿ. ಅಪರೂಪದ ಹಾಗೂ ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ.

ಕುಂಭ: ಕೌಟುಂಬಿಕ ನೆಮ್ಮದಿ ಸಮೃದ್ಧಿಯಾಗಿದ್ದರೂ ಕಿರಿಕಿರಿ ತಪ್ಪದಂತಾಗ-ಲಿದೆ. ಅನಾರೋಗ್ಯ ಸ್ಥಿತಿಯು ಎದುರಾಗಿ ಆರ್ಥಿಕವಾಗಿ ಧನ ವ್ಯಯವಾಗಲಿದೆ. ಸತ್ಫಲಗಳಿಗೆ ಶ್ರೀಲಕ್ಷ್ಮಿನರಸಿಂಹನ ಸೇವೆಯು ಅನುಕೂಲವಾಗಲಿದೆ.

ಮೀನ: ಆದಷ್ಟು ಮೌನವಾಗಿರಲು ನಿಶ್ಚಯಿಸಿ. ಮಕ್ಕಳ ಓದಿಗಾಗಿ ಗಮನ ಹರಿಸ ಬೇಕಾಗುವುದು. ಮಾರಾಟ ಪ್ರತಿನಿಧಿಗಳಿಗೆ ಹೆಚ್ಚಿನ ಕಮಿಷನ್ ಸಿಗಲಿದೆ. ದೂರ ಸಂಚಾರದಲ್ಲಿ ಜಾಗ್ರತೆ ವಹಿಸಿರಿ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

3ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಚಂದ್ರಿಕಾ.ಟಿ
(ಕೆ.ಸಿ. ನಿಂಗಯ್ಯ ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನೀಯರ್ ಸಿವಿಲ್ ಇವರ ಧರ್ಮಪತ್ನಿ)
ನಿಧನ: 19–08–2022
ನಿಮ್ಮ ಸವಿನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ.
ದುಃಖತಪ್ತರು: ಮಕ್ಕಳು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು.

ಮುಂಬೈ ಧಾರಣೆ (ಶೇಂಗಾ)

18-08-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1288 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1325)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,100 (99,200)
ಬೆಳ್ಳಿ ಕೆ.ಜಿಗೆ	1,14,000 (1,14,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ
ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1500-1900
ಮಧ್ಯಮ	₹1000-1500
ಸಣ್ಣ	₹500-1000

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,631
ಇಂದಿನ ಅಂತ್ಯ:	24,876
ದಿನದ ಗರಿಷ್ಠ:	25,022
	245

ಮೊಟ್ಟೆ ಧಾರಣೆ
(ಎನ್‌ಇಸಿಸಿ) ಬೆಂಗಳೂರು

	100 ಕ್ಕೆ	₹540
	12 ಕ್ಕೆ	₹72
ಮೈಸೂರು:	100 ಕ್ಕೆ	₹548

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹355-595
ದ್ವಿತಳಿ (ಬಿ.ವಿ)	₹357-756

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹188
ಗುಡ್ ಲಾಟ್	₹177

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹19000-22000
ದಾವಣಗೆರೆ	₹14500-14800
ತಿಪಟೂರು	₹25000-28100

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1290 (1280)
ಸೂರ್ಯಕಾಂತಿ (ರಿಫೈನ್ಡ್)	₹1400 (1395)
ಪಾಮೋಲಿನ್	₹1290 (1265)

ಷೇರುಪೇಟೆ: ತೇಜಿ ವಹಿವಾಟು

ಜಿಎಸ್‌ಟಿ ಸುಧಾರಣೆ: ವಾಹನ ತಯಾರಿಕೆ ಕಂಪನಿಗಳ ಷೇರು ಖರೀದಿ ಹೆಚ್ಚಳ

ಭಾರತದ ರೇಟಿಂಗ್ ಅನ್ನು ಎಸ್ ಆ್ಯಂಡ್ ಪಿ ಸಂಸ್ಥೆ ಮೇಲ್ದರ್ಜೆಗೇರಿಸಿರುವುದು, ಕಚ್ಚಾ ತೈಲದ ಬೆಲೆ ಇಳಿಕೆ ಆಗುತ್ತಿರುವುದು ಕೂಡ ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿಸಿದೆ. ಹೀಗಾಗಿ ಮಾರುಕಟ್ಟೆಯು ಏರಿಕೆ ದಾಖಲಿಸಿದೆ
ಅಜಿತ್ ಮಿಶ್ರಾ, ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್

ಮುಂಬೈ (ಪಿಟಿಐ): ದೀಪಾವಳಿ ಹಬ್ಬಕ್ಕೆ ಮೊದಲು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿ ಹಲವು ಸುಧಾರಣೆಗಳನ್ನು ತರುವುದಾಗಿ ಕೇಂದ್ರ ಸರ್ಕಾರ ಹೇಳಿರುವ ಕಾರಣದಿಂದಾಗಿ ದೇಶದ ಷೇರುಪೇಟೆಯಲ್ಲಿ ಸೋಮವಾರ ತೇಜಿ ವಹಿವಾಟು ನಡೆಯಿತು.

ಪ್ರಸ್ತಾವಿತ ಜಿಎಸ್‌ಟಿ ಸುಧಾರಣೆಯ ಪರಿಣಾಮವಾಗಿ, ವಾಹನಗಳಿಗೆ ಈಗ ವಿಧಿಸುತ್ತಿರುವ ಶೇ 28ರಷ್ಟು ತೆರಿಗೆಯು ಶೇ 18ಕ್ಕೆ ತಗ್ಗಲಿದೆ ಎಂಬ ನಿರೀಕ್ಷೆ ಇದೆ. ಇದು ವಾಹನ ತಯಾರಿಕಾ ಕಂಪನಿಗಳಿಗೆ ಲಾಭ ತರಲಿದೆ ಎಂಬ ಲೆಕ್ಕಾಚಾರದಲ್ಲಿ ಸೋಮವಾರದ ಷೇರುಪೇಟೆ ವಹಿವಾಟಿನಲ್ಲಿ ವಾಹನ ತಯಾರಿಕಾ ಕಂಪನಿಗಳ ಷೇರು ಖರೀದಿ ಜೋರಾಗಿತ್ತು.

ಅಲ್ಲದೆ, ಗ್ರಾಹಕ ಬಳಕೆ ಉಪಕರಣಗಳ ತಯಾರಿಕಾ ಕಂಪನಿಗಳ ಷೇರು ಖರೀದಿ ಸಹ ಹೆಚ್ಚಿತ್ತು. ಇವೆಲ್ಲ ಸೂಚ್ಯಂಕಗಳು ಏರಿಕೆಗೆ ನೆರವಾದವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ. ಷೇರುಪೇಟೆ ಸೂಚ್ಯಂಕಗಳ ಏರಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹6.17 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 676 ಅಂಶ ಏರಿಕೆಯಾಗಿ, 81,273ಕ್ಕೆ ತಲುಪಿದೆ. ವಹಿವಾಟಿನ ನಡುವೆ ಸೂಚ್ಯಂಕವು 1,168 ಅಂಶದವರೆಗೆ ಜಿಗಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 245 ಅಂಶ ಹೆಚ್ಚಳವಾಗಿ 24,876ಕ್ಕೆ ಕೊನೆಗೊಂಡಿದೆ.

ಪ್ರಸ್ತಾವಿತ ಜಿಎಸ್‌ಟಿ ಸರಳೀಕರಣವು ದೇಶದ ಷೇರುಪೇಟೆಗೆ ಉತ್ತೇಜನ ನೀಡಿದೆ. ಜೊತೆಗೆ ಅಮೆರಿಕ ಮತ್ತು ರಷ್ಯಾ ಮಾತುಕತೆಯು ಯಾವುದೇ ಬಿಕ್ಕಟ್ಟು ಹೆಚ್ಚಿಸದೆ ಪೂರ್ಣಗೊಂಡಿದೆ. ಇದು ಹೂಡಿಕೆದಾರರಲ್ಲಿನ ಆತಂಕವನ್ನು ತಗ್ಗಿಸಿದೆ. ಇದರಿಂದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜಿಎಸ್‌ಟಿ ಸುಧಾರಣೆಯಿಂದ ವಾಹನ ತಯಾರಿಕಾ ಕಂಪನಿಗಳು ಹೆಚ್ಚಿನ ಲಾಭ ಪಡೆಯಲಿವೆ ಎಂದು ಹೇಳಿದ್ದಾರೆ.

ಮಾರುತಿ ಸುಜುಕಿ ಕಂಪನಿಯ ಷೇರಿನ ಮೌಲ್ಯ ಶೇ 8.94ರಷ್ಟು ಏರಿಕೆ ಕಂಡಿದೆ. ಬಜಾಜ್ ಫೈನಾನ್ಸ್, ಅಲ್ಟ್ರಾ ಟೆಕ್ ಸಿಮೆಂಟ್, ಬಜಾಜ್ ಫಿನ್‌ಸರ್ವ್, ಮಹೀಂದ್ರ ಆ್ಯಂಡ್ ಮಹೀಂದ್ರ, ಹಿಂದೂಸ್ತಾನ್ ಯೂನಿಲಿವರ್ ಮತ್ತು ಟ್ರೆಂಟ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಐಟಿಸಿ, ಎಟರ್ನಲ್, ಟೆಕ್ ಮಹೀಂದ್ರ ಮತ್ತು ಲಾರ್ಸೆನ್ ಆ್ಯಂಡ್ ಟೊಬ್ರೊ ಷೇರಿನ ಮೌಲ್ಯ ಇಳಿದಿದೆ.

ಸುದ್ದಿ 2 ನಿಮಿಷ

ಬೆಂಗಳೂರಿನಲ್ಲಿ ಕಚೇರಿ ಸ್ಥಳ ಬಾಡಿಗೆ ಪಡೆದ ಆ್ಯಪಲ್

ನವದೆಹಲಿ (ಪಿಟಿಐ): ಐಫೋನ್ ತಯಾರಿಕಾ ಕಂಪನಿ ಆ್ಯಪಲ್ ಇಂಡಿಯಾ, ಬೆಂಗಳೂರಿನಲ್ಲಿ 2.7 ಲಕ್ಷ ಚದರ ಅಡಿ ವಿಸ್ತೀರ್ಣದ ಕಚೇರಿ ಸ್ಥಳವನ್ನು 10 ವರ್ಷದ ಅವಧಿಗೆ ಬಾಡಿಗೆಗೆ ತೆಗೆದುಕೊಂಡಿದೆ.

ಪ್ರತಿ ಚದರ ಅಡಿಗೆ ಮಾಸಿಕ ಬಾಡಿಗೆ ₹235 ಆಗಿದ್ದು, ಒಟ್ಟು ₹6.3 ಕೋಟಿ ಆಗಲಿದೆ. ವಾರ್ಷಿಕವಾಗಿ ಬಾಡಿಗೆ ದರವು ಶೇ 4.5ರಷ್ಟು ಹೆಚ್ಚಳವಾಗಲಿದೆ. ಆ್ಯಪಲ್ ಕಂಪನಿಯು ₹31.57 ಕೋಟಿ ಠೇವಣಿ ಪಾವತಿ ಮಾಡಿದೆ. ಬಾಡಿಗೆ, ಕಾರು ನಿಲುಗಡೆಗೆ ಸ್ಥಳ ಮತ್ತು ನಿರ್ವಹಣೆ ಶುಲ್ಕಕ್ಕೆ ಹತ್ತು ವರ್ಷದಲ್ಲಿ ಪಾವತಿಸುವ ಮೊತ್ತವು ಅಂದಾಜು ₹1 ಸಾವಿರ ಕೋಟಿ ದಾಟಲಿದೆ.

ರಿಯಲ್ ಎಸ್ಟೇಟ್ ಸಂಸ್ಥೆ ಎಂಬಸಿ ಸಮೂಹದ ಎಂಬಸಿ ಜೆನಿತ್‌ನಲ್ಲಿನ 5ನೇ ಮಹಡಿಯಿಂದ 13ನೇ ಮಹಡಿವರೆಗೆ ಬಾಡಿಗೆ ತೆಗೆದುಕೊಂಡಿದೆ. ಏಪ್ರಿಲ್ 3ರಿಂದ ಬಾಡಿಗೆ ಪಡೆದುಕೊಂಡಿದೆ ಎಂದು ರಿಯಲ್ ಎಸ್ಟೇಟ್ ದತ್ತಾಂಶ ವಿಶ್ಲೇಷಣೆ ಸಂಸ್ಥೆ ಪ್ರಾಪ್‌ಸ್ಟ್ಯಾಕ್ ತಿಳಿಸಿದೆ.

ಈ ಕುರಿತು ಆ್ಯಪಲ್ ಕಂಪನಿಗೆ ಸುದ್ದಿಸಂಸ್ಥೆ ಕಳಿಸಿದ ಇ-ಮೇಲ್‌ಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದಲ್ಲಿ ತಯಾರಿಕಾ ಚಟುವಟಿಕೆ ವಿಸ್ತರಿಸದಂತೆ ಆ್ಯಪಲ್ ಕಂಪನಿಗೆ ಇತ್ತೀಚೆಗೆ ಬಹಿರಂಗವಾಗಿ ಹೇಳಿದ್ದರು. ಇದರ ನಡುವೆಯೇ ಆ್ಯಪಲ್ ಈ ಹೊಸ ಹೂಡಿಕೆ ಮಾಡಿದೆ.

ಮನೆಗಳ ಬೆಲೆಯಲ್ಲಿ ಏರಿಕೆ ಬೆಂಗಳೂರಿಗೆ 4ನೇ ಸ್ಥಾನ

ನವದೆಹಲಿ (ಪಿಟಿಐ): ಜಗತ್ತಿನ ಪ್ರಮುಖ 46 ನಗರಗಳಲ್ಲಿನ ಪ್ರೀಮಿಯಂ ವರ್ಗದ ಮನೆಗಳ ವಾರ್ಷಿಕ ಬೆಲೆ ಏರಿಕೆಯ ಪಟ್ಟಿಯಲ್ಲಿ ಬೆಂಗಳೂರು 4ನೇ ಸ್ಥಾನದಲ್ಲಿದೆ. ಮುಂಬೈ ಮತ್ತು ದೆಹಲಿ ಕ್ರಮವಾಗಿ 6 ಮತ್ತು 15ನೇ ಸ್ಥಾನದಲ್ಲಿವೆ.

ಬೆಂಗಳೂರಿನಲ್ಲಿ ಮನೆಗಳ ದರ ಏರಿಕೆಯು ವಾರ್ಷಿಕ ಶೇ 10.2ರಷ್ಟು ಇದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ನೈಟ್ ಫ್ರಾಂಕ್ ವರದಿ ಸೋಮವಾರ ತಿಳಿಸಿದೆ.

ಮೊದಲ ಸ್ಥಾನದಲ್ಲಿ ದಕ್ಷಿಣ ಕೊರಿಯಾದ ಸೋಲ್ ಇದೆ. ಇಲ್ಲಿನ ಪ್ರೀಮಿಯಂ ವರ್ಗದ ಮನೆಗಳ ವಾರ್ಷಿಕ ಬೆಲೆ ಹೆಚ್ಚಳವು ಶೇ 25.2ರಷ್ಟಿದೆ. ನಂತರದ ಸ್ಥಾನದಲ್ಲಿ ಟೋಕಿಯೊ (ಶೇ 16.3) ಮತ್ತು ದುಬೈ (ಶೇ 15.8) ಇವೆ. ಬೆಲೆ ಏರಿಕೆ ಪ್ರಮಾಣವು ಮುಂಬೈನಲ್ಲಿ ಶೇ 8.7ರಷ್ಟು ಮತ್ತು ದೆಹಲಿಯಲ್ಲಿ ಶೇ 3.9ರಷ್ಟಿದೆ.

ಕಳೆದ ಒಂದು ವರ್ಷದಲ್ಲಿ ಜಗತ್ತಿನ ಪ್ರೀಮಿಯಂ ವರ್ಗದ ಮನೆಗಳ ಸರಾಸರಿ ಬೆಲೆ ಶೇ 2.3ರಷ್ಟು ಹೆಚ್ಚಾಗಿದೆ ಎಂದು ಜಾಗತಿಕ ಪ್ರೀಮಿಯಂ ನಗರಗಳ ಸೂಚ್ಯಂಕ (ಪಿಜಿಸಿಐ) ಏಪ್ರಿಲ್-ಜೂನ್ ವರದಿಯಲ್ಲಿ ಸಂಸ್ಥೆಯು ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ work from Home ಕೆಲಸಕ್ಕೆ ಯುವಕ & ಯುವತಿಯರು ಬೇಕಾಗಿದ್ದಾರೆ. (17,900-25,000) 7th,10th, Any Degree. Ph:9019427194

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, TVS, ಹಿಮಾಲಯ ಬ್ರಿಟಾನಿಯಾಗಳಿಗೆ SSLC, PUC, DegreeITI Degree, Diploma ಆದವರು 18K/86K (ವಿದ್ಯಾರ್ಹತೆಯಿಲ್ಲದವರಿಗೂ ವಸತಿಯೂಟವಿದೆ) 8317415401/ 7625020184

ಕರ್ನಾಟಕದಾದ್ಯಂತ ಫುಲ್ ಟೈಮ್, ಪಾರ್ಟ್ ಟೈಮ್ Work from Home ಕೆಲಸಕ್ಕೆ ವಿದ್ಯಾರ್ಥಿಗಳಿಗೆ, ವಯಸ್ಕರಿಗೂ, ವಿದ್ಯಾರ್ಹತೆಯಿಲ್ಲದವರೂ 18000/- 25000/-. Ph:6364595602

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606385001, 9008835841.

Multiple Vacancy

ಫೀಲ್ಡ್ ಆಫೀಸರ್ ಕೆಲಸಕ್ಕೆ ಮತ್ತು ಸೆಕ್ಯುರಿಟಿ ಗಾರ್ಡ್ ,ಮಾರ್ಕೆಟಿಂಗ್ ಮ್ಯಾನೇಜರ್ ಬೇಕಾಗಿದ್ದಾರೆ. ಸ್ಥಳ. ಕುಂಬಳಗೋಡು, ಬನ್ನೇರುಘಟ್ಟ 7259511666/9611248555

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel Agencies

ದಸರಾ ವಿಶೇಷ 23/09/25ರಿಂದ 30/09/2025ರ ವರೆಗೆ ನೇಪಾಳ ಪಶುಪತಿನಾಥ ಮುಕ್ತಿನಾಥ್ ಕಾಶಿ ಅಯೋಧ್ಯೆ ಎಲ್ಲಾ ಸೇರಿ 51000/ ಶ್ರೀರಾಮ್ ಟೂರ್: 9108933383

Travel

ಚಾರ್‌ಧಾಮ್ ಯಾತ್ರೆ 14 ದಿನಗಳು. ಕಾಶಿ,ಕಲ್ಕತ್ತಾ ಭುವನೇಶ್ವರ್‌ಯಾತ್ರೆ 10 ದಿನಗಳು. ಸಂಪರ್ಕಿಸಿ ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.3 9448294477 9845311899

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನಿರುದ್ಯೋಗ ಪ್ರಮಾಣ ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ನಿರುದ್ಯೋಗ ದರವು ಜುಲೈನಲ್ಲಿ ಶೇ 5.2ಕ್ಕೆ ಇಳಿದಿದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ ಸೋಮವಾರ ತಿಳಿಸಿದೆ.

ಜೂನ್ ತಿಂಗಳಿನಲ್ಲಿ ಇದು ಶೇ 5.6 ರಷ್ಟಿತ್ತು. ಪುರುಷರಲ್ಲಿ ನಿರುದ್ಯೋಗ ಪ್ರಮಾಣವು ಶೇ 5.3ರಷ್ಟಿದ್ದರೆ, ಮಹಿಳೆಯರಲ್ಲಿ ಇದು ಶೇ 5.1ರಷ್ಟು ಇದೆ ಎಂದು ತಿಳಿಸಿದೆ.

ನಗರ ಪ್ರದೇಶದಲ್ಲಿರುವ ಎಲ್ಲ ವಯೋಮಾನದವರ ನಿರುದ್ಯೋಗ ಪ್ರಮಾಣ ಜೂನ್‌ನಲ್ಲಿ ಶೇ 7.1 ಇತ್ತು. ಇದು ಜುಲೈನಲ್ಲಿ ಶೇ 7.2ಕ್ಕೆ ಏರಿಕೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಶೇ 4.9ರಿಂದ ಶೇ 4.4ಕ್ಕೆ ಇಳಿದಿದೆ.

ಈ ಪೈಕಿ 15ರಿಂದ 29 ವರ್ಷದೊಳಗಿನವರ ನಿರುದ್ಯೋಗ ಪ್ರಮಾಣವು ಶೇ 15.3ರಿಂದ ಶೇ 14.9ಕ್ಕೆ ತಗ್ಗಿದೆ. ಇದು ನಗರ ಪ್ರದೇಶದಲ್ಲಿ ಶೇ 19ರಷ್ಟಿದ್ದರೆ, ಗ್ರಾಮೀಣ ಭಾಗದಲ್ಲಿ ಶೇ 13ರಷ್ಟಿದೆ.

ಬ್ಯಾಂಕೇತರ ಮೂಲದಿಂದ ಹಣ: ವೊಡಾಫೋನ್

ನವದೆಹಲಿ (ಪಿಟಿಐ): ಸಾಲದ ಸುಳಿಗೆ ಸಿಲುಕಿರುವ ವೊಡಾಫೋನ್ ಐಡಿಯಾ ಕಂಪನಿಯು ತನ್ನ ಬಂಡವಾಳ ವೆಚ್ಚದ ಯೋಜನೆಗಳನ್ನು ಮುಂದುವರಿಸಲು ಅಗತ್ಯವಿರುವ ಹಣಕ್ಕಾಗಿ ಬ್ಯಾಂಕೇತರ ಮೂಲಗಳಿಂದ ನಿಧಿ ಸಂಗ್ರಹಿಸಲು ಆಲೋಚಿಸಿದೆ.

ಕಂಪನಿಗೆ ಸಾಲ ನೀಡುವ ಮೊದಲು ಹೊಂದಾಣಿಕೆ ಮಾಡಿದ ಒಟ್ಟು ವರಮಾನದ (ಎಜಿಆರ್) ವಿಚಾರವಾಗಿ ಸ್ಪಷ್ಟನೆ ಸಿಗುವುದಕ್ಕೆ ಬ್ಯಾಂಕ್‌ಗಳು ಕಾಯುತ್ತಿವೆ ಎಂದು ಕಂಪನಿಯ ಸಿಇಒ ಅಕ್ಷಯ ಮೂಂದ್ರಾ ಹೇಳಿದ್ದಾರೆ.

ಜಿಎಸ್‌ಟಿ ಬದಲಾವಣೆ: ಯಾವುದರ ಬೆಲೆ ತಗ್ಗಬಹುದು?

ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ತರಲು ಕೇಂದ್ರ ಸರ್ಕಾರ ಮುಂದಾಗಿದೆ. ಜಿಎಸ್‌ಟಿಯಲ್ಲಿ ಬರಲಿರುವ ಬದಲಾವಣೆಗಳು ದೇಶವಾಸಿಗಳಿಗೆ ದೀಪಾವಳಿ ಉಡುಗೊರೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

ಜಿಎಸ್‌ಟಿ ಅಡಿ ಶೇ 12ರಷ್ಟು ತೆರಿಗೆ ವಿಧಿಸಲಾಗುತ್ತಿರುವ ಬಹುತೇಕ ವಸ್ತುಗಳನ್ನು ಶೇ 5ರ ತೆರಿಗೆ ಹಂತಕ್ಕೆ ತರಲಾಗುತ್ತದೆ. ಶೇ 28ರಷ್ಟು ತೆರಿಗೆ ವಿಧಿಸಲಾಗುತ್ತಿರುವ ಬಹುತೇಕ ವಸ್ತುಗಳನ್ನು ಶೇ 18ರ ತೆರಿಗೆ ಹಂತಕ್ಕೆ ತರಲಾಗುತ್ತದೆ ಎಂದು ಕೇಂದ್ರ ಸರ್ಕಾರದ ಮೂಲಗಳು ಹೇಳಿವೆ. ಜಿಎಸ್‌ಟಿಯ ಈಗಿನ ನಾಲ್ಕು ತೆರಿಗೆ ಹಂತಗಳಲ್ಲಿ ಇರುವ ಕೆಲವು ವಸ್ತುಗಳ ಮೇಲೊಂದು ಪಕ್ಷಿನೋಟ ಇಲ್ಲಿದೆ.

5% ರಷ್ಟು ತೆರಿಗೆ
ಸಕ್ಕರೆ, ಚಹಾ, ಅಡುಗೆ ಎಣ್ಣೆ, ಒಣದ್ರಾಕ್ಷಿ, ಮನೆಬಳಕೆಯ ಅಡುಗೆ ಅನಿಲ, ಗೋಡಂಬಿ, ₹500ಕ್ಕಿಂತ ಕಡಿಮೆ ಬೆಲೆಯ ಪಾದರಕ್ಷೆಗಳು, ₹1,000ಕ್ಕಿಂತ ಕಡಿಮೆ ಬೆಲೆಯ ಉಡುಪುಗಳು, ಪ್ಯಾಕ್ ಮಾಡಿ ಲೇಬಲ್ ಅಂಟಿಸಿರುವ ಅಕ್ಕಿ, ಸಂಬಾರ ಪದಾರ್ಥಗಳು, ಅಗರಬತ್ತಿಗಳು, ಜೀವರಕ್ಷಕ ಔಷಧಗಳು, ಇನ್‌ಸ್ಟಾಂಟ್ ಅಲ್ಲದ ಕಾಫಿ ಪುಡಿ

12% ರಷ್ಟು ತೆರಿಗೆ
ಬೆಣ್ಣೆ, ತುಪ್ಪ, ಚೀಸ್, ಬಾದಾಮಿ, ಪಿಸ್ತಾ, ಖರ್ಜೂರ, ಹಣ್ಣಿನ ರಸ, ಜಾಮ್, ಛತ್ರಿಗಳು, ಕೆಲವು ಆಟಿಕೆಗಳು

18% ರಷ್ಟು ತೆರಿಗೆ
ಮೊಬೈಲ್ ಫೋನ್‌ಗಳು, ತಲೆಗೆ ಸವರುವ ಎಣ್ಣೆ, ಬಂಡವಾಳ ಸರಕುಗಳು, ಟೂತ್‌ಪೇಸ್ಟ್, ಸೋಪು, ಐಸ್ ಕ್ರೀಂ, ಕಂಪ್ಯೂಟರ್‌ಗಳು

28% ರಷ್ಟು ತೆರಿಗೆ
ಸಿಗರೇಟು, ಸಣ್ಣ ಕಾರುಗಳು, ಹವಾ ನಿಯಂತ್ರಕ ಹಾಗೂ ಫ್ರಿಜ್‌ನಂತಹ ಗ್ರಾಹಕ ಬಳಕೆ ಉಪಕರಣಗಳು, ಐಷಾರಾಮಿ ಕಾರುಗಳು, ದ್ವಿಚಕ್ರ ವಾಹನಗಳು

(ಮಾಹಿತಿ: ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಸೀಮಾಸುಂಕ ಮಂಡಳಿ)

ಎ.ಸಿ ಬೆಲೆ ₹2,500 ಇಳಿಕೆ?



ನವದೆಹಲಿ (ಪಿಟಿಐ): ಹವಾನಿಯಂತ್ರಕಗಳ (ಎ.ಸಿ) ಮೇಲಿನ ಜಿಎಸ್‌ಟಿ ದರವನ್ನು ಈಗಿನ ಶೇ 28ರಿಂದ ಶೇ 18ಕ್ಕೆ ತಗ್ಗಿಸುವ ಪ್ರಸ್ತಾವನೆಯನ್ನು ಕೇಂದ್ರವು ಸಿದ್ಧಪಡಿಸಿರುವ ಹಿನ್ನೆಲೆಯಲ್ಲಿ, ಈ ಬಾರಿ ಹಬ್ಬಗಳ ಋತುವಿನಲ್ಲಿ ಇವುಗಳ ಮಾರಾಟವು ಹೆಚ್ಚಿನ ಮಟ್ಟದಲ್ಲಿ ಇರಲಿದೆ ಎಂಬ ನಿರೀಕ್ಷೆಯಲ್ಲಿ ತಯಾರಕರು ಇದ್ದಾರೆ.

ತೆರಿಗೆ ಹಂತದಲ್ಲಿನ ಬದಲಾವಣೆಯು ಜಾರಿಗೆ ಬಂದಲ್ಲಿ ಹವಾನಿಯಂತ್ರಕಗಳ ಬೆಲೆಯು ₹1,500ರಿಂದ ₹2,500ರವರೆಗೆ ಇಳಿಕೆ ಆಗಲಿದೆ.

32 ಇಂಚುಗಳಿಗಿಂತ ಹೆಚ್ಚಿನ ಗಾತ್ರದ ಟಿ.ವಿ.ಗಳ ಮೇಲಿನ ತೆರಿಗೆ ಕೂಡ ಈಗಿನ ಶೇ 28ರಿಂದ ಶೇ 18ಕ್ಕೆ ಇಳಿಕೆ ಆಗುವ ನಿರೀಕ್ಷೆ ಇದೆ.

ಸರ್ಕಾರವು ಪ್ರಸ್ತಾವಿತ ಬದಲಾವಣೆಗಳನ್ನು ಆದಷ್ಟು ಬೇಗ ಜಾರಿಗೆ ತರಬೇಕು. ಏಕೆಂದರೆ ಜನರು ಈಗ ತಮ್ಮ ಖರೀದಿ ತೀರ್ಮಾನಗಳನ್ನು ಮುಂದಕ್ಕೆ ಹಾಕುತ್ತಿದ್ದಾರೆ ಎಂದು ಬ್ಲೂಸ್ಟಾರ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಬಿ. ತ್ಯಾಗರಾಜನ್ ಹೇಳಿದ್ದಾರೆ.

ಹವಾನಿಯಂತ್ರಕಗಳು, ಇತರ ಕೆಲವು ಉತ್ಪನ್ನಗಳ ಮೇಲಿನ ಜಿಎಸ್‌ಟಿಯನ್ನು ಶೇ 18ಕ್ಕೆ ಇಳಿಕೆ ಮಾಡಿದಾಗ, ಮಾರುಕಟ್ಟೆ ಬೆಲೆಯಲ್ಲಿ ಶೇ 7ರವರೆಗೆ ಇಳಿಕೆ ಕಾಣಬಹುದು ಎಂದು ಪ್ಯಾನಾಸೋನಿಕ್ ಲೈಫ್ ಸಲ್ಯೂಷನ್ಸ್ ಇಂಡಿಯಾ ಕಂಪನಿಯ ಅಧ್ಯಕ್ಷ ಮನೀಶ್ ಶರ್ಮಾ ಹೇಳಿದ್ದಾರೆ.

ಅಡಿಕೆ ಧಾರಣೆ

ಕಾರ್ಕಳ		ಶಿವಮೊಗ್ಗ		ಶಿರಸಿ	
ಹೊಸತು	25000-48500	ಸಿಪ್ಪೆಗೋಟು	7399-19811	ಬೆಟ್ಟೆ	25199-42899
ಹಳತು	30000-52500	ಬೆಟ್ಟೆ	52009-64269	ಬಿಳಿಗೋಟು	23729-34401
ಕುಮಟಾ		ಗೊರಬಲು	29469-36139	ಚಾಲಿ	38149-43459
ಚಾಲಿ	39169-42499	ರಾಶಿ	48568-60799	ಕೆಂಪುಗೋಟು	24709-25009
ಚಿಪ್ಪು	26189-31569	ಸರಕು	60159-89896	ರಾಶಿ	46389-51198
ಕೋಕ	7589-23599	**ಸಿದ್ದಾಪುರ**		**ಯಲ್ಲಾಪುರ**	
ಫ್ಯಾಕ್ಟರಿ	6099-31629	ಬಿಳಿಗೋಟು	24900-30600	ಅಪಿ	65479-65479
ಹೊಸಚಾಲಿ	36569-43039	ಚಾಲಿ	34609-42699	ಬಿಳಿಗೋಟು	15199-33059
ಸಾಗರ		ಕೋಕ	16899-25289	ಚಾಲಿ	34405-43500
ಬಿಳಿಗೋಟು	6099-27366	ಕೆಂಪುಗೋಟು	20619-22669	ಕೋಕ	10399-20899
ಚಾಲಿ	23501-39388	ರಾಶಿ	43100-49899	ಕೆಂಪುಗೋಟು	20000-27026
ಕೋಕ	6989-25299	ತಟ್ಟಿಬೆಟ್ಟೆ	28900-34319	ರಾಶಿ	40269-55215
ಕೆಂಪುಗೋಟು	26989-34099			ತಟ್ಟಿಬೆಟ್ಟೆ	31179-38600
ರಾಶಿ	27989-60799				

ಅಲಾಸ್ಕ ಸಭೆ: ಮೋದಿಗೆ ಮಾಹಿತಿ ನೀಡಿದ ಪುಟಿನ್

ನವದೆಹಲಿ (ಪಿಟಿಐ): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಸೋಮವಾರ ದೂರವಾಣಿ ಸಂಭಾಷಣೆ ನಡೆಸಿದ್ದಾರೆ.

ಈ ವೇಳೆ ಉಕ್ರೇನ್-ರಷ್ಯಾ ಯುದ್ಧವನ್ನು ಅಂತ್ಯಗೊಳಿಸುವ ಸಲುವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಅಲಾಸ್ಕದಲ್ಲಿ ನಡೆಸಿದ ಸಭೆಯ ಮಾಹಿತಿಯನ್ನೂ ಮೋದಿ ಅವರಿಗೆ ನೀಡಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮೋದಿ ಅವರು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. 'ದೂರವಾಣಿ ಕರೆ ಮೂಲಕ ಸಂಭಾಷಣೆ ನಡೆಸಿ, ಅಲಾಸ್ಕದಲ್ಲಿ ನಡೆದ ಸಭೆ ಕುರಿತಂತೆ ಮಾಹಿತಿ ಹಂಚಿಕೊಂಡಿರುವ ಗೆಳೆಯ ಪುಟಿನ್ ಅವರಿಗೆ ಧನ್ಯವಾದ' ಎಂದಿದ್ದಾರೆ.

ಅಲ್ಲದೇ, 'ಉಕ್ರೇನ್ ಸಂಘರ್ಷವನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವಂತೆ ಭಾರತ ಹಿಂದಿನಿಂದಲೂ ಹೇಳುತ್ತಲೇ ಇದೆ. ಈ ನಿಟ್ಟಿನಲ್ಲಿ ಕೈಗೊಳ್ಳುವ ಕ್ರಮಗಳಿಗೂ ನಮ್ಮ ಬೆಂಬಲ ಇರಲಿದೆ' ಎಂದೂ ಮೋದಿ ಹೇಳಿದ್ದಾರೆ.

ವಾಂಗ್ ಯಿ ಭಾರತಕ್ಕೆ ಭೇಟಿ

ಗಡಿ ವಿಷಯ ಕುರಿತು ವಿಶೇಷ ಪ್ರತಿನಿಧಿಗಳ ಮಾತುಕತೆ ಇಂದು

ವಾಂಗ್ ಯಿ ಅವರನ್ನು ವಿದೇಶಾಂಗ ಸಚಿವಾಲಯದ ಪೂರ್ವ ಏಷ್ಯಾ ವಿಭಾಗದ ಜಂಟಿ ಕಾರ್ಯದರ್ಶಿ ಗೌರಂಗಲಾಲ್ ದಾಸ್ ಸ್ವಾಗತಿಸಿದರು —ಪಿಟಿಐ ಚಿತ್ರ

ಬೀಜಿಂಗ್, ನವದೆಹಲಿ (ಪಿಟಿಐ): ಗಡಿ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಜತೆ ಮಾತುಕತೆ ನಡೆಸುವ ಸಂಬಂಧ ವಾಂಗ್ ಯಿ ಅವರು ಭಾರತಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿದ್ದಾರೆ.

ಸೋಮವಾರ ದೆಹಲಿ ವಿಮಾನ ನಿಲ್ದಾಣದಲ್ಲಿ ವಾಂಗ್ ಯಿ ಅವರನ್ನು ವಿದೇಶಾಂಗ ಸಚಿವಾಲಯದ ಪೂರ್ವ ಏಷ್ಯಾ ವಿಭಾಗದ ಜಂಟಿ ಕಾರ್ಯದರ್ಶಿ ಗೌರಂಗಲಾಲ್ ದಾಸ್ ಸ್ವಾಗತಿಸಿದರು.

ಡೊಭಾಲ್ ಮತ್ತು ವಾಂಗ್ ಯಿ ಅವರು ಗಡಿ ಸಮಸ್ಯೆ ಪರಿಹಾರಕ್ಕಾಗಿ ಎರಡೂ ದೇಶಗಳಿಂದ ನಿಯೋಜನೆಗೊಂಡಿರುವ ವಿಶೇಷ ಪ್ರತಿನಿಧಿಗಳಾಗಿದ್ದಾರೆ. ಇದು 24ನೇ ಸುತ್ತಿನ ಚರ್ಚೆಯಾಗಿದೆ.

23ನೇ ಸುತ್ತಿನ ಮಾತುಕತೆಗಾಗಿ ಡೊಭಾಲ್ ಅವರು ಕಳೆದ ಡಿಸೆಂಬರ್‌ನಲ್ಲಿ ಚೀನಾಕ್ಕೆ ಭೇಟಿ ನೀಡಿ ವಾಂಗ್ ಜೊತೆ ಮಾತುಕತೆ ನಡೆಸಿದ್ದರು. ಇದಕ್ಕೂ ಮುನ್ನ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಕೂಡ ಮಾತುಕತೆಗಳನ್ನು ಮತ್ತೆ ಆರಂಭಿಸಲು ಒಪ್ಪಿಗೆ ಸೂಚಿಸಿದ್ದರು.

ವಾಂಗ್ ಯಿ ಮತ್ತು ಡೊಭಾಲ್ ಅವರು ಮಂಗಳವಾರ ಮಾತುಕತೆ ನಡೆಸಲಿದ್ದಾರೆ. ಗಾಲ್ವನ್ ಕಣಿವೆಯಲ್ಲಿ 2020ರಲ್ಲಿ ನಡೆದ ಘರ್ಷಣೆಯ ನಂತರ ಉಭಯ ದೇಶಗಳ ನಡುವಿನ ಬಾಂಧವ್ಯವನ್ನು ವೃದ್ಧಿಗೊಳಿಸುವ ನಿಟ್ಟಿನಲ್ಲಿ ಮಾತುಕತೆ ನಡೆಯಲಿದೆ ಎಂದು ವಿಶ್ಲೇಷಿಸಲಾಗಿದೆ.

ಗಡಿ ವಿಚಾರಗಳಿಗೆ ಸಂಬಂಧಿಸಿದಂತೆ ಈ ಹಿಂದೆ ನಡೆದ ಮಾತುಕತೆಯ ಸಂದರ್ಭದಲ್ಲಿ ಉಭಯ ರಾಷ್ಟ್ರಗಳು ತೆಗೆದುಕೊಂಡ ನಿರ್ಧಾರದಂತೆ ಕಾರ್ಯನಿರ್ವಹಿಸಲು ಉತ್ಸುಕವಾಗಿರುವುದಾಗಿ ಚೀನಾ ತಿಳಿಸಿದೆ.

ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಚೀನಾಗೆ ತೆರಳಲಿದ್ದಾರೆ. ಪ್ರಧಾನಿ ಅವರ ಪ್ರವಾಸಕ್ಕೆ ಮುನ್ನ ವಾಂಗ್ ಯಿ ಭಾರತಕ್ಕೆ ಭೇಟಿ ನೀಡಿರುವುದು ಮಹತ್ವ ಪಡೆದಿದೆ.

ಪ್ರಧಾನಿ ಮೋದಿ ಅವರನ್ನು ವಾಂಗ್ ಯಿ ಮಂಗಳವಾರ ಸಂಜೆ 5.30ಕ್ಕೆ ಭೇಟಿಯಾಗಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ಮೂಲಗಳು ತಿಳಿಸಿವೆ.

ಈ ವಾರವೇ ಪಾಕ್‌ಗೆ ಭೇಟಿ

ಇಸ್ಲಾಮಾಬಾದ್ (ಪಿಟಿಐ): ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಇದೇ ವಾರದಲ್ಲಿ ಇಸ್ಲಾಮಾಬಾದ್‌ಗೆ ಭೇಟಿ ನೀಡಲಿದ್ದಾರೆ.

ಈ ವೇಳೆ ಉಭಯ ರಾಷ್ಟ್ರಗಳ ನಡುವೆ ನಾಗರಿಕ ಹಾಗೂ ಸೇನಾ ನಾಯಕತ್ವ, ದ್ವಿಪಕ್ಷೀಯ ಒಪ್ಪಂದ, ಪ್ರಾದೇಶಿಕ, ಅಂತರ ರಾಷ್ಟ್ರೀಯ ಬೆಳವಣಿಗೆಗಳ ಕುರಿತು ಚರ್ಚೆ ನಡೆಸಲಿದ್ದಾರೆ.

'ಆಗಸ್ಟ್ 21ರಂದು ಇಸ್ಲಾಮಾಬಾದ್‌ಗೆ ಬಂದಿಳಿಯಲಿದ್ದು, ಎರಡು ದಿನಗಳ ಕಾಲ ಬಹುಮುಖ್ಯವಾದ ವಿಚಾರಗಳ ಕುರಿತು ಚರ್ಚೆ ನಡೆಸಲಿದ್ದಾರೆ' ಎಂದು 'ಎಕ್ಸ್‌ಪ್ರೆಸ್ ಟ್ರಿಬ್ಯೂನ್' ವರದಿ ಮಾಡಿದೆ.

ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಶೃಂಗಸಭೆಯಲ್ಲಿ ಭಾಗವಹಿಸಲು ಈ ತಿಂಗಳ ಅಂತ್ಯದಲ್ಲಿ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಚೀನಾಕ್ಕೆ ಭೇಟಿ ನೀಡಲಿದ್ದಾರೆ. ವಾಂಗ್ ಯಿ ಭೇಟಿ ವೇಳೆ ಈ ಪ್ರವಾಸದ ಕಾರ್ಯಸೂಚಿಯನ್ನು ಅಂತಿಮಗೊಳಿಸಲಿದ್ದಾರೆ ಎಂದು ತಿಳಿಸಿದೆ.

ರಷ್ಯಾ ಯುದ್ಧ ನಿಲ್ಲಿಸಲಿ: ಝೆಲೆನ್‌ಸ್ಕಿ

ವೊಲೊಡಿಮಿರ್ ಝೆಲೆನ್‌ಸ್ಕಿ

ವಾಷಿಂಗ್ಟನ್ (ಎಎಫ್‌ಪಿ): ರಷ್ಯಾ ಆರಂಭಿಸಿರುವ ಯುದ್ಧವನ್ನು ತಾನಾಗಿಯೇ ಕೊನೆಗೊಳಿಸಲೇಬೇಕು ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸೋಮವಾರ ಆಗ್ರಹಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಐರೋಪ್ಯ ಒಕ್ಕೂಟದ ನಾಯಕರ ಜತೆ ಶ್ವೇತ ಭವನದಲ್ಲಿ ಸಭೆಯಲ್ಲಿ ಪಾಲ್ಗೊಳ್ಳಲು ಝೆಲೆನ್‌ಸ್ಕಿ ವಾಷಿಂಗ್ಟನ್‌ಗೆ ಆಗಮಿಸಿದ್ದಾರೆ.

ಈ ವೇಳೆ ಮಾತನಾಡಿರುವ ಅವರು, 'ಉಕ್ರೇನ್ ಪ್ರಜೆಗಳು ತಮ್ಮ ಭೂಮಿ ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ. ಈ ಯುದ್ಧವನ್ನು ಶುರು ಮಾಡಿದ್ದು ರಷ್ಯಾ. ಹೀಗಾಗಿ, ಯುದ್ಧವನ್ನು ಅದೇ ರಾಷ್ಟ್ರ ಕೊನೆಗೊಳಿಸಬೇಕಿದೆ' ಎಂದು ಹೇಳಿದ್ದಾರೆ.

ಉಕ್ರೇನ್-ರಷ್ಯಾ ಯುದ್ಧವನ್ನು ಅಂತ್ಯಗೊಳಿಸುವ ಸಲುವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ನಡುವೆ ನಡೆದ ಅಲಾಸ್ಕದಲ್ಲಿ ಭಾನುವಾರ ಸಭೆ ನಡೆದಿತ್ತು.

ಝೆಲೆನ್‌ಸ್ಕಿಗೆ ಐರೋಪ್ಯ ನಾಯಕರ ಬೆಂಬಲ

ರಷ್ಯಾ-ಉಕ್ರೇನ್ ಯುದ್ಧ ವಿಚಾರವಾಗಿ ಟ್ರಂಪ್ ಜತೆಗೆ ನಡೆಯಲಿರುವ ಸಭೆಗೆ ಝೆಲೆನ್‌ಸ್ಕಿ ಐರೋಪ್ಯ ರಾಷ್ಟ್ರಗಳ ಪ್ರಭಾವಿ ನಾಯಕರ ಜತೆಗೆ ಹಾಜರಾಗಲಿದ್ದಾರೆ.

ಐರೋಪ್ಯ ಒಕ್ಕೂಟದ ಅಧ್ಯಕ್ಷ ಉರ್ಸುಲಾ ವಾನ್ ಡೇರ್ ಲೇಯನ್, ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್, ಬ್ರಿಟಿಷ್ ಪ್ರಧಾನಿ ಕಿಯರ್ ಸ್ಟಾರ್ಮರ್, ಜರ್ಮನ್ ಚಾನ್ಸಲರ್ ಫ್ರೆಡ್ರಿಷ್ ಮೆರ್ಜ್, ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ, ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಚರ್ಚೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಪಾಕಿಸ್ತಾನದಲ್ಲಿ ಭಾರಿ ಮಳೆ ಸಾವಿನ ಸಂಖ್ಯೆ 657ಕ್ಕೆ ಏರಿಕೆ

ಪೇಶಾವರ್ (ಪಿಟಿಐ): ಪಾಕಿಸ್ತಾನದಲ್ಲಿ ಜೂನ್‌ನಿಂದ ಇದುವರೆಗೆ ಸುರಿದ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಸಂಭವಿಸಿದ ಅವಘಡಗಳಲ್ಲಿ ಸಾವಿಗೀಡಾದವರ ಸಂಖ್ಯೆ ಕನಿಷ್ಠ 657ಕ್ಕೆ ಏರಿಕೆಯಾಗಿದೆ. ಕನಿಷ್ಠ 1000ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಆಗಸ್ಟ್ 22ರವರೆಗೂ ಮಳೆಯ ಅಬ್ಬರ ಮುಂದುವರಿಯಲಿದೆ. ಇತ್ತೀಚಿನ ವರ್ಷಗಳಲ್ಲೇ ಇದು ಅತ್ಯಂತ ಹೆಚ್ಚು ಹಾನಿ ಉಂಟುಮಾಡಿದ ಮಳೆಗಾಲ. ಸೆಪ್ಟೆಂಬರ್‌ನಲ್ಲೂ ಮಳೆ ಸುರಿಯಲಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಶೇ 60ರಿಂದ 70ರಷ್ಟು ಹೆಚ್ಚು ಮಳೆಯಾಗಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ವಕ್ತಾರ ತಯ್ಯಬ್ ಶಾಹ ತಿಳಿಸಿದ್ದಾರೆ.

ಜೂನ್ 26ರ ನಂತರ ಮಳೆ ಹಾನಿಯಿಂದ 171 ಮಕ್ಕಳು, 94 ಮಕ್ಕಳು ಸೇರಿದಂತೆ 657 ಮಂದಿ ಸಾವಿಗೀಡಾಗಿದ್ದಾರೆ. ಖೈಬರ್ ಪಖ್ತುಂಕ್ವಾ ಪ್ರಾಂತ್ಯ ಅತಿ ಹೆಚ್ಚು ಹಾನಿ ಎದುರಿಸಿದ್ದು, 390 ಮಂದಿ ಸಾವಿಗೀಡಾಗಿದ್ದಾರೆ. ಪಂಜಾಬ್ ಪ್ರಾಂತ್ಯದಲ್ಲಿ 164 ಮಂದಿ ಸಾವಿಗೀಡಾಗಿದ್ದಾರೆ.

ವೆಲ್ಲೂರು ವಿಐಟಿ ಘಟಿಕೋತ್ಸವ

ವೆಲ್ಲೂರು: ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ಕುಲಪತಿ ಡಾ. ಜಿ. ವಿಶ್ವನಾಥನ್, 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಪರಿವರ್ತಿಸಬೇಕಾದರೆ ಶಿಕ್ಷಣದ ಏಳಿಗೆ ಅಗತ್ಯ ಎಂದು ವಿಐಟಿಯ 40ನೇ ಘಟಿಕೋತ್ಸವದಲ್ಲಿ ಹೇಳಿದರು.

ಭಾರತದ ಜಿಡಿಪಿಯ ಶೇ 6 ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡಬೇಕೆಂಬ ಬೇಡಿಕೆ ಬಗ್ಗೆ ಮಾತನಾಡಿದ ಅವರು, ಪ್ರಸ್ತುತ ಕೇವಲ ಶೇ 3 ರಷ್ಟು ಮಾತ್ರ ಶಿಕ್ಷಣಕ್ಕೆ ಖರ್ಚು ಮಾಡಲಾಗುತ್ತಿದೆ. ಇದರಲ್ಲಿ ರಾಜ್ಯ ಸರ್ಕಾರಗಳು ಶಿಕ್ಷಣ ವೆಚ್ಚದ ಶೇ 75 ರಷ್ಟು ಭರಿಸುತ್ತವೆ, ಉಳಿದ ಹಣ ಕೇಂದ್ರ ಸರ್ಕಾರ ಭರಿಸುತ್ತದೆ. ತಮಿಳುನಾಡು ತನ್ನ ಬಜೆಟ್‌ನ ಶೇ 21 ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡುವ ಮೂಲಕ ರಾಷ್ಟ್ರದಲ್ಲಿ ಮುಂಚೂಣಿಯಲ್ಲಿದೆ ಎಂದರು.

ಮುಖ್ಯ ಅತಿಥಿ ಸುಪ್ರೀಂ ಕೋರ್ಟ್ ನ್ಯಾ. ಆರ್. ಮಹಾದೇವನ್ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು ಪ್ರದಾನ ಮಾಡಿದರು. ವಿಐಟಿಯು ತನ್ನ ಶೈಕ್ಷಣಿಕ, ಸಂಶೋಧನೆ ಮತ್ತು ಆಡಳಿತಾತ್ಮಕ ಕಾರ್ಯಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಸಂಯೋಜಿಸಿರುವುದು ಹಾಗೂ ಕೇಂದ್ರ ಸರ್ಕಾರದ ಉಪಕ್ರಮಗಳನ್ನು ಅಳವಡಿಸಿಕೊಂಡಿರುವುದು ಶ್ಲಾಘನೀಯ. 8,310 ವಿದ್ಯಾರ್ಥಿಗಳು ಪದವಿ ಪೂರ್ವ ಪದವಿಗಳನ್ನು, 2,802 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಗಳನ್ನು ಹಾಗೂ 451 ಜನರಿಗೆ ಡಾಕ್ಟರೇಟ್ ಪದವಿಗಳನ್ನು ನೀಡಲಾಯಿತು. ಹೆಚ್ಚುವರಿಯಾಗಿ, 203 ವಿದ್ಯಾರ್ಥಿಗಳು ತಮ್ಮ ಶ್ರೇಯಾಂಕಕ್ಕಾಗಿ ಗುರುತಿಸಲ್ಪಟ್ಟರೆ, 68 ಅತ್ಯುತ್ತಮ ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದರು. ತಮಿಳುನಾಡು ಪೊಲೀಸ್ ಅಕಾಡೆಮಿ ನಿರ್ದೇಶಕ ಡಿಜಿಪಿ ಸಂದೀಪ್ ರೈ ರಾಥೋಡ್ ಅವರಿಗೆ ವಿಪತ್ತು ನಿರ್ವಹಣೆಯಲ್ಲಿ ಪಿಎಚ್‌ಡಿ ಪದವಿ ನೀಡಲಾಯಿತು.

ಟೈಮ್ಸ್ ಆಫ್ ಇಂಡಿಯಾದ ಸಿಇಒ ಶಿವಕುಮಾರ್ ಸುಂದರಂ ಗೌರವ ಅತಿಥಿಯಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಹಾಸ್ಟೆಲ್‌ಗಳಿಗೆ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಮತ್ತು ಜಗದೀಶ್ ಚಂದ್ರ ಬೋಸ್ ಅವರ ಹೆಸರನ್ನು ಇಡಲಾಯಿತು.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಸಿಇಸಿ ವಿರುದ್ಧ ವಾಗ್ದಂಡನೆಗೆ 'ಇಂಡಿಯಾ' ಚಿಂತನೆ

ಒಂದನೇ ಪುಟದಿಂದ...

ಆಗ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಸಿಇಸಿ ವಿರುದ್ಧ ವಾಗ್ದಂಡನೆ ಮಂಡಿಸುವ ಬಗ್ಗೆ ಸಲಹೆ ನೀಡಿದರು ಎಂದು ಮೂಲಗಳು ತಿಳಿಸಿವೆ.

ಚುನಾವಣಾ ಪ್ರಕ್ರಿಯೆಗಳ ಕುರಿತು ಎತ್ತಿರುವ ಪ್ರಶ್ನೆಗಳಿಗೆ ಆಯೋಗ ಉತ್ತರ ನೀಡಿಲ್ಲ. ಹೀಗಾಗಿ ಆಯೋಗ ವಿರುದ್ಧದ ಪ್ರತಿಭಟನೆಯನ್ನು ಮುಂದುವರಿಸುವ ಅಗತ್ಯವಿದೆ ಎಂದು ಸಂಸದೀಯ ನಾಯಕರು ಅಭಿಪ್ರಾಯಪಟ್ಟರು ಎಂದು ತಿಳಿಸಿವೆ.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಅವರು, 'ಜ್ಞಾನೇಶ್ ಕುಮಾರ್ ಅವರು ಭಾನುವಾರ ನಡೆಸಿದ್ದ ಮಾಧ್ಯಮಗೋಷ್ಠಿಯು ಮುಖ್ಯ ಚುನಾವಣಾ ಆಯುಕ್ತರು ನಡೆಸಿದ ಸುದ್ದಿಗೋಷ್ಠಿಯಂತೆ ಇರಲಿಲ್ಲ. ಬಿಜೆಪಿಯ ರಾಜಕಾರಣಿಯೊಬ್ಬರು ಮಾತನಾಡಿದಂತಿತ್ತು' ಎಂದು ಆರೋಪಿಸಿದರು.

'ಮಾಧ್ಯಮಗಳು ಪ್ರಶ್ನೆ ಕೇಳಿದಾದಗಲೆಲ್ಲಾ ಅವರು ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಅವರಂತೆ ವರ್ತಿಸುತ್ತಿದ್ದರು. ಅವರ ನಡುವಿನ ವ್ಯತ್ಯಾಸ ಏನು' ಎಂದು ಕೇಳಿದರು.

ಸಂವಿಧಾನವು ಪ್ರಜೆಗಳಿಗೆ ನೀಡಿರುವ ಮತದಾನದ ಹಕ್ಕನ್ನು ಆಯೋಗ ರಕ್ಷಿಸಬೇಕು. ಆದರೆ ಅದು ತನ್ನ ಹೊಣೆಗಾರಿಕೆಗಳಿಂದ ನುಣುಚಿಕೊಳ್ಳುತ್ತಿದೆ
ಗೌರವ್ ಗೊಗೋಯ್, ಕಾಂಗ್ರೆಸ್ ನಾಯಕ

ಕಳೆದ ಲೋಕಸಭಾ ಚುನಾವಣೆಯ ಮತದಾರರ ಪಟ್ಟಿಯಲ್ಲಿ ದೋಷಗಳು ಇದ್ದವು ಎನ್ನುವುದಾದರೆ ಲೋಕಸಭೆಯನ್ನೇ ವಿಸರ್ಜಿಸಬೇಕು
ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

ಮತ ಕಳವು ಆರೋಪಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಏಳು ದಿನಗಳ ಒಳಗಾಗಿ ಲಿಖಿತ ಪ್ರಮಾಣಪತ್ರ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಆಧಾರರಹಿತ ಆರೋಪ ಮಾಡಿದ್ದಕ್ಕಾಗಿ ದೇಶದ ಮುಂದೆ ಕ್ಷಮೆಯಾಚಿಸಬೇಕು ಎಂದು ಆಯೋಗ ಭಾನುವಾರ ಆಗ್ರಹಿಸಿದೆ.

ಸಿಇಸಿ ಪದಚ್ಯುತಿ ಹೇಗೆ?

ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಮೂರ್ತಿಗಳಂತೆ ಸಿಇಸಿ ಅವರನ್ನೂ ವಾಗ್ದಂಡನೆ ಪ್ರಕ್ರಿಯೆ ಮೂಲಕ ಮಾತ್ರ ಪದಚ್ಯುತಿ ಮಾಡಬಹುದು.

ಸಂವಿಧಾನದ 325 (5)ರ ಪ್ರಕಾರ, ಮುಖ್ಯ ಚುನಾವಣಾ ಆಯುಕ್ತರ (ಸಿಇಸಿ) ಶಿಫಾರಸಿನ ಮೂಲಕ ಚುನಾವಣಾ ಆಯುಕ್ತರನ್ನು ಪದಚ್ಯುತಗೊಳಿಸಬಹುದು.

ಬಿಜೆಪಿ ವಕ್ತಾರರಂತೆ ಸಿಇಸಿ ವರ್ತನೆ: ವಿಪಕ್ಷ

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಬಿಜೆಪಿ ವಕ್ತಾರರಂತೆ ವರ್ತಿಸುತ್ತಿದ್ದಾರೆ ಎಂದು ವಿರೋಧ ಪಕ್ಷಗಳು ಭಾನುವಾರ ಆರೋಪಿಸಿದವು.

ಕಾಂಗ್ರೆಸ್, ಟಿಎಂಸಿ, ಎಸ್‌ಪಿ, ಡಿಎಂಕೆ, ಆರ್‌ಜೆಡಿ ಸೇರಿದಂತೆ ಎಂಟು ಪ್ರಮುಖ ವಿರೋಧ ಪಕ್ಷಗಳು ಜಂಟಿ ಸುದ್ದಿಗೋಷ್ಠಿ ನಡೆಸಿ ಆಯೋಗದ ವಿರುದ್ಧ ವಾಗ್ದಾಳಿ ನಡೆಸಿದವು.

ಜ್ಞಾನೇಶ್ ಅವರು ಪ್ರಶ್ನೆಗಳಿಗೆ ಉತ್ತರಿಸುವ ಬದಲು ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು. ಎಸ್‌ಐಆರ್ ಮತ್ತು ಮತದಾರರ ಪಟ್ಟಿಯ ಅಕ್ರಮಗಳ ಕುರಿತ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ಅವರು ವಿಫಲರಾಗಿದ್ದಾರೆ ಎಂದು ಹೇಳಿದವು.

ಸಮಾಜವಾದಿ ಪಕ್ಷದ ನಾಯಕ ರಾಮಗೋಪಾಲ್ ಯಾದವ್ ಅವರು, 'ರಾಹುಲ್ ಗಾಂಧಿ ಅವರಿಗೆ ಲಿಖಿತ ಪ್ರಮಾಣಪತ್ರ ಸಲ್ಲಿಸಲು ಸೂಚಿಸಲಾಗಿದೆ. ಆದರೆ 2022ರಲ್ಲಿ 18,000 ಮತದಾರರ ಹೆಸರನ್ನು ಅಳಿಸಿಹಾಕಿರುವ ಬಗ್ಗೆ ಸಮಾಜವಾದಿ ಪಕ್ಷವು ಪ್ರಮಾಣಪತ್ರ ಸಲ್ಲಿಸಿದೆ. ಆದರೆ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಆರೋಪಿಸಿದರು.

'ಕಮೀನೆ' ಗುಂಗಿನಲ್ಲಿ ಪ್ರಿಯಾಂಕಾ

2009ರಲ್ಲಿ ತೆರೆಕಂಡ ವಿಶಾಲ್ ಭಾರದ್ವಾಜ್ ನಿರ್ದೇಶನದ, ಶಾಹಿದ್ ಕಪೂರ್ ನಟನೆಯ 'ಕಮೀನೆ' ಸಿನಿಮಾ ತನ್ನ ವೃತ್ತಿ ಬದುಕಿಗೆ ತಿರುವು ನೀಡಿದ ಸಿನಿಮಾ ಎಂದು ಪ್ರಿಯಾಂಕಾ ಚೋಪ್ರಾ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ. ಚಿತ್ರದಲ್ಲಿ 'ಸ್ವೀಟಿ ಭೋಪೆ' ಪಾತ್ರದಲ್ಲಿ ಪ್ರಿಯಾಂಕಾ ಕಾಣಿಸಿಕೊಂಡಿದ್ದರು.

ದೇವಿಯಾದ 'ಮುಸ್ತಾಫಾ'

• ಅಭಿಲಾಷ್ ಪಿ.ಎಸ್.

ನಟ ಶಿಶಿರ್ ಬೈಕಾಡಿ ಮೈಸೂರಿನ 'ನಟನ' ರಂಗಶಾಲೆಯಲ್ಲಿ ಪಳಗಿ ಸಿನಿಮಾರಂಗಕ್ಕೆ ಹೆಜ್ಜೆ ಇಟ್ಟವರು. 'ಡೇರ್‌ಡೆವಿಲ್ ಮುಸ್ತಾಫಾ' ಚಿತ್ರದಲ್ಲಿ 'ಮುಸ್ತಾಫಾ'ನಾಗಿ ಕಾಣಿಸಿಕೊಂಡು ಕನ್ನಡದ ಪ್ರೇಕ್ಷಕರಿಗೆ ಹತ್ತಿರವಾದವರು. ಆರನೇ ವಯಸ್ಸಿನಲ್ಲೇ ವೇದಿಕೆ ಹತ್ತಿ ನಟನೆ ಆರಂಭಿಸಿದ್ದ ಶಿಶಿರ್ ಸದ್ಯ ಜಡೇಶ್ ಕೆ. ಹಂಪಿ ನಿರ್ದೇಶನದ, ದುನಿಯಾ ವಿಜಯ್ ನಟಿಸಿರುವ 'ಲ್ಯಾಂಡ್ ಲಾರ್ಡ್' ಚಿತ್ರದ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಈ ಸಿನಿಮಾದಲ್ಲಿ ಅವರು 'ದೇವಿ' ಎಂಬ ಪಾತ್ರಕ್ಕೆ ಬಣ್ಣಹಚ್ಚಿದ್ದು ಸಿನಿಮಾ ಹಾಗೂ ಪಾತ್ರದ ಬಗ್ಗೆ ಮಾತಿಗಿಳಿದಾಗ...

'ಮುಸ್ತಾಫಾ'ಗಿಂತ ಭಿನ್ನವಾದ ಪಾತ್ರ

'ಡೇರ್‌ಡೆವಿಲ್ ಮುಸ್ತಾಫಾ'ದಂತಹ ಒಂದು ತಂಡ ಆರಂಭಿಕ ಹೆಜ್ಜೆಯಲ್ಲೇ ದೊರಕಿದ್ದು ನನ್ನ ಅದೃಷ್ಟ. ಸಿನಿಮಾ ಮಾಡುವುದೇ ಒಂದು ಆಸೆ ಆಗಿತ್ತು. ರಂಗಭೂಮಿಯಿಂದ ಬಂದ ನನಗೆ ಸಿನಿಮಾ ಎನ್ನುವ ಭಿನ್ನವಾದ ಮಾಧ್ಯಮ ಎದುರಿತ್ತು. ಈ ಸಿನಿಮಾ ಮೂಲಕ ಹಲವು ವಿಷಯಗಳನ್ನು ಕಲಿತೆ. ಒಂದೊಳ್ಳೆಯ ಸಿನಿಮಾ ಮಾಡಬೇಕು ಎನ್ನುವ ಪ್ರಾಮಾಣಿಕ ಪ್ರಯತ್ನ ನಮ್ಮ ಇಡೀ ತಂಡದಲ್ಲಿತ್ತು. ಧನಂಜಯ ಅವರು ನಮ್ಮ ಸಿನಿಮಾಗೆ ಬೆನ್ನೆಲುಬಾಗಿ ನಿಂತರು. ಒಂದೊಳ್ಳೆಯ ಸಂದೇಶ ಜನರತ್ತ ತಲುಪಲು ಧನಂಜಯ ಅವರ ಬೆಂಬಲ ಬಹಳ ಮುಖ್ಯವಾಯಿತು. ಜನರ ಪ್ರೀತಿ ಈ ಸಿನಿಮಾ ಮೂಲಕ ನನಗೆ ದೊರೆಯಿತು. ಈ ಸಿನಿಮಾ ಬಳಿಕವೇ 'ದೇವಿ' ಪಾತ್ರ ನನಗೆ ದೊರೆಯಿತು. 'ಮುಸ್ತಾಫಾ'ಗಿಂತ ಭಿನ್ನವಾದ ಮಾಸ್ ಜಾನರ್‌ನ, ಯಂಗ್ ರೆಬಲ್ ಪಾತ್ರವಿದು' ಎಂದು ಮಾತು ಆರಂಭಿಸಿದರು ಶಿಶಿರ್.

'ನನ್ನೊಳಗಿನ ನಟನ ಸಾಮರ್ಥ್ಯವನ್ನು ಗುರುತಿಸಿ ಕರೆದು ಅವಕಾಶ ನೀಡಿದವರು ಜಡೇಶ್ ಹಾಗೂ ದುನಿಯಾ ವಿಜಯ್ ಅವರು. ಒಂದು ಕಮರ್ಷಿಯಲ್ ಸಿನಿಮಾವನ್ನು ಜನ ಹೇಗೆ ಸ್ವೀಕರಿಸುತ್ತಾರೆ ಹಾಗೂ ವಿಜಯ್ ಅವರ ಸಿನಿಮಾಗಳಿಗೆ ಇರುವ ನಿರೀಕ್ಷೆ ಎಲ್ಲದರ ಅರಿವು ನನಗಿತ್ತು. ಇಂತಹ ಸಿನಿಮಾದಲ್ಲಿ ಒಂದು ಪಾತ್ರವನ್ನು ಈತ ಸಮರ್ಥವಾಗಿ ನಿಭಾಯಿಸಬಹುದು ಎನ್ನುವ ನಂಬಿಕೆ ಅವರಲ್ಲಿತ್ತು. ಇದು ನನಗೂ ಖುಷಿ ನೀಡಿತು. 'ಜಾಕಿ', 'ರಾಮಾಚಾರಿ'ಯಂತಹ ಸಿನಿಮಾಗಳು ನನ್ನಲ್ಲಿ ಕುತೂಹಲ ಸೃಷ್ಟಿಸಿದ ಚಿತ್ರಗಳು. ಈ ಮಾದರಿಯ ಪಾತ್ರದಲ್ಲಿ ಇದೀಗ ನಾನೂ ಕಾಣಿಸಿಕೊಂಡಿದ್ದೇನೆ. ಬಹಳ ದೊಡ್ಡ ಸ್ಕೇಲ್‌ನಲ್ಲಿ ಈ ಸಿನಿಮಾ ಮೂಡಿಬಂದಿದ್ದು, ಮಣ್ಣಿನ ಕಥೆಯನ್ನು ಚಿತ್ರವು ಹೊಂದಿದೆ. 'ದೇವಿ' ಪಾತ್ರದ ಬರವಣಿಗೆಯೂ ಬಹಳ ಗಟ್ಟಿಯಾಗಿದೆ' ಎಂದರು.

ರಿತನ್ಯಾಗೆ ಜೋಡಿ

ದುನಿಯಾ ವಿಜಯ್ ಅವರ ಪುತ್ರಿ ರಿತನ್ಯಾ ವಿಜಯ್ ಈ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. 'ರಿತನ್ಯಾ ಅವರು ಈ ಸಿನಿಮಾ ಮೂಲಕ ಚಿತ್ರರಂಗಕ್ಕೆ ಹೆಜ್ಜೆ ಇಡುತ್ತಿದ್ದು, ನಾನು ಅವರ ಜೋಡಿಯಾಗಿ ನಟಿಸಿದ್ದೇನೆ. ಒಂದು ಲವ್ ಟ್ರ್ಯಾಕ್ ಸಿನಿಮಾದಲ್ಲಿದೆ. 'ದೇವಿ' ಎಲ್ಲವನ್ನೂ ಪ್ರಶ್ನಿಸುವ ವಿಶಿಷ್ಟ ಯುವಕ. ಯಂಗ್ ರೆಬೆಲಿಯನ್ ಪಾತ್ರವಿದು. ಪಾತ್ರಕ್ಕೆ ತೆರೆ ಅವಧಿಯೂ ಹೆಚ್ಚು ಇದ್ದು ವಿಜಯ್ ಅವರ ಜೊತೆಗೂ ತೆರೆ ಹಂಚಿಕೊಂಡಿದ್ದೇನೆ. 'ದೇವಿ' ಪಾತ್ರ ನಿಭಾಯಿಸಲು ಜಡೇಶ್ ಅವರ ಜೊತೆ ಚರ್ಚೆ ನಿರಂತರವಾಗಿತ್ತು. ಜೊತೆಗೆ ಹಳ್ಳಿ ಕಥೆಗಳುಳ್ಳ ಪುಸ್ತಕ ಓದುತ್ತಿದ್ದೆ. ಅದರೊಟ್ಟಿಗೆ ಮುಖ್ಯವಾಗಿ ಕೋಟಿಗಾನಹಳ್ಳಿ ರಾಮಯ್ಯ ಅವರ ಕೋಲಾರ ಭಾಗದ ಹಳ್ಳಿಯ ಕಥೆಗಳನ್ನು ಓದಿದ್ದೆ. ಇವೆಲ್ಲವೂ ನಮ್ಮ ಮಣ್ಣಿನ ಕಥೆಗಳು. ಆ ಭಾಗದ ಭಾಷಾ ಶೈಲಿಯನ್ನೂ ಯುಟ್ಯೂಬ್ ಮುಖಾಂತರ ಕಲಿತೆ' ಎಂದರು ಶಿಶಿರ್.

'ಶಶಾಂಕ್ ಸೋಗಾಲ್ ನಿರ್ದೇಶನದ, ಧನಂಜಯ ನಟನೆಯ 'ಜಿಂಗೋ'ದಲ್ಲಿ ನಟಿಸಬೇಕು ಎನ್ನುವ ಆಸೆ ಇದೆ. ಇದನ್ನು ಶಶಾಂಕ್ ಜೊತೆಗೂ ಹೇಳಿಕೊಂಡಿದ್ದೇನೆ' ಎನ್ನುತ್ತಾ ಮಾತಿಗೆ ವಿರಾಮವಿತ್ತರು ಶಿಶಿರ್.

ಲ್ಯಾಂಡ್‌ಲಾರ್ಡ್
ಶಿಶಿರ್ ಬೈಕಾಡಿ

"ಒಬ್ಬರು ಬಹುಭಾಷಾ ನಟನೊಂದಿಗೆ ಸಿನಿಮಾ ಮಾಡುತ್ತಿದ್ದು, ಇದರ ಶೂಟಿಂಗ್ ಪೂರ್ಣಗೊಂಡಿದೆ. ಇದನ್ನು ಹೊಸ ನಿರ್ದೇಶಕರೊಬ್ಬರು ನಿರ್ದೇಶಿಸುತ್ತಿದ್ದಾರೆ. ಶೀರ್ಷಿಕೆಯಿನ್ನೂ ಘೋಷಣೆಯಾಗಿಲ್ಲ. ತಮಿಳು ಸಿನಿಮಾವೊಂದನ್ನು ಒಪ್ಪಿಕೊಂಡಿದ್ದೇನೆ. ಜೊತೆಗೆ 2–3 ಸ್ಕ್ರಿಪ್ಟ್‌ಗಳು ಮಾತುಕತೆ ಹಂತದಲ್ಲಿವೆ."
ಶಿಶಿರ್ ಬೈಕಾಡಿ, ನಟ

ಮೋಕ್ಷಿತ ಪೈ ಮಿಡಲ್‌ಕ್ಲಾಸ್ ರಾಮಾಯಣ

ಧನುಷ್ ಗೌಡ ನಿರ್ದೇಶನದ, ಮೋಕ್ಷಿತಾ ಪೈ ಹಾಗೂ ವಿನು ಗೌಡ ನಟನೆಯ 'ಮಿಡಲ್‌ಕ್ಲಾಸ್ ರಾಮಾಯಣ' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ.

ಶೀರ್ಷಿಕೆಯೇ ಹೇಳುವಂತೆ ಇದೊಂದು ಮಧ್ಯಮ ವರ್ಗದ ಕುಟುಂಬದ ಕಥೆ. ಅಂಜನಾದ್ರಿ ಪ್ರೊಡಕ್ಷನ್ ಹಾಗೂ ವಾವ್ ಸ್ಟುಡಿಯೋಸ್ ಅಡಿಯಲ್ಲಿ ಜಯರಾಮ್ ಗಂಗಪ್ಪನಹಳ್ಳಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. 'ಇದು ನನ್ನ ಮೊದಲ ಸಿನಿಮಾ. ಧಾರಾವಾಹಿಯಲ್ಲಿ ನಟಿಸಿರುವ ಹಾಗೂ ರಿಯಾಲಿಟಿ ಶೋಗಳಲ್ಲಿ ಭಾಗವಹಿಸಿರುವ ನನಗೆ ಸಿನಿಮಾ ಲೋಕ ಹೊಸದು. ಒಂದು ಸಿನಿಮಾ ವಿಭಾಗದ ಯಾವುದು ಬಹಳ ಮುಖ್ಯ. ಸದ್ಯದಲ್ಲೇ ನಮ್ಮ 'ಮಿಡಲ್‌ಕ್ಲಾಸ್ ರಾಮಾಯಣ' ಸಿನಿಮಾ ರಿಲೀಸ್ ಆಗಲಿದೆ. ಅಚ್ಚುಕಟ್ಟಾಗಿ ಸಿನಿಮಾವನ್ನು ಮಾಡಿದ್ದೇವೆ' ಎನ್ನುತ್ತಾರೆ ಮೋಕ್ಷಿತಾ.

ಧನುಷ್ ಗೌಡ ಮಾತನಾಡಿ, 'ಇದು ನನ್ನ ಎರಡನೇ ಸಿನಿಮಾ. ಮೊದಲು 'ರೆಬಲ್ ಹುಡುಗರು' ಎಂಬ ಸಿನಿಮಾ ನಿರ್ದೇಶನ ಮಾಡಿದ್ದೆ. 'ಮಿಡಲ್‌ಕ್ಲಾಸ್ ರಾಮಾಯಣ' ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಸಿದ್ಧವಾಗಿದೆ. ಮೊದಲು ಕನ್ನಡ ಭಾಷೆಯಲ್ಲಿ ಸಿನಿಮಾ ರಿಲೀಸ್ ಮಾಡುತ್ತೇವೆ. ಸಿನಿಮಾದ ಕಥೆ ಸಿದ್ಧಸೂತ್ರದಲ್ಲಿ ಇಲ್ಲ. ಕಮರ್ಷಿಯಲ್ ಹಾಡು, ಫೈಟ್ ಸಿನಿಮಾದಲ್ಲಿ ಇಲ್ಲ. ಕಥೆ ತುಂಬಾ ಮನರಂಜನಾತ್ಮಕವಾಗಿದೆ' ಎಂದರು.

ಅಲೆಕ್ಸ್ ಸಂಗೀತ ನಿರ್ದೇಶನ, ವಿನೋದ್ ಲೋಕಣ್ಣನವರ್ ಛಾಯಾಚಿತ್ರಗ್ರಹಣ, ಉದಯ್‌ಕುಮಾರ್ ಹಾಗೂ ಧನುಷ್ ಗೌಡ ಸಂಭಾಷಣೆ ಮತ್ತು ಚಿತ್ರಕಥೆ ಸಿನಿಮಾಗಿದೆ. ಎಸ್. ನಾರಾಯಣ್, ವೀಣಾ ಸುಂದರ್, ಮಜಾಭಾರತ ಜಗ್ಗಪ್ಪ, ಯುಕ್ತ ಪರ್ವಿ, ಬಲ ರಾಜವಾಡಿ, ವಿಜಯ್, ಶೋಭರಾಜ್, ಕುಶಾಲ್ ಸಂತೋಷ್, ಹುಲಿ ಕಾರ್ತಿಕ್ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ.

ಆ.23ಕ್ಕೆ 'ದಿ ಗ್ರಫೀಟಿ' ಸಾಕ್ಷ್ಯಚಿತ್ರ ಬಿಡುಗಡೆ



ಸೂಕ್ತವಾದ ನಿರ್ವಹಣೆ, ಸ್ಥಿಂದ ಇಲ್ಲದ ಪಾರಂಪರಿಕ ಸ್ಥಳಗಳಲ್ಲಿರುವ ಕಟ್ಟಡ, ಕಲ್ಲುಗಳು, ಮರಗಳಲ್ಲಿ ಪ್ರವಾಸಿಗರು ತಮ್ಮ ಹೆಸರುಗಳನ್ನು ಗೀಚುವುದು, ಗ್ರಫೀಟಿ ಬಿಡಿಸುವುದು ಸಾಮಾನ್ಯ ಎಂಬಂತಾಗಿದೆ. ಇಂತಹ ಸ್ಥಳಗಳ ರಕ್ಷಣೆ ಏಕೆ ಮುಖ್ಯ ಎನ್ನುವ ಕುರಿತ ಸಾಕ್ಷ್ಯಚಿತ್ರವೊಂದು ಆ.23ರಂದು ಆನ್‌ಲೈನ್ ಮೂಲಕ ಬಿಡುಗಡೆಯಾಗುತ್ತಿದೆ.

ಮೇಲುಕೋಟೆಯಲ್ಲಿರುವ 'ಧನುಷ್ಕೋಟಿ'ಗೆ ಒಂದು ಕಥೆಯಿದೆ. ಶ್ರೀರಾಮ ವನವಾಸದ ದಿನಗಳಲ್ಲಿ ಸೀತೆ ನೀರು ಬೇಕೆಂದು ಕೇಳಿದಾಗ ಬಾಣ ಬಿಟ್ಟು ನೀರು ಬರುವಂತೆ ಮಾಡಿದ ಸ್ಥಳವನ್ನು 'ಧನುಷ್ಕೋಟಿ' ಎಂದು ಕರೆಯುತ್ತಾರೆ. ಇಲ್ಲಿನ ಕಲ್ಲುಗಳ ಮೇಲೆ ನೂರಾರು ಪ್ರವಾಸಿಗರು ಹೆಸರು ಬರೆದು ಆ ಸ್ಥಳದ ನೈಸರ್ಗಿಕ ಸೌಂದರ್ಯ ಕೆಡಿಸಿದ್ದರು. ಈ ಕಲ್ಲುಗಳನ್ನು ಸ್ವಚ್ಛಗೊಳಿಸಿ ಆ ಜಾಗದ ಪ್ರಾಮುಖ್ಯತೆ ಮತ್ತು ನೈಸರ್ಗಿಕ ಸೌಂದರ್ಯವನ್ನು ಕಾಪಾಡಲು ಸಜ್ಜಾಗಿದ್ದು ಮೊಹಮ್ಮದ್ ಸುಹೈಬ್, ರಶ್ಮಿ ಗೌರಿ, ಗೌತಮ್ ವಿ ಹಾಗೂ ಪ್ರಣವ್ ಜೆ.ಭಟ್ ನೇತೃತ್ವದ 'ಅಫೆಕ್ಟನೇಟ್ ಹ್ಯಾಂಡ್ಸ್', ಲಕ್ಷ್ಮೀ ಗೌಡ ಮತ್ತು ಸುರಭಿ ಮಂಜುನಾಥ್ ನೇತೃತ್ವದ 'ಎಕ್ಸ್‌ಪ್ಲೋರ್ ನೇಷನ್' ಹಾಗೂ ಮೇಲುಕೋಟೆ ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ ಅವರ 'ಪುಟ್ಟಣ್ಣಯ್ಯ ಫೌಂಡೇಶನ್'. 'ಪಾಚಿಕ್ಕ್ ವಿರಾಸತ್'ನಡಿ ಸುಮಾರು 25 ಜನ ಐಟಿ ಉದ್ಯೋಗಿಗಳ ತಂಡವು ಜೊತೆಗೂಡಿ ಕಾಸ್ಟಿಕ್ ಸೋಡಾ ಬಳಸಿ ಕಲ್ಲುಗಳನ್ನು ಸಂಪೂರ್ಣ ಸ್ವಚ್ಛಗೊಳಿಸಿತು. ಈ ಕೆಲಸವನ್ನು ಚಿತ್ರೀಕರಿಸಿ ಅದಕ್ಕೆ ಸಾಕ್ಷ್ಯಚಿತ್ರದ ರೂಪ ನೀಡಿತು.

'ರಶ್ಮಿ ಜೀವ ಎನ್ನುವವರು ಈ 12 ನಿಮಿಷಗಳ ಸಾಕ್ಷ್ಯಚಿತ್ರವನ್ನು ನಿರ್ದೇಶಿಸಿದ್ದಾರೆ. ಆ ಸ್ಥಳಕ್ಕೆ ಯಾವುದೇ ಚ್ಯುತಿ ಬರದಂತೆ ನಾವು ಆ ಕಲ್ಲನ್ನು ಸ್ವಚ್ಛಗೊಳಿಸಿದ್ದೇವೆ. ಧನುಷ್ಕೋಟಿಯಂತೆ ಗ್ರಫೀಟಿ ಇರುವ ಸ್ಥಳಗಳು ವಿಶ್ವದಾದ್ಯಂತ ಹಲವು ಇವೆ. ಇವುಗಳನ್ನು ನೋಡಿದಾಗ ಇದನ್ನು ಸ್ವಚ್ಛಗೊಳಿಸುವ ಜವಾಬ್ದಾರಿ ನಮ್ಮದಲ್ಲ ಎಂದುಕೊಳ್ಳುವವರೇ ಹೆಚ್ಚು. ಆದರೆ ಸಣ್ಣ ತಂಡವೊಂದು ದೊಡ್ಡ ಬದಲಾವಣೆಯನ್ನು ತರಲು ಸಾಧ್ಯ ಎನ್ನುವುದನ್ನು ನಾವು ಈ ಸಾಕ್ಷ್ಯಚಿತ್ರದಲ್ಲಿ ತೋರಿಸಿದ್ದೇವೆ. ಈಗಾಗಲೇ ಎರಡು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರಶಸ್ತಿಯನ್ನು ಈ ಸಾಕ್ಷ್ಯಚಿತ್ರ ಪಡೆದಿದೆ' ಎಂದರು 'ಅಫೆಕ್ಟನೇಟ್ ಹ್ಯಾಂಡ್ಸ್'ನ ಮೊಹಮ್ಮದ್ ಸುಹೈಬ್.

ಸ್ವಚ್ಛಗೊಂಡ ಧನುಷ್ಕೋಟಿ

65 ಲಕ್ಷ ಜನರ ಹೆಸರು ಪ್ರಕಟಿಸಿದ ಇ.ಸಿ

ಸುಪ್ರೀಂ ಕೋರ್ಟ್ ನಿರ್ದೇಶನದ ಬೆನ್ನಲ್ಲೇ ಮತದಾರರ ಹೆಸರು, ವಿವರ ಬಹಿರಂಗ

ಪಟ್ನಾ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿ ಮತದಾರರ ಕರಡು ಪಟ್ಟಿಯಿಂದ ಅಳಿಸಿಹಾಕಲಾಗಿದ್ದ 65 ಲಕ್ಷ ಜನರ ಹೆಸರುಗಳನ್ನು ಚುನಾವಣಾ ಆಯೋಗ ಸೋಮವಾರ ಸಾರ್ವಜನಿಕವಾಗಿ ಪ್ರಕಟಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರಡು ಪಟ್ಟಿಯಿಂದ ಹೊರಗುಳಿದಿರುವ ಮತದಾರರ ಹೆಸರು ಮತ್ತು ವಿವರಗಳನ್ನು ಆಗಸ್ಟ್ 19ರ ಒಳಗಾಗಿ ಪ್ರಕಟಿಸುವಂತೆ ಮತ್ತು ತನ್ನ ನಿರ್ದೇಶನದ ಪಾಲನೆಗೆ ಸಂಬಂಧಿಸಿದ ವರದಿಯನ್ನು ಆಗಸ್ಟ್ 22ರಂದು ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಇದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

'ಗೈರುಹಾಜರಾದವರು, ಸ್ಥಳಾಂತರಗೊಂಡವರು ಮತ್ತು ಮೃತಪಟ್ಟಿರುವ ಮತದಾರರ ಹೆಸರುಗಳನ್ನು ಮತಗಟ್ಟೆಗಳಲ್ಲಿ ಪ್ರಕಟಿಸಲಾಗಿದೆ. ಈ ಪಟ್ಟಿಯನ್ನು ಆನ್‌ಲೈನ್‌ನಲ್ಲೂ ಪ್ರಕಟಿಸುವ ಸಾಧ್ಯತೆ ಇದೆ' ಎಂದು ಅವರು ತಿಳಿಸಿದ್ದಾರೆ.

ಬಿಹಾರದ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಪ್ರಕಾರ, ಈ ಪಟ್ಟಿಯನ್ನು ರೋಹತಾಸ್, ಬೇಗುಸರಾಯ್, ಅರವಲ್, ಶಿವನ್, ಭೋಜಪುರ ಮತ್ತು ಇತರ ಮತಗಟ್ಟೆಗಳಲ್ಲಿ ಪ್ರದರ್ಶಿಸಲಾಗಿದೆ.

ಚುನಾವಣಾ ಆಯೋಗವು ಬಿಹಾರದಲ್ಲಿ ಎಸ್‌ಐಆರ್ ನಡೆಸಿದ ನಂತರ ಸಿದ್ಧಪಡಿಸಿರುವ ಮತದಾರರ ಕರಡು ಪಟ್ಟಿಯಿಂದ ಸುಮಾರು 65 ಲಕ್ಷ ಜನರ ಹೆಸರುಗಳನ್ನು ಕೈಬಿಟ್ಟಿದೆ. ರಾಜ್ಯದಲ್ಲಿ 7.89 ಕೋಟಿ ಮತದಾರರಿದ್ದರು. ಪರಿಷ್ಕರಣೆ ಬಳಿಕ ಈ ಸಂಖ್ಯೆ ಸುಮಾರು 7.24 ಕೋಟಿಗೆ ಇಳಿಕೆಯಾಗಿದೆ.

ಮುಖ್ಯಾಂಶಗಳು

- ಗೈರಾದವರು, ಸ್ಥಳಾಂತರಗೊಂಡವರು ಮತ್ತು ಮೃತಪಟ್ಟಿರುವ ಜನರ ಹೆಸರು ಪ್ರಕಟ
- ಆನ್‌ಲೈನ್‌ನಲ್ಲೂ ಪ್ರಕಟಿಸುವ ಸಾಧ್ಯತೆ

ಆಯೋಗ ತಿಳಿಸಿದ್ದು...

22.34 ಲಕ್ಷ
ಮೃತಪಟ್ಟ ಮತದಾರರು

36.38 ಲಕ್ಷ
ಶಾಶ್ವತವಾಗಿ ಸ್ಥಳಾಂತರಗೊಂಡವರು ಅಥವಾ ತಮ್ಮ ವಿಳಾಸದಲ್ಲಿ ಪತ್ತೆಯಾಗದವರು

7.01 ಲಕ್ಷ
ಒಂದಕ್ಕಿಂತ ಹೆಚ್ಚು ಕಡೆಗಳಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದವರು

'ಮೊದಲು ಇ.ಸಿ ಪ್ರಮಾಣಪತ್ರ ಸಲ್ಲಿಸಲಿ'

ಗಯಾಜೀ (ಬಿಹಾರ) (ಪಿಟಿಐ): 'ಮತದಾರರ ಪಟ್ಟಿ ದೋಷರಹಿತವಾಗಿದೆ ಎಂದು ಚುನಾವಣಾ ಆಯೋಗವು (ಇ.ಸಿ) ಸುಪ್ರೀಂ ಕೋರ್ಟ್‌ನಲ್ಲಿ ಮೊದಲು ಪ್ರಮಾಣಪತ್ರ ಸಲ್ಲಿಸಲಿ. ಹಾಗಾದಲ್ಲಿ, ಹಾಲಿ ಮತದಾರರ ಪಟ್ಟಿಯಲ್ಲಿ ಲೋಪಗಳಿವೆ ಎಂದು ನಾವು ಪ್ರಮಾಣಪತ್ರ ಸಲ್ಲಿಸುತ್ತೇವೆ' ಎನ್ನುವ ಮೂಲಕ ಕಾಂಗ್ರೆಸ್ ಪಕ್ಷವು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರಿಗೆ ತಿರುಗೇಟು ನೀಡಿದೆ.

ನವದೆಹಲಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜ್ಞಾನೇಶ್ ಕುಮಾರ್ ಅವರು 'ಬಿಜೆಪಿ ವಕ್ತಾರ'ರಂತೆ ಮಾತನಾಡಿದ್ದಾರೆ ಎಂದೂ ಪಕ್ಷ ಸೋಮವಾರ ಟೀಕಿಸಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮತದಾರರ ಪಟ್ಟಿಯ ಅಕ್ರಮಗಳ ಕುರಿತ ತಮ್ಮ ಆರೋಪಗಳಿಗೆ ಏಳು ದಿನಗಳ ಒಳಗಾಗಿ ಲಿಖಿತ ಪ್ರಮಾಣಪತ್ರ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಅವರ ಆರೋಪವನ್ನು ಆಧಾರರಹಿತ ಎಂದು ಪರಿಗಣಿಸಲಾಗುವುದು ಎಂದು ಚುನಾವಣಾ ಆಯೋಗ ಭಾನುವಾರ ಹೇಳಿತ್ತು. ಅದರ ಬೆನ್ನಲ್ಲೇ ಕಾಂಗ್ರೆಸ್ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ.

ಇಲ್ಲಿ ಆಯೋಜಿಸಿದ್ದ 'ಮತದಾರನ ಅಧಿಕಾರ ಯಾತ್ರೆ' ವೇಳೆ ಪಕ್ಷದ ನಾಯಕ ಕನ್ಹಯ್ಯ ಕುಮಾರ್ ಜತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಸಿಸಿ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರ, 'ನಾವು ಈ ಯಾತ್ರೆ ಆರಂಭಿಸುವ ಸಂದರ್ಭದಲ್ಲಿ ಜ್ಞಾನೇಶ್ ಕುಮಾರ್ ಅವರಿಗೆ ಪತ್ರಿಕಾಗೋಷ್ಠಿ ನಡೆಸಬೇಕಾಯಿತು. ಸಿಇಸಿ ಇದ್ದಾರೆ ಎಂಬುದು ನಮಗೆ ಇದರಿಂದ ತಿಳಿಯಿತು' ಎಂದು ಹೇಳಿದರು.

'ಇಷ್ಟು ದಿನ ಅನುರಾಗ್ ಠಾಕೂರ್, ಸಂಬಿತ್ ಪಾತ್ರಾ ಮುಂತಾದವರು ಪ್ರತಿಕ್ರಿಯಿಸುತ್ತಿದ್ದರು. ಕೊನೆಗೂ ಸಿಇಸಿ ಪ್ರತಿಕ್ರಿಯಿಸುವುದನ್ನು ನಾವು ನೋಡಿದ್ದೇವೆ' ಎಂದರು.

ಕನ್ಹಯ್ಯ ಕುಮಾರ್ ಮಾತನಾಡಿ, 'ಮತದಾರರ ಪಟ್ಟಿಯಲ್ಲಿ ಯಾವುದೇ ದೋಷ ಇಲ್ಲ ಎಂದು ಹೇಳುತ್ತಿದ್ದ ಆಯೋಗ ಇದೀಗ ಪಟ್ಟಿಯಲ್ಲಿ ಇರುವ ಲೋಪಗಳನ್ನು ಸರಿಪಡಿಸಲು ವಿಶೇಷ ಸಮಗ್ರ ಪರಿಷ್ಕರಣೆ ಕೈಗೆತ್ತಿಕೊಳ್ಳಲಾಗಿದೆ ಎನ್ನುತ್ತಿದೆ. ಅಂದರೆ, ಮತದಾರರ ಪಟ್ಟಿಯಲ್ಲಿ ಲೋಪ ಇರುವುದನ್ನು ಆಯೋಗ ಒಪ್ಪಿಕೊಂಡಿದೆ' ಎಂದು ಹೇಳಿದರು.

'ರಾಹುಲ್ ಗಾಂಧಿ ಅವರು ಮತದಾರರ ಪಟ್ಟಿಯಲ್ಲಿನ ಅಕ್ರಮಗಳ ಬಗ್ಗೆ ಪುರಾವೆ ನೀಡಿದಾಗ, ಚುನಾವಣಾ ಆಯೋಗವು ಪ್ರಮಾಣಪತ್ರ ಸಲ್ಲಿಸುವಂತೆ ಕೇಳಿಕೊಂಡಿತು. ಮುಖ್ಯ ಚುನಾವಣಾ ಆಯುಕ್ತರು ಬಿಜೆಪಿ ವಕ್ತಾರರ ರೀತಿಯಲ್ಲಿ ಮಾತನಾಡುತ್ತಿರುವಂತೆ ತೋರುತ್ತಿದೆ. ನಾವು ಮುಂದಿಟ್ಟಿರುವ ಪ್ರಶ್ನೆಗಳಿಗೆ ಪತ್ರಿಕಾಗೋಷ್ಠಿಯಲ್ಲಿ ಅವರು ಯಾವುದೇ ಉತ್ತರ ನೀಡಿಲ್ಲ' ಎಂದು ದೂರಿದರು.

ರಾಜಧಾನಿಯಲ್ಲೇ ಅತಿ ಹೆಚ್ಚು ಜನರು ಕರಡು ಪಟ್ಟಿಯಿಂದ ಹೊರಕ್ಕೆ

ನಗರ	ಪಟ್ಟಿಯಿಂದ ಕೈಬಿಟ್ಟವರು
ಪಟ್ನಾ	3.95 ಲಕ್ಷ
ಮಧುಬನಿ	3.52 ಲಕ್ಷ
ಪೂರ್ವ ಚಂಪಾರಣ	3.16 ಲಕ್ಷ
ಗೋಪಾಲಗಂಜ್	3.10 ಲಕ್ಷ
ಸಮಸ್ತೀಪುರ	2.83 ಲಕ್ಷ
ಮುಜಾಫ್ಫರ್‌ಪುರ	2.82 ಲಕ್ಷ
ಪೂರ್ಣಿಯಾ	2.739 ಲಕ್ಷ
ಸರಣ್	2.732 ಲಕ್ಷ
ಸೀತಾಮಢಿ	2.44 ಲಕ್ಷ
ಕಟಿಹಾರ	1.84 ಲಕ್ಷ
ಕಿಶನ್‌ಗಂಜ್	1.45 ಲಕ್ಷ
ಖಗಡಿಯಾ	79,551
ಮುಂಗೇರ್	74,916
ಅರವಲ್	30,180
ಶಿವಹರ್	28,166
ಶೇಖ್‌ಪುರ	26,256

"ಎಸ್‌ಐಆರ್ ವೇಳೆ ಸಲ್ಲಿಸಿರುವ ದಾಖಲೆಗಳಲ್ಲಿ ಸಣ್ಣಪುಟ್ಟ ಲೋಪಗಳನ್ನು ಎತ್ತಿ ತೋರಿಸಿ ಚುನಾವಣಾಧಿಕಾರಿಗಳು ಬಿಹಾರದ ಜನರಿಗೆ ಕಿರುಕುಳ ನೀಡುತ್ತಿದ್ದಾರೆ"
ಕನ್ಹಯ್ಯ ಕುಮಾರ್
ಕಾಂಗ್ರೆಸ್ ಮುಖಂಡ

ಕೃಷ್ಣ ಜನ್ಮಾಷ್ಟಮಿ ವೇಳೆ ವಿದ್ಯುತ್ ತಗುಲಿ ಆರು ಸಾವು

ಹೈದರಾಬಾದ್: ಇಲ್ಲಿನ ರಾಮನಾಥಪುರದ ಗೋಖಲೆ ನಗರದಲ್ಲಿ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಭಾನುವಾರ ರಾತ್ರಿ ನಡೆಯುತ್ತಿದ್ದ ಕೃಷ್ಣನ ಮೂರ್ತಿಯ ಮೆರವಣಿಗೆಯಲ್ಲಿ ರಥವು ವಿದ್ಯುತ್ ತಂತಿಗೆ ತಗುಲಿದ ಪರಿಣಾಮ ವಿದ್ಯುತ್ ಪ್ರವಹಿಸಿ ಆರು ಮಂದಿ ಸಾವಿಗೀಡಾಗಿದ್ದಾರೆ. ನಾಲ್ಕು ಮಂದಿಗೆ ಗಂಭೀರ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುಮಾರು 10 ಮಂದಿ ರಥ ಎಳೆಯುತ್ತಿದ್ದರು. ರಸ್ತೆ ಮೇಲೆ ಹಾದು ಹೋಗಿದ್ದ ವಿದ್ಯುತ್ ತಂತಿಗೆ ರಥ ತಾಗಿದ್ದರಿಂದ ವಿದ್ಯುತ್ ಪ್ರವಹಿಸಿತ್ತು. ಸ್ಥಳದಲ್ಲೇ ಐವರು ಮೃತಪಟ್ಟರೆ, ಒಬ್ಬರು ಆಸ್ಪತ್ರೆಯಲ್ಲಿ ಸಾವಿಗೀಡಾದರು.

ಮುಂಬೈನಲ್ಲಿ ಭಾರಿ ಮಳೆ ರೆಡ್ ಅಲರ್ಟ್ ಘೋಷಣೆ

ಮುಂಬೈ (ಪಿಟಿಐ): ಮುಂಬೈನಲ್ಲಿ ಭಾರಿ ಮಳೆಯಾಗುತ್ತಿದ್ದು, ಆರು ಮಕ್ಕಳು ಮತ್ತು ಇಬ್ಬರು ಸಿಬ್ಬಂದಿಯಿದ್ದ ಶಾಲಾ ವಾಹನವೊಂದು ಜಲಾವೃತಗೊಂಡಿದ್ದ ರಸ್ತೆಯಲ್ಲಿ ಸೋಮವಾರ ಸಿಲುಕಿಕೊಂಡಿತ್ತು.

ಮಾಟುಂಗಾ ಪ್ರದೇಶದಲ್ಲಿ ಜಲಾವೃತಗೊಂಡಿದ್ದ ರಸ್ತೆಯಲ್ಲಿ ಖಾಸಗಿ ಶಾಲಾ ವಾಹನವೊಂದು ಅರ್ಧ ಗಂಟೆಗೂ ಹೆಚ್ಚು ಕಾಲ ಸಿಲುಕಿತ್ತು. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ತೆರಳಿದ ಪೊಲೀಸರು ಅವರನ್ನು ರಕ್ಷಿಸಿ, ಮಾಟುಂಗಾ ಪೊಲೀಸ್ ಠಾಣೆಗೆ ಕರೆದೊಯ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಚಾರಕ್ಕೆ ಅಡ್ಡಿ: ನಿರಂತರವಾಗಿ ಮೂರು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಮುಂಬೈನ ಕೆಲವು ತಗ್ಗು ಪ್ರದೇಶಗಳು ಮತ್ತು ರಸ್ತೆಗಳು ಜಲಾವೃತಗೊಂಡಿವೆ.

ಬಂದರು ಮಾರ್ಗದ ಪ್ರದೇಶಗಳಲ್ಲಿ ಹಳಿಗಳ ಮೇಲೆ ನೀರು ನಿಂತಿದ್ದರಿಂದ ಮುಂಬೈನ ಸ್ಥಳೀಯ ರೈಲುಗಳು 10 ನಿಮಿಷ ತಡವಾಗಿ ಸಂಚಾರ ನಡೆಸಿವೆ. 9 ವಿಮಾನ ಗಳು ನಿಗದಿತ ಸಮಯಕ್ಕೆ ಭೂಸ್ಪರ್ಶ ಮಾಡಿಲ್ಲ. ಒಂದು ವಿಮಾನದ ಮಾರ್ಗ ಬದಲಾವಣೆ ಮಾಡಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರೆಡ್ ಅಲರ್ಟ್' ಘೋಷಣೆ: ಭಾರತೀಯ ಹವಾಮಾನ ಇಲಾಖೆಯು ಮುಂಬೈ, ಠಾಣೆ ಮತ್ತು ರಾಯಗಢ ಜಿಲ್ಲೆಗಳಿಗೆ ಮಂಗಳವಾರ, ಬುಧವಾರ 'ರೆಡ್ ಅಲರ್ಟ್' ಘೋಷಿಸಿದೆ.

SASTRA ಡೀಮ್ಡ್ ವಿವಿ: 39ನೇ ಘಟಿಕೋತ್ಸವ

ಚೆನ್ನೈ: ಪ್ರಾಚೀನ ಜ್ಞಾನ ಮತ್ತು ಆಧುನಿಕ ತಂತ್ರಜ್ಞಾನದ ಮಿಶ್ರಣದೊಂದಿಗೆ ಪದವೀಧರರು ತಮ್ಮ ವೃತ್ತಿಜೀವನದ ಸಾಮರ್ಥ್ಯ ಬಳಸಿಕೊಂಡು ಉದಯೋನ್ಮುಖ ಭಾರತದ ಕಲ್ಪನೆ ಜೊತೆ ದೊಡ್ಡ ಮಟ್ಟದಲ್ಲಿ ಯೋಚಿಸುವ ಸಮಯ ಒಟ್ಟಿಗೆ ಬಂದಿದೆ ಎಂದು ದಾಲ್ಮಿಯಾ ಭಾರತ್ ಲಿ.ನ ಎಂಡಿ ಮತ್ತು ಸಿಇಒ ಪುನೀತ್ ದಾಲ್ಮಿಯಾ ತಿಳಿಸಿದರು.

SASTRA ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ನಡೆದ 39ನೇ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು "ಭಾರತವು 4ನೇ ಅತಿದೊಡ್ಡ ಆರ್ಥಿಕತೆಯಾಗಿ ಪರಿವರ್ತನೆಗೊಳ್ಳುತ್ತಿರುವುದು ಬೆಳವಣಿಗೆ ಮತ್ತು ಸುಸ್ಥಿರ ಅಭಿವೃದ್ಧಿಯ ಸಂಕೇತವಾಗಿದೆ. ದೇಶವನ್ನು ಆರ್ಥಿಕ ಹಾಗೂ ಮಾನವ ಬಂಡವಾಳದಿಂದ ಸಮೃದ್ಧಗೊಳಿಸಬೇಕಾಗಿದೆ. ಆತ್ಮನಿರ್ಭರ ಭಾರತದೊಂದಿಗೆ ಕೃಷಿ ಮತ್ತು ಸೇವೆಗಳ ಜೊತೆ ಐಟಿ, ಮೂಲಸೌಕರ್ಯ, ಉತ್ಪಾದನೆ, ಸೆಮಿಕಂಡಕ್ಟರ್ ಹಾಗೂ ಎಲೆಕ್ಟ್ರಾನಿಕ್ಸ್ ವಲಯದ ಬೆಳವಣಿಗೆಯನ್ನು ಜೋಡಿಸುವ ಅಗತ್ಯದ ಬಗ್ಗೆ ಒತ್ತಿ ಹೇಳಿದರು.

ಪದವಿ ಪ್ರದಾನ: 4,200ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್, ವಿಜ್ಞಾನ, ನಿರ್ವಹಣೆ, ಕಾನೂನು, ಶಿಕ್ಷಣ ಮತ್ತು ಕಲೆಗಳಲ್ಲಿ ಪದವಿ, ಸ್ನಾತಕೋತ್ತರ ಮತ್ತು ಪಿಎಚ್‌ಡಿ ಪದವಿಗಳನ್ನು ಪ್ರದಾನ ಮಾಡಲಾಯಿತು. ಸ್ಥಾಪಕ-ಕುಲಪತಿಗಳಾದ ಡಾ.ಜಯಂತ್ ಶರ್ಮಾ, ಡಾ.ಎಸ್. ಹರ್ಷವರ್ಧನ್ ಮತ್ತು ಡಾ. ಅಮೃತ್ ಭಾರ್ಗವ್ ಅವರಿಗೆ ಎಂಜಿನಿಯರಿಂಗ್, ವಿಜ್ಞಾನ ಮತ್ತು ನಾನ್ ಎಸ್‌ಟಿಎಂ ವಿಭಾಗಗಳಿಗೆ 'ಅತ್ಯುತ್ತಮ ಡಾಕ್ಟರೇಟ್ ಪ್ರಬಂಧ' ಪ್ರಶಸ್ತಿಗಳನ್ನು ಕ್ರಮವಾಗಿ ನೀಡಲಾಯಿತು. ಬಿ.ಟೆಕ್. ಪದವೀಧರ ಪ್ರಶಸ್ತಿಗಳು ಅಧಪ್ಪನ್ ವಿಷ್ಣು (ಸಿಎಸ್‌ಇ) ಮತ್ತು ಲಲಿತಾ ತೇಜಸ್ವಿ (ಸಿಎಸ್ - ಎಐ & ಡಿಎಸ್) ಅವರು ಪಡೆದರು.

ಕುಲಪತಿ ಪ್ರೊ.ಆರ್. ಸೇತುರಾಮನ್ ಘಟಿಕೋತ್ಸವದ ಮತ್ತು ಶಾಸ್ತ್ರದ ಉಪಕುಲಪತಿ ಡಾ.ಎಸ್. ವೈದ್ಯಸುಬ್ರಮಣ್ಯಂ ಇತರರು ಉಪಸ್ಥಿತರಿದ್ದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಎಐಎಫ್‌ಎಫ್–ಐಎಸ್‌ಡಿಎಲ್ ನಡುವೆ ಮಾಸ್ಟರ್ ರೈಟ್ಸ್ ಒಪ್ಪಂದ ನವೀಕರಣ ಕಗ್ಗಂಟು

ಐಎಸ್‌ಎಲ್ ಬಿಕ್ಕಟ್ಟು: ವಿಚಾರಣೆಗೆ 'ಸುಪ್ರೀಂ' ಅಸ್ತು



ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಮತ್ತು ಐಎಸ್‌ಎಲ್ ಆಯೋಜಕರಾದ ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ (ಐಎಸ್‌ಡಿಎಲ್) ನಡುವೆ ಮಾಸ್ಟರ್ ರೈಟ್ಸ್ ಒಪ್ಪಂದ ನವೀಕರಣವಾಗದೇ ಉಂಟಾಗಿರುವ ಬಿಕ್ಕಟ್ಟಿಗೆ ಸಂಬಂಧಿಸಿದ ಪ್ರಕರಣವನ್ನು ಇದೇ 22ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಕೊಂಡಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಎ.ಎಸ್.ಚಂದೂರ್ಕರ್ ಅವರನ್ನು ಒಳಗೊಂಡ ಪೀಠ ಅರ್ಜಿಯ ವಿಚಾರಣೆಗೆ ಒಪ್ಪಿಕೊಂಡಿತು.

ಐಎಸ್‌ಎಲ್ ಬಿಕ್ಕಟ್ಟನ್ನು ಶೀಘ್ರದಲ್ಲೇ ಬಗೆಹರಿಸದಿದ್ದರೆ ಕ್ಲಬ್ ಕಾರ್ಯನಿರ್ವಹಣೆ ಸ್ಥಗಿತಗೊಳಿಸುವುದಾಗಿ 11 ಕ್ಲಬ್‌ಗಳು ಇತ್ತೀಚೆಗೆ ಫೆಡರೇಷನ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರಿಗೆ ಬರೆದ ಪತ್ರದಲ್ಲಿ ಕಟು ಎಚ್ಚರಿಕೆ ನೀಡಿದ್ದವು. ಈ ಬಿಕ್ಕಟ್ಟಿನಿಂದಾಗಿ ಭಾರತದ ವೃತ್ತಿಪರ ಫುಟ್‌ಬಾಲ್ ವ್ಯವಸ್ಥೆ ದುರ್ಬಲಗೊಂಡಿದೆ ಎಂದಿದ್ದವು.

ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಗೋಪಾಲ್ ಶಂಕರನಾರಾಯಣನ್ ಅವರು ಐಎಸ್‌ಎಲ್ ನಡೆಸುವ ಮೂಲಕ ಎಫ್‌ಎಸ್‌ಡಿಎಲ್ ಈ ಹಿಂದಿನ ಒಪ್ಪಂದಕ್ಕೆ ಬದ್ಧವಾಗಿರಬೇಕಿತ್ತು. ಒಂದೊಮ್ಮೆ ಅದು ಒಪ್ಪದಿದ್ದಲ್ಲಿ ಫೆಡರೇಷನ್ ಒಪ್ಪಂದವನ್ನು ಕೊನೆಗೊಳಿಸಿ ಹೊಸದಾಗಿ ಟಂಡರ್ ಕರೆಯಬೇಕಿತ್ತು. ಇದಾಗದಿದ್ದಲ್ಲಿ ಆಟಗಾರರು ಸಂಕಷ್ಟಕ್ಕೆ ಒಳಗಾಗುತ್ತಾರೆ. ಪದೇ ಪದೇ ವೇತನ ಪಾವತಿ ಮಾಡದೇ ಹೋದಲ್ಲಿ ಫಿಫಾ, ಫೆಡರೇಷನ್ ಮೇಲೆ ನಿರ್ಬಂಧವನ್ನೂ ಹೇರಬಹುದಾಗಿದೆ' ಎಂದು ಅವರು ನ್ಯಾಯಾಲಯದ ಗಮನಕ್ಕೆ ತಂದರು.

ಆಟಗಾರರನ್ನು ಬಿಟ್ಟುಕೊಡಲು ಮೋಹನ್ ಬಾಗನ್ ನಕಾರ

ಕೋಲ್ಕತ್ತ (ಪಿಟಿಐ): ಈಗಾಗಲೇ ಆರಂಭವಾಗಿರುವ ರಾಷ್ಟ್ರೀಯ ಶಿಬಿರಕ್ಕೆ ತನ್ನ ಆಟಗಾರರನ್ನು ಬಿಟ್ಟುಕೊಡಲು ಐಎಸ್‌ಎಲ್ ಚಾಂಪಿಯನ್ ಮೋಹನ್ ಬಾಗನ್ ತಂಡ ಸೋಮವಾರ ನಿರಾಕರಿಸಿದೆ. ಇದೇ ವೇಳೆ, ಆಟಗಾರರ ಹಿತಾಸಕ್ತಿಯನ್ನು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಕಡೆಗಣಿಸುತ್ತಿದೆ ಎಂದೂ ಕೋಲ್ಕತ್ತದ ಕ್ಲಬ್ ದೂಷಿಸಿದೆ.

ಮುಂದಿನ ತಿಂಗಳ ಸಿಎಎಫ್‌ಎ ನೇಷನ್ಸ್ ಕಪ್‌ಗೆ ಸಜ್ಜಾಗಲು ಆಗಸ್ಟ್ 15 ರಂದು ಬೆಂಗಳೂರಿನಲ್ಲಿ ಸಿದ್ಧತಾ ಶಿಬಿರ ಆರಂಭವಾಗಿದೆ. ಆದರೆ ಮೋಹನ್ ಬಾಗನ್‌ನ ಏಳು ಆಟಗಾರರು ಸೇರಿದಂತೆ 13 ಆಟಗಾರರು ಶಿಬಿರಕ್ಕೆ ಇನ್ನೂ ಸೇರ್ಪಡೆಗೊಂಡಿಲ್ಲ.

ಈ ಮೊದಲು ಡ್ಯುರಾಂಡ್ ಕಪ್ ಟೂರ್ನಿಯ ಕಾರಣ ಕ್ಲಬ್‌ಗಳು ಆಟಗಾರರನ್ನು ಕಳುಹಿಸಿರಲಿಲ್ಲ ಎಂದು ಭಾವಿಸಲಾಗಿತ್ತು. ಆದರೆ ಭಾನುವಾರ ಡುರಾಂಡ್ ಕಪ್ ಕ್ವಾರ್ಟರ್ ಫೈನಲ್‌ನಲ್ಲಿ ಈಸ್ಟ್ ಬೆಂಗಾಲ್‌ಗೆ 1–2 ರಿಂದ ಸೋತ ಬಳಿಕವೂ ಬಾಗನ್ ತನ್ನ ಆಟಗಾರರನ್ನು ಕಳುಹಿಸಲು ಹಿಂದೇಟು ಹಾಕಿದೆ.

ಸೆಪ್ಟೆಂಬರ್ 16ರಂದು ಸಾಲ್ಟ್‌ಲೇಕ್‌ನಲ್ಲಿ ತುರ್ಕಮೆನಿಸ್ತಾನದ ಅಹಲ್ ಎಫ್‌ಸಿ ವಿರುದ್ಧ ನಡೆಯಲಿರುವ ಎಎಫ್‌ಸಿ ಚಾಂಪಿಯನ್ಸ್ ಲೀಗ್ ಎರಡನೇ ಸ್ಥರದ ಟೂರ್ನಿಯಲ್ಲಿ ತಂಡ ಆಡಲು ಸಜ್ಜಾಗುತ್ತಿದ್ದೇವೆ ಎಂದು ಕ್ಲಬ್ ಹೇಳಿದೆ.

'ಪ್ರತಿ ಸಲ ನಮ್ಮ ಕ್ಲಬ್‌ನ ಕೆಲವು ಆಟಗಾರರನ್ನು ರಾಷ್ಟ್ರೀಯ ತಂಡಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಅವರಲ್ಲಿ 2–3 ಮಂದಿ ಗಾಯಾಳಾಗಿ ಮರಳುತ್ತಾರೆ. ನಂತರ ಫೆಡರೇಷನ್ ಅವರನ್ನು ವಿಚಾರಿಸುವುದೇ ಇಲ್ಲ' ಎಂದು ಬಾಗನ್ ತಂಡದ ಅಧಿಕಾರಿಯೊಬ್ಬರು ಎಐಎಫ್‌ಎಫ್ ವಿರುದ್ಧ ಕಿಡಿಕಾರಿದರು.

'ನಾಯಕ ಸುಭಾಷಿಶ್ ಬೋಸ್ ಅವರು ಬಾಂಗ್ಲಾದೇಶ ವಿರುದ್ಧ ಏಷ್ಯನ್ ಕಪ್ ಕ್ವಾಲಿಫೈಯರ್ಸ್ ಪಂದ್ಯದ ವೇಳೆ ಗಾಯಗೊಂಡಿದ್ದರು. ಈಗ ಅವರು ಚೇತರಿಸಿಕೊಳ್ಳುತ್ತಿದ್ದಾರೆ. ಈ ಇಡೀ ಋತುವಿನಲ್ಲಿ ನಮಗೆ ಅವರ ಸೇವೆ ಸಿಗಲಿಲ್ಲ. ಇಷ್ಟೆಲ್ಲಾ ಆಗಿದ್ದರೂ ಫೆಡರೇಷನ್ ಒಮ್ಮೆಯೂ ಅವರಿಗೆ ಕರೆ ಮಾಡಿ ಯೋಗಕ್ಷೇಮ ವಿಚಾರಿಸಲಿಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಶಿಬಿರಕ್ಕೆ ಸೇರ್ಪಡೆಗೊಳ್ಳದ 'ಮರೈನರ್' ತಂಡದ ಆಟಗಾರರೆಂದರೆ– ಅನಿರುದ್ಧ ಥಾಪಾ, ದೀಪಕ್ ತಂಗ್ರಿ, ಲಾಲೆಂಗ್‌ಮವಿಯಾ, ಲಿಸ್ಟನ್ ಕೊಲಾಕೊ, ಮನ್ವೀರ್ ಸಿಂಗ್, ಸಹಾಲ್ ಅಬ್ದುಲ್ ಸಮದ್ ಮತ್ತು ವಿಶಾಲ್ ಖೈತ್. ಇವರಲ್ಲಿ ಮನ್ವೀರ್ ಅವರು ಗಾಯಾಳಾಗಿದ್ದಾರೆ.

'ರಾಷ್ಟ್ರೀಯ ಹಿತಾಸಕ್ತಿ' ಗಮನದಲ್ಲಿಟ್ಟುಕೊಂಡು, ಖಾಲಿದ್ ಜಮೀಲ್ ಅವರನ್ನು ಕರ್ತವ್ಯದಿಂದ ಮುಕ್ತಿಗೊಳಿಸಿದ್ದಕ್ಕೆ ಜಮ್‌ಶೆಡ್‌ಪುರ ಎಫ್‌ಸಿಗೆ ಧನ್ಯವಾದ ಸಲ್ಲಿಸಿರುವ ಎಐಎಫ್‌ಎಫ್, 'ಸಹಕಾರ' ನೀಡುವಂತೆ ಎಲ್ಲ ಕ್ಲಬ್‌ಗಳಿಗೆ ಮನವಿ ಮಾಡಿದೆ. ಇದರ ಮಧ್ಯೆಯೇ ಬಾಗನ್ ತಂಡ ಸಿಟ್ಟು ಹೊರಹಾಕಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

ಏಷ್ಯಾ ಕಪ್: ಗಿಲ್ ಆಯ್ಕೆಯ ಸಂದಿಗ್ಧ

ಬಿಸಿಸಿಐ ಆಯ್ಕೆ ಸಮಿತಿ ಸಭೆ ಇಂದು
• ಟಿ20 ತಂಡದಲ್ಲಿ ಶುಭಮನ್‌ಗೆ ಅವಕಾಶ ಸಾಧ್ಯತೆ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಏಷ್ಯಾ ಕಪ್ ಟೂರ್ನಿಗೆ 15 ಮಂದಿಯ ಭಾರತ ತಂಡವನ್ನು ಆಯ್ಕೆ ಮಾಡಲು ರಾಷ್ಟ್ರೀಯ ಆಯ್ಕೆ ಸಮಿತಿ ಮಂಗಳವಾರ ಸಭೆ ಸೇರಲಿದೆ. ಆದರೆ ಈಗಾಗಲೇ ಅತ್ಯುತ್ತಮ ಎನಿಸಿರುವ ಟಿ20 ತಂಡದಲ್ಲಿ ಪ್ರತಿಭಾವಂತ ಬ್ಯಾಟರ್ ಶುಭಮನ್ ಗಿಲ್ ಅವರಿಗೆ ಅವಕಾಶ ಕಲ್ಪಿಸುವುದು ಆಯ್ಕೆ ಸಮಿತಿ ಮುಂದಿರುವ ದೊಡ್ಡ ಸವಾಲಾಗಿದೆ.

ಯುಎಇಯಲ್ಲಿ ಸೆ. 9 ರಿಂದ 28ರವರೆಗೆ ಏಷ್ಯಾ ಕಪ್ ನಡೆಯಲಿದೆ. ಇತ್ತೀಚೆಗೆ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಅಮೋಘವಾಗಿ ಆಡಿದ್ದ ನಾಯಕ ಗಿಲ್ ಅವರು ಈ ಹಿಂದಿನ ಟಿ20 ತಂಡದಲ್ಲಿರಲಿಲ್ಲ.

ಈಗಾಗಲೇ ಸುಸಜ್ಜಿತವಾಗಿರುವ ತಂಡದಲ್ಲಿ ಗಿಲ್ ಅವರಿಗೆ ಸ್ಥಾನ ಹೊಂದಿಸುವುದಾದರೂ ಹೇಗೆ ಎಂಬುದು ಅಜಿತ್ ಅಗರಕರ್ ನೇತೃತ್ವದ ಸಮಿತಿ ಮುಂದಿರುವ ಪ್ರಶ್ನೆಯಾಗಿದೆ.

ಟಿ20 ತಂಡದಲ್ಲಿ ಯುವ ಆಟಗಾರರ ಪಡೆಯಿದೆ. ಪ್ರತಿಯೊಂದು ಸ್ಥಾನಕ್ಕೂ ಮೂರರಿಂದ ನಾಲ್ಕು ಮಂದಿ ಪೈಪೋಟಿಯಲ್ಲಿರುವ ಪರಿಸ್ಥಿತಿಯಲ್ಲಿ ಆಯ್ಕೆಗಾರರು ಸಂದಿಗ್ಧ ಎದುರಿಸುತ್ತಿದ್ದಾರೆ.

ಮೊದಲ ಮೂರು ಸ್ಥಾನಗಳಿಗೆ ಅಂತಹದೇ ಸಾಮರ್ಥ್ಯ ಹೊಂದಿರುವ ಆಟಗಾರರು ಲಭ್ಯವಿದ್ದಾರೆ. ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ ಅವರು ಈ ಹಿಂದಿನ ಋತುವಿನಲ್ಲಿ ಅಮೋಘ ಆಟವಾಡಿದ್ದಾರೆ. ಅವರನ್ನು ಮೀರಿಸದಿದ್ದರೂ, ಗಿಲ್, ಯಶಸ್ವಿ ಜೈಸ್ವಾಲ್ ಮತ್ತು ಸಾಯಿ ಸುದರ್ಶನ್ (ಐಪಿಎಲ್ ಆರೇಂಜ್ ಕ್ಯಾಪ್ ವಿನ್ನರ್) ಅವರೂ ಸಾಮರ್ಥ್ಯದಲ್ಲಿ ಕಡಿಮೆಯೇನಿಲ್ಲ.

ಬೌಲಿಂಗ್‌ನಲ್ಲಿ ಒಂದು ಸ್ಥಾನಕ್ಕಾಗಿ ಕುಲದೀಪ್ ಯಾದವ್, ವರುಣ್ ಚಕ್ರವರ್ತಿ ಮತ್ತು ರವಿ ಬಿಷ್ಣೋಯಿ ನಡುವೆ ಪೈಪೋಟಿಯಿದೆ. ಅಷ್ಟೇ ಕೌಶಲ ಹೊಂದಿರುವ ಯಜುವೇಂದ್ರ ಚಾಹಲ್ ದೀರ್ಘಕಾಲದಿಂದ ಅವಕೃಪೆಗೆ ಒಳಗಾಗಿದ್ದಾರೆ. ಆಯ್ಕೆಗಾರರಿಗೆ ಅವಕಾಶವಿರುವುದು 15 ಮಂದಿಯ ಆಯ್ಕೆಗಷ್ಟೇ. ಹೀಗಾಗಿ ಅವರ ನಿರ್ಧಾರದ ಮೇಲೆ ಕುತೂಹಲದ ಕಣ್ಣಿದೆ.

ದೊಡ್ಡ ಹೆಸರಿನ ಅಥವಾ ವರ್ಚಸ್ಸಿನ ಇನ್ನೊಬ್ಬರನ್ನು ಸೇರ್ಪಡೆಗೊಳಿಸಲು ಈಗಾಗಲೇ 11ರ ತಂಡದಲ್ಲಿ ನಿಯಮಿತವಾಗಿ ಆಡುವವರನ್ನು ಕೈಬಿಡುವುದು ನ್ಯಾಯೋಚಿತವಲ್ಲ ಎಂಬುದು ಚಿಂತಕರ ಚಾವಡಿಯಲ್ಲಿರುವ ಸದಸ್ಯರೊಬ್ಬರ ಅಭಿಪ್ರಾಯ.

ಸರ್ವಮಾದರಿಗೆ ಒಬ್ಬರೇ ನಾಯಕರಿದ್ದರೆ ಸೂಕ್ತ ಎಂಬ ಚಿಂತನೆಯೂ ಇದೆ. ಈ ನಿಟ್ಟಿನಲ್ಲಿ ಈಗ ಗಿಲ್ ಹೆಸರು ಚಾಲ್ತಿಯಲ್ಲಿದೆ.

ಸೂರ್ಯಕುಮಾರ್ ಯಾದವ್ ನೇತೃತ್ವದ ಟಿ20 ತಂಡ ಶೇ 85ರಷ್ಟು ಯಶಸ್ಸಿನ ದಾಖಲೆ ಹೊಂದಿದೆ. ಆಡಿದ ಕೊನೆಯ 20 ಪಂದ್ಯಗಳಲ್ಲಿ 17ರಲ್ಲಿ ಗೆಲುವಿನ ಸವಿಯುಂಡಿದೆ. ಈ ತಂಡದಲ್ಲಿ ಗಿಲ್ ಮತ್ತು ಜೈಸ್ವಾಲ್ ಇರಲಿಲ್ಲ.

ಆದರೆ ಟೆಸ್ಟ್ ತಂಡದಲ್ಲಿ ಕಾಯಂ ಆಗುವ ಮೊದಲು ಗಿಲ್ ಮತ್ತು ಜೈಸ್ವಾಲ್ ಅವರು ಟಿ20 ತಂಡದಲ್ಲೂ ಆಡಿದ್ದರು. ಐಪಿಎಲ್‌ನಲ್ಲೂ ತಾಕತ್ತು ಪ್ರದರ್ಶಿಸಿದ್ದರು. ಗಿಲ್ ಅವರು ಹಿಂದೊಮ್ಮೆ ಟಿ20 ತಂಡದ ಉಪನಾಯಕರೂ ಆಗಿದ್ದರು.

ಗಿಲ್ ಅವರನ್ನು ಸೇರ್ಪಡೆಗೊಳಿಸಿದರೆ ಅವರಿಗೆ ಆಡುವ ತಂಡದಲ್ಲಿ ಸ್ಥಾನ ನೀಡಬೇಕಾಗುತ್ತದೆ. ಹಾಗಾದಲ್ಲಿ ಸಂಜು, ಅಭಿಷೇಕ್ ಮತ್ತು ತಿಲಕ್ ಇವರಲ್ಲಿ ಒಬ್ಬರು ಸ್ಥಾನ ತೆರವುಗೊಳಿಸಬೇಕಾಗುತ್ತದೆ. ರಿಂಕು ಸಿಂಗ್ ಸ್ಥಾನವೂ ಅಲುಗಾಡುತ್ತಿದೆ.

ವೇಗದ ಬೌಲಿಂಗ್ ವಿಭಾಗದಲ್ಲಿ ಹಾರ್ದಿಕ್ ಪಾಂಡ್ಯ ಜೊತೆ ಜಸ್‌ಪ್ರೀತ್ ಬೂಮ್ರಾ ಮತ್ತು ಅರ್ಷದೀಪ್ ಅವರು ಸಹಜ ಆಯ್ಕೆ ಎನಿಸಲಿದ್ದಾರೆ. ಮೀಸಲು ವೇಗಿಯ ಸ್ಥಾನಕ್ಕೆ ಹರ್ಷಿತ್ ರಾಣಾ, ಕನ್ನಡಿಗ ಪ್ರಸಿದ್ಧ ಕೃಷ್ಣ ಮತ್ತು ಮೊಹಮ್ಮದ್ ಸಿರಾಜ್ ನಡುವೆ ಪೈಪೋಟಿಯಿದೆ.

ಸ್ಪಿನ್ನರ್‌ಗಳ ಆಯ್ಕೆ ಸವಾಲು: ಅಕ್ಷರ್ ಪಟೇಲ್, ವರುಣ್ ಚಕ್ರವರ್ತಿ ಮತ್ತು ಕುಲದೀಪ್ ಸ್ಪಿನ್ ವಿಭಾಗದಲ್ಲಿ ಮೊದಲ ಮೂರು ಆಯ್ಕೆಯಾಗಿದ್ದಾರೆ. ಆದರೆ ಕೋಚ್ ಗಂಭೀರ್ ಅವರು ಆಲ್‌ರೌಂಡರ್‌ಗೆ ಒತ್ತು ನೀಡುವ ಕಾರಣ ವಾಷಿಂಗ್ಟನ್ ಸುಂದರ್ ಅವರಿಗೂ ಮಣೆಹಾಕಬಹುದು.

ಎರಡನೇ ವಿಕೆಟ್ ಕೀಪರ್ ಸ್ಥಾನಕ್ಕೆ ಜಿತೇಶ್ ಶರ್ಮಾ ಮತ್ತು ಧ್ರುವ್ ಜುರೇಲ್ ನಡುವೆ ರೇಸ್ ಇದೆ. ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಕೆಳಕ್ರಮಾಂಕದಲ್ಲಿ ಆಡಿದ್ದ ಜಿತೇಶ್, ಕೆಲವು ಪಂದ್ಯಗಳಲ್ಲಿ ಫಿನಿಷರ್ ಪಾತ್ರದಲ್ಲಿ ಮಿಂಚಿದ್ದರು.

ಶುಭಮನ್ ಗಿಲ್

ಮಹಿಳಾ ಏಕದಿನ ವಿಶ್ವಕಪ್: ಆಯ್ಕೆ ಸಮಿತಿ ಸಭೆ ಇಂದು

ಮುಂಬೈ (ಪಿಟಿಐ): ಭಾರತದ ಆತಿಥ್ಯದಲ್ಲಿ ನಡೆಯಲಿರುವ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಗೆ ತಂಡವನ್ನು ಆಯ್ಕೆ ಮಾಡಲು ನೀತು ಡೇವಿಡ್ ನೇತೃತ್ವದ ಸಮಿತಿ ಮಂಗಳವಾರ ಇಲ್ಲಿ ಸಭೆ ಸೇರಲಿದೆ. ಸ್ಫೋಟಕ ಬ್ಯಾಟರ್ ಶಫಾಲಿ ವರ್ಮಾ ಮತ್ತು ವೇಗಿ ರೇಣುಕಾ ಠಾಕೂರ್ ಅವರಿಗೆ ತಂಡದಲ್ಲಿ ಸ್ಥಾನ ಕಲ್ಪಿಸುವುದು ಸಮಿತಿ ಮುಂದಿರುವ ಸವಾಲಾಗಿದೆ.

ಎಂಟು ತಂಡಗಳನ್ನು ಒಳಗೊಂಡ ಏಕದಿನ ವಿಶ್ವಕಪ್ ಟೂರ್ನಿ ಸೆ.30ರಿಂದ ನಡೆಯಲಿದೆ. ಏಪ್ರಿಲ್‌ನಲ್ಲಿ ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾ ಒಳಗೊಂಡ ತ್ರಿಕೋನ ಏಕದಿನ ಸರಣಿಯಲ್ಲಿ ಭಾರತ ಚಾಂಪಿಯನ್ ಆಗಿತ್ತು. ಈಚೆಗೆ ಇಂಗ್ಲೆಂಡ್ ವಿರುದ್ಧದ ಏಕದಿನ ಮತ್ತು ಟಿ20 ಸರಣಿಯನ್ನು ಗೆದ್ದುಕೊಂಡು ಚಾರಿತ್ರಿಕ ಸಾಧನೆ ಮೆರೆದಿದೆ. ಸತತ ಸರಣಿಗಳನ್ನು ಗೆದ್ದಿರುವ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ತಂಡವು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

ಇಂಗ್ಲೆಂಡ್‌ನಲ್ಲಿ (3, 47, 31 ಮತ್ತು 75) ಸ್ಥಿರ ಪ್ರದರ್ಶನ ನೀಡಿದ್ದ ಶಫಾಲಿ, ಆಸ್ಟ್ರೇಲಿಯಾ ಎ ತಂಡದ ವಿರುದ್ಧ (3, 3 ಮತ್ತು 41 ರನ್) ನಿರೀಕ್ಷಿತ ಪ್ರದರ್ಶನ ನೀಡಿರಲಿಲ್ಲ. ಹೀಗಾಗಿ ಅವರ ಆಯ್ಕೆಯ ಬಗ್ಗೆ ಕುತೂಹಲವಿದೆ. ಗಾಯದ ಕಾರಣದಿಂದಾಗಿ ಇಂಗ್ಲೆಂಡ್ ಪ್ರವಾಸವನ್ನು ತಪ್ಪಿಸಿಕೊಂಡಿದ್ದ ಅನುಭವಿ ವೇಗಿ ರೇಣುಕಾ ಅವರಿಗೆ ತಂಡದಲ್ಲಿ ಮತ್ತೆ ಅವಕಾಶ ಸಿಗುವ ಸಾಧ್ಯತೆಯಿದೆ.

ಏಷ್ಯನ್ ಶೂಟಿಂಗ್: ಕಪಿಲ್ ಬೈಂಸಲಾಗೆ ಚಿನ್ನದ ಪದಕ

ಭಾರತದ ಪುರುಷರ ತಂಡಕ್ಕೆ ಬೆಳ್ಳಿ

ಶೈಮ್ಕೆಂಟ್ (ಕಜಕಸ್ತಾನ) (ಪಿಟಿಐ): ಭಾರತದ ಪುರುಷರ ಸೀನಿಯರ್ ತಂಡವು ಇಲ್ಲಿ ಸೋಮವಾರ ಆರಂಭವಾದ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ (ರೈಫಲ್/ಪಿಸ್ತೂಲ್/ಶಾಟ್‌ಗನ್) 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿತು. ಆದರೆ, ಅನ್ಮೋಲ್ ಜೈನ್ ಅವರು ವೈಯಕ್ತಿಕ ಸ್ಪರ್ಧೆಯಲ್ಲಿ ನಿರಾಸೆ ಮೂಡಿಸಿದರು.

ಅನ್ಮೋಲ್ (580), ಆದಿತ್ಯ ಮಲ್ರಾ (579) ಮತ್ತು ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಸೌರಭ್ ಚೌಧರಿ (576) ಅವರನ್ನು ಒಳಗೊಂಡ ಪುರುಷರ ತಂಡವು ಒಟ್ಟು 1,735 ಅಂಕಗಳನ್ನು ಗಳಿಸಿತು. ಚೀನಾ ತಂಡವು 1,744 ಅಂಕಗಳೊಂದಿಗೆ ಚಿನ್ನ ಗೆದ್ದಿತು. ಇರಾನ್ (1733) ಕಂಚಿನ ಪದಕ ಜಯಿಸಿತು.

10 ಮೀ. ಏರ್ ಪಿಸ್ತೂಲ್ ವೈಯಕ್ತಿಕ ವಿಭಾಗದ ಅರ್ಹತಾ ಸುತ್ತಿನಲ್ಲಿ ಅನ್ಮೋಲ್ 580 ಅಂಕಗಳೊಂದಿಗೆ ಏಳನೇ ಸ್ಥಾನದೊಂದಿಗೆ ಫೈನಲ್ ತಲುಪಿದ್ದರು. ಪದಕ ಸುತ್ತಿನಲ್ಲಿ ಒಟ್ಟು 155.1 ಪಾಯಿಂಟ್ಸ್ ಗಳಿಸಿ ಆರನೇ ಸ್ಥಾನ ಪಡೆದರು.

ಚೀನಾದ ಹು ಕೈ (241.6) ಚಾಂಪಿಯನ್ ಆಗಿ ಹೊರಹೊಮ್ಮಿದರು. ದಕ್ಷಿಣ ಕೊರಿಯಾದ ಹಾಂಗ್ ಸುಹಿಯೋನ್ (239.0) ಮತ್ತು ಇರಾನ್‌ನ ಅಮೀರ್ ಜೊಹರಿಖೌ (216.8) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕವನ್ನು ಗಳಿಸಿದರು. ಭಾರತದ ಇನ್ನಿಬ್ಬರು ಶೂಟರ್‌ಗಳಾದ ಆದಿತ್ಯ (579) ಮತ್ತು ಸೌರಭ್ (576) ಅರ್ಹತಾ ಸುತ್ತಿನಲ್ಲಿ ಕ್ರಮವಾಗಿ 13ನೇ ಮತ್ತು 21ನೇ ಸ್ಥಾನ ಪಡೆದರು.

ಜೂನಿಯರ್ ವಿಭಾಗದಲ್ಲಿ ಮೂರು ಪದಕ: ಜೂನಿಯರ್ ಪುರುಷರ 10 ಮೀಟರ್ ವೈಯಕ್ತಿಕ ಏರ್ ಪಿಸ್ತೂಲ್‌ನಲ್ಲಿ ಹರಿಯಾಣದ ಕಪಿಲ್ ಬೈಂಸಲಾ 243.0 ಅಂಕಗಳೊಂದಿಗೆ ಚಿನ್ನ ಗೆದ್ದರು. ಅವರು ಅರ್ಹತಾ ಸುತ್ತಿನಲ್ಲಿ 579 ಅಂಕ ಗಳಿಸಿ ನಾಲ್ಕನೇ ಸ್ಥಾನ ಪಡೆದಿದ್ದರು. ಭಾರತದ ಮತ್ತೊಬ್ಬ ಶೂಟರ್ ಗೆವಿನ್ ಆ್ಯಂಟನಿ (220.7) ಕಂಚಿನ ಪದಕ ಗೆದ್ದರು.

ಆ್ಯಂಟನಿ (582), ಕಪಿಲ್ ಮತ್ತು ವಿಜಯ್ ತೋಮರ್ (562) ಅವರ ತಂಡವು ಒಟ್ಟು 1,723 ಅಂಕ ಸಂಪಾದಿಸಿ ಬೆಳ್ಳಿ ಪದಕವನ್ನು ಗೆದ್ದುಕೊಂಡಿತು. ದಕ್ಷಿಣ ಕೊರಿಯಾ (1,734) ಚಾಂಪಿಯನ್ ಆಯಿತು.

ಸೀನಿಯರ್, ಜೂನಿಯರ್ ಮತ್ತು ಯೂತ್ ವಿಭಾಗಗಳಲ್ಲಿ ಭಾರತವು ಒಟ್ಟು 182 ಶೂಟರ್‌ಗಳನ್ನು ಕಣಕ್ಕಿಳಿಸಿದೆ. ಚಾಂಗ್‌ವಾನ್‌ನಲ್ಲಿ ನಡೆದ ಕಳೆದ ಆವೃತ್ತಿಯಲ್ಲಿ ಭಾರತ 59 ಪದಕ (21 ಚಿನ್ನ, 22 ಬೆಳ್ಳಿ ಮತ್ತು 16 ಕಂಚು) ಗೆದ್ದುಕೊಂಡಿತ್ತು.

ಜೂನಿಯರ್ ಪುರುಷರ 10 ಮೀಟರ್ ವೈಯಕ್ತಿಕ ಏರ್ ಪಿಸ್ತೂಲ್‌ನಲ್ಲಿ ಚಿನ್ನ ಗೆದ್ದ ಕಪಿಲ್ (ಎಡ) ಮತ್ತು ಕಂಚು ಗೆದ್ದ ಗೆವಿನ್ ಆ್ಯಂಟನಿ

ಮಹಾರಾಜ ಟ್ರೋಫಿ: ಬೆಂಗಳೂರು ಎದುರು ಮೈಸೂರು ವಾರಿಯರ್ಸ್‌ಗೆ 39 ರನ್ ಜಯ

ಶಿಖರ್ ಸ್ಪಿನ್‌ಗೆ ಬ್ಲಾಸ್ಟರ್ಸ್ ಧೂಳೀಪಟ

• ಮೋಹನ್ ಕುಮಾರ ಸಿ.

ಮೈಸೂರು: ಮೈಸೂರು ವಾರಿಯರ್ಸ್‌ನ ಶಿಖರ್ ಶೆಟ್ಟಿ (5ಕ್ಕೆ 3) ಹಾಗೂ ಕೆ.ಗೌತಮ್ (11ಕ್ಕೆ 2) ಸ್ಪಿನ್ ಮೋಡಿ ಎದುರು ಬೆಂಗಳೂರು ಬ್ಲಾಸ್ಟರ್ಸ್ ತಂಡ ಧೂಳೀಪಟವಾಯಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟಿ– 20 ಕ್ರಿಕೆಟ್ ಟೂರ್ನಿಯ ಸೋಮವಾರದ ಪಂದ್ಯದಲ್ಲಿ ಮೈಸೂರು 39 ರನ್‌ಗಳ ಭರ್ಜರಿ ಜಯ ದಾಖಲಿಸಿತು.

ಮಳೆ ಕಾಡಿದ್ದರಿಂದ 16 ಓವರ್‌ಗೆ ಸೀಮಿತವಾದ ಪಂದ್ಯದ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಮೈಸೂರು ತಂಡಕ್ಕೆ ಸಿ.ಎ.ಕಾರ್ತಿಕ್ (20) ಮತ್ತು ಎಸ್.ಯು.ಕಾರ್ತಿಕ್ ಉತ್ತಮ ಆರಂಭ ತಂದುಕೊಟ್ಟರು. ಆದರೆ, ನಂತರ ಬಂದ ಹರ್ಷಿಲ್ (13), ನಾಯಕ ಮನೀಷ್ ಪಾಂಡೆ (12) ಹಾಗೂ ಕೆ.ಎಸ್.ಲಂಕೇಶ್ (15) ತಂಡದ ಸ್ಕೋರ್ 100ರ ಗಡಿ ದಾಟಿಸಲು ತಿಣುಕಾಡಿದರು.

ಈ ವೇಳೆ ಕ್ರೀಸ್‌ಗಿಳಿದ ಆಲ್‌ರೌಂಡರ್ ಯಶೋವರ್ಧನ್ ಪರಂತಾಪ್ (39; 21 ಎ., 4x2, 6x2) ಬಿರುಸಿನ ಆಟವಾಡಿದರು. ಅವರಿಗೆ ಸುಮಿತ್ ಕುಮಾರ್ (ಔಟಾಗದೇ 12) ಬೆಂಬಲ ನೀಡಿದರು. ಆರನೇ ವಿಕೆಟ್‌ಗೆ ಈ ಜೋಡಿ 22 ಎಸೆತದಲ್ಲಿ 43 ರನ್ ಸೇರಿಸಿತು. ಅದರಿಂದ ಆತಿಥೇಯ ತಂಡವು 7 ವಿಕೆಟ್‌ಗೆ 136 ರನ್ ಗಳಿಸಿ ಬೆಂಗಳೂರಿಗೆ ಸವಾಲಿನ ಗುರಿ ನೀಡಿತು.

ಸ್ಪಿನ್ ಮೋಡಿ: ವಾರಿಯರ್ಸ್‌ನ ಶಿಖರ್ ಶೆಟ್ಟಿ ಅವರ ಮೊದಲ ಓವರ್‌ನ ಮೂರನೇ ಎಸೆತದಲ್ಲಿ ಎಲ್.ಆರ್.ಚೇತನ್ (0) ಹಾಗೂ ಕೆ.ಗೌತಮ್ ಅವರ 3ನೇ ಎಸೆತದಲ್ಲಿ ನಾಯಕ ಮಯಂಕ್ ಅಗರವಾಲ್ (1) ಮನೀಷ್ ಪಾಂಡೆಗೆ ಕ್ಯಾಚ್ ನೀಡಿ ಪೆವಿಲಿಯನ್‌ಗೆ ಮರಳಿದರು. ಇವರಿಬ್ಬರ ಸ್ಪಿನ್ ಸುಳಿಗೆ ಬೆಂಗಳೂರು ತಂಡವು ಸಿಲುಕಿತು. ವಿಕೆಟ್‌ಗಳು ಪಟಪಟನೆ ಉದುರಿದವು. 9 ಓವರ್‌ಗಳಲ್ಲಿ 33ಕ್ಕೆ 7 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಮಾಧವ್ ಪಿ.ಬಜಾಜ್ (34; 20 ಎಸೆತ 4x3, 6x2) ಅಲ್ಪ ಪ್ರತಿರೋಧ ತೋರಿದರು. ಅಷ್ಟರಲ್ಲಾಗಲೇ ಪಂದ್ಯವು ಕೈ ಜಾರಿತ್ತು.

ಸಂಕ್ಷಿಪ್ತ ಸ್ಕೋರ್: ಮೈಸೂರು ವಾರಿಯರ್ಸ್: 16 ಓವರ್‌ಗಳಲ್ಲಿ 7ಕ್ಕೆ 136 (ಯಶೋವರ್ಧನ್ ಪರಂತಾಪ್ 39, ಸಿ.ಎ.ಕಾರ್ತಿಕ್ 20. ಮೊಹಸಿನ್ ಖಾನ್ 10ಕ್ಕೆ 2, ವಿದ್ಯಾಧರ ಪಾಟೀಲ 32ಕ್ಕೆ 2). **ಬೆಂಗಳೂರು ಬ್ಲಾಸ್ಟರ್ಸ್:** 16 ಓವರ್‌ಗಳಲ್ಲಿ 9ಕ್ಕೆ 97 (ಮಾಧವ್ ಪಿ.ಬಜಾಜ್ 34; ಶಿಖರ್ ಶೆಟ್ಟಿ 5ಕ್ಕೆ 3, ಕೆ.ಗೌತಮ್ 11ಕ್ಕೆ 2)
ಪಂದ್ಯದ ಆಟಗಾರ: ಶಿಖರ್ ಶೆಟ್ಟಿ

ವಿಕೆಟ್ ಪಡೆದ ಮೈಸೂರು ವಾರಿಯರ್ಸ್ ತಂಡದ ಶಿಖರ್ ಶೆಟ್ಟಿ (ಮಧ್ಯ) ಅವರನ್ನು ಸಹ ಆಟಗಾರರು ಅಭಿನಂದಿಸಿದರು ಚಿತ್ರ: ಅನೂಪ್ ರಾಘ. ಟಿ.

ಇಂದಿನ ಪಂದ್ಯಗಳು

• ಗುಲ್ಬರ್ಗ ಮಿಸ್ಟಿಕ್ಸ್–ಶಿವಮೊಗ್ಗ ಲಯನ್ಸ್, ಮಧ್ಯಾಹ್ನ 3.15
• ಮಂಗಳೂರು ಡ್ರ್ಯಾಗನ್ಸ್–ಹುಬ್ಬಳ್ಳಿ ಟೈಗರ್ಸ್, ಸಂಜೆ 7.15

ಸ್ಮರಣ್ ಅರ್ಧಶತಕ: ಗುಲ್ಬರ್ಗಕ್ಕೆ ಜಯ

ಮೈಸೂರು: ಆರ್.ಸ್ಮರಣ್ (52; 39 ಎ, 4x1, 6x3) ಅವರ ಅರ್ಧ ಶತಕದ ಬಲದಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡ ಹುಬ್ಬಳ್ಳಿ ಟೈಗರ್ಸ್ ವಿರುದ್ಧ 4 ವಿಕೆಟ್‌ಗಳ ಜಯ ಸಾಧಿಸಿತು.

ಲವಿಶ್ ಕೌಶಲ್ (15ಕ್ಕೆ2) ಹಾಗೂ ಶಶಿಕುಮಾರ್ ಕಾಂಬ್ಳೆ (19ಕ್ಕೆ2) ಬೌಲಿಂಗ್ ಎದುರು ಹುಬ್ಬಳ್ಳಿ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 158 ರನ್ ಕಲೆಹಾಕಿತು. ಸ್ಮರಣ್ ಆಟದ ಬಲದಿಂದ ಗುಲ್ಬರ್ಗ ಸುಭವಾಗಿ ಗುರಿ ಮುಟ್ಟಿತು.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್ 20 ಓವರ್‌ಗಳಲ್ಲಿ 8ಕ್ಕೆ 158 (ಕೆ.ಎಲ್.ಶ್ರೀಜಿತ್ 52, ಲವಿಶ್ ಕೌಶಲ್ 15ಕ್ಕೆ 2, ಶಶಿಕುಮಾರ್ ಕಾಂಬ್ಳೆ 19ಕ್ಕೆ 2) ಗುಲ್ಬರ್ಗ ಮಿಸ್ಟಿಕ್ಸ್ 19.4 ಓವರ್‌ಗಳಲ್ಲಿ 6ಕ್ಕೆ 159 (ಆರ್.ಸ್ಮರಣ್ 52, ಪ್ರಜ್ವಲ್ ಪವನ್ 37, ಕೆ.ಸಿ.ಕಾರಿಯಪ್ಪ 28ಕ್ಕೆ 2)
ಪಂದ್ಯದ ಆಟಗಾರ: ಆರ್.ಸ್ಮರಣ್

ಕ್ವಾರ್ಟರ್‌ಫೈನಲ್‌ಗೆ ಕರ್ನಾಟಕ ಲಗ್ಗೆ

ಜಲಂಧರ್ (ಪಿಟಿಐ): ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ 15ನೇ ಹಾಕಿ ಇಂಡಿಯಾ ಜೂನಿಯರ್ ಪುರುಷರ ಚಾಂಪಿಯನ್‌ಷಿಪ್ ಟೂರ್ನಿಯ 'ಎ' ಡಿವಿಷನ್‌ನಲ್ಲಿ ಸೋಮವಾರ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ಸೋಮವಾರ ನಡೆದ ಎ ಡಿವಿಷನ್‌ನ ಗುಂಪು ಹಂತದ ಪಂದ್ಯಗಳಲ್ಲಿ ಒಡಿಶಾ ತಂಡವು 10–0ಯಿಂದ ಆಂಧ್ರಪ್ರದೇಶ ವಿರುದ್ಧ; ಜಾರ್ಖಂಡ್ ತಂಡವು 5–3ರಿಂದ ಮಹಾರಾಷ್ಟ್ರ ವಿರುದ್ಧ ಗೆಲುವು ಸಾಧಿಸಿದವು. ಮಧ್ಯಪ್ರದೇಶ ಹಾಗೂ ತಮಿಳುನಾಡು ನಡುವಿನ ಪಂದ್ಯವು 3–3ರಿಂದ ಡ್ರಾ ಆಯಿತು.

ಅದರೊಂದಿಗೆ, ಕರ್ನಾಟಕ, ಆತಿಥೇಯ ಪಂಜಾಬ್, ಮಧ್ಯಪ್ರದೇಶ, ಉತ್ತರಪ್ರದೇಶ, ಜಾರ್ಖಂಡ್, ಹರಿಯಾಣ, ಮಣಿಪುರ ಹಾಗೂ ಒಡಿಶಾ ತಂಡಗಳು ಎಂಟರ ಸುತ್ತಿಗೆ ಅರ್ಹತೆ ಪಡೆದುಕೊಂಡವು.

ಕ್ವಾರ್ಟರ್‌ಫೈನಲ್ ಪಂದ್ಯಗಳು ಬುಧವಾರ ನಡೆಯಲಿವೆ.

ನಾರ್ತ್‌ಈಸ್ಟ್ ಯುನೈಟೆಡ್‌ಗೆ ಶಿಲ್ಲಾಂಗ್ ಸವಾಲು

ಶಿಲ್ಲಾಂಗ್ (ಪಿಟಿಐ): ಹಾಲಿ ಚಾಂಪಿಯನ್ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವು 134ನೇ ಆವೃತ್ತಿಯ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಮೊದಲ ಸೆಮಿಫೈನಲ್‌ನಲ್ಲಿ ಮಂಗಳವಾರ ಶಿಲ್ಲಾಂಗ್ ಲಾಜೊಂಗ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ವಿಜೇತ ತಂಡವು ಆಗಸ್ಟ್ 23ರಂದು ಕೋಲ್ಕತ್ತದ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಈಸ್ಟ್ ಬೆಂಗಾಲ್ ಅಥವಾ ಡೈಮಂಡ್ ಹಾರ್ಬರ್ ಎಫ್‌ಸಿಯನ್ನು ಎದುರಿಸಲಿದೆ. ಈ ಎರಡು ತಂಡಗಳು ಬುಧವಾರ ಎರಡನೇ ಸೆಮಿಫೈನಲ್‌ನಲ್ಲಿ ಸೆಣಸಾಡಲಿವೆ.

ಕಳೆದ ಆವೃತ್ತಿಯ ಸೆಮಿಫೈನಲ್‌ನಲ್ಲಿ ನಾರ್ತ್‌ಈಸ್ಟ್ ತಂಡವು 3–0ಯಿಂದ ಶಿಲ್ಲಾಂಗ್ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಿತ್ತು. ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆಯುವ ಹಣಾಹಣಿಯಲ್ಲಿ ಈ ಬಾರಿ ಆತಿಥೇಯ ತಂಡ ಪ್ರಬಲ ಸವಾಲೊಡ್ಡುವ ಛಲದಲ್ಲಿದೆ.

ಇ ಗುಂಪಿನಲ್ಲಿದ್ದ ನಾರ್ತ್‌ಈಸ್ಟ್ ಮತ್ತು ಶಿಲ್ಲಾಂಗ್ ತಂಡಗಳು ಕ್ರಮವಾಗಿ ಮೊದಲೆರಡು ಸ್ಥಾನದೊಂದಿಗೆ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದವು. ಗುಂಪು ಹಂತದಲ್ಲಿ ಮುಖಾಮುಖಿಯಾಗಿದ್ದಾಗ 2–1ರಿಂದ ನಾರ್ತ್‌ಈಸ್ಟ್ ತಂಡವೇ ಮೇಲುಗೈ ಸಾಧಿಸಿತ್ತು.

ನಾರ್ತ್‌ಈಸ್ಟ್ ತಂಡವು ಎಂಟರ ಘಟ್ಟದಲ್ಲಿ 4–0ಯಿಂದ ಬೋಡೋಲ್ಯಾಂಡ್ ಎಫ್‌ಸಿ ವಿರುದ್ಧ ಅಧಿಕಾರಯುತ ಜಯ ಸಾಧಿಸಿ, ಎರಡನೇ ಬಾರಿ ಪ್ರಶಸ್ತಿ ಜಯಿಸುವತ್ತ ದಾಪುಗಾಲಿಟ್ಟಿದೆ.

ಪಂದ್ಯ ಆರಂಭ: ಸಂಜೆ 7
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಏಷ್ಯಾ ಕಪ್ ಹಾಕಿ: ಪಾಕಿಸ್ತಾನ ಬದಲು ಬಾಂಗ್ಲಾದೇಶ ಕಣಕ್ಕೆ?

ನವದೆಹಲಿ (ಪಿಟಿಐ): ಇದೇ 29ರಿಂದ ಬಿಹಾರದ ರಾಜ್‌ಗಿರ್‌ನಲ್ಲಿ ನಡೆಯಲಿರುವ ಪುರುಷರ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಪಾಕಿಸ್ತಾನದ ಬದಲು ಬಾಂಗ್ಲಾದೇಶ ಅವಕಾಶ ಪಡೆಯುವ ಸಾಧ್ಯತೆಯಿದೆ ಎಂದು ಹಾಕಿ ಇಂಡಿಯಾದ ಉನ್ನತ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಎರಡು ದಿನಗಳಲ್ಲಿ ಪಾಕಿಸ್ತಾನವು ಭಾಗವಹಿಸುವಿಕೆಯನ್ನು ದೃಢೀಕರಿಸಲು ವಿಫಲವಾದರೆ ಬಾಂಗ್ಲಾದೇಶ ತಂಡವನ್ನು ಕಣಕ್ಕೆ ಇಳಿಸಲು ಆಯೋಜಕರು ಸಿದ್ಧತೆ ನಡೆಸಿದ್ದಾರೆ. ಏಷ್ಯಾ ಕಪ್‌ಗೆ ಪಾಕಿಸ್ತಾನದ ಆಟಗಾರರಿಗೆ ವೀಸಾ ನೀಡುವುದಾಗಿ ಕೇಂದ್ರ ಸರ್ಕಾರ ಈಗಾಗಲೇ ಹೇಳಿದೆ. ಆದರೆ, ಭದ್ರತಾ ದೃಷ್ಟಿಯಿಂದ ಪಾಕಿಸ್ತಾನ ಹಾಕಿ ಫೆಡರೇಷನ್ ಭಾರತಕ್ಕೆ ತಂಡ ಕಳುಹಿಸಲು ಹಿಂದೇಟು ಹಾಕಿದೆ.

ಕುಸ್ತಿ: ಫೈನಲ್‌ಗೆ ಸುಮಿತ್ ಮಲಿಕ್

ಸಮೊಕೋವ್ (ಬಲ್ಗೇರಿಯಾ): ಭಾರತದ ಸುಮಿತ್ ಮಲಿಕ್ ಅವರು ಇಲ್ಲಿ ನಡೆಯುತ್ತಿರುವ 20 ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನ 57 ಕೆ.ಜಿ. ವಿಭಾಗದಲ್ಲಿ ಸೋಮವಾರ ಫೈನಲ್ ತಲುಪಿದ್ದಾರೆ. 79 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ ವಿಲಿಯಂ ಪ್ಯಾಟ್ರಿಕ್ ಹೆಂಕೆಲ್ (ಅಮೆರಿಕ) ಎದುರು ಪರಾಭವಗೊಂಡ ಅಮಿತ್ ಅವರು ಕಂಚಿಗಾಗಿ ಸೆಣಸಲಿದ್ದಾರೆ.

ಅಂತಿಮ ನಾಲ್ಕರ ಸುತ್ತಿನ ಪಂದ್ಯದಲ್ಲಿ ಸುಮಿತ್ 11–3ರಿಂದ ಮೊಲ್ಡೋವಾದ ಇಯಾನ್ ಬಲ್ಗಾರು ಎದುರು ಅಧಿಕಾರಯುತ ಗೆಲುವು ದಾಖಲಿಸಿದರು. ಫೈನಲ್ ಪಂದ್ಯದಲ್ಲಿ ಅವರು ರಷ್ಯಾದ ಮ್ಯಾಗೊಮೆಡ್ ಸಾಲಿಯಾಖ್ ಒಡಮಿರೋವ್ ಅವರೊಂದಿಗೆ ಸೆಣಸಬೇಕಿದೆ.

ಡೋಪಿಂಗ್: ಶೀನಾ ಅಮಾನತು

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶವನ್ನು ಪ್ರತಿನಿಧಿಸಿರುವ ಟ್ರಿಪಲ್ ಜಂಪ್ ಸ್ಪರ್ಧಿ ಶೀನಾ ವರ್ಕಿ ಅವರನ್ನು ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕ ಅಮಾನತು ಮಾಡಿದೆ. ಮಾದರಿ ಪರೀಕ್ಷೆಯಲ್ಲಿ ಅವರು ನಿಷೇಧಿತ ಮದ್ದು ಸೇವನೆ ಮಾಡಿದ್ದು ಖಚಿತಪಟ್ಟಿತ್ತು.

ದೇಶೀ ಕೂಟಗಳಲ್ಲಿ ಹಲವು ಪದಕಗಳನ್ನು ಗೆದ್ದಿರುವ 32 ವರ್ಷ ವಯಸ್ಸಿನ ಶೀನಾ, 2023ರ ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ ಪಾಲ್ಗೊಂಡಿದ್ದರು.

'ಶೀನಾ ಅವರನ್ನು ಅಮಾನತುಗೊಳಿಸಲಾಗಿದೆ' ಎಂದು ವಿಶ್ವಾಸಾರ್ಹ ಮೂಲಗಳು ಪಿಟಿಐಗೆ ತಿಳಿಸಿವೆ. ಆದರೆ ನಿಷೇಧಿತ ಉದ್ದೀಪನ ಮದ್ದಿನ ವಿವರ ಬಹಿರಂಗಪಡಿಸಿಲ್ಲ. ಕೇರಳದ ಈ ಅಥ್ಲೀಟ್ ಈ ವರ್ಷ ಉತ್ತರಾಖಂಡದಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದಿದ್ದರು. ಫೆಡರೇಷನ್ ಕಪ್‌ನಲ್ಲಿ ಕಂಚಿನ ಪದಕ ಗಳಿಸಿದ್ದರು. 2018ರಲ್ಲಿ ಏಷ್ಯನ್ ಒಳಾಂಗಣ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕವನ್ನು ಗೆದ್ದುಕೊಂಡಿದ್ದರು.

Dr. Juneja's
ಡಾ.ಆರ್ಥೋ®
Ayurvedic Oil, Capsules, Spray & Ointment
ಮೊಣಕಾಲು ನೋವು, ಬೆನ್ನುನೋವು, ಭುಜ ನೋವು ಮತ್ತು ಇತರ ಸಂಧಿ ನೋವಿಗೆ ಸಹಾಯಕ
8 ಪರಿಣಾಮಕಾರಿ ಆಯುರ್ವೇದಿಕ್ ತೈಲಗಳ ಸಂಯೋಜನೆಯಿಂದ ತಯಾರಾದ ಡಾ. ಆರ್ಥೋ ತೈಲ ಆಳವಾಗಿ ಹೀರಿಕೊಂಡು ನೋವು ಶಮನಕ್ಕೆ ಸಹಾಯ ಮಾಡುತ್ತದೆ. ಈ ಆಯುರ್ವೇದಿಕ್ ತೈಲಗಳ ಸಂಯೋಜನೆ ಸುರಕ್ಷಿತವಾಗಿದೆ. ತೆರೆದ ಗಾಯಗಳ ಮೇಲೆ ಬಳಕೆ ಮಾಡಬಾರದು. ಇದೇ ರೀತಿಯ ಹೆಸರು ಅಥವಾ ಜಾಹೀರಾತುಗಳಿಂದ ಎಚ್ಚರಿಕೆ.
WORLD BRAND SUMMIT Most Trusted Brand of Asia 2016
ASIA'S MOST PROMISING BRAND
ಡಾ. ಆರ್ಥೋ
ಪೂರ್ಣ ಹೆಸರನ್ನು ಓದಿದ ನಂತರ ಕೊಳ್ಳಿರಿ
ಮೊಣಕಾಲು ನೋವು · ಬೆನ್ನು ನೋವು · ಭುಜದ ನೋವು · ಮಣಿಕಟ್ಟು ನೋವು
Clinically Tested*
24x7 Helpline: 7876977777 | www.drorthooil.com

MARUTI SUZUKI ARENA
OWN YOUR ALTO K10 YOUR WAY.
WITH EMI STARTING FROM ₹2 999*
ARENA SAFETY SHIELD
6 Airbags | ESP® | ABS with EBD | Hill Hold Control^ | Reverse Parking Sensors
3-Point ELR Seat Belts | Seat Belt Reminder | 3 Years or 100 000 km Warranty**
Now with Easy EMIs
Impressive Mileage Petrol 24.90# km/l CNG 33.40# km/kg
Scratch & WIN!
SCAN TO CONNECT TO A SHOWROOM NEAR YOU!
E-BOOK TODAY AT WWW.MARUTISUZUKI.COM
Contact us at 1800-102-1800
ALTO K10